विश्वविद्याग्रन्थमाला-१

## श्रीवेदव्यासप्रणीतं

# श्रीमद्भागवतम्

## स्कन्धः-1

## ಶ್ರೀರಾಘವೇಂದ್ರದಾಸಕೃತ

## ವಿಜಯಧ್ವಜೀಯವ್ಯಾಖ್ಯಾನಾನುಸಾರಿ ಕನ್ನಡಾನುವಾದ

# ಶ್ರೀಮದ್ಭಾಗವತ ಸುಧಾಸೌರಭ

**सम्पादकः**

सि. आर् प्रदीपसिंहाचार्यः चतुर्वेदः

प्रकाशनम्

वेदवेदान्ताध्यनशोधसंसस्थानम्

नवदेहली, वसन्तकुञ्ज

२०१८

विश्वविद्याग्रन्थमाला-१

**श्रीवेदव्यासप्रणीतं श्रीमद्भागवतम्, स्कन्धः-1**

**ಶ್ರೀರಾಘವೇಂದ್ರದಾಸಕೃತ ವಿಜಯಧ್ವಜೀಯವ್ಯಾಖ್ಯಾನಾನುಸಾರಿ**

**ಕನ್ನಡಾನುವಾದ ಶ್ರೀಮದ್ಭಾಗವತ ಸುಧಾಸೌರಭ**


सम्पादकः -

**सि. आर् प्रदीपसिंहाचार्यः चतुर्वेदः**



**प्रकाशनम्**

**वेदवेदान्ताध्यनशोधसंसस्थानम्**

**नवदेहली, वसन्तकुञ्ज**

पत्राणि - 188 peges

प्रथममुद्रणम् 2021

मुद्रितप्रतयः 250

मूल्यम्- 150

जगद्गुरुश्रीमन्मध्वाचार्यमूलमहासंस्थानम्-

श्रीपेजावरअधोक्षजमठः-उडुपि

## श्रीविश्वप्रसन्नतीर्थश्रीपादानाम्

## अनुग्रहसन्देशः

श्रीपेजावरमठाधीशैः यतिकुलचक्रवर्तीत्यादिबिरुदाङ्कितैः अस्मद्गुरुचरणैः श्रीविश्वेशतीर्थश्रीपादैः उत्तरभारतक्षेत्रे माध्वतत्वप्रसारणाय राजधान्यां नवदेहलीप्रदेशे श्रीरामविठ्ठलशिक्षणसेवासमितिमुखेन संस्थापितं वेदवेदान्ताध्ययनशोधसंस्थानम् । महान्तमिमं भारमुदूह्य वेद-वेदान्त-इतिहास-पुराण-काव्यादीनां भाषान्तर-संशोधन-ग्रन्थप्रकाशन-प्रसारणादिनानाकर्मणा श्रीमन्मध्ववेदव्याससेवां कुर्वदिदं संशोधनमन्दिरं माध्वततेर्महान्तम् उपकारं विदधत् अस्मदादरपात्रं वर्तते । संशोधनादिकर्मणि नियुक्ता अस्मच्छिष्या विपश्चितः यावच्छक्ति ग्रन्थादि संशोध्य अनूद्य च व्यास-मध्वसेवां व्यदधुः । तमिमं ग्रन्थवरं संशोधयित्रे विदुषे, प्रकाशयित्रे वेदवेदान्ताध्ययनशोधसंस्थान-कार्यकारिसमित्यै, निदेशकाय च अस्मदुपास्यचरणौ श्रीरामविट्ठलौ श्रेयो दत्तामिति सम्प्रार्थयामहे ।

इति नारायणस्मृतयः

# निदेशकवाचांसि

मानवानां परमपुरुषार्थसाधनायाध्यात्मतत्वज्ञानमावश्यकम् । तच्चोत्तरभारते बहुन्यूनमिति तत्रापि माध्वतत्वज्ञानप्रसारणाय नवदेहलीप्रान्ते श्रीपेजावरमठाधीशैः श्रीविश्वेशतीर्थ-श्रीमच्चरणैः स्थापितमिदं वेद-वेदान्ताध्ययनशोधसंस्थानम् । परमपूज्यानां पमहंसप्रवराणां यतिकुल-चक्रवर्तिनां श्रीविश्वेशतीर्थश्रीमच्चरणानां तथा तच्छिष्याणां श्रीविश्वप्रसन्न तीर्थश्रीपादानां परमानुग्रहेण मार्गदर्शनेन च वरीवर्धमानमिदं श्रीचरणानां प्रेरणया विश्वविद्याग्रन्थमालानाम्ना विश्वतोमुखतया वेद-वेदान्त-इतिहास-काव्य-व्याकरणादिग्रन्थानां भाषान्तर-प्रकाशन-प्रसरणादि-महत्कर्मणि सहर्षं सोत्साहं समुद्यतम् । अध्येतृसुजनवृन्दश्चानेन ग्रन्थप्रकटनेन समुत्कट-प्रयोजनजातमभिसम्पद्यतामित्यभिकामये ।

विश्वविद्याग्रन्थमालायाः प्रथमकुसुमत्वेन ग्रन्थमिमं सारस्वतलोकं प्रति समर्प्यते । शास्त्रज्ञाः सहृदयाः अस्य ग्रन्थस्य स्वागतं व्याहरन्तीति मन्ये । महति कार्येस्मिन् भागभाग्भ्यः सर्वेभ्यः, ग्रन्थस्य सम्पादन-संशोधनकर्मणि सहकृतवद्भ्यः विद्वद्भ्यः, मुद्रकेभ्यश्च अधमर्णोहम् ।

निदेशकः

## ಸಂಪಾದಕೀಯ

ಶ್ರೀಮದ್ಭಾಗವತವು ಪುರಾಣರಾಜ. ಇದರ ಮೊಟ್ಟ ಮೊದಲನೆಯ ಕನ್ನಡೀಕರಣವು ಶ್ರೀವರದಪ್ರಲ್ಹಾದ-ಹರಿವಿಠಲಾಂಕಿತರಾದ ಮೈಸೂರುರಾಘವೇಂದ್ರದಾಸರಿಂದ ಆಗಿರತಕ್ಕಂತದ್ದು. ಶ್ರೀವಿಜಯಧ್ವಜತೀರ್ಥರ ಪದರತ್ನಾವಲೀ ಟೀಕೆಯ ಅಭಿಪ್ರಾಯಗಳನ್ನೊಳಗೊಂಡಂತೆ ಅನೇಕ ಟಿಪ್ಪಣಿಗಳ ವಿಷಯಗಳನ್ನೂ ಸಹ ಇಲ್ಲಿ ಅನುವಾದ ಮಾಡಿದ್ದಾರೆ. ಮೂಲಗ್ರಂಥ ಹಾಗೂ ಕನ್ನಡಾನುವಾದವನ್ನು ಬರೆದ ಇವರ ಹಸ್ತಪ್ರತಿಯಲ್ಲಿ ಎಲ್ಲೂ ಸಹ ತಪ್ಪುಬರೆದು ನಂತರ ತಿದ್ದಿದ ಚಿಹ್ನೆ ಕಾಣಿಸುವುದಿಲ್ಲ. ವಿದ್ವಾಂಸರೂ ಸಹ ಇದನ್ನು ಅಧ್ಯಯನ ಮಾಡಿದರೆ ಭಾಗವತದ ಸರಿಯಾದ ಭಾವವು ಸ್ಪಷ್ಟವಾಗುವುದರಲ್ಲಿ ಸಂದೇಹವಿಲ್ಲ ಕೆಲವು ಕಡೆ ವ್ಯಾಖ್ಯಾನಗಳಲ್ಲಿ ಕಂಡುಬರದಿರುವ ಅರ್ಥಗಳನ್ನು ಬರೆದಿರುವುದೂ ಕಂಡುಬರುತ್ತದೆ. ಈ ಅನುವಾದದ ಕೆಲವು ವಿಶೇಷಅಂಶಗಳನ್ನು ಹೀಗಿವೆ. ತೃತೀಯಸ್ಕಂಧದಲ್ಲಿ ವರಾಹಾವತಾರಕಥೆಯನ್ನು ನಿರೂಪಿಸುವಾಗ ವಿಶೇಷಾಂಶ ಎಂದು ಭಾಗವತತಾತ್ಪರ್ಯದ ವಿಷಯವನ್ನು ವಿವರಿಸಿದ್ದಾರೆ. ಚತುರ್ಥಸ್ಕಂಧದಲ್ಲಿ ರುದ್ರಗೀತೆಯ ತ್ರೈಲೋಕ್ಯಪಾಲಕ ಎಂಬ ಶಬ್ದಕ್ಕೆ ನೂತವಾದ ಅರ್ಥವನ್ನು ವಿವರಿಸಿ ಇದು ತತ್ವದೇವತೆಗಳು ಸೂಚಿಸಿದ ಅರ್ಥ ಎಂದು ಬರೆದಿದ್ದಾರೆ. ಅಷ್ಟಮಸ್ಕಂಧದಲ್ಲಿ ವಾಮನದೇವರ ಮೂರುಹೆಜ್ಜೆ ಬೇಡಿದ್ದರ ರಹಸ್ಯಾರ್ಥವನ್ನು ವಿಶೇಷಾಂಶದಲ್ಲಿ ತಿಳಿಸಿದ್ದಾರೆ. ಹನ್ನೊಂದನೇ ಸ್ಕಂಧದಲ್ಲಿ ಪ್ರಮಾಣವಾಕ್ಯಗಳನ್ನು ವಿವರಿಸುವಾಗ ಶ್ರೀನಿವಾಸತೀರ್ಥರ ಟಿಪ್ಪಣಿಯ ವಿಷೇಶಾಂಶಗಳು, ಸತ್ಯಧರ್ಮತೀರ್ಥರ ಟಿಪ್ಪಣಿಯ ವಿಸ್ತಾರವಾಗಿ ಹೇಳಿರುವುದು ಅತ್ಯಂತ ಗಮನೀಯವಾದ ಅಂಶ. ಇಷ್ಟೆಲ್ಲ ವಿಶೇಷಾಂಶಗಳನ್ನು ಬರೆದಿದ್ದರೂ ಸಹ ಇವೆಲ್ಲವೂ ತಮ್ಮೊಳಗೆ ನಿಂತು ಬರೆಸಿದ ತತ್ವಾಭಿಮಾನಿದೇವತೆಗಳ ಅನುಗ್ರಹ ಎಂದು ಹೇಳಿಕೊಂಡಿರುವುದು ಇವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ.

ಈ ಗ್ರಂಥವನ್ನು ಸಂಪಾದನೆ ಮಾಡಲು ಹರಿ-ಗುರುಗಳ ಅನುಗ್ರಹವೇ ಬಲ. ಇದಕ್ಕೆ ಬೆನ್ನೆಲುಬಾದ ನನ್ನ ವಿದ್ಯಾಗುರುಗಳಾದ ಶ್ರೀವಿಶ್ವೇಶತೀರ್ಥಶ್ರೀಪಾದರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಮೂರು ವೇದಗಳನ್ನು ಉಪದೇಶಿಸಿ ಅನುಗ್ರಹಿಸಿದ ಶ್ರೀವಿಶ್ವಪ್ರಸನ್ನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು. ಹಾಗೂ ನನಗೆ ಭಾಗವತಗ್ರಂಥವನ್ನು ವಿಜಯಧ್ವಜೀಯಟೀಕಾ ಸಹಿತ ಪಾಠ ಮಾಡಿದ ಶ್ರೀವಿಶ್ವನಂದನತೀರ್ಥರಿಗೆ ಸಾಷ್ಟಾಂಗಪ್ರಣಾಮಗಳು.

ಈ ಗ್ರಂಥವನ್ನು ದೆಹಲಿಯ ವೇದವೇದಾಂತ ಅಧ್ಯಯನಶೋಧಸಂಸ್ಥಾನವು ಓದುಗರ ದೃಷ್ಟಿಯಿಂದ ಅನೇಕ ಭಾಗಗಳಲ್ಲಿ ಪ್ರಕಾಶನ ಪಡಿಸುತ್ತಿದೆ. ಇದನ್ನು ಮುದ್ರಣ ಮಾಡಲು ಅವಕಾಶ ನೀಡಿದ ಸಂಸ್ಥೆಯ ನಿರ್ದೇಶಕರು, ಆಡಳಿತ ಮಂಡಲಿ, ಮುದ್ರಕರು ಎಲ್ಲರಿಗೂ ಧನ್ಯವಾದಗಳು.

श्रीमन्मध्वमहाचार्यपदपद्मैकसद्मनाम्
अणूनां महतां चापि भवतात् करुणा मयि ।।

तवैवेदं मने वस्तु तुभ्यमेव समर्पये ।
श्रद्धया परयाविष्ठः प्रणिपातपुरस्सरम् ।।

प्रसरीसर्तु लोकेस्मिन् पावनी ते सरस्वती ।
प्राकृतोपि च तं विद्यादेतदर्था कृतिर्मम ।।

# श्रीवेदव्यासप्रणीतं

# श्रीमद्भागवतम्

## प्रथमस्कन्धः

### अथ प्रथमोऽध्यायः

**ॐ नमो भगवते वासुदेवाय**

जन्माद्यस्य यतोऽन्वायादितरतश्चार्थेष्वभिज्ञः स्वराट्
तेने ब्रह्म हृदा य आदिकवये मुह्यन्ति यं सूरयः।
तेजोवारिमृदां यथा विनिमयो यत्र त्रिसर्गो मृषा
धाम्ना स्वेन सदा निरस्तकुहकं सत्यं परं धीमहि॥ १ ॥

धर्मः प्रोज्झितकैतवोऽत्र परमो निर्मत्सराणां
सतां वेद्यं वास्तवमत्र वस्तु शिवदं तापत्रयोन्मूलनम्।
श्रीमद्भागवते महामुनिकृते किं वाऽपरैरीश्वरः
सद्यो हृद्यवरुध्यतेऽत्र कृतिभिः शुश्रूषुभिस्तत्क्षणात्॥ २ ॥

निगमकल्पतरोर्गलितं फलं शुकमुखादमृतद्रवसंयुतम्।
पिबत भागवतं रसमालयं मुहुरहो रसिका भुवि भावुकाः॥ ३ ॥

नैमिषेऽनिमिषक्षेत्रे ऋषयः शौनकादयः ।
सत्रं स्वर्गाय लोकाय सहस्रसममासत॥ ४ ॥

त एकदा तु मुनयः प्रातर्हुतहुताशनाः।
सत्कृतं सूतमासीनं पप्रच्छुरिदमादृताः ॥ ५ ॥

**ऋषयः ऊचुः**

त्वया खलु पुराणानि सेतिहासानि चानघ।
आख्यातान्यप्यधीतानि धर्मशास्त्राणि तान्युत॥ ६ ॥

## अथ प्रथमोऽध्यायः

यानि वेदविदां श्रेष्ठो भगवान् बादरायणः ।
अन्ये च मुनयः सूत परावरविदो विदुः ॥ ७ ॥

वेत्थ त्वं सौम्य तत्सर्वं तत्वतस्तदनुग्रहात् ।
ब्रूयुः स्निग्धस्य शिष्यस्य गुरवो गुह्यमप्युत ॥ ८ ॥

तत्र तत्राञ्जसाऽयुष्मान् भवता यद्विनिश्चितम् ।
पुंसामेकान्ततः श्रेयस्तन्नः शंसितुमर्हति ॥ ९ ॥

प्रायेणाल्पायुषो मर्त्याः कलावस्मिन् युगे जनाः ।
मन्दाः सुमन्दमतयो मन्दभाग्या ह्युपद्रुताः ॥ १० ॥

भूरीणि भूरिकर्माणि श्रोतव्यानि विभागशः ।
अतः साधोऽत्र यत्सारं समुद्धृत्य मनीषया ।
ब्रूहि भद्राय भूतानां येनात्माऽऽशु प्रसीदति ॥ ११ ॥

सूत जानासि भद्रं ते भगवान् सात्वतां पतिः ।
देवक्यां वसुदेवस्य जातो यस्य चिकीर्षया ॥ १२ ॥

तन्नः शुश्रूषमाणानामर्हस्यङ्गानुवर्णितुम् ।
यस्यावतारो भूतानां क्षेमाय विभवाय च ॥ १३ ॥

आपन्नः संसृतिं घोरां यन्नाम विवशो गृणन् ।
ततः सद्यो विमुच्येत यं बिभेति स्वयं भवः ॥ १४ ॥

यत्पादसंश्रयाः सूत मुनयः प्रशमायनाः ।
सद्यः पुनन्त्युपस्पृष्टाः स्वर्धुनीवानुसेवया ॥ १५ ॥

को वा भगवतस्तस्य पुण्यश्लोकेड्यकर्मणः ।
शुद्धिकामो न श‍ृणुयाद्यशः कलिमलापहम् ॥ १६ ॥

तस्य कर्माण्युदाराणि परिगीतानि सूरिभिः ।
ब्रूहि नः श्रद्दधानानां लीलया दधतः कलाः ॥ १७ ॥

अथाख्याहि हरेर्धीमन्नवतारकथाः शुभाः ।

## अथ प्रथमोऽध्यायः

लीला विदधतः स्वैरमीश्वरस्यात्ममायया ॥ १८ ॥

वयं तु न वितृप्याम उत्तमश्लोकविक्रमैः ।
यच्छृण्वतां रसज्ञानां स्वादु स्वादु पदे पदे ॥ १९ ॥

कृतवान् किल वीर्याणि सह रामेण केशवः ।
अतिमर्त्यानि भगवान् गूढः कपटमानुषः ॥ २० ॥

कलिमागतमाज्ञाय क्षेत्रेऽस्मिन् वैष्णवे वयम् ।
आसीना दीर्घसत्रेण कथायां सक्षणा हरेः ॥ २१ ॥

त्वन्नः सन्दर्शितो धात्रा दुस्तरं निस्तितीर्षताम् ।
कलिं सत्वहरं पुंसां कर्णधार इवार्णवम् ॥ २२ ॥

ब्रूहि योगेश्वरे कृष्णे ब्रह्मण्ये धर्मकर्मणि ।
स्वां काष्ठामधुनोपेते धर्मः कं शरणं गतः ॥ २३ ॥

**॥ इति श्रीमद्भागवते प्रथमस्कन्धे प्रथमोऽध्यायः ॥**

# ಶ್ರೀರಾಘವೇಂದ್ರದಾಸಕೃತ

# ವಿಜಯಧ್ವಜೀಯವ್ಯಾಖ್ಯಾನಾನುಸಾರಿ ಕನ್ನಡಾನುವಾದ

# ಶ್ರೀಮದ್ಭಾಗವತ ಸುಧಾಸೌರಭ

## ಶ್ರೀಮದ್ಭಾಗವತೇ ಪ್ರಥಮಸ್ಕಂಧಃ

## ಪ್ರಥಮೋಽಧ್ಯಾಯಃ

**ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್**
**ತೇನೇ ಬ್ರಹ್ಮಹೃದಾ ಯ ಆದಿಕವಯೇ ಮುಹ್ಯಂತಿ ಯಂ ಸೂರಯಃ ।**
**ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ**
**ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥ 1॥**

# ವಿಜಯಧ್ವಜೀಯ ವ್ಯಾಖ್ಯಾನದ ಅವತಾರಿಕೆ

ವಿ.ಧ್ವ.ವ್ಯಾ- ಉಪಕ್ರಮಾದಿ ತಾತ್ಪರ್ಯಯುಕ್ತ್ಯುಪೇತ ಸರ್ವಶೃತಿಸ್ಮೃತಿತಾತ್ಪರ್ಯಪರ್ಯಾಲೋಚನಯಾ ಜಗತ್-ಸೃಷ್ಟ್ಯಾದಿಕರ್ತೃತ್ವಾತ್ ಸರ್ವಜ್ಞತ್ವಾದನನ್ಯಾಧೀನತ್ವಾತ್ ಚತುರ್ಮುಖಜ್ಞಾನೋಪದೇಷ್ಟೃತ್ವಾತ್ ಸ್ವಾನುಗ್ರಹಮಂತರೇಣದುರ್ಜ್ಞೇಯತ್ವಾತ್ ಸ್ವಪ್ರಯೋಜನಾನುದ್ದೇಶೇನಕೇವಲಲೀಲಯೈವ ಜಗತ್ಸರ್ಜನಾದಿಪ್ರವೃತ್ತಿಮತ್ವಾತ್ ಸ್ವತ ಏವ ನಿತ್ಯನಿರಸ್ತೇಂದ್ರಜಾಲತ್ವೇನ ಸತ್ಯಮಹಿಮತ್ವಾತ್ ನಿತ್ಯನಿರ್ದುಃಖಾನ್ನಿರತಿಶಯಾನಂದಾದ್ಯನುಭವರೂಪತ್ವಾಚ್ಚ ಸರ್ವಗುಣ ಪೂರ್ಣೋ ವಿಷ್ಣುಃ ಸರ್ವೈರ್ಧ್ಯೇಯ ಇತಿ ವಾ ತಾತ್ಪರ್ಯಾರ್ಥಃ.

## ಪ್ರಥಮಶ್ಲೋಕಕ್ಕೆ ಗಾಯತ್ರೀ ಅರ್ಥ

ಯಥಾ ವೇದಾಧ್ಯಯನೋಪಕ್ರಮೇ ಗಾಯತ್ರ್ಯಭಿಧೀಯತೇ ವಿಶಿಷ್ಟಫಲಹೇತುತ್ವಾತ್ ತಥಾ ಭಾಗವತೋಪಕ್ರಮೇ ಗಾಯತ್ರ್ಯಾದ್ಯಶೇಷ ವೇದಪ್ರತಿಪಾದ್ಯೋ ನಾರಾಯಣ ಏವ ಭಾಗವತೇ ಪ್ರತಿಪಾದ್ಯತೇ. ಉಕ್ತಂ ಚ ಮಾತ್ಸ್ಯೇ-

**ಯತ್ರಾಧಿಕೃತ್ಯ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ ।**
**ವೃತ್ರಾಸುರವಧಶ್ಚಾಪಿ ಯತ್ತದ್ಭಾಗವತಂ ವಿದುಃ ।**

**ಸ್ಕಾಂದೇ-** **ಗ್ರಂಥೋಽಷ್ಟಾದಶಸಾಹಸ್ರೋ ದ್ವಾದಶಸ್ಕಂಧಸಮ್ಮಿತಃ ।**
**ಹಯಗ್ರೀವಬ್ರಹ್ಮವಿದ್ಯಾ ಯತ್ರ ವೃತ್ರವಧಸ್ತಥಾ ।।**
**ಗಾಯತ್ರ್ಯಾ ಚ ಸಮಾರಂಭೋ ಯತ್ರ ಭಾಗವತಂ ವಿದುಃ ।।**

**ಗಾರುಡೇ –** **ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥವಿನಿರ್ಣಯಃ ।**
**ಗಾಯತ್ರೀಭಾಷ್ಯರೂಪೋಽಸೌ ವೇದಾರ್ಥ ಪರಿಬೃಂಹಿತಃ ।।**
**ಪುರಾಣಾನಾಂ ಸಾರರೂಪಃ ಸಾಕ್ಷಾದ್ಭಗವತೋದಿತಃ ।**
**ದ್ವಾದಶಸ್ಕಂಧಸಂಯುಕ್ತಃ ಶತವಿಚ್ಛೇದಸಂಯುತಃ ।**
**ಗ್ರಂಥೋಽಷ್ಟಾದಶಸಾಹಸ್ರಃ ಶ್ರೀಮದ್ಭಾಗವತಾಭಿಧಃ ।। ಇತಿ ।।**

ಗಾಯತ್ರ್ಯರ್ಥೋಽಪ್ಯನೇನ ಶ್ಲೋಕೇನ ಸೂಚಿತಃ ।। ಯಥಾಹುಃ –ತತ್ಸವಿತುರ್ದೇವಸ್ಯೇತ್ಯಸ್ಯಾರ್ಥೋ ಜನ್ಮಾದ್ಯಸ್ಯ ಯತ ಇತ್ಯಾದೀತಿ. ವಾಮಂ ವರೇಣ್ಯಂ ಪರಮಿತ್ಯಭಿಧಾನಾದ್ವರೇಣ್ಯಮಿತ್ಯಸ್ಯ

ವ್ಯಾಖ್ಯಾನಂ ಪರಮಿತಿ ॥ ಭರ್ಗ ಇತ್ಯಸ್ಯ ವ್ಯಾಖ್ಯಾನಂ ಧಾಮ್ನಾ ಸ್ವೇನ ಸದಾ ನಿರಸ್ತಕುಹಕಮಿತಿ, ಭರ್ಗಃ ಸಕಲದುರಿತಭರ್ಜನಂ ಜ್ಯೋತಿರೂಪಂ ತತ್ಪದಾರ್ಥವ್ಯಾಖ್ಯಾನಂ ಸ್ವರಾಡಿತಿ. ಧಿಯೋ ಯೋ ನಃ ಪ್ರಚೋದಯಾದಿತ್ಯಸ್ಯ ವಿವರಣಂ ತೇನೇ ಬ್ರಹ್ಮಹೃದಾ ಯ ಆದಿಕವಯೇ ಇತಿ. ಯಸ್ಸವಿತಾ ಜನ್ಮಾದಿಕರ್ತಾ, ನಃ ಅಸ್ಮಾಕಂ, ಧಿಯಃ ಧರ್ಮಾದಿವಿಷಯಾ ಬುದ್ಧೀಃ, ಉಪಲಕ್ಷಣಮೇತತ್. ಸರ್ವೇಂದ್ರಿಯಾಣಿ ಇತ್ಯಾದಿ. ಸ್ವತತ್ವವಿಷಯಂ ಜ್ಞಾನಂ ಗುರುಮುಖೇನೋಪದಿಶ್ಯ ತದ್ಜ್ಞಾನಸಾಧನಾನಿ ಸರ್ವಾಣಿ ಕರಣಾನಿ, ಪ್ರಚೋದಯಾತ್ ಸ್ವಾತ್ಮವಿಷಯತಯಾ ಪ್ರೇರಯೇದಿತಿ ತತ್ಸವಿತುರ್ದೇವಸ್ಯ ಕ್ರೀಡಾದಿಗುಣಸಂಪನ್ನಸ್ಯ ನಾರಾಯಣಸ್ಯ, ಅನನ್ಯಾಧೀನತಯಾ ತತತ್ವಾತ್ ವ್ಯಾಪ್ತತ್ವಾತ್ ತದ್ವರೇಣ್ಯಂ ಸಕಲಗುಣಾಕರತಯಾ ಪರಮಮಂಗಲಂ, ಭರ್ಗಃ ಜ್ಯೋತೀರೂಪಂ ಭರಣಗಮನಯೋಗಾತ್ ಸರ್ವಜ್ಞಂ ವಾ, ವಪುಃ ಜ್ಞಾನಾದಿಗುಣರಚಿತಚರಣಕರಾದ್ಯವಯವಮಿತಿ ಯಾವತ್, ಧೀಮಹಿ ಧ್ಯಾಯೇತ್. ಚಿಂತನಂ ಕರ್ತವ್ಯಮಿತ್ಯರ್ಥಃ.

## ಮಂಗಲಾಚರಣೆ

ಸರ್ವಜೀವದಯಾಪರನಾದ ಶ್ರೀಪರಮಾತ್ಮನು ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿತನಾಗಿ, ಸಕಲ ಲೋಕೋದ್ಧಾರಕ್ಕಾಗಿ, ಪರಾಶರರಿಂದ ಸತ್ಯವತೀದೇವಿಯಲ್ಲಿ ವೇದವ್ಯಾಸಾವತಾರವನ್ನು ಮಾಡಿ ಅಖಂಡವಾಗಿದ್ದ ಅನಂತವೇದವನ್ನು ಅಲ್ಪಜನರ ಜ್ಞಾನಕ್ಕೆ ವಿಷಯವನ್ನಾಗಿ ಮಾಡಲಿಚ್ಛಿಸಿ ಋಗ್ಯಜುಸ್ಸಾಥರ್ವಣ ವೇದಗಳೆಂಬ ನಾಲ್ಕು ಭಾಗಗಳನ್ನಾಗಿ ಮಾಡಿದನು. ಈ ವೇದಗಳ ಅರ್ಥವನ್ನು ನಿರ್ಧರಿಸಿ ತಿಳಿಸುವುದಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದನು. ಇಷ್ಟಾದರೂ ಕಲಿಕಾಲಮಹಿಮೆಯಿಂದ ಜನರು ಅಲ್ಪಜ್ಞಾನ, ಅಲ್ಪಬಲವುಳ್ಳವರಾಗುತ್ತಿರಲು, ಅವರ ಉದ್ಧಾರಾರ್ಥವಾಗಿ, ಈ ಬ್ರಹ್ಮಸೂತ್ರಗಳಿಂದ ನಿರ್ಣಯಿಸಲ್ಪಟ್ಟ ವೇದಾರ್ಥಗಳನ್ನು ಪುರಾಣ ರೂಪದಿಂದ ಜನರಿಗೆ ತಿಳಿಸುವುದಕ್ಕಾಗಿ ಹದಿನೆಂಟುಸಾವಿರಶ್ಲೋಕಗಳುಳ್ಳ, ಹನ್ನೆರಡು ಸ್ಕಂಧಗಳಾಗಿ ವಿಭಾಗವುಳ್ಳ ಶ್ರೀಮದ್ಭಾಗವತವೆಂಬ ಮಹಾಪುರಾಣವನ್ನು ರಚಿಸಿದನು.

ಗ್ರಂಥಾರಂಭದಲ್ಲಿ ಶ್ರೀಪರಮಾತ್ಮನಾದ ನಾರಾಯಣನನ್ನು ಅತ್ಯಂತ ಪ್ರಿಯತಮನನ್ನಾಗಿಯೂ ಸರ್ವಾಭೀಷ್ಟ ಪ್ರದನನ್ನಾಗಿಯೂ ಭಾವಿಸಿ ಎರಡು ವಿಧದಿಂದಲೂ ಗ್ರಂಥಪ್ರತಿಪಾದ್ಯನನ್ನಾಗಿ ಧ್ಯಾನಿಸಿ ನಮಸ್ಕರಿಸುವುದು ಶಿಷ್ಟಾಚಾರ ಸಂಪ್ರದಾಯವೆಂದು ಸಜ್ಜನರಿಗೆ ತಿಳಿಸುವುದಕ್ಕಾಗಿ ಜಗಜ್ಜನ್ಮಾದಿಕಾರಣವೂ, ಅನಂತವೇದ ಪ್ರತಿಪಾದ್ಯವೂ ಆದ ತನ್ನ ರೂಪವೇ ಆದ

## अथ प्रथमोऽध्यायः

ಶ್ರೀನಾರಾಯಣರೂಪದ ನಮಸ್ಕಾರರೂಪ ಮಂಗಳಾಚರಣೆಯನ್ನು ಜನ್ಮಾದ್ಯಸ್ಯಯತೋ- ಎಂಬ ಮಂಗಳಾಚರಣ ಶ್ಲೋಕದಿಂದ ನಿರೂಪಿಸಿದ್ದಾರೆ.

ಈ ಸಕಲ ಜೀವಜಡಾತ್ಮಕ ಪ್ರಪಂಚದ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳನ್ನೂ ಕೇವಲ ಲೀಲೆಯಿಂದ ಅಂದರೆ ಅನಾಯಾಸದಿಂದ ಆನಂದದಿಂದ ಮಾಡುವವನೂ, ಸರ್ವಜ್ಞನೂ, ಸರ್ವಸ್ವಾಮಿಯೂ, ಚತುರ್ಮುಖ ಬ್ರಹ್ಮದೇವರಿಗೆ ಜ್ಞಾನಪ್ರದನೂ, ತನ್ನ ಅನುಗ್ರಹವಿಲ್ಲದಿದ್ದರೆ ತಿಳಿಯಲಶಕ್ಯನೂ, ಜಗತ್ಸೃಷ್ಟ್ಯಾದಿ ವ್ಯಾಪಾರಗಳನ್ನು ತನ್ನ ಪ್ರಯೋಜನವು ಏನೂ ಇಲ್ಲದಿದ್ದರೂ ಜೀವರ ಉದ್ಧಾರಾರ್ಥವಾಗಿ ಮಾಡುವವನೂ, ಇಂದ್ರಜಾಲಾದಿ ಮಾಯಾರಹಿತವಾದ ಸತ್ಯಜಗದ್ವ್ಯಾಪಾರ ಮಾಡುವವನೂ, ನಿತ್ಯದುಃಖರಹಿತನೂ, ನಿತ್ಯಪರಮಾನಂದೈಕ ಸ್ವರೂಪನೂ, ಆದ ಕಾರಣ ನಿಖಿಲ ಸದ್ಗುಣಪೂರ್ಣನೂ ಆದ ಸರ್ವೋತ್ತಮನಾದ ಶ್ರೀವಿಷ್ಣುವನ್ನು, ಶ್ರೀಮನ್ನಾರಾಯಣನನ್ನು, ಯಾವಾಗಲೂ ಧ್ಯಾನಿಸೋಣ ಎಂದು ತಾತ್ಪರ್ಯಾರ್ಥ. ಇದೇ ಶ್ಲೋಕವೇ ವೇದಮಾತೆಯಾದ ಗಾಯತ್ರೀ ಮಂತ್ರಾರ್ಥವೂ ಆಗಿದೆ ಎಂದು ದ್ವಿತೀಯಾರ್ಥವನ್ನು ಹೇಳುತ್ತಾರೆ

### ಗಾಯತ್ರೀ ಅರ್ಥದ ಕನ್ನಡಾನುವಾದ

ಅಧಿಕಾರಿಗಳಿಗೆ ಉಪನಯನಕಾಲದಲ್ಲಿ, ಅವರಿಗೆ ವೇದಾಧ್ಯಯನಕ್ಕೆ ಅಧಿಕಾರವನ್ನು ಗುರುಗಳು ತಮ್ಮ ಆಜ್ಞೆಯಿಂದ ಕೊಟ್ಟು, ಹೇಗೆ ಮೊದಲು ಗಾಯತ್ರೀ ಮಂತ್ರವನ್ನೇ ಉಪದೇಶಿಸುತ್ತಾರೋ, ಅದೇ ರೀತಿಯಲ್ಲಿ ಸಕಲವೇದಾರ್ಥಗಳನ್ನೇ ನಿರೂಪಿಸತಕ್ಕ ಶ್ರೀಮದ್ಭಾಗವತ ಗ್ರಂಥಾರಂಭದಲ್ಲಿಯೂ, ಪ್ರಿಯ, ಇಷ್ಟ ದೇವತೆಯಾದ ಗ್ರಂಥಪ್ರತಿಪಾದ್ಯ ಶ್ರೀಮನ್ನಾರಾಯಣನನ್ನು ಗಾಯತ್ರೀ ಮಂತ್ರಾರ್ಥದಿಂದಲೇ ನಮಸ್ಕರಿಸುತ್ತಾರೆ. ಹೇಗೆಂದರೆ ಜನ್ಮಾದ್ಯಸ್ಯ ಯತೋ ಎಂಬುದೇ ತತ್ಸವಿತುಃ ಎಂಬುದರ ಅರ್ಥವನ್ನು, ಓಂ ಅಂದರೆ ಸರ್ವಸದ್ಗುಣಪೂರ್ಣನೂ, ಜಗತ್ಸೃಷ್ಟ್ಯಾದ್ಯಷ್ಟಕರ್ತೃವಾದ ಕ್ರೀಡಾದಿಗುಣವಿಶಿಷ್ಟನೂ, ಎಂದೂ, ವರೇಣ್ಯಂ ಎಂಬುದರ ಅರ್ಥವನ್ನು ಪರಂ ಎಂಬುದು, ವರಪ್ರದರಾದ ರಮಾ ಬ್ರಹ್ಮಾದಿ ದೇವತೋತ್ತಮರಿಗಿಂತಲೂ, ಅತ್ಯಂತ ಶ್ರೇಷ್ಠನೆಂದೂ, ಧಾಮ್ನಾ ಸ್ವೇನ ಸದಾನಿರಸ್ತಕುಹಕಂ ಎಂಬುದು ಭರ್ಗೋ ದೇವಸ್ಯ ಎಂಬುದರ ಅರ್ಥವನ್ನು ಸಮಸ್ತದುರಿತನಾಶಕನೂ, ಜ್ಯೋತಿಪ್ರಕಾಶಸ್ವರೂಪನೂ, ಅಶೇಷಜ್ಞಾನಪ್ರೇರಕನಾದ ಜ್ಞಾನಮಯನೂ ಎಂದೂ, ತೇನೇ

## अथ प्रथमोऽध्यायः

ಬ್ರಹ್ಮಹೃದಾ ಯ ಆದಿಕವಯೇ ಎಂಬುದು ಧಿಯೋ ಯೋನಃ ಪ್ರಚೋದಯಾತ್ ಎಂಬುದರ ಅರ್ಥವನ್ನು, ಬ್ರಹ್ಮಾದಿ ಸಕಲಚೇತನರಾಶಿಯಿಂದಲೂ ತಿಳಿಯಲಶಕ್ಯವಾದ ಮಹಾಮಹಿಮನೂ, ಬ್ರಹ್ಮಾದಿಸಕಲದೇವತೆಗಳಿಗೂ ಸುಜ್ಞಾನದಾಯಕನೂ, ಆದಿಯಲ್ಲಿ ಶ್ರೀಹಯಗ್ರೀವರೂಪದಿಂದ ಅನಂತವೇದಗಳನ್ನು ಬ್ರಹ್ಮದೇವರಿಗೆ ಉಪದೇಶಿಸಿದವನೂ ಆದ, ಜಗತ್ಸೃಷ್ಟ್ಯಾದಿ ಸ್ವಭಾವವುಳ್ಳ, ನಿರ್ದೋಷಗುಣಪೂರ್ಣ, ನಿತ್ಯನಿರತಿಶಯಾನಂದ ಪೂರ್ಣನಾದ, ಮುಕ್ತಿಪ್ರದನಾದ, ಸರ್ವತ್ರವ್ಯಾಪ್ತನಾದ ಶ್ರೀಮನ್ನಾರಾಯಣನು, ವಿಷಯಾದಿಗಳಲ್ಲೇ ಸಂಚರಿಸುವ ಸ್ವಭಾವವುಳ್ಳ ನಮ್ಮ ಮನಸ್ಸನ್ನು ವಿಷಯಗಳಿಂದ ಹಿಂತಿರುಗಿಸಿ, ತನ್ನ ದಿವ್ಯಜ್ಞಾನಮಯರೂಪ ಸಂದರ್ಶನದ ಕಡೆಗೆ ಪ್ರೇರಿಸಲೆಂದು ಪ್ರಾರ್ಥಿಸಿ, ನಮಸ್ಕರಿಸೋಣ ಎಂದು ಭಾವಾರ್ಥವನ್ನು ನಿರೂಪಿಸುತ್ತಾರೆ.

ಯತ್ರ ತ್ರಿಸರ್ಗೋ ಮೃಷಾ- ಎಂಬುದಕ್ಕೆ ಶ್ರೀವಿಜಯಧ್ವಜಾಚಾರ್ಯರು ಈ ರೀತಿ ವ್ಯಾಖ್ಯಾನ ಮಾಡಿರುತ್ತಾರೆ. (1)ಜೀವೇಶ್ವರಜಡಾನಾಂ ಸರ್ಗಃ ತ್ರಿಸರ್ಗಃ ತತ್ರ ಈಶ್ವರೋಪಿ ಜಗತ್ಸೃಷ್ಟ್ಯಾಬಹುರೂಪೀಭೂಯ ಜಗದಂತಃ ಪ್ರವಿಶತಿ ಯ: ತಥಾ ಬಹಿಶ್ಚ ಭೂತಾನುಕಂಪಯಾ ವಾಸುದೇವಾದಿಬಹುರೂಪ ಆವಿರ್ಭವತಿ ಇದಂ ತು ದೀಪಾತ್ ದೀಪಾಂತರೋತ್ಪತ್ತಿರ್ಯಥಾ ತಥೇಶ್ವರಸರ್ಗಃ.,ಯಥಾ ಸೂರ್ಯಾದಿ ತೇಜಸಾಂ ಜಲಾದಿ ಉಪಾಧಿನಿಮಿತ್ತೈಃ ಬಹೂನಿ ಪ್ರತಿಬಿಂಬಾನಿ ಸೂರ್ಯಕಾಂತಾದೀನಿ ಸೂರ್ಯಾದೇರ್ಜಾಯತೇ, ತಥೈವ ಸೂಕ್ಷ್ಮಸ್ಥೂಲಶರೀರಾದ್ಯುಪಾಧಿ ನಿಮಿತ್ತೈಃ ಪ್ರತಿಬಿಂಬಭೂತಾ ಜೀವಾ ಹರೇರುತ್ಪದ್ಯಂತೇ. ಏಷ ಜೀವಸರ್ಗಃ. ಯಥಾ ಕುಲಾಲೋ ಮೃದಮುಪಾದಾನೀಕೃತ್ಯ ಘಟಾದೀನ್ ಸೃಜತಿ, ತಥಾ ಈಶ್ವರೋ ಜಡಪ್ರಕೃತಿಮುಪಾದಾಯ, ಮಹದಹಂಕಾರಾದ್ಯಶೇಷಜಡಪದಾರ್ಥಾನ್ ಸೃಜತ್ಯೇಷ ಜಡಸರ್ಗಃ ಎಂದೂ,

ಸತ್ಯಂ ಎಂಬುದಕ್ಕೆ ಸಚ್ಛಬ್ಧ ಉತ್ತಮಂ ಬ್ರೂಯಾದಾನಂದಂ ತೀತಿ ವೈ ವದೇತ್. ಯೇತಿ ಜ್ಞಾನಂ ಸಮುದ್ದಿಷ್ಟಂ ಎಂದರೆ, ಜೀವ. ಈಶ್ವರ, ಜಡ ಸೃಷ್ಟಿಗಳೆಂದು ಮೂರು ವಿಧ. ಅದರಲ್ಲಿ ಶ್ರೀಪರಮಾತ್ಮನು ಜಡಚೇತನಾತ್ಮಕ ಸಕಲ ಜಗತ್ತನ್ನೂ ಸೃಷ್ಟಿ ಮಾಡಿ ತಾನೂ ಅನಂತರೂಪನಾಗಿ ಎಲ್ಲದರಲ್ಲೂ ಒಂದೊಂದು ರೂಪಿನಿಂದ ಒಳಗೆ ಪ್ರವೇಶಿಸಿ, ಹಾಗೆಯೇ ಜಗತ್ತಿಗೆ ಪ್ರವೃತ್ತಿಯನ್ನೂ, ರಕ್ಷಣೆಯನ್ನೂ ಕೊಡುವುದಕ್ಕಾಗಿ ತನ್ನಲ್ಲಿರುವ ಸಹಜವಾದ ಭೂತದಯೆಯಿಂದ ವಾಸುದೇವಾದಿ ರೂಪಗಳಿಂದ ಹೇಗೆ ಒಂದು ದೀಪದಿಂದ ಅನೇಕ ದೀಪಗಳನ್ನು ಹತ್ತಿಸಬಹುದೋ ಆ ರೀತಿಯಲ್ಲಿ ಹೊರಗೂ ಅನಂತ ರೂಪಗಳಿಂದ ಆವಿರ್ಭವಿಸಿದನು. ಇದೇ ಈಶ್ವರ ಸೃಷ್ಟಿ.

## अथ प्रथमोऽध्यायः

(೨)ಹೇಗೆ ಒಬ್ಬನೇ ಆದ ಸೂರ್ಯನ ತೇಜಸ್ಸು, ಜಲಾದಿ ಉಪಾಧಿಗಳನ್ನು ನಿಮಿತ್ತೀಕರಿಸಿಕೊಂಡು ಅನೇಕ ಸೂರ್ಯನಂತಹ ಪ್ರತಿಬಿಂಬಗಳು ಉದ್ಭವಿಸುತ್ತವೆಯೋ, ಅದರಂತೆ ಅನೇಕ ಸೂಕ್ಷ್ಮ, ಸ್ಥೂಲ ಶರೀರಗಳೆಂಬ ಉಪಾಧಿಗಳನ್ನು ನಿಮಿತ್ತೀಕರಿಸಿಗೊಂಡು ಪ್ರತಿಬಿಂಬಗಳಂತೆ ಜೀವರನ್ನು ದೇವರು ಸೃಷ್ಟಿಸುತ್ತಾನೆ. ಇದಕ್ಕೆ ಜೀವಸರ್ಗವೆಂದು ಹೆಸರು.

(೩) ಹೇಗೆ ಕುಂಬಾರನು ಮಣ್ಣನ್ನು ನಿಮಿತ್ತೀಕರಿಸಿಕೊಂಡು ಮಡಕೆ ಮೊದಲಾದವುಗಳನ್ನು ಮಾಡುತ್ತಾನೋ ಹಾಗೆ ದೇವರು ಜಡ ಪ್ರಕೃತಿಯನ್ನು ನಿಮಿತ್ತೀಕರಿಸಿಕೊಂಡು ಮಹತ್ತತ್ವಾದಿ ಸಕಲ ಜಡಪದಾರ್ಥಗಳನ್ನೂ ಸೃಷ್ಟಿಸುತ್ತಾನೆ. ಇದು ಜಡ ಸೃಷ್ಟಿ - ದೇವರಿಗೆ ಸತ್ಯ ಎಂಬ ಹೆಸರು. ಸತ್ ಎಂದರೆ ಸರ್ವೋತ್ತಮನೆಂದೂ ತೀ - ಎಂದರೆ ಆನಂದ ಪೂರ್ಣನೆಂದು ಯ ಎಂದರೆ ಜ್ಞಾನಸ್ವರೂಪನೆಂದೂ, ಸತ್ಯ ಎಂದರೆ ಆನಂದಪೂರ್ಣಜ್ಞಾನಸ್ವರೂಪನೆಂದು ಭಾವ.

### ಅನುಬಂಧ ಚತುಷ್ಟಯನಿರೂಪಣೆ

ವಿಷಯ, ತತ್ಸಾಧನಾಧಿಕಾರಿ ಪ್ರಯೋಜನಾನಿ ದ್ವಿತೀಯ ಶ್ಲೋಕೇನ ಪ್ರದರ್ಶಯತಿ

**ಧರ್ಮಃ ಪ್ರೋಜ್ಝಿತಕೈತವೋತ್ರ ಪರಮೋ ನಿರ್ಮತ್ಸರಾಣಾಂ ಸತಾಂ**
**ವೇದ್ಯಂ ವಾಸ್ತವಮತ್ರ ಶಿವದಂ ತಾಪತ್ರಯೋನ್ಮೂಲನಂ ।**
**ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂ ವಾ ಪರೈರೀಶ್ವರಃ**
**ಸದ್ಯೋ ಹೃದ್ಯವರುಧ್ಯತೇತ್ರ ಕೃತಿಭಿಃ ಶುಶ್ರೂಷುಭಿಸ್ತತ್ಕ್ಷಣಾತ್ ॥ 2 ॥**

ಅತ್ರ ಅಸ್ಮಿನ್ ಶ್ರೀಮದ್ಭಾಗವತೇ ಶ್ರೀಮತ್ವಂ ನಾಮ ಶ್ರೂಯಮಾಣರಮಣೀಯತಯಾ ಅರ್ಥ ಪರ್ಯಾಲೋಚನಯಾ ಚಾಸ್ಯೇತರೇಭ್ಯಃ ಆಧಿಕ್ಯಂ. ತಥಾಚೋಕ್ತಂ-

**ರಾಜನ್ ತೇ ತಾವದನ್ಯಾನಿ ಪುರಾಣಾನಿ ಸತಾಂ ಗಣೇ ।**
**ಯಾವನ್ನದೃಶ್ಯತೇ ಸಾಕ್ಷಾಚ್ಛ್ರೀಮದ್ಭಾಗವತಂ ಪರಂ ಇತಿ ॥**

ಧರ್ಮಃ ಧ್ರಿಯತೇ ಅನೇನ ಅಧಃಪತನ್ ಪುರುಷ ಇತಿ ಧರ್ಮಃ. ಧಾರಯತೀತಿ ಧರೋ ಭಗವಾನ್, ಸಃ ಮೀಯತೇ ಜ್ಞಾಯತೇ ಅನೇನೇತಿ ವಾ, ದಧಾತಿ ಕರ್ತಾರಂ ರಮಯತಿ, ಮಿನುತೇ ಹಿನಸ್ತಿ ಪಾಪಂ ಇತಿ ವಾ ಭಗವತ್ಪ್ರಾಪ್ತಿಸಾಧನಭೂತಃ ಭಾಗವತಃ, ತತ್ರ ಪ್ರೋಜ್ಝಿತಕೈತವಃ ಅತ್ರ ಪರಮಂ - ಸ್ವಾತ್ಮನೋ

## अथ प्रथमोऽध्यायः

ದೇಹೇಂದ್ರಿಯಾಣಾಂ ಈಶ್ವರಾಧಿಷ್ಠಿತತ್ವಂ, ಈಶ್ವರನಿಯಮತ್ವಂ ನಿಗೂಹ್ಯ, ಹರೇಃ ಕಾರಯಿತೃತ್ವಂ ಫಲದಾತೃತ್ವಮಪಿ ಅವಗಣಯ್ಯ, ಅಹಮೇವೇದಂ ಕಾರಯಿಷ್ಯೇ, ಅರ್ಥೀ ಸಮರ್ಥೋ ವಿದ್ವಾನಹಮೇವ ಸ್ವತಂತ್ರ ಇತಿ ಬುದ್ಧ್ಯಾ ಕ್ರಿಯಮಾಣೋ ಧರ್ಮಃ ಕೈತವ ಇತ್ಯುಚ್ಯತೇ. ಯತೋ ಅಧಿಕತಮಃ ಸುಖೋ ಭವತಿ ಸ ಪರಮೋ ಧರ್ಮಃ. ಸ ಚ ಭಕ್ತಿಯೋಗಲಕ್ಷಣ ಏವ ಶ್ರೀಪರಮಾತ್ಮನಿ ಭಕ್ತಿಯೋಗೇನ ಕೃತಂ ಕಾರ್ಯಂ ಪ್ರೋಜ್ಝಿತ ಕೈತವಮ್. ಉಕ್ತಂ ಚ-

**ಏತಾವಾನೇವ ಲೋಕೇಽಸ್ಮಿನ್ ಪುಂಸಾಂ ಧರ್ಮಃ ಪರಃ ಸ್ಮೃತಃ ।**
**ಭಕ್ತಿಯೋಗೋ ಭಗವತಿ ತನ್ನಾಮಗ್ರಹಣಾದಿಭಿಃ ॥**

ತತ್ರ ನಿರ್ಮತ್ಸರಾಣಾಂ ಸತಾಮೇವ ಅಧಿಕಾರಃ. ವೇದ್ಯಂ ಚ ಜ್ಞಾನಗಮ್ಯಂ ವಾಸ್ತವಂ ನಿರಸ್ತದೋಷಂ ಪೂರ್ಣಗುಣಂ, ವಸ್ತು ಅಪ್ರತಿಹತನಿತ್ಯತ್ವೇನ ವಸನಶೀಲತ್ವಾತ್ ವಸ್ತು ದುಃಖನಿವೃತ್ತಿ ಸುಖಪ್ರಾಪ್ತಿ ಲಕ್ಷಣಸ್ಯ ಪುರುಷಾರ್ಥತ್ವಾತ್ ಪರಮಾನಂದಂ ದದಾತೀತಿ ಶಿವದಂ, ಆಧ್ಯಾತ್ಮಿಕಾದಿಸಕಲದುಃಖನಿವರ್ತಕಂ ಚ ತಾಪತ್ರಯೋನ್ಮೂಲನಂ, ಮುನಯೋ ಬ್ರಹ್ಮಾದಯಃ ತೇಭ್ಯೋಽಪ್ಯತಿಶಯಿತಸಾರ್ವಜ್ಞಾತ್ ಮಹಾಮುನಿ ರ್ವ್ಯಾಸಃ ಸಾಕ್ಷಾನ್ನಾರಾಯಣಃ, ತೇನ ಪ್ರಣೀತೇ ಶ್ರೀಮದ್ಭಾಗವತೇ ಈಶ್ವರತುಷ್ಟಿಕರೋ ಭಕ್ತಿಯೋಗಲಕ್ಷಣೋ ಧರ್ಮಃ.

ಈಶ್ವರಶ್ಚಾತ್ರ ಪ್ರತಿಪಾದ್ಯಃ ಹರೇರಪರೋಕ್ಷ ಜ್ಞಾನಮುತ್ಪಾದ್ಯ ತತ್ಪ್ರಸಾದಾಂತರಂಗಸಾಧನತ್ವೇನ ಅಪವರ್ಗಲಕ್ಷಣಾ ಅಸ್ಮಿನ್ ಭಾಗವತಶಾಸ್ತ್ರೇ ಸಮ್ಯಗಭ್ಯಸ್ಯಮಾನೇ ಕೃತಿಭಿಃ, ಶಿಕ್ಷಿತಬುದ್ಧಿಭಿಃ ಶುಶ್ರೂಷುಭಿಃ ಮನೋವಾಕ್ಕರ್ಮಭಿಃ ಗುರ್ವಾದಿ ಪರಮಪುರುಷ ಪರಿಚರ್ಯಾಕರಣಕುಶಲೈಃ ಸಾಧನಸಾಮಗ್ರ್ಯುಪೇತೈಃ ಲಕ್ಷ್ಮೀಶೋ ಈಶ್ವರಃ ಶ್ರೀಪರಮಾತ್ಮಾ ಶೀಘ್ರಂ ಹೃದಯಕಮಲೇ ದೃಶ್ಯತೇ ಇತಿ. ಅತಃ ಸರ್ವಜ್ಞತಮೇನ ಶ್ರೀಕೃಷ್ಣದ್ವೈಪಾಯನೇನ ಪ್ರಣೀತತ್ವೇನ ಪ್ರಮಾಣತಮತ್ವಾದಿದಂ ಶ್ರೀಮದ್ಭಾಗವತಂ ಸರ್ವಮುಮುಕ್ಷುಭಿಃ ನಿರಂತರಮಭ್ಯಸನೀಯಮಿತಿ ಸಿದ್ಧಮ್. ಅನೇನ ಶ್ರೀಮದ್ಭಾಗವತೇ ಭಕ್ತಿಯೋಗಮೇವ ವಿಷಯಂ, ಭಗವತ್ಪ್ರಾಪ್ತ್ಯರ್ಥಂ ಸಾಧನಂ ನಿರ್ಮತ್ಸರಾ ಸತಾ ದೇವಾ ಅಧಿಕಾರಿಣಃ, ಭಗವದ್ದರ್ಶನ ಮೋಕ್ಷಪ್ರಾಪ್ತಿರೂಪೌ ಫಲೌ ಇತಿ ನಿರೂಪಿತಂ.

ವಿಷಯ, ಸಾಧನ, ಅಧಿಕಾರಿ, ಪ್ರಯೋಜನಗಳನ್ನು ಮಹಾ ಗ್ರಂಥಗಳಲ್ಲಿ ನಿರೂಪಿಸುತ್ತಾರಾಗಿ, ಇವನ್ನು ಎರಡನೆಯ ಶ್ಲೋಕದಿಂದ ಹೇಳುತ್ತಾರೆ ಧರ್ಮಪ್ರೋಜ್ಝಿತ ಎಂಬ ಶ್ಲೋಕದಿಂದ ಸಜ್ಜನರು ಭಾಗವತಪುರಾಣವನ್ನು ಓದಿ ತಿಳಿಯುವವರೆಗೆ ಇತರ ಪುರಾಣಗಳನ್ನು ಮನೋಹರವನ್ನಾಗಿ

ಭಾವಿಸುತ್ತಾರೆ. ಭಾಗವತವನ್ನು ಓದಿ ತಿಳಿದ ನಂತರ ಭಾಗವತಕ್ಕೆ ಸಮನಾದ ಗ್ರಂಥ ಬೇರೆ ಯಾವುದೂ ಇಲ್ಲವೆಂದು ತಿಳಿಯುತ್ತಾರೆ.

ನರಕಾದಿಗಳಲ್ಲಿ ಬೀಳಲಿರುವ ಪ್ರಾಣಿಗಳನ್ನು ಉದ್ಧರಿಸುವುದೇ ಧರ್ಮವು.ಸಮಸ್ತ ಲೋಕಗಳನ್ನು ಧರಿಸಿ, ಪೋಷಿಸುವ ಶ್ರೀಪರಮಾತ್ಮನನ್ನು ತಿಳಿಸುವುದೇ ಧರ್ಮವು. ಶ್ರವಣಮನನಾದಿ ಸಾಧನೆಗಳನ್ನು ಮಾಡತಕ್ಕ ಭಕ್ತರನ್ನು, ಉತ್ಕೃಷ್ಟ ಸುಖಕೊಟ್ಟು ಆನಂದಪಡಿಸಿ, ಜ್ಞಾನವನ್ನುಂಟುಮಾಡಿ, ಪಾಪಗಳನ್ನು ನಿರ್ಮೂಲಗೊಳಿಸಿ, ಶ್ರೀಪರಮಾತ್ಮನನ್ನು ಹೊಂದಲಿಕ್ಕೂ, ನೋಡುವುದಕ್ಕೂ ಅರ್ಹರನ್ನಾಗಿ ಮಾಡುತ್ತಾದ್ದರಿಂದ ಭಾಗವತವೆಂದು ಪ್ರಖ್ಯಾತವಾದ ಈ ಶಾಸ್ತ್ರವು, ಶ್ರೀಪರಮಾತ್ಮನ ಸ್ವಾಮಿತ್ವ, ಸ್ವತಂತ್ರತ್ವ, ಫಲದಾನತ್ವಾದಿ ಮಹಾಮಹಿಮೆಗಳನ್ನು ತಿಳಿಯದೇ, ಅಜ್ಞಾನದಿಂದ ತಾನೇ ಸ್ವತಂತ್ರ, ಕರ್ತೃ, ಭೋಕ್ತೃ, ಪಂಡಿತನೆಂದು ತಿಳಿಯುವ ಪಾಮರ ಜೀವರಿಗೆ, ಶ್ರೀಪರಮಾತ್ಮವಿಷಯಕ ಸುಜ್ಞಾನವನ್ನು ಬೋಧಿಸಿ, ಭಕ್ತಿಯೋಗವನ್ನು ಉಂಟುಮಾಡಿ, ಆ ಮೂಲಕ ಪಾಮರ ಜನರನ್ನು ಪವಿತ್ರರನ್ನಾಗಿಯೂ, ಸಜ್ಜನರನ್ನಾಗಿಯೂ ಮಾಡಿ, ಮಾತ್ಸರ್ಯಾದಿ ದೋಷಗಳನ್ನು ಬಿಡಿಸಿ, ತನ್ಮೂಲಕ ಅಧಿಕಾರಿಗಳನ್ನಾಗಿ ಮಾಡಿ, ಶ್ರೀಪರಮಾತ್ಮನು ಜ್ಞಾನಗಮ್ಯ, ದೋಷದೂರ, ಪೂರ್ಣಗುಣ, ಕುಂದದೇ ಯಾವಾಗಲೂ ಸರ್ವತ್ರ ಪ್ರವೇಶಿಸಿ ಸರ್ವಾಧಿಪತಿಯಾಗಿರುವವನು, ಜೀವರಿಗೆ ದುಃಖನಿವೃತ್ತಿ ಸುಖಪ್ರಾಪ್ತಿರೂಪ ಮಹಾಪುರುಷಾರ್ಥವೆಂಬ ಆನಂದವನ್ನು ಕೊಡತಕ್ಕವನು, ಆಧ್ಯಾತ್ಮಿಕಾದಿ ಅನರ್ಥಗಳನ್ನೂ, ವಿಪತ್ತುಗಳನ್ನೂ ಪರಿಹರಿಸತಕ್ಕವ, ಬ್ರಹ್ಮಾದಿ ಮಹಾಜ್ಞಾನಿಗಳಿಗೂ ಜ್ಞಾನಪ್ರದನೆಂದು ಬೋಧಿಸುತ್ತೆಂದೂ ವಿಷಯ, ಅಧಿಕಾರಿಗಳನ್ನು ತಿಳಿಸಿ, ಈ ಗ್ರಂಥವು ಸರ್ವಸ್ವತಂತ್ರ, ಪರಿಪೂರ್ಣ ಸದ್ಗುಣ, ಸರ್ವೋತ್ತಮರಾದ ಶ್ರೀಮನ್ನಾರಾಯಣಾವತಾರರಾದ ಶ್ರೀಬಾದರಾಯಣಾಖ್ಯ ವೇದವ್ಯಾಸರಿಂದ ಪ್ರಣೀತವಾದುದರಿಂದ ಪ್ರಮಾಣೋತ್ತಮ ಗ್ರಂಥವೆಂದೂ ತಿಳಿಸುತ್ತಾರೆ.

ಪರಮಾತ್ಮನಿಗೆ ಅತ್ಯಂತ ಪ್ರೀತ್ಯಾಸ್ಪದವಾದ ಭಕ್ತಿಯೋಗವೂ, ವೇದಗಳಿಂದ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನ ಮಹಾಮಹಿಮೆಗಳೂ ಈ ಗ್ರಂಥದಲ್ಲಿ ಹೇಳಲ್ಪಟ್ಟಿವೆ. ಈ ಭಾಗವತಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಲಿಚ್ಛಿಸುವವರು, ಗುರುಶುಶ್ರೂಷೆ, ಗುರುಸೇವಾ, ಗುರುಮುಖದಿಂದ ಶ್ರವಣ, ಅಧ್ಯಯನಾದಿ ಸತ್ಸಾಧನೆಗಳನ್ನು ಮಾಡಿ, ನಂತರ, ಶ್ರೀಪರಮಾತ್ಮನ ಅಪರೋಕ್ಷಜ್ಞಾನವನ್ನು ಹೊಂದಿ, ಭಗವತ್ಪ್ರಸಾದದಿಂದ ಅಂತರಂಗ, ಏಕಾಂತ ಸಾಧನಾಭಕ್ತಿ ಮಾಡಿ, ತಮ್ಮ ಹೃತ್ ಕಮಲದಲ್ಲಿರುವ ಬಿಂಬರೂಪಿ ಶ್ರೀಲಕ್ಷ್ಮೀನಾರಾಯಣನ ದರ್ಶನಸುಖವನ್ನು ಹೊಂದುವರು.

## अथ प्रथमोऽध्यायः

ಇದೇ ನಿರ್ದುಃಖ ಸುಖಾನುಭವರೂಪ ಸ್ವರೂಪಾನಂದ ಪ್ರಾಪ್ತಿರೂಪ ಮೋಕ್ಷಕ್ಕೆ ಸಾಧನವೂ, ಪ್ರಯೋಜನವೂ ಎಂದು ನಿರೂಪಿಸುತ್ತಾರೆ.

ಈ ಮುಕ್ತಿಪ್ರದಾಯಕ ಭಾಗವತವನ್ನು, ಅಮೃತರಸದಿಂದ ತುಂಬಿದ ಹಣ್ಣೆಂದೂ, ಸಜ್ಜನರು ಸವಿದು ಸಂತೋಷ ಪಡಬಹುದೆಂದೂ, ನಿಗಮಕಲ್ಪತರೋರ್ಗಲಿತಂ ಫಲಂ ಎಂಬ ಶ್ಲೋಕದಿಂದ ನಿರೂಪಿಸುತ್ತಾರೆ.

**ನಿಗಮಕಲ್ಪತರೋರ್ಗಲಿತಂ ಫಲಂ ಶುಕಮುಖಾದಮೃತದ್ರವಸಂಯುತಂ ।**

**ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾಃ ಭುವಿ ಭಾವುಕಾಃ ॥ 3 ॥**

ಭುವಿ ಹೇ ಭಾವುಕಾಃ ರಸಿಕಾಃ ಮರ್ತ್ಯಲೋಕೇ ಭಾವನಶೀಲಾ ರಸಜ್ಞಾ ಯೂಯಂ ನಿಗಮಯತಿ ನಿತರಾಂ ಜ್ಞಾಪಯತಿ ಅಪೇಕ್ಷಿತಾಶೇಷಪುರುಷಾರ್ಥಾನಿತಿ ನಿಗಮೋ ವೇದಃ. ಸ ಏವ ಕಲ್ಪತರುಃ ಭಕ್ತಾಕಾಂಕ್ಷಿತಂ ತರತಿ ವಿತರತಿ ದದಾತೀತಿ ಕಲ್ಪತರುಃ ಸುರಪಾದಪಃ. ತಸ್ಮಾತ್ ವ್ಯಾಸನಾಮ್ನಾ ಮಯಾ ಗಲಿತಂ ಪಾತಿತಂ ಫಲಂ, ಶುಕನಾಮ್ನೋ ಮುನೇರ್ಮುಖಾತ್ ಪರೀಕ್ಷಿತೇ ಪ್ರವಚನಾದಮೃತದ್ರವೇಣ ಸಂಯುತಂ. ಪಶ್ಚಾಚ್ಛು ಕಾಚಾರ್ಯಮುಖಪ್ರವಚನೇನ ದ್ರವೀಕೃತಂ ಭಾಗವತಾಖ್ಯಂ ಫಲಂ, ಪಕ್ವಂ, ತಸ್ಯ ಫಲಸ್ಯ ಮಧುರಂ ರಸಂ ಲಿಂಗಶರೀರಮೋಕ್ಷಪರ್ಯಂತಂ ಮುಹುಃ ಆವೃತ್ತ್ಯಾ ಶ್ರವಣಾಂಜಲಿಪುಟೈಃ ಪಾನಂ ಕುರುತ ಇತ್ಯರ್ಥಃ.

ಜನನಮರಣಾಖ್ಯ ಸಂಸಾರರೂಪವಾದ ಈ ಭೂಲೋಕದಲ್ಲಿ, ಜ್ಞಾನಿಗಳೂ ರಸಜ್ಞರೂ ಆದ ನೀವು, ಸಮಸ್ತ ಅಪೇಕ್ಷಿತ ಪುರುಷಾರ್ಥಗಳನ್ನೂ ತಿಳಿಸಿಕೊಡುವುದರಿಂದ ವೇದವೆಂದು ಕರೆಯಲ್ಪಡುವ ಕಲ್ಪವೃಕ್ಷದಿಂದ, ಶ್ರೀವೇದವ್ಯಾಸರೆಂಬ ಆಕಾಶದಿಂದ, ಊರ್ಧ್ವಲೋಕದಿಂದ, ದೇವಲೋಕದಿಂದ ಬೀಳಿಸಲ್ಪಟ್ಟ ಭಾಗವತವೆಂಬ ಹಣ್ಣು, ಶುಕಮಹರ್ಷಿಗಳ ಮುಖದಿಂದ ಪರೀಕ್ಷಿದ್ರಾಜರಿಗೆ ಉಪದೇಶರೂಪದಿಂದ ಅಮೃತರಸದಿಂದ ಸೇರಿಸಲ್ಪಟ್ಟು, ದ್ರವರೂಪದಿಂದ ಇರುವ ಭಾಗವತವೆಂಬ ಪಕ್ವಫಲದ ಮಧುರರಸವನ್ನು, ಲಿಂಗಶರೀರದಿಂದ ಬಿಡಲ್ಪಡುವವರೆಗೂ, ಪುನಃ ಪುನಃ (ನೀವು) ಶ್ರವಣವೆಂಬ, ಕಿವಿಗಳೆಂಬ ಬೊಗಸೆಗಳಿಂದ ಕುಡಿಯಿರಿ ಎಂದರ್ಥ.

### ಸೂತ ಶೌನಕರ ಸಂವಾದ ಪ್ರಾರಂಭ

ದೇವತೆಗಳಿಂದಲೂ, ಋಷಿಗಳಿಂದಲೂ ಸೇವ್ಯವಾದ ಅನಿಮಿಷ ಕ್ಷೇತ್ರದಲ್ಲಿರುವ ನೈಮಿಷಾರಣ್ಯದಲ್ಲಿ, ಮೋಕ್ಷಾದಿ ಪುರುಷಾರ್ಥಗಳನ್ನು ಅಪೇಕ್ಷಿಸಿ ಸತ್ರಯಾಗವೆಂಬ

ಜ್ಞಾನಯಾಗಕ್ಕಾಗಿ, ಶೌನಕಾದಿ ಸಹಸ್ರ ಋಷಿಗಳು ಸೇರಿದ್ದರು. ಒಂದು ದಿನ ಅವರು ತಮ್ಮ ಪ್ರಾತರಾಹ್ನಿಕ, ಅಗ್ನಿಹೋತ್ರಾದಿಗಳನ್ನು ಮುಗಿಸಿದವರಾಗಿ, ತಮ್ಮ ಸಮೀಪದಲ್ಲಿ ಸತ್ಕೃತರಾಗಿ, ಸುಖಾಸೀನರಾಗಿ ಕುಳಿತಿರುವ ಶ್ರೀಸೂತಪುರಾಣಿಕರನ್ನು ಕುರಿತು, ಎಲೈ ಸೂತಪುರಾಣಿಕರೇ, ನೀವು ಶ್ರೀವೇದವ್ಯಾಸರ ಮುಖಾರವಿಂದದಿಂದ ಸಕಲ ಪುರಾಣೇತಿಹಾಸ, ವೇದರಹಸ್ಯಾರ್ಥಗಳನ್ನೂ ಚೆನ್ನಾಗಿ ತಿಳಿದಿದ್ದೀರಿ. ನಮಗೆ ಅನೇಕ ಪುರಾಣಗಳನ್ನು ಶ್ರವಣ ಮಾಡಿಸಿರುವಿರಿ.

ಈ ಕಲಿಯುಗದಲ್ಲಿ ಜನರು ಅಲ್ಪಾ ಯುಷ್ಯರೂ, ಮೂಢರೂ, ಬುದ್ಧಿಹೀನರೂ, ದರಿದ್ರರೂ, ದೈನ್ಯವೃತ್ತಿ ವುಳ್ಳವರೂ ಆಗಿರುತ್ತಾರೆ. ಅವರಿಗೆ ಪರಮಶ್ರೇಯಸ್ಸನ್ನು ಸುಲಭವಾಗಿ ಉಂಟುಮಾಡುವ ರಹಸ್ಯಪ್ರಮೇಯಗಳನ್ನು ಸಜ್ಜನರ ಉದ್ಧಾರಾರ್ಥವಾಗಿ ತಾವು ನಮಗೆ ಹೇಳಿರಿ. ಶ್ರೀಪರಮಾತ್ಮನು ಯಾವುದರಿಂದ ಜಾಗ್ರತೆಯಾಗಿ ಪ್ರಸನ್ನನಾಗುತ್ತಾನೆ ಅದನ್ನು ನಮ್ಮಲ್ಲಿ ದಯೆಯಿಂದ ಹೇಳಿ.

ಯಾವ ವಸುದೇವಸುತನಾದ ಶ್ರೀಕೃಷ್ಣಪರಮಾತ್ಮನ ಅವತಾರವು, ಲೋಕಕ್ಕೆ ವೈಭವವನ್ನೂ, ಸಮಸ್ತಪ್ರಾಣಿಗಳಿಗೂ ಕ್ಷೇಮವನ್ನೂ ಕೊಡುವುದಕ್ಕಾಗಿ ಆಯಿತೋ, ಮೈಮರೆತು ಒಂದೇ ಸಲ ಯಾರ ನಾಮೋಚ್ಚಾರಣೆ ಮಾತ್ರದಿಂದ, ಅಜಾಮಿಳನಿಗಾದಂತೆ ಸಕಲ ಪಾಪಗಳು ಪರಿಹಾರವಾಗಿ, ಕೈವಲ್ಯವೆಂಬ ಮೋಕ್ಷಪ್ರಾಪ್ತಿಗೂ ದಾರಿಯಾಯಿತೋ, ಬ್ರಹ್ಮಾದಿ ದೇವತೆಗಳೂ ಯಾರಲ್ಲಿ ಭಯಭರಿತ ಭಕ್ತಿಯನ್ನು ಮಾಡುತ್ತಾರೋ, ಯಾರ ಪಾದಸೇವೆಯನ್ನು ಮಾಡಿ ಶಮದಮಾದಿ ನಿಷ್ಠರಾದ ಮುನಿಗಳು ತಮ್ಮನ್ನು ಆಶ್ರಯಿಸಿದವರನ್ನು ಸ್ಪರ್ಶಮಾತ್ರದಿಂದ ದೇವಗಂಗೆಯಂತೆ ಪವಿತ್ರರನ್ನಾಗಿ ಮಾಡುವರೋ! ಅಂತಹ ಪಾವನಚರಿತ್ರನೂ, ಪವಿತ್ರಕರ್ಮನೂ ಆದ ಶ್ರೀಪರಮಾತ್ಮನ ಮಹಾತ್ಮೆಗ್ಗಳ ವಿಚಾರಗಳನ್ನು, ಯಾವನು ತಾನೇ ತನ್ನ ಆತ್ಮಶುದ್ಧಿಗಾಗಿಯೂ, ಕಲಿಕಲ್ಮಷನಾಶಕ್ಕಾಗಿಯೂ, ಕೇಳದೇ ಇದ್ದಾನು? ಆ ಪರಮಾತ್ಮನ ಔದಾರ್ಯಾದಿ ಗುಣಕಥನಗಳು ಬ್ರಹ್ಮಾದಿದೇವತೆಗಳಿಂದಲೂ ಉತ್ಕೃಷ್ಟವಾಗಿ ಗಾನ ಮಾಡಲ್ಪಡುತ್ತವೆ.

ಶ್ರದ್ಧೆಯಿಂದ ಕೇಳಬೇಕೆಂದಿರುವ ನಮಗೆ ನೀವು ಆ ಪರಮಾತ್ಮನ ಅನೇಕಲೀಲಾವತಾರ ಕಥೆಗಳನ್ನೂ ಹೇಳಿರಿ. ಶ್ರೀಕೃಷ್ಣನು ಅವತಾರಸಮಾಪ್ತಿ ಮಾಡಿ ಈ ಭೂಮಂಡಲವನ್ನು ಬಿಟ್ಟ ಮೇಲೆ ಈ ಭೂಲೋಕದಲ್ಲಿ ಕಲಿಪ್ರಾಬಲ್ಯದಿಂದ ಧರ್ಮಗಳು ನಾಶವಾಗುತ್ತಿರುವುದನ್ನು ನೋಡಿ ಭೀತಿಯಿಂದ ನಾವು ಇಲ್ಲಿ ಒಂದು ಸಹಸ್ರವರ್ಷಪರ್ಯಂತವಾಗಿ, ಭಗವದುಪಾಸನಾರೂಪವಾದ ಜ್ಞಾನತಪಸ್ಸನ್ನು, ಸತ್ರಯಾಗವನ್ನು ಕೈಕೊಂಡಿರುತ್ತೇವೆ - ನಮಗೆ ದಯಾಳುಗಳೂ ಎಲ್ಲವನ್ನೂ

ತಿಳಿದವರೂ ಆದ ತಾವು ಶ್ರೀಕೃಷ್ಣಚರಿತಾಮೃತವನ್ನು ಪಾನಮಾಡಿಸಿರೆಂದು ಪ್ರಾರ್ಥಿಸಿದರು.

**ಇತಿ ಶ್ರೀಮದ್ಭಾಗವತೇ ಪ್ರಥಮಸ್ಕಂಧೇ ಪ್ರಥಮೋಧ್ಯಾಯಃ**

## अथ द्वितीयोऽध्यायः

इति सम्प्रश्नसम्पृष्टो विप्राणां रौमहर्षणिः ।
प्रतिपूज्य वचस्तेषां प्रवक्तुमुपचक्रमे ॥ १ ॥

**सूत उवाच**

यं प्रव्रजन्तमनुपेतमपेतकृत्यं द्वैपायनो विरहकातर आजुहाव ।
पुत्रेति तन्मयतया तरवोऽपि नेदुस्तं सर्वभूतहृदयं मुनिमानतोऽस्मि ॥ २ ॥

यः स्वानुभावमखिलश्रुतिसारमेकमध्यात्मदीपमतितितीर्षतां तमोऽन्धम्
संसारिणां करुणयाऽऽह पुराणगुह्यं तं व्याससूनुमुपयामि गुरुं मुनीनाम् ॥ ३ ॥

नारायणं नमस्कृत्य नरञ्चैव नरोत्तम् ।
देवीं सरस्वतीं व्यासं ततो ग्रन्थमुदीरये ॥ ४ ॥

मुनयः साधु पृष्टोऽहं भवद्भिर्लोकमङ्गलम् ।
यत्कृतः कृष्णसंप्रश्नो येनात्माऽऽशु प्रसीदति ॥ ५ ॥

स वै पुंसां परो धर्मो यतो भक्तिरधोक्षजे ।
अहैतुक्यव्यवहिता ययाऽऽत्माऽऽशु प्रसीदति ॥ ६ ॥

वासुदेवे भगवति भक्तियोगः प्रयोजितः ।
जनयत्याशु वैराग्यं ज्ञानञ्च यदहैतुकम् ॥ ७ ॥

धर्मः स्वनुष्ठितः पुंसां विश्वक्सेनकथाश्रयाम् ।
नोत्पादयेद्यदि रतिं श्रम एव हि केवलम् ॥ ८ ॥

धर्मस्य ह्यापवर्ग्यस्य नार्थोऽर्थायेह कल्पते ।
नार्थस्य धर्मैकान्तस्य कामो लाभाय हि स्मृतः ॥ ९ ॥

## अथ द्वितीयोऽध्यायः

कामस्य नेन्द्रियप्रीतिर्लाभो जीवति यावता ।
जीवस्यातत्वजिज्ञासोर्नार्थो यश्चेह कर्मभिः ॥ १० ॥

वदन्ति तत्तत्वविदस्तत्वं यज्ज्ञानमद्वयम् ।
ब्रह्मेति परमात्मेति भगवानिति शब्द्यते ॥ ११ ॥

सत्तामात्रं तु यत्किञ्चित्सदसच्चाविशेषणम् ।
उभाभ्यां भाष्यते साक्षाद्भगवान् केवलः स्मृतः ॥ १२ ॥

तच्छ्रद्दधाना मुनयो ज्ञानवैराग्ययुक्तया ।
पश्यन्त्यात्मनि चात्मानं भक्त्या श्रुतिगृहीतया ॥ १३ ॥

अतः पुम्भिर्द्विजश्रेष्टाः वर्णाश्रमविभागशः ।
स्वनुष्ठितस्य धर्मस्य संसिद्धिर्हरितोषणम् ॥ १४ ॥

तस्मादेकेन मनसा भगवान्सात्वतां पतिः ।
श्रोतव्यः कीर्तितव्यश्च ध्येयः पूज्यश्च नित्यदा ॥ १५ ॥

यदनुध्यायिनो युक्ताः कर्मग्रन्थिनिबन्धनम् ।
छिन्दन्ति कोविदास्तस्य को न कुर्यात्कथारतिम् ॥ १६ ॥

शुश्रूषोः श्रद्दधानस्य वासुदेवकथारतिः ।
स्यान्महत्सेवया विप्राः पुण्यतीर्थनिषेवणात् ॥ १७ ॥

शृण्वतां स्वकथां कृष्णः पुण्यश्रवणकीर्तनः ।
हृद्यन्तस्थो ह्यभद्राणि विधुनोति सुहृत् सताम् ॥ १८ ॥

नष्टप्रायेष्वभद्रेषु नित्यं भागवतसेवया ।
भगवत्युत्तमश्लोके भक्तिर्भवति नैष्ठिकी ॥ १९ ॥

तदा रजस्तमोभावाः कामलोभादयश्च ये ।
चेत एतैरनाविद्धं स्थितं सत्वे प्रसीदति ॥ २० ॥

एवं प्रसन्नमनसो भगवद्भक्तियोगतः ।
भगवत्तत्वविज्ञानं मुक्तसङ्गस्य जायते ॥ २१ ॥

## अथ द्वितीयोऽध्यायः

भिद्यते हृदयग्रन्थिश्छिद्यन्ते सर्वसंशयाः ।
क्षीयन्ते चास्य कर्माणि दृष्ट एवात्मनीश्वरे ॥ २२ ॥

अतो वै कवयो नित्यं भक्तिं परमया मुदा ।
वासुदेवे भगवति कुर्वन्त्यात्मप्रसादनीम् ॥ २३ ॥

सत्वं रजस्तम इति प्रकृतेर्गुणास्तैर्युक्तः परः पुरुष एव इहास्य धत्ते ।
स्थित्यादये हरिविरिञ्चहरेति सञ्ज्ञाः श्रेयांसि तत्र खलु सत्वतनौ नृणां स्युः ॥ २४ ॥

पार्थिवाद्दारुणो धूमस्तस्मादग्निस्त्रयीमयः ।
तमसस्तु रजस्तस्मात्सत्वं यद् ब्रह्मदर्शनम् ॥ २५ ॥

भेजिरे मुनयोऽथाग्रे भगवन्तमधोक्षजम् ।
सत्वं विशुद्धं क्षेमाय कल्पते नेतराविह ॥ २६ ॥

मुमुक्षवो घोरमूढान् हित्वा भूतपतीनथ ।
नारायणकलाः शान्ता भजन्ति ह्यनसूयवः ॥ २७ ॥

रजस्तमः प्रकृतयः समशीलान् भजन्ति वै ।
पितृभूतप्रजेशादीन् श्रियैश्वर्यप्रजेप्सवः ॥ २८ ॥

वासुदेवपरा वेदा वासुदेवपरा मखाः ।
वासुदेवपरा योगा वासुदेवपराः क्रियाः ॥ २९ ॥

वासुदेवपरं ज्ञानं वासुदेवपरं तपः ।
वासुदेवपरो धर्मो वासुदेवपरा गतिः ॥ ३० ॥

स एवेदं ससर्जाग्रे भगवानात्ममायया ।
सदसद्रूपया चासौ गुणमय्याऽगुणो विभुः ॥ ३१ ॥

तया विलसितेष्वेषु गुणेषु गुणवानिव ।
अन्तः प्रविष्ट आभाति विज्ञानेन विजृम्भितः ॥ ३२ ॥

यथा व्यवहितो वह्निर्दारुष्वेकः स्वयोनिषु ।
नानेव भाति विश्वात्मा भूतेषु च तथा पुमान् ॥ ३३ ॥

असौ गुणमयैर्भावैर्भूतसूक्ष्मेन्द्रियादिभिः ।

**अथ द्वितीयोऽध्यायः**

स्वनिर्मितेषु निर्विष्टो भुंक्ते भूतेषु तद्गुणान्॥ ३४ ॥
भावयन्नेष सत्वेन लोकान् वै लोकभावनः।
लीलावतारानुगतस्तिर्यरसुरादिषु॥ ३५ ॥

**॥ इति श्रीमद्भागवते प्रथमस्कन्धे द्वितीयोऽध्यायः ॥**

## ॥ ದ್ವಿತೀಯ ಅಧ್ಯಾಯ ॥

### ಸೂತರಿಂದ ಪ್ರವಚಾನಾರಂಭ

ದೇಹಾಭಿಮಾನರಹಿತರಾಗಿ ಸರ್ವತ್ರವ್ಯಾಪ್ತನಾದ ಶ್ರೀಪರಮಾತ್ಮನಲ್ಲೇ ಮನಸ್ಸನ್ನಿಟ್ಟು ಅವಧೂತವೃತ್ತಿಯಿಂದ ಅನಿರ್ದೇಶ್ಯರಾಗಿ ಸಂಚಾರಹೊರಟ ಯಾವ ಶುಕಋಷಿಗಳನ್ನು, ದ್ವೈಪಾಯನರೆಂದು ಪ್ರಖ್ಯಾತರಾದ ಶ್ರೀವೇದವ್ಯಾಸದೇವರು ವಿರಹವುಳ್ಳವರಂತೆ ಎಲೈ, ಪುತ್ರನೇ! ಶುಕ! ಎಲ್ಲಿರುತ್ತೀಯೆ ಎಂದು ಕೂಗಿದಾಗ, ಆ ಅರಣ್ಯದಲ್ಲಿರುವ ವೃಕ್ಷಾದಿ ಸಕಲ ವಸ್ತುಗಳೂ ಓ! ಇಲ್ಲಿದ್ದೇನೆ! ಎಂದು ಉತ್ತರಕೊಡುವವರಾಗಿ, ಶುಕಮಹರ್ಷಿಗಳು ಅಹಂಕಾರ ತತ್ವಾಭಿಮಾನಿ ರುದ್ರಾವತಾರರಾದ ಕಾರಣ, ಸಮಸ್ತ ಚರಾಚರಜಗತ್ತಿನಲ್ಲಿದ್ದು ತಮ್ಮ ಸರ್ವತ್ರ ವ್ಯಾಪ್ತತ್ವವನ್ನು ತೋರಿಸಿದರೋ ಅಂತಹ ಶುಕಮಹರ್ಷಿಗಳಿಗೆ ನಮಸ್ಕರಿಸುತ್ತೇನೆ.

ತಮ್ಮ ದೇಹವೆಂಬ ಮನೆಯಲ್ಲಿ ಪ್ರಜ್ವಲಿಸುವ ದೀಪದಂತಿರುವ ಅತಿರಹಸ್ಯಪ್ರಮೇಯಗಳಿಂದ ಕೂಡಿದ ಭಾಗವತವೆಂಬ ಪುರಾಣವನ್ನೂ, ನಿಖಿಳವೇದಗಳ ಸಾರರೂಪವಾದುದೆಂದು ತಮ್ಮ ಸ್ವಂತ ಅನುಭವದಿಂದ ತಿಳಿದು, ಲೋಕದಲ್ಲಿರುವ ನಿಖಿಳ ಸಜ್ಜನರ ಅಜ್ಞಾನವೆಂಬ ಕಗ್ಗತ್ತಲೆಯನ್ನು ನಾಶಮಾಡುವುದಕ್ಕಾಗಿ ಶ್ರೀಪರೀಕ್ಷಿದ್ರಾಜರಿಗೆ ಉಪದೇಶಿಸಿದ ಶ್ರೀವೇದವ್ಯಾಸದೇವರ ಪುತ್ರರಾದ, ಸಕಲ ಮನನಶೀಲರಾದ ಮುನಿಗಳಿಗೂ ಗುರುಗಳಾದ ಶ್ರೀಶುಕಾಚಾರ್ಯರ ಆಶ್ರಯವನ್ನು ಬೇಡುತ್ತೇನೆ, ಹೊಂದುತ್ತೇನೆ.

ಗ್ರಂಥಪ್ರತಿಪಾದ್ಯನಾದ ಲಕ್ಷ್ಮೀಸಹಿತನಾದ ನಾರಾಯಣನಿಗೂ, ಜೀವೋತ್ತಮರಾದ ಬ್ರಹ್ಮವಾಯುಗಳಿಗೂ, ಭಾರತೀ ಸರಸ್ವತಿಯರಿಗೂ, ಗ್ರಂಥಕರ್ತರಾದ ಶ್ರೀವೇದವ್ಯಾಸದೇವರಿಗೂ ನಮಸ್ಕರಿಸಿ, ಭಾಗವತಾಖ್ಯಪುರಾಣದ ಅನುವಾದವನ್ನು ಮಾಡುತ್ತೇನೆ. ಎಲೈ ಮುನಿಗಳಿರಾ, ನಿಮ್ಮಿಂದ ಲೋಕಮಂಗಳಕರಗಳಾದ ಸಾಧುಸಜ್ಜನಸಮ್ಮತವಾದ ಪ್ರಶ್ನೆಗಳು ಕೇಳಲ್ಪಟ್ಟವು. ನಿಮ್ಮ

ಪ್ರಶ್ನೆಗಳು ಶ್ರೀಕೃಷ್ಣನನು ದ್ವೇಷಿಸಿರುವ ಕಾರಣದಿಂದ, ಶ್ರೀಪರಮಾತ್ಮನ ಶೀಘ್ರ ಒಲುಮೆಗೆ ಕಾರಣಗಳಾಗಿವೆ. ವಿಷಯಗಳಲ್ಲಿ ಆಸಕ್ತವಾಗುವ ಇಂದ್ರಿಯಗಳನ್ನು, ಜಯಿಸಲು ಶಕ್ತಿಪ್ರದನಾದ ಅಧೋಕ್ಷಜನಲ್ಲಿ, ನಿಷ್ಕಾಮ ಭಕ್ತಿಯೇ ಜನರಿಗೆ ಉತ್ಕೃಷ್ಟಧರ್ಮವೂ, ಜಾಗ್ರತೆಯಾಗಿ ಆತ್ಮನಾಮಕ ಶ್ರೀಹರಿಯ ಪ್ರಸಾದವನ್ನುಂಟುಮಾಡತಕ್ಕದ್ದೂ ಆಗಿದೆ. ಭಗವಂತನಾದ ಶ್ರೀವಾಸುದೇವನಲ್ಲಿ ಭಕ್ತಿ ಮಾಡಿದರೆ, ಅದರಿಂದ ಬೇಗ ವೈರಾಗ್ಯವೂ, ಜ್ಞಾನವೂ, ನಿಸ್ಪೃಹತ್ವವೂ ಉಂಟಾಗುವುವು.

ಸಕಲ ಸುಕರ್ಮಗಳನ್ನು ಆಚರಿಸುವವರಿಗೆ ಶ್ರೀಪರಮಾತ್ಮನ ಕಥಾಶ್ರವಣದಲ್ಲಿ ಆಸಕ್ತಿಯು ಹುಟ್ಟದೇ ಹೋದರೆ ಅವರ ಆ ಸತ್ಕಾರ್ಮಾಚರಣೆಯು ವ್ಯರ್ಥ. ಮೋಕ್ಷೋದ್ದೇಶದಿಂದ ಮಾಡುವ ಧರ್ಮಕ್ಕೆ, ಕಾಂಚನಾದಿ ದ್ರವ್ಯಗಳೂ, ವೈಷಿಕಸುಖಗಳೆಂಬ ಕಾಮಗಳೂ ಹೊಂದುವುದೇ ಉದ್ದೇಶವಲ್ಲ. ಕಾಮವೆಂದರೆ ಯಾವಜ್ಜೀವನವೂ ಇಂದ್ರಿಯತೃಪ್ತಿ ಹೊಂದುವುದೆಂದಲ್ಲ. ಲಾಭವೆಂದರೆ ತತ್ವಜಿಜ್ಞಾಸಮಾಡದೇ ಇದ್ದು, ಅಜ್ಞಾನದಿಂದ ಅನರ್ಥಕರ್ಮಗಳನ್ನಾಚರಿಸು ತ್ತಿರುವುದು ಅಲ್ಲ. ತತ್ವಗಳನ್ನು ತಿಳಿದ ಜ್ಞಾನಿಗಳು ಸಮಾನರಹಿತನಾದ, ಸರ್ವೋತ್ತಮನಾದ, ಅದ್ವೈತಶಬ್ದವಾಚ್ಯ ಪರಮಾತ್ಮನನ್ನು ತಿಳಿಯುವ ಜ್ಞಾನವನ್ನೇ ತತ್ವವನ್ನಾಗಿ ಹೇಳುತ್ತಾರೆ.

ಈ ತತ್ವವೇ ಜಿಜ್ಞಾಸ ಮಾಡಲ್ಪಡಬೇಕಾದ್ದು. ಬ್ರಹ್ಮನೆಂದೂ ಪರಮಾತ್ಮನೆಂದೂ ಭಗವಾನ್ ಎಂದೂ, ದೇವರನ್ನು ಕರೆಯುತ್ತಾರೆ. ತಾನು ಪ್ರಾಕೃತದೇಹಾದಿಸಂಬಂಧವಿಲ್ಲದೇ, ಪ್ರಕೃತಿಯನ್ನು ಪ್ರವೇಶಿಸಿ, ಜ್ಞಾನಾನಂದಾತ್ಮಕನೂ ಸ್ವತಂತ್ರನೂ ಆಗಿದ್ದು, ಸರ್ವವನ್ನೂ ಪ್ರೇರಿಸುವಕಾರಣ, ದೇವರಿಗೆ ಸತ್-ಅಸತ್-ಕೇವಲನೆಂದೂ ಕರೆಯುತ್ತಾರೆ. ಆ ಪರಮಾತ್ಮನಲ್ಲಿ ಶ್ರದ್ಧೆಯುಳ್ಳ ಮುನಿಗಳು, ಜ್ಞಾನವೈರಾಗ್ಯಗಳಿಂದ ಕೂಡಿದವರಾಗಿ, ಶ್ರವಣ ಮನನಜನ್ಯ ಭಕ್ತಿಯಿಂದ ತಮ್ಮ ಹೃತ್ಕಮಲದಲ್ಲಿ ವಿರಾಜಿಸುವ ತಮ್ಮ ಬಿಂಬರೂಪ ಶ್ರೀಹರಿಯನ್ನು ನೋಡುತ್ತಾರೆ. ಆದ್ದರಿಂದ ನಾಲ್ಕು ವರ್ಣಗಳೆಂದು ವಿಭಾಗಿಸಿದ್ದರಲ್ಲಿ ಬ್ರಾಹ್ಮಣನು ಉತ್ತಮನು. ಪರಮಾತ್ಮನ ಮೆಚ್ಚಿಗೆಯೇ ಸಕಲಧರ್ಮಾಚರಣೆಗಳಿಗೆ ಮುಖ್ಯಫಲ. ಆದುದರಿಂದ ಶ್ರೀಪರಮಾತ್ಮನನ್ನು ಭಕ್ತರು ಮುಕ್ತರೊಡೆಯನೆಂದು ತಿಳಿದು, ಶಾಸ್ತ್ರಶ್ರವಣ, ಅಧ್ಯಯನ, ಮನನ, ಧ್ಯಾನ, ಅರ್ಚನಾದಿಗಳಿಂದ ನಿರಂತರವೂ ಆರಾಧಿಸತಕ್ಕದ್ದು.

ಜ್ಞಾನಿಗಳು ಯಾರನ್ನು ಧ್ಯಾನಮಾಡಿ ತಮ್ಮ ಕರ್ಮಗ್ರಂಥಿಯನ್ನು ಕತ್ತರಿಸುತ್ತಾರೋ, ಅಂತಹ ಶ್ರೀಪರಮಾತ್ಮನ ದಿವ್ಯಕಥಾಶ್ರವಣದಲ್ಲಿ ಯಾರು ತಾನೇ ಆಸಕ್ತರಾಗುವುದಿಲ್ಲ? ಮಹಾತ್ಮರ ಸೇವೆಯಿಂದಲೂ, ಪುಣ್ಯಕ್ಷೇತ್ರಗಳ ಸಂಚಾರ, ಸೇವೆಯಿಂದಲೂ ಗುರುಶುಶ್ರೂಷೆ ಮಾಡಿದ

## अथ द्वितीयोऽध्यायः

ಶ್ರದ್ಧಾಳುವಿಗೆ, ಶ್ರೀಪರಮಾತ್ಮನ ಕಥಾಶ್ರವಣದಲ್ಲಿ ಪ್ರೀತಿ ಆದರಗಳು ಹುಟ್ಟುತ್ತವೆ. ಶ್ರೀಕೃಷ್ಣನು ತನ್ನ ಮಂಗಳಚರಿತ್ರೆಯನ್ನು ಕೇಳುವರ ಹೃತ್ಸ್ಥಲದಲ್ಲಿ ಪ್ರವೇಶಿಸಿ, ಅವರಿಗೆ ಬರುವ ಸಕಲ ಆಪತ್ತುಗಳನ್ನೂ, ಪಾಪಗಳನ್ನೂ ಪರಿಹರಿಸುತ್ತಾನೆ.

ಅಶುಭಕರ್ಮಗಳನ್ನು ಮಾಡುತ್ತಾ, ವಿನಾಶವನ್ನು ಹೊಂದುತ್ತಿರುವವರೂ ಕೂಡ, ನಿತ್ಯವೂ ಶ್ರೀಮದ್ಭಾಗವತ ಶ್ರವಣ ಮಾಡಿದರೆ, ಕ್ರಮೇಣ ಅವರಿಗೆ ಪರಮಾತ್ಮನಲ್ಲಿ ಭಕ್ತಿ ಉಂಟಾಗಿ ಉತ್ತಮರಾಗುತ್ತಾರೆ. ಅನಂತರ ಯಾವ ರಜಸ್ತಮೋಗುಣಗಳು ಇವರಲ್ಲಿ ನಾನಾವಿಧ ಕಾರ್ಯಗಳನ್ನು ಮಾಡದೇ ನಿಲ್ಲಿಸಿ, ಸತ್ತ್ವಗುಣವೃದ್ಧಿಗೆ ಅವಕಾಶಕೊಟ್ಟು ಮನ:ಪ್ರಸಾದದಿಂದ ಪರಮಾತ್ಮನಲ್ಲಿ ಭಕ್ತಿಯೋಗವೂ ಉಂಟಾಗುತ್ತದೆ. ಭಕ್ತಿಗೆ ಮೆಚ್ಚಿದ ದೇವರು ತನ್ನ ವಿಷಯಕವಾದ ನಿಶ್ಚಯಜ್ಞಾನವನ್ನು ಕೊಟ್ಟು, ವಿಷಯಸಂಗಗಳನ್ನು ಪೂರ್ತಿಯಾಗಿ ಬಿಡಿಸುತ್ತಾನೆ. ನಂತರ, ಹೃದಯಗ್ರಂಥಿ ಎಂಬ ಲಿಂಗದೇಹಗತ ಮನಸ್ಸಂಬಂಧವು ಜೀವನ ಸ್ವರೂಪಕ್ಕೆ ಬಿಟ್ಟುಹೋಗುವುದು. ಸಕಲ ಸಂಶಯನಿವಾರಣೆಯಾಗಿ ಶುದ್ಧಜ್ಞಾನಪ್ರಕಾಶ ಉಂಟಾಗುವುದು. ಸಕಲಕರ್ಮಗಳಿಂದಲೂ ಬಿಡಲ್ಪಡುವನು. ಜೀವಾಂತರ್ಯಾಮಿಯಾದ ಶ್ರೀಪರಮಾತ್ಮನ ದರ್ಶನವಾಗುವುದು.

ಆದಕಾರಣದಿಂದ ಜ್ಞಾನಿಗಳು ನಿತ್ಯವೂ ಪರಮಾತ್ಮನ ಪ್ರಸಾದಕ್ಕಾಗಿ, ಅನುಗ್ರಹಕ್ಕಾಗಿ, ವಾಸುದೇವನ ಪಾದಾರವಿಂದದಲ್ಲಿ ಭಕ್ತಿಯನ್ನು ಮಾಡುವರು. ಸತ್ವರಜಸ್ತಮೋಗುಣಗಳು ಜಡಪ್ರಕೃತಿಯ ಗುಣಗಳು. ಚೇತನಪ್ರಕೃತಿಯಾದ ರಮಾದೇವಿಯರಿಂದ ಅಭಿಮನ್ಯ ಮಾನವಾದವುಗಳು. ರಮಾದೇವಿಯರನ್ನೂ, ಜಡಪ್ರಕೃತಿಯನ್ನೂ, ಸತ್ವರಜಸ್ತಮೋಗುಣಗಳನ್ನೂ ತನ್ನಧೀನದಲ್ಲಿಟ್ಟುಕೊಂಡು, ಸತ್ತ್ವದಲ್ಲಿ ವಿಷ್ಣುರೂಪದಿಂದ ಜಗತ್ಪಾ ಲನೆಯನ್ನೂ, ರಜೋರೂಪದಿಂದ ಬ್ರಹ್ಮನೆಂಬ ಹೆಸರಿನಿಂದ ಬ್ರಹ್ಮದೇವರಲ್ಲಿ ಪ್ರವೇಶಿಸಿ ಸೃಷ್ಟಿಯನ್ನೂ, ತಮೋರೂಪದಿಂದ ರುದ್ರದೇವರಲ್ಲಿ ಪ್ರವೇಶಿಸಿ ಲಯವನ್ನೂ, ಪ್ರಧಾನನಾದ, ಸತ್ವಾತ್ಮಕನಾದ ಶ್ರೀವಿಷ್ಣುವೇ ಮಾಡಿ, ಅವರಿಂದ ಮಾಡಿಸುತ್ತಾನೆ. ಸಕಲಶ್ರೇಯಸ್ಸುಗಳೂ ನಿರ್ಮಲತ್ವವೂ ಆ ಶ್ರೀವಿಷ್ಣುವಿನಿಂದಲೇ ಈ ಬ್ರಹ್ಮರುದ್ರಾದಿ ಸಕಲರಿಗೂ ಉಂಟಾಗುತ್ತವೆ. ಜಡಕಾಷ್ಠವಾದ ಬಿದಿರಿನಲ್ಲಿ ಕಾಣದಿರುವ ಅಗ್ನಿಯು ಹೇಗೆ, ಎರಡು ಬಿದಿರುಗಳನ್ನು ಮಸೆಯೋಣದರಿಂದ, ಮೊದಲು ಹೊಗೆಯಂತೆಯೂ, ನಂತರ ಅಗ್ನಿಯೂ ಕಾಣುವುದೋ ಅದೇ ರೀತಿ, ಬಿದುರಿನಂತಿರುವ ತಮೋಗುಣವೂ, ಹೊಗೆಯಂತೆ ರಜೋಗುಣವೂ ಇದ್ದು, ಅಗ್ನಿಯಂತೆ ಸತ್ತ್ವಗುಣವು ಬೆಳಕನ್ನುಂಟುಮಾಡಿ ಭಗವದ್ದರ್ಶನ ಮಾಡಿಸುವುದು.

## अथ द्वितीयोऽध्यायः

ಬ್ರಹ್ಮಾದಿ ದೇವತೆಗಳು ಮೊದಲು ಪರಮಾತ್ಮನನ್ನು ಶುದ್ಧಸತ್ತ್ವಗುಣದಿಂದ ಆರಾಧಿಸಿ ಭಗವದನುಗ್ರಹರೂಪ ಕ್ಷೇಮವನ್ನು ಪಡೆದರು. ರಜಸ್ತಮೋಗುಣಗಳು ಕ್ಷೇಮಕಾರಿಗಳಲ್ಲ. ಆದುದರಿಂದ ಮೋಕ್ಷಾಪೇಕ್ಷಿಗಳು, ರಜಸ್ತಮೋಗುಣಗಳಿಗೆ ಅಧಿಪತಿಗಳಾದ ಬ್ರಹ್ಮರುದ್ರರ ಪೈಕಿ, ಭೂತಪತಿ ಎನಿಸುವ ಘೋರರೂಪನಾದ ರುದ್ರನನ್ನು ಉಪಾಸಿಸದೆ, ಸೌಮ್ಯರೂಪಗಳಾದ, ಸತ್ತ್ವಾತ್ಮಕಗಳಾದ ಶ್ರೀಮನ್ನಾರಾಯಣನ ಅನಂತಾನಂತ ದಿವ್ಯರೂಪಗಳನ್ನುಪಾಸಿಸಿ ಮುಕ್ತರಾದರು. ರಜಸ್ತಮೋಗುಣವುಳ್ಳವರೇ ಬ್ರಹ್ಮರುದ್ರರನು ಉ್ನಪಾಸಿಸುತ್ತಾರೆ. ಐಶ್ವರ್ಯ, ಭೋಗ, ಪ್ರಜೆಗಳನ್ನು ಅಪೇಕ್ಷಿಸಿ ಪಿತೃದೇವತೆಗಳನ್ನೂ, ಭೂತಗಳನ್ನೂ, ಬ್ರಹ್ಮಾದಿಗಳನ್ನೂ ಆರಾಧಿಸುತ್ತಾರೆ. ವೇದಗಳೂ, ಯಜ್ಞಗಳೂ, ಯೋಗಗಳೂ, ಕರ್ಮಗಳೂ, ಜ್ಞಾನವೂ, ತಪಸ್ಸೂ, ಧರ್ಮವೂ, ಗತಿಯೂ ಎಲ್ಲವೂ ಶ್ರೀವಾಸುದೇವನ ಪರವಾಗಿಯೇ ಅವನ ಪ್ರಸಾದಕ್ಕಾಗಿಯೇ ಆಗಿದೆ.

ಸತ್ತ್ವಾದಿಪ್ರಾಕೃತಗುಣರಹಿತನಾದ ದೇವರು, ಸತ್ತ್ವಾದಿಗಳಲ್ಲಿ ನಿರ್ಲಿಪ್ತನಾಗಿ ಪ್ರವೇಶಿಸಿ ಸತ್-ಅಸತ್ ರೂಪಗಳನ್ನು ಸೃಷ್ಟಿಸಿ, ಒಳಗಿದ್ದು, ಅವುಗಳ ವ್ಯಾಪಾರಗಳನ್ನು ಮಾಡಿಸುತ್ತಾನೆ. ಗುಣಗಳಲ್ಲಿದ್ದು ಗುಣಪ್ರವರ್ತಕನಂತೆ ತೋರುತ್ತಿದ್ದರೂ, ಆ ಗುಣಗಳೊಳಗೆ ವಿಜ್ಞಾನಮಯನಾಗಿ ದೇದೀಪ್ಯಮಾನನಾಗಿ ಪ್ರಕಾಶಿಸುತ್ತಿರುತ್ತಾನೆ - ಅನೇಕ ಬಿದಿರುಗಳಲ್ಲಿ ತೋರದೇ ಪ್ರಚ್ಛನ್ನನಾಗಿರುವ ಒಬ್ಬನೇ ಆದ ಅಗ್ನಿಯಂತೆ, ಅನೇಕ ಜೀವರಲ್ಲಿ ಮತ್ತು ಜಡಗಳಲ್ಲಿ, ಅನೇಕರೂಪಗಳಿಂದ ಒಬ್ಬನೇ ಇದ್ದು ಅಪರಿಮಿತ ಪ್ರಕಾಶರೂಪನಾದರೂ ಪ್ರಚ್ಛನ್ನನಾಗಿ ಕಾಣಿಸದಂತೆ ಇರುತ್ತಾನೆ.

ಈ ಪರಮಾತ್ಮನು ಗುಣಪ್ರಚುರಗಳಾದ ಅನಂತಭಾವಗಳಲ್ಲಿಯೂ, ಪಂಚಭೂತ, ಸೂಕ್ಷ್ಮೇಂದ್ರಿಯಗಳಲ್ಲೂ ಇದ್ದು, ನಾನಾವೃತ್ತಿಗಳನ್ನು ಸೃಷ್ಟಿಮಾಡಿ, ಜೀವರ ಕೈಯಿಂದ ಮನೋವಾಕ್ಕಾಯ ಕರ್ಮಗಳೆಂಬ ಪ್ರವಾಹರೂಪಕಾರ್ಯಗಳನ್ನು ಮಾಡಿಸಿ, ಅವುಗಳಲ್ಲೂ ಅನಂತಾನಂತರೂಪಗಳಿಂದಿದ್ದು, ಜೀವರಿಗೆ ಸ್ವಸ್ವಯೋಗ್ಯ ಅನುಭವಗಳನ್ನು ಕೊಟ್ಟು ತಾನೂ, ಈ ಜೀವಗುಣಗಳಲ್ಲಿ ಜೀವರಂತಿದ್ದು, ಆ ಗುಣಗಳ ಅಭಿವ್ಯಕ್ತಿಗೆ ಕಾರಣಗಳಾದ ತನ್ನ ಸ್ವರೂಪಸುಖಗಳನ್ನೇ ತಾನು ಅನುಭವಿಸುತ್ತಾ, ಆನಂದಮಯನಾಗಿ ಕ್ರೀಡಿಸುತ್ತಾನೆ. ತಿರ್ಯಙ್ ನರಸುರಾದಿ ಲೀಲಾವತಾರಗಳನ್ನೂ ಮಾಡುತ್ತಾನೆ.

**ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪ್ರಥಮಸ್ಕಂಧೇ ದ್ವಿತೀಯಾಧ್ಯಾಯಸ್ಯ ತಾತ್ಪರ್ಯಾರ್ಥಂ ನಿರೂಪಿತಂ.**

# अथ तृतीयोऽध्यायः

**सूत उवाच**

जगृहे पौरुषं रूपं भगवान् महदादिभिः ।
सम्भूतं षोडशकलमादौ लोकसिसृक्षया ॥ १ ॥

यस्याम्भसि शयानस्य योगनिद्रां वितन्वतः ।
नाभिह्रदाम्बुजादासीद्ब्रह्मा विश्वसृजां पतिः ॥ २ ॥

यस्यावयवसंस्थानैः कल्पितो लोकविस्तरः ।
तद्वै भगवतो रूपं विशुद्धं सत्वमूर्जितम् ॥ ३ ॥

पश्यन्त्यदो रूपमदभ्रचक्षुषः सहस्रपादोरुभुजाननाद्भुतम् ।
सहस्रमूर्धश्रवणाक्षिनासिकं सहस्रमौल्यम्बरकुण्डलोल्लसत् ॥ ४ ॥

एतन्नानावताराणां निधानं बीजमव्ययम् ।
यस्यांशांशेन सृज्यन्ते देवतिर्यरादयः ॥ ५ ॥

स एव प्रथमं देवः कौमारं सर्गमास्थितः ।
चचार दुश्चरं ब्रह्मा ब्रह्मचर्यमखण्डितम् ॥ ६ ॥

द्वितीयं तु भवायास्य रसातलगतां महीम् ।
उद्धरिष्यन्नुपादत्त यज्ञेशः सौकरं वपुः ॥ ७ ॥

तृतीयमृषिसर्गं वै देवर्षित्वमुपेत्य सः ।
तत्र सात्वतमाचष्ट नैष्कर्म्यं कर्मणां यतः ॥ ८ ॥

तुर्यं धर्मकलासर्गे नरनारायणावृषी ।
भूत्वाऽऽत्मोपशमोपेतमकरोद्दुश्चरं तपः ॥ ९ ॥

पञ्चमः कपिलो नाम सिद्धेशः कालविप्लुतम् ।
प्रोवाचाऽऽसुरये सांख्यं तत्वग्रामविनिर्णयम् ॥ १० ॥

षष्ठमत्रेरपत्यत्वं वृतः प्राप्तोऽनसूयया ।
आन्वीक्षिकीमलर्काय प्रह्लादादिभ्य ऊचिवान् ॥ ११ ॥

## अथ तृतीयोऽध्यायः

ततः सप्तम आकूत्यां रुचेर्यज्ञोऽभ्यजायत ।
स यामाद्यैः सुरगणैरपात्स्वायंभुवान्तरम् ॥ १२ ॥

अष्टमो मेरुदेव्यां तु नाभेर्जात उरुक्रमः ।
दर्शयन्वर्त्म धीराणां सर्वाश्रमनमस्कृतम् ॥ १३ ॥

ऋषिभिर्याचितो भेजे नवमं पार्थिवं वपुः ।
दुग्धवानोषधीर्विप्रास्तेनायं च उशत्तमः ॥ १४ ॥

रूपं स जगृहे मात्स्यं चाक्षुषान्तरसंल्पवे ।
नाव्यारोप्य महीमय्यामपाद्वैवस्वतं मनुम् ॥ १५ ॥

सुरासुराणामुदधिं मथ्नतां मन्दराचलम् ।
दध्रे कमठरूपेण पृष्ठ एकादशं विदुः ॥ १६ ॥

धान्वन्तरं द्वादशमं त्रयोदशममेव च ।
अपाययत्सुधामन्यान् मोहिन्या मोहयन् स्त्रिया ॥ १७ ॥

चतुर्दशं नारसिंहं बिभ्रद्दैत्येन्द्रमूर्जितम् ।
ददार करजैरूरावेरकान् कटकृद्यथा ॥ १८ ॥

पञ्चदशं वामनकं कृत्वाऽगादध्वरं बलेः ।
पदत्रयं याचमानः प्रत्यादित्सुस्त्रिविष्टपम् ॥ १९ ॥

अवतारे षोडशमे यच्छन्ब्रह्मद्रुहो नृपान् ।
त्रिः सप्तकृत्वः कुपितो निः क्षत्रामकरोन्महीम् ॥ २० ॥

ततः सप्तदशे जातः सत्यवत्यां पराशरात् ।
चक्रे वेदतरोः शाखा दृष्ट्वा पुंसोऽल्पमेधसः ॥ २१ ॥

नरदेवत्वमापन्नः सुरकार्यचिकिर्षया ।
समुद्रनिग्रहादीनि चक्रे वीर्याण्यतः परम् ॥ २२ ॥

एकोनविंशे विंशतिमे वृष्णिषु प्राप्य जन्मनी ।
रामकृष्णाविति भुवो भगवानहरद्भरम् ॥ २३ ॥

## अथ तृतीयोऽध्यायः

ततः कलौ सम्प्रवृत्ते सम्मोहाय सुरद्विषाम् ।
बुद्धो नाम्ना जिनसुतः कीकटेषु भविष्यति ॥ २४ ॥

अथासौ युगसन्ध्यायां दस्युप्रायेषु राजसु ।
जनिता विष्णुयशसो नाम्ना कल्की जगत्पतिः ॥ २५ ॥

अवतारा ह्यसंख्येया हरेः सत्वनिधेर्द्विजाः ।
यथा विदासिनः कुल्याः सरसः स्युः सहस्रशः ॥ २६ ॥

ऋषयो मनवो देवा मनुपुत्रा महौजसः ।
कलाः सर्वे हरेरेव सप्रजापतयः स्मृताः ॥ २७ ॥

एते स्वांशकलाः पुंसः कृष्णस्तु भगवान् स्वयम् ।
इन्द्रारिव्याकुलं लोकं मृडयन्ति युगे युगे ॥ २८ ॥

जन्म गुह्यं भगवतो य एवं प्रयतो नरः ।
सायम्प्रातर्गृणान् भक्त्या दुः खग्रामाद्विमुच्यते ॥ २९ ॥

एतद्रूपं भगवतो ह्यरूपस्य चिदात्मनः ।
मायागुणैर्विरचितं महदादिभिरात्मनि ॥ ३० ॥

यथा नभसि मेघौघा रेणुर्वा पार्थिवोऽनिले ।
एवं द्रष्टरि दृश्यत्वमारोपितमबुद्धिभिः ॥ ३१ ॥

अतः परं यदव्यक्तमव्यूढगुणबृंहितम् ।
अदृष्टाश्रुतवस्तुत्वात्स जीवो यः पुनर्यतः ॥ ३२ ॥

यत्रेमे सदसद्रूपे प्रतिषिद्धे स्वसंविदा ।
अविद्ययाऽऽत्मनि कृते इति तद्ब्रह्मदर्शनम् ॥ ३३ ॥

यद्येषोपरता देवी माया वैशारदी मतिः ।
संपन्न एवेति विदुर्महिम्नि स्वे महीयते ॥ ३४ ॥

एवं जन्मानि कर्माणि ह्यकर्तुरजनस्य च ।
वर्णयन्ति स्म कवयो वेदगुह्यानि हृत्पतेः ॥ ३५ ॥

## अथ तृतीयोऽध्यायः

स वा इदं विश्वममोघलीलः सृजत्यवत्यत्ति न सज्जतेऽस्मिन्।
भुतेषु चान्तर्हित आत्मतन्त्रः षार्गिकं जिघ्रति षुणेशः ॥ ३६ ॥

न चास्य कश्चिन्निपुणं विधातुरवैति जन्तुः कुमनीष ऊतिम्।
नामानि रूपाणि मनोवचोभिः सन्तन्वतो नटचर्यामिवाज्ञः ॥ ३७ ॥

स वेद धातुः पदवीं पदस्य दुरन्तवीर्यस्य रथाङ्गपाणेः।
योऽमायया सन्ततयाऽनुवृत्त्या भजेत तत्पादसरोजगन्धम्॥ ३८ ॥

अथेह धन्या भगवन्त इत्थं यद्वासुदेवेऽखिललोकनाथे।
कुर्वन्ति सर्वात्मक आत्मभूतं न यत्र भूयः परिवर्त उग्रः ॥ ३९ ॥

इदं भागवतं नाम पुराणं ब्रह्मसंमितम्।
उत्तमश्लोकचरितं चकार भगवानृषिः ॥ ४० ॥

निः श्रेयसाय लोकस्य धन्यं स्वस्त्ययनं महत्।
तदिदं ग्राहयामास सुतमात्मवतां वरम्॥ ४१ ॥

सर्ववेदेतिहासानां सारं सारं समुद्धृतम्।
स तु संश्रावयामास महाराजं परीक्षितम्॥ ४२ ॥

प्रायोपविष्टं गङ्गायां परीतं परमर्षिभिः।
तस्य कीर्तयतो विप्रा राजर्षेर्भूरितेजसः ॥ ४३ ॥

अहं चाध्यगमं तत्र निविष्टस्तदनुग्रहात्।
सोऽहं वः श्रावयिष्यामि यथाऽधीतं यथामति॥ ४४ ॥

कृष्णे स्वधामोपगते धर्मज्ञानादिभिः सह।
कलौ नष्टदृशां पुंसां पुराणार्कोऽसुनोदितः ॥ ४५ ॥

**॥ इति श्रीमद्भागवते प्रथमस्कन्धे तृतीयोऽध्यायः ॥**

**॥ ತೃತೀಯ ಅಧ್ಯಾಯ ॥**

## अथ तृतीयोऽध्यायः

## ಭಗವಂತನ ನಾನಾ ಅವತಾರಗಳ ವರ್ಣನೆ

ದೇವರು ಮತ್ಸ್ಯ, ಕೂರ್ಮ ವರಾಹಾದಿ ತಿರ್ಯಗ್ರೂಪಗಳನ್ನೂ, ರಾಮಕೃಷ್ಣಾದಿ ನರರೂಪಗಳನ್ನೂ, ಅನಿರುದ್ಧಾದಿ ದೇವರೂಪಗಳನ್ನು, ವಾಮನಾದಿ ರೂಪಗಳಿಂದ ದೇವತೆಗಳಲ್ಲಿಯೂ, ಲೀಲಾರೂಪವಾಗಿ ಅಭಿವ್ಯಕ್ತಿ ಮಾಡುವನೆಂದು ಹಿಂದೆ ಹೇಳಿದ ಅವತಾರಗಳನ್ನು ಕ್ರಮದಿಂದ ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ.

ಪ್ರಳಯಕಾಲದಲ್ಲಿ ಜಗತ್ತನ್ನು ಸಂಹರಿಸಿ ಸೂಕ್ಷ್ಮರೂಪದಿಂದ ಪ್ರಕೃತಿಯಲ್ಲಿ ಲಯಹೊಂದಿರುವ ಆ ಜಗತ್ತನ್ನು ತನ್ನ ಉದರದಲ್ಲಿಟ್ಟುಕೊಂಡು, ಪ್ರಳಯೋದಕದಲ್ಲಿ ಭೂರೂಪವಾದ ಆಲದೆಲೆಯ ಆಕೃತಿಯಲ್ಲಿರುವ ಪರ್ಯಂಕದ ಮೇಲೆ ಶ್ರೀದೇವಿಯರ ಬಾಹುಲತೆಗಳಿಗೆ ಆಶ್ರಯನಾಗಿ, ದುರ್ಗಾರೂಪವೆಂಬ ಗಾಢಾಂಧಕಾರದಿಂದ ಸರ್ವತ್ರ ಮುಚ್ಚಲ್ಪಟ್ಟವನಾಗಿ ಯೋಗನಿದ್ರೆಯಿಂದ ಮಲಗಿರುವವನೇ ಪರಮಪುರುಷನು.

ಈ ಪರಮಪುರುಷನೇ ಪುನಃ ಸೃಷ್ಟಿಕಾಲದಲ್ಲಿ, ಸರ್ವತ್ರ ಕವಿದಿರುವ ಗಾಢಾಂಧರೂಪಳಾದ ದುರ್ಗಾದೇವಿಯನ್ನು ಪಾನಮಾಡಿ, ತನ್ನನ್ನು ಕಾಣಿಸುವಂತೆ ಮಾಡಿಕೊಂಡನು. ಇದೇ ಶ್ರೀಪರಮಾತ್ಮನ ಪುರುಷನಾಮಕ ಪ್ರಥಮಾವತಾರ. ಹೀಗೆ ಸ್ವಯಂ ಪ್ರಕಾಶನಾದ ಪರಮಪುರುಷನು ಮಹದಾದಿ ಇಪ್ಪತ್ನಾಲ್ಕು ತತ್ವಗಳನ್ನೂ, ಅಭಿಮಾನಿದೇವತೆಗಳನ್ನೂ ಸೃಷ್ಟಿಸಿ, ನಂತರ ಈ ಬ್ರಹ್ಮಾಂಡದಸೃಷ್ಟಿಯನ್ನು ಮಾಡಿದನು. ನಂತರ ಬ್ರಹ್ಮಾಂಡದೊಳಗೆ ಪ್ರವೇಶಿಸಿ ಅಂಡೋದಕದ ಮೇಲೆ ಮಲಗಿಕೊಂಡು, ತನ್ನ ಹೊಕ್ಕಳಿಂದ, ಹದಿನಾಲ್ಕು ಲೋಕಗಳ ಸ್ವರೂಪವಾದ ಹದಿನಾಲ್ಕು ದಳಗಳುಳ್ಳ ಕಮಲದಲ್ಲಿ ಚತುರ್ಮುಖ ಬ್ರಹ್ಮದೇವರನ್ನು ಸೃಷ್ಟಿಸಿದನು. ಬ್ರಹ್ಮದೇವರು ದಕ್ಷಾದಿಪ್ರಜೇಶ್ವರರನ್ನು ಸೃಷ್ಟಿಸಿ, ಅವರುಗಳಿಗೆ ಅಧಿಪತಿಗಳಾಗಿದ್ದು ಈ ಪ್ರಪಂಚವೆಂಬ ಹದಿನಾಲ್ಕು ಲೋಕಗಳನ್ನೂ, ಅಲ್ಲಿನ ದೇವ, ಋಷಿ, ನರ, ತಿರ್ಯಜ್, ಅಸುರಾದಿ ಸಮಸ್ತವನ್ನೂ ಸೃಷ್ಟಿಮಾಡಿದರು. ಈ ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿದ ಪುರುಷರೂಪನೇ, ಪುರುಷಸೂಕ್ತದಿಂದ ಪ್ರತಿಪಾದ್ಯವಾದದ್ದು ವಿರಾಡ್ರೂಪವು. ನಾಭ್ಯ ಆಸೀದಂತರಿಕ್ಷಂ - ಇತ್ಯಾದಿ ಶೃತಿಗಳಲ್ಲಿ ವರ್ಣಿಸಿರುವಂತೆ ಈ ವಿರಾಡ್ರೂಪದ ಪಾದಗಳಿಂದ ಪಾತಾಳಲೋಕವೂ ಆರಂಭಿಸಿ, ಶಿರಸ್ಸಿನಲ್ಲಿ ಸತ್ಯಲೋಕಪರ್ಯಂತ ಹದಿನಾಲ್ಕು ಲೋಕಗಳೂ ಸೃಷ್ಟಿಸಲ್ಪಟ್ಟು ಆ ಅವಯವಗಳ ಆಶ್ರಯದಿಂದಲೇ, ಶ್ರೀಪರಮಾತ್ಮನ ಅವಯವಗಳಿಂದ ಭಿನ್ನಗಳಾಗಿ ಇರುತ್ತವೆ.

# अथ तृतीयोऽध्यायः

ಈ ಭಗವದ್ರೂಪವು ಪವಿತ್ರವಾದದ್ದೂ, ನಿರ್ದೋಷವಾದದ್ದೂ, ಸರ್ವತ್ರ ಪ್ರಕಾಶಮಾನವಾದದ್ದೂ, ಶುದ್ಧಸತ್ವಾತ್ಮಿಕವಾದದ್ದೂ, ಪೂರ್ಣಬಲಜ್ಞಾನಾದಿ ಸರ್ವಗುಣ ಪೂರ್ಣವಾದದ್ದನ್ನು ಪರಿಶುದ್ಧಭಾವವುಳ್ಳ ಪರಮಜ್ಞಾನಿಗಳು ಸಹಸ್ರ ಪಾದ, ಸಹಸ್ರ ಕೈ, ತೊಡೆ, ಉದರ, ಕಣ್ಣು ತಲೆಗಳುಳ್ಳ, ಸರ್ವಾಲಂಕಾರ ಸುಲಕ್ಷಣ ಕಾಂತಿಯುಕ್ತ ವಿಶ್ವರೂಪವೆಂದು ತಮ್ಮ ದಿವ್ಯಚಕ್ಷುಗಳಿಂದ ನೋಡಿ ಸ್ತುತಿಸುತ್ತಾರೆ.

ಈ ಪುರುಷರೂಪದ ಅಂಶಾಂಶಗಳಿಂದಲೇ ನಾನಾವತಾರರೂಪಗಳು ಅಭಿವ್ಯಕ್ತವಾಗುತ್ತವೆ. ಬ್ರಹ್ಮನನ್ನು ಪಡೆದ ಜಲಶಾಯಿಯನ್ನು ಪದ್ಮನಾಭರೂಪವೆಂದು ತಿಳಿಯತಕ್ಕದ್ದು. ಇದೇ ಬ್ರಹ್ಮಾಂಡಾಂತರ್ಗತ ಸಕಲ ಅವತಾರ. ದೇವ, ನರ, ತಿರ್ಯಗ್ರೂಪಗಳ ಸೃಷ್ಟಿಗೆ ಮೂಲಕಾರಣವಾದ ಭಗವದ್ರೂಪ.

ಈ ರೂಪದಿಂದ ಆವಿರ್ಭವಿಸಿದ ಮೊದಲನೆಯ ಅವತಾರವು ಸನತ್ಕುಮಾರಾವತಾರವು. ಸ್ವಯಂ ಬ್ರಹ್ಮಾದಿಗಳಿಗಿಂತ ಅನಂತಾನಂತ ಹೆಚ್ಚು ಮಹಿಮೋಪೇತನಾದಾಗ್ಯೂ, ಈ ಸನತ್ಕುಮಾರಾವತಾರದಲ್ಲಿ ಅಸದೃಶ, ಅಖಂಡಿತ ನೈಷ್ಠಿಕ ಬ್ರಹ್ಮಚರ್ಯೆಯನ್ನು ಆಚರಿಸಿ ದೇವರು ಲೋಕಕ್ಕೆ ನಿದರ್ಶಿಸಿದನು. ಎರಡನೆಯದು ಯಜ್ಞಮಯ ಶರೀರನಾದ ವರಹಾವತಾರ, ಈ ಅವತಾರದಿಂದ ರಸಾತಳಕ್ಕೆ ಇಳಿದು ಹೋಗಿದ್ದ ಭೂಮಿಯನ್ನು, ತಮನೆಂಬ ದೈತ್ಯನನ್ನು ಸಂಹರಿಸಿ ಅವನ ವಶದಿಂದ ಭೂಮಿಯನ್ನು ಮೇಲಕ್ಕೆ ತಂದು ಜಲದ ಮೇಲೆ, ಜಗತ್ತಿನ ಜನರ ಆಶ್ರಯಕ್ಕಾಗಿ ಸ್ಥಾಪಿಸಿದನು. ಮೂರನೆಯ ಅವತಾರದಲ್ಲಿ ಇತರಾದೇವಿಯ ಪುತ್ರನಾಗಿ ಮಹಿದಾಸನಾಮಕ ದೇವರ್ಷಿಯಾಗವತರಿಸಿ, ನಾರದಾದಿಗಳಿಗೆ ಪಂಚರಾತ್ರಾಗಮವನ್ನು ಉಪದೇಶಿಸಿದನು.

ನಾಲ್ಕನೆಯದು ಯಮದೇವರ ಮಕ್ಕಳಾಗಿ ನರ, ನಾರಾಯಣರೆಂಬ ಹೆಸರಿನಿಂದ ಅವತರಿಸಿ, ಘೋರವಾದ, ಅನ್ಯರಿಂದ ಆಚರಿಸಲಶಕ್ಯವಾದ ತಪಸ್ಸನ್ನು ಮಾಡಿದನು. ಕಪಿಲನಾಮದಿಂದ ದೇವಹೂತೀದೇವಿಯರಲ್ಲವತರಿಸಿ ಆಸುರಿ ಎಂಬ ಸಚ್ಛಿಷ್ಯನಿಗೆ, ಕಾಲಬಲದಿಂದ ತಿರೋಹಿತವಾಗಿದ್ದ ಚತುರ್ವಿಂಶತಿ ತತ್ವಗಳನ್ನು ಪರಮಾತ್ಮ-ಪರಾರ್ಥನಿರೂಪಣೆ ಮಾಡಿ ಸಾಂಖ್ಯಶಾಸ್ತ್ರೋಪದೇಶ ಮಾಡಿದನು. ಇದು ಐದನೆಯ ಅವತಾರ.

ಆರನೆಯ ಸಲ ಅತ್ರಿಋಷಿಗಳ ಪತ್ನಿಯಾದ ಅನಸೂಯಾದೇವಿಯ ಪ್ರಾರ್ಥನೆಯನ್ನು ಸ್ವೀಕರಿಸಿ, ಅವರ ಮಗನಾಗಿ ದತ್ತಾತ್ರೇಯರೂಪದಿಂದವತರಿಸಿ ಅನ್ವೀಕ್ಷಿಕೀ ಶಾಸ್ತ್ರವನ್ನು

ಅಲರ್ಕರಿಗೂ, ಪ್ರಹ್ಲಾದಾದಿಗಳಿಗೂ ಉಪದೇಶಿಸಿದನು. ರುಚಿನಾಮಕ ಋಷಿಗಳ ಪತ್ನಿ ಆಕೂತಿದೇವಿಯಲ್ಲಿ ಯಜ್ಞನಾಮಕನಾಗಿ ಏಳನೆಯ ಅವತಾರಮಾಡಿ ದೇವತೆಗಳನ್ನೂ ಜಗತ್ತನ್ನೂ ಸ್ವಾಯಂಭುವ ಮನ್ವಂತರದ ಕೊನೆಯವರೆಗೆ ರಕ್ಷಿಸಿದನು. ಅಗ್ನೀಧ್ರಪುತ್ರರಾದ ನಾಭಿರಾಜರಿಂದ ಮೇರುದೇವಿಯರಲ್ಲಿ ಉರುಕ್ರಮನೆಂಬ ಹೆಸರಿನಿಂದ ಎಂಟನೇ ಅವತಾರಮಾಡಿ, ಲೋಕಕ್ಕೆ ಪರಮಹಂಸ ವೃತ್ತಿಯನ್ನು ಅಸದೃಶವಾಗಿ ಆಚರಿಸಿ ತೋರಿಸಿದನು. ಋಷಿಗಳಿಂದ ಪ್ರಾರ್ಥಿತನಾದ ಶ್ರೀಪದ್ಮನಾಭನು ಪೃಥುಚಕ್ರವರ್ತಿಯಲ್ಲಿ ಆವಿಷ್ಟನಾಗಿ ಅವತರಿಸಿ, ಒಂಭತ್ತನೆಯ ಈ ಅವತಾರದಿಂದ ಗೋರೂಪಳಾದ ಭೂದೇವಿಯಿಂದ ಸಕಲ ಓಷಧಿಗಳನ್ನೂ ಹಾಲಿನಂತೆ ಕರೆದು, ಲೋಕದ ಜೀವನವನ್ನು ಕಲ್ಪಿ ಸಿಕೊಟ್ಟು ಧರ್ಮಗಳನ್ನು ಸಂರಕ್ಷಿಸಿದನು. ಚಾಕ್ಷುಷಮನ್ವಂತರ ಪ್ರಳಯಕಾಲದಲ್ಲಿ ಹತ್ತನೆಯದಾದ ಮತ್ಸ್ಯಾಕೃತಿಯನ್ನು ತಾಳಿ, ಧಾನ್ಯಗಳಿಂದ ತುಂಬಿದ ಹಡಗನ್ನೂ, ವೈವಸ್ವತಮನುವನ್ನೂ ಪ್ರಳಯೋದಕದಲ್ಲಿ ಧರಿಸಿ ಸಂರಕ್ಷಿಸಿದನು.

ಹನ್ನೊಂದನೆಯ ಅವತಾರದಲ್ಲಿ ಕೂರ್ಮರೂಪವನ್ನು ಧರಿಸಿ, ಕ್ಷೀರಸಮುದ್ರದಲ್ಲಿ ಮಂದರ ಪರ್ವತವನ್ನು ಬೆನ್ನಿನ ಮೇಲೆ ಹೊತ್ತು, ದೇವದೈತ್ಯರಿಗೆ ಸಮುದ್ರಮಥನ ಮಾಡಲು ಸಹಾಯಮಾಡಿದನು. ಧನ್ವಂತರಿ ಅವತಾರ ಹನ್ನೆರಡನೆಯದು. ಹದಿಮೂರನೆಯ ಅವತಾರ ಅಮೃತವನ್ನು ದೇವತೆಗಳಿಗೆ ಹಂಚುವುದಕ್ಕಾಗಿ ಮಾಡಿದ ಮೋಹಿನೀ ಅವತಾರ. ಹದಿನಾಲ್ಕನೆಯ ಶ್ರೀನೃಸಿಂಹಾವತಾರದಲ್ಲಿ ಲೋಕಕಂಟಕನಾದ ಹಿರಣ್ಯಕಶಿಪುವಿನ ಉದರವನ್ನು ತನ್ನ ಉಗುರುಗಳಿಂದ ಸೀಳಿದನು. ಹದಿನೈದನೆಯ ವಾಮನಾವತಾರದಲ್ಲಿ ಬಲಿಯ ಯಾಗಶಾಲೆಗೆ ಹೋಗಿ, ಮೂರು ಹೆಜ್ಜೆ ಭೂಮಿಯನ್ನು ಯಾಚಿಸಿ ಭೂರಾದಿ ಸ್ವರ್ಗಪರ್ಯಂತ ಮೂರುಲೋಕಗಳನ್ನೂ ಎರಡೇ ಪಾದದಿಂದ ಅಳೆದು, ಆ ಮೂರು ಲೋಕಗಳನ್ನು ಇಂದ್ರದೇವರಿಗೆ ಕೊಟ್ಟು, ಬಲಿಯ ತಲೆಯನ್ನು ಮೆಟ್ಟಿ ಮೂರನೆಯ ಪಾದದಿಂದ ಸುತಳ ಲೋಕಕ್ಕೆ ತುಳಿದು ಅಲ್ಲಿ ಅಖಂಡೈಶ್ವರ್ಯವನ್ನು ಬಲಿಗೆ ಕೊಟ್ಟು, ಭಕ್ತಿಪರವಶನಾಗಿ ಬಲಿಯ ಅರಮನೆಯ ಬಾಗಿಲನ್ನು ಕಾಯುತ್ತಿರುವನು.

ಹದಿನಾರನೆಯ ಪರಶುರಾಮಾವತಾರದಲ್ಲಿ ಭೂಮಂಡಲವನ್ನು ನಿಕ್ಷತ್ರಿಯರನ್ನಾಗಿ ಮಾಡುವುದಕ್ಕಾಗಿ, ಕೊಡಲಿಯನ್ನು ಕೈಲಿ ಹಿಡಿದು ಇಪ್ಪತ್ತೊಂದಾವರ್ತಿ ಭೂಮಿಯನ್ನು ಸುತ್ತಿ ಮತ್ತರಾದ, ಕ್ರೂರರಾದ ಕ್ಷತ್ರಿಯರಾಜರನ್ನು ಸಂಹರಿಸಿದನು. ಹದಿನೇಳನೆಯ ಅವತಾರದಲ್ಲಿ ಪರಾಶರರಿಂದ ಸತ್ಯವತೀದೇವಿಯಲ್ಲಿ ಸಾಕ್ಷಾತ್ವೇದವ್ಯಾಸಾವತಾರ ಮಾಡಿ, ಅಖಂಡವಾಗಿದ್ದ ಅನಂತವೇದಗಳನ್ನು ಋಗ್ಯಜುಸ್ಸಾಮಾಥರ್ವಣಗಳನ್ನಾಗಿ ವಿಭಾಗಿಸಿ ಭಾಗವತಾದಿ, ವೇದಶಾಸ್ತ್ರಾರ್ಥ

ನಿರ್ಣಾಯಕ ಹದಿನೆಂಟು ಪುರಾಣಗಳನ್ನೂ, ಬ್ರಹ್ಮಸೂತ್ರಗಳೆಂಬ ಬ್ರಹ್ಮಮೀಮಾಂಸಾ ಶಾಸ್ತ್ರವನ್ನೂ ರಚಿಸಿದರು. ರಾವಣಾದಿಗಳನ್ನು ಸಂಹರಿಸುವುದಕ್ಕಾಗಿ ದೇವತೆಗಳಿಂದ ಪ್ರಾರ್ಥಿತನಾಗಿ ಹದಿನೆಂಟನೆಯದಾದ ರಾಮಾವತಾರಮಾಡಿ, ಸಮುದ್ರಸೇತುಬಂಧನಾದಿ ಅನೇಕ ವಿಚಿತ್ರಕಾರ್ಯಗಳನ್ನು ಮಾಡಿದನು.

ಹತ್ತೊಂಭತ್ತು ಇಪ್ಪತ್ತರಲ್ಲಿ, ಬಲರಾಮ ಶ್ರೀಕೃಷ್ಣಾವತಾರಗಳನ್ನು ಶುಕ್ಲಕೃಷ್ಣಕೇಶಾವತಾರಗಳಿಂದ ಮಾಡಿ, ಭೂಭಾರವನ್ನಿಳುಹಿದನು. ಕಲಿಯುಗವು ಪ್ರಾಪ್ತವಾಗಲು ದೇವದ್ವೇಷಿಗಳಿಗೆ ತಮಸ್ಸಾಧನೆ ಮಾಡಿಸುವುದಕ್ಕಾಗಿ, ಜಿನನೆಂಬುವನಲ್ಲಿ ಬುದ್ಧನೆಂಬ ಹೆಸರಿನಿಂದವತರಿಸಿ, ಬೌದ್ಧಮತವೆಂಬ ಮೋಹಶಾಸ್ತ್ರವನ್ನುಪದೇಶಿಸಿದನು. ಕಲಿಯುಗಾಂತ್ಯ ಸಂಧಿಕಾಲದಲ್ಲಿ ರಾಜರೆಲ್ಲರೂ ಕಳ್ಳರ ಸದೃಶರಾಗಲು, ವಿಷ್ಣುಯಶನೆಂಬ ಬ್ರಾಹ್ಮಣನ ಮನೆಯಲ್ಲಿ ಕಲ್ಕ್ಯವತಾರಮಾಡಿ ಆ ರಾಜರುಗಳನ್ನು ಸಂಹರಿಸುವನು. ಬಲಜ್ಞಾನಾದಿ ಮಹಾಗುಣನಿಧಿಯಾದ ಶ್ರೀಪರಮಾತ್ಮನ ಅವತಾರಗಳು ಅನಂತಾನಂತಗಳಿವೆ. ಅವು ಅನಂತ ಕಾಲದಲ್ಲಿ ಹೇಳುತ್ತಿದ್ದರೂ ಹೇಳಿ ಮುಗಿಸಲು ಶಕ್ಯಗಳಲ್ಲ.

## ಭಗವಂತನ ಅವತಾರಗಳಲ್ಲಿರುವ ತತ್ವ

ಉನ್ನತವಾದ ಅನೇಕ ಪರ್ವತಶಿಖರಗಳಿಂದ ಅನೇಕನದಿಗಳು ಹುಟ್ಟಿ ಹೇಗೆ ಸಮುದ್ರವನ್ನು ಸೇರುವವೋ, ಹಾಗೆ ಅನಂತಾವತಾರಗಳು ಶ್ರೀಪದ್ಮನಾಭರೂಪದಿಂದ ಪ್ರಾದುರ್ಭವಿಸಿ, ನಂತರ ಅಲ್ಲಿಯೇನೆಲೆಸಿಪ್ರತ್ಯೇಕಪ್ರತ್ಯೇಕವಾಗಿಯೇಪೂರ್ಣಶಾಶ್ವತಗಳಾಗಿಕಂಗೊಳಿಸುವವು. ಋಷಿಗಳೂ, ಮನುಗಳೂ, ದೇವತೆಗಳೂ, ಮಹಾಪರಾಕ್ರಮಿಗಳಾದ ಮನುಪುತ್ರರೂ, ಪ್ರಜಾಧಿಪತಿಗಳೂ ಸಹ ಶ್ರೀಪರಮಾತ್ಮನ ಅಂಶದ ಕಲೆಗಳೆಂದು ಕರೆಸುವರು. ಶ್ರೀಕೃಷ್ಣನು ಸಾಕ್ಷಾತ್ಸ್ವರೂಪಾಂಶನೇ ಆಗಿರುತ್ತಾನೆ. ಈ ಅವತಾರಗಳು ಇಂದ್ರವೈರಿಗಳಾದ ದೈತ್ಯರು ಮಾಡುವ ಉಪದ್ರವಗಳಿಂದ ಲೋಕಜನರನ್ನು ಸಂರಕ್ಷಿಸಲು ಪ್ರತಿಯುಗಗಳಲ್ಲಿಯೂ ಆಗುವವು. ಪ್ರಯತ್ನಪೂರ್ವಕವಾಗಿ ಯಾರು ಈ ಶ್ರೀಪರಮಾತ್ಮನ ಅವತಾರಕ್ರಮಗಳನ್ನು ಓದಿ ಚಿಂತಿಸುತ್ತಿರುವರೋ ಅವರ ಸಕಲ ದುಃಖಗಳನ್ನೂ ಶ್ರೀಹರಿಯು ಪರಿಹರಿಸಿ ಸುಖಗಳನ್ನು ಕೊಡುವನು. ಈ ಮಹದಾದಿ ತತ್ವಗಳಿಂದ ಕೂಡಿದ ಬ್ರಹ್ಮಾಂಡವು ಶ್ರೀಪರಮಾತ್ಮನಿಗೆ ಆವಾಸಸ್ಥಾನವಾದ್ದರಿಂದ ಪ್ರತಿಮಾರೂಪವೇ ಆಗಿರುತ್ತೆ. ದೇವರೇ ಜಗತ್ತಾಗಿ ಅಜ್ಞಾನದಿಂದ ಪರಿಣಮಿಸಿಲ್ಲ. ದೇವರು ಅದೃಶ್ಯನಾಗಿ ಬ್ರಹ್ಮಾಂಡದ ಒಳಗೂ ಹೊರಗೂ ಸರ್ವತ್ರ ಅನೇಕ ರೂಪಗಳಿಂದ ಪ್ರವೇಶಿಸಿ ವ್ಯಾಪಿಸಿದ್ದಾನೆ. ಮೋಡಗಳನ್ನು ನೋಡಿ

## अथ तृतीयोऽध्यायः

ಅದು ಆಕಾಶವೆಂದೂ, ಧೂಳಿನ ಹಾರಾಟವನ್ನು, ಕೆಂಧೂಳಿಯನ್ನು ನೋಡಿ ಅದು ಗಾಳಿ ಎಂದೂ ಸ್ಥೂಲದೃಷ್ಟಿಯಿಂದ ಹೇಗೆ ತಿಳುವಳಿಕೆ ಇಲ್ಲದ ಜನರು ಕರೆಯುತ್ತಾರೋ, ಹಾಗೆಯೇ ಪರಮಾತ್ಮನನ್ನು ಲೋಕರೂಪಹೊಂದಿದವನನ್ನಾಗಿ ಮೂಢರು ತಿಳಿದು ಹೇಳುತ್ತಾರೆ.

ಜ್ಞಾನಿಗಳು ಆಕಾಶ, ವಾಯುಗಳು ಕಣ್ಣಿಗೆ ಕಾಣಿಸುವ ವಸ್ತುಗಳಲ್ಲ. ಆದ್ದರಿಂದ ಆಕಾಶದಂತೆ ಕಾಣುವದು ಮೋಡ ಅಥವ ಮೇಘ, ಗಾಳಿಯಂತೆ ಕಾಣುವುದು ಮಣ್ಣಿನ ಧೂಳೆಂದು ಸಹಜವಾಗಿ ತಿಳಿಯುತ್ತಾರೆ. ಇದೇ ಜ್ಞಾನಕ್ಕೂ ಮೌಢ್ಯಕ್ಕೂ ಇರುವ ವಿಲಕ್ಷಣತ್ವ. ಜೀವಪರಮಾತ್ಮರು ಅಣು, ಅಣುವಿಗಣುರೂಪರು. ಆದ್ದರಿಂದ ಅವ್ಯಕ್ತರು. ಶಾಶ್ವತರು. ಅಣುವಿಗಣುವಾದ ಪರಮಾತ್ಮನು ನಿತ್ಯಜ್ಞಾನೈಶ್ವರ್ಯಬಲ ಸ್ವತಂತ್ರಪೂರ್ಣನು. ನಿತ್ಯಮುಕ್ತನು. ಅಣುವಾದ ಜೀವನು ಅನಾದಿಕಾಲದಿಂದ ಲಿಂಗದೇಹದಿಂದ ಬದ್ಧನು. ಈ ಲಿಂಗದೇಹಬಂಧನದಿಂದ ಬಿಡಿಸುವುದಕ್ಕಾಗಿ ಸರ್ವಶಕ್ತ ಪರಮಾತ್ಮನು ಜೀವನಿಗೆ ಸ್ಥೂಲದೇಹಾದಿಗಳನ್ನು ಕೊಟ್ಟು ಜೀವನ ಗುಣಗಳನ್ನು ಅಭಿವ್ಯಕ್ತಿಪಡಿಸಿ ಯೋಗ್ಯಸಾಧನೆಗಳನ್ನು ಮಾಡಿಸುತ್ತಾನೆ. ಈ ರೀತಿ ಅನಾದಿಕರ್ಮವೆಂಬ ಜೀವಕರ್ಮವು ಪ್ರವಾಹರೂಪವಾಗಿ ಹುಟ್ಟಿ, ಆಚರಿಸಲ್ಪಡುತ್ತಾ ಜೀವನಿಗೆ ನಾನಾರೂಪಗಳಿಂದ ನಾನಾ ಬಗೆ ಉತ್ಪತ್ತಿ, ನಾಶಗಳಿಗೆ ನಿಮಿತ್ತಕಾರಣಗಳಾಗುತ್ತವೆ. ಆದುದರಿಂದ ಜನನಮರಣಶೀಲನು ಸುಖದುಃಖಾನುಭವುಳ್ಳ, ಅಲ್ಪಶಕ್ತ ಅಲ್ಪಜ್ಞಾನಿಯು ಜೀವನು. ದೇಹಪ್ರಾಪ್ತಿ, ದೇಹನಾಶ, ಅಸ್ವತಂತ್ರತೆ, ಅಪೂರ್ಣತೆಗಳೆಂಬ ನಾಲ್ಕು ವಿಧ ನಾಶಗಳೂ ಜೀವನಿಗೇವೆ, ಪರಮಾತ್ಮನಿಗಲ್ಲ. ಪರಮಾತ್ಮ ಅವ್ಯಕ್ತ. ಜ್ಞಾನಾನಂದಸಮುದ್ರ. ಸಾಧುಸಕಲಕಲ್ಯಾಣಗುಣ ಪರಿಪೂರ್ಣ, ವೇದವೇದ್ಯ. ಜ್ಞಾನಗಮ್ಯ. ಜೀವನ ಬಂಧನ ನಿವಾರಣೆ ಮಾಡಿ ಮೋಕ್ಷಸುಖ ಕೊಡುವವ. ಆದ್ದರಿಂದ ಆ ಪರಮಾತ್ಮನ ಮಹಾಮಹಿಮೆಗಳನ್ನು ನಿರಂತರವೂ ಕೇಳಿ, ತಿಳಿದು, ಮನನಮಾಡಿ, ಪರಮಾತ್ಮನನ್ನು ಕೊಂಡಾಡಿ ಜೀವರು ಉದ್ಧೃತರಾಗುತ್ತಾರೆ.

ಈ ರೀತಿ ಭಕ್ತಿಯಿಂದ ಸೇವಿಸಲ್ಪಟ್ಟ ಶ್ರೀಹರಿಯು ಕ್ರಮೇಣ ಭಕ್ತಜೀವರಿಗೆ ತನ್ನ ಅಪರೋಕ್ಷಜ್ಞಾನವನ್ನು ಕೊಟ್ಟು, ಧ್ಯಾನಗೋಚರನಾಗಿ, ನಂತರ ಜನನಮರಣ ಪ್ರವಾಹದಿಂದ ಬಿಡಿಸಿ, ಬ್ರಹ್ಮದೇವರ ಜೊತೆಯಲ್ಲಿ ವಿರಜಾನದೀ ಸ್ನಾನದಿಂದ ಲಿಂಗಭಂಗ ಮಾಡಿ, ಸ್ವರೂಪಸುಖಾವಿರ್ಭಾವರೂಪ ನಿತ್ಯಸುಖವನ್ನು ಕೊಡುವನು. ದೇವರಿಗೆ ಈ ಅವತಾರಗಳನ್ನು ಮಾಡಲು ಸ್ವತಃ ಏನೂ ಪ್ರಯೋಜನವಿಲ್ಲದಿದ್ದರೂ, ಭಕ್ತರ ಉದ್ಧಾರಕ್ಕಾಗಿಯೂ, ದೈತ್ಯರ ನಾಶಕ್ಕಾಗಿಯೂ, ಧರ್ಮಸ್ಥಾಪನೆಗಾಗಿಯೂ, ಈ ಲೀಲಾವತಾರಗಳಿಂದ ತೋರಿಸುವ ವಿಚಿತ್ರ

ಅನಂತ ವಿಭೂತಿವಿಶೇಷಗಳಿಂದ ಜ್ಞಾನಿಗಳಿಗೆ ನಿರಂತರ ಹರ್ಷಾನಂದಾಶ್ಚರ್ಯಗಳನ್ನುಂಟು ಮಾಡುವುದಕ್ಕಾಗಿಯೂ, ಪರಪ್ರಯೋಜನಾರ್ಥವಾಗಿ ಮಾಡುತ್ತಾನೆ.

ಈ ರೀತಿಯಾಗಿ ಪರಪ್ರಯೋಜನಕ್ಕಾಗಿ ಈ ಜಗತ್ತನ್ನು ಅನಾಯಾಸದಿಂದ ಸೃಷ್ಟಿಸಿ, ಪಾಲಿಸಿ, ಲಯಹೊಂದಿಸುತ್ತಾನೆ. ಸ್ಥಿತಿಕಾಲದಲ್ಲಿ ಸಮಸ್ತ ವಸ್ತುಗಳಲ್ಲೂ ಒಳಗೆ ಇದ್ದು ಅವುಗಳ ವ್ಯಾಪಾರಗಳನ್ನು ಮಾಡಿಸಿ, ಭೋಗಪಡಿಸಿ ಅಂದರೆ ನಾನಾ ಅನುಭವಗಳನ್ನು ಕೊಟ್ಟು, ತಾನೂ ಆನಂದಮಯನಾಗಿರುತ್ತಾನೆ. ಬ್ರಹ್ಮಾದಿ ಸಕಲಮುಕ್ತಿಯೋಗ್ಯರೂ ದೇವರನ್ನು ಸಾಕಲ್ಯ ತಿಳಿಯಲಾರರು. ಕ್ರಿಮಿಸದೃಶರಾದ ಜ್ಞಾನಶೂನ್ಯ ನಿತ್ಯಸಂಸಾರಿಗಳೂ, ಪಾಪಪ್ರೇಮಿಗಳಾದ ಮಿಥ್ಯಾಜ್ಞಾನಿಗಳೂ ಹೇಗೆ ತಾನೇ ಶ್ರೀಪರಮಾತ್ಮನನ್ನು ತಿಳಿಯಲೂ, ಆರಾಧಿಸಲೂ ಪ್ರಯತ್ನಿಸಾರು? ಅಂದರೆ ಪ್ರಯತ್ನಿಸುವುದಿಲ್ಲ. ಹೇಯವಾದ ವಿಷಯಸುಖಗಳನ್ನೇ ಪುರುಷಾರ್ಥಗಳೆಂದು ಭಾವಿಸಿ ನಿತ್ಯನಿರಯ ಸದೃಶಗಳಾದ ವಿಷಯಲಂಪಟನೆಯಿಂದ ಕೊನೆಗೆ ನಿತ್ಯನರಕವನ್ನೇ ಹೊಂದುವರು. ಆದುದರಿಂದ ಭಗವದ್ಭಕ್ತರು ಆಲಸ್ಯಮಾಡದೆ ನಿರಂತರದಲ್ಲೂ ಶ್ರೀಪರಮಾತ್ಮನ ಪಾದಾರವಿಂದದಲ್ಲಿ ಭಕ್ತಿಮಾಡಿ ಶಾಶ್ವತಸುಖ ಪಡೆಯುವರು.

ಎಲೈ! ಶೌನಕಾದಿಋಷಿಗಳಿರಾ! ನೀವು ಪರಮಾತ್ಮನಲ್ಲಿ ನಿರಂತರ ಭಕ್ತಿಯೋಗ ವುಳ್ಳ ಧನ್ಯರು, ಮಹಾಪುಣ್ಯವಂತರು, ಪಾವನರು. ನಿಮಗೆ ನಾನು ಶ್ರೀವೇದವ್ಯಾಸರಿಂದ ರಚಿಸಲ್ಪಟ್ಟ, ಸರ್ವಪುಷ್ಟಿ, ಮಂಗಳಕರವೂ, ವೇದಾದಿ ಸರ್ವಶಾಸ್ತ್ರ ತಾತ್ಪರ್ಯರೂಪವೂ ಆದ ಶ್ರೀಮದ್ಭಾಗವತವೆಂಬ ಶ್ರೀಪರಮಾತ್ಮನ ಮಹಾಮಹಿಮೋಪೇತ ಕಥೆಯನ್ನು ಹೇಳುವೆನು ಕೇಳಿರಿ. ಇದನ್ನು ಶುಕಮುನಿಗಳು ವೇದವ್ಯಾಸರಿಂದ ತಿಳಿದು, ಪರೀಕ್ಷಿದ್ರಾಜರಿಗೆ ಉಪದೇಶಿಸುತ್ತಿದ್ದಾಗ ನಾನು ಕೇಳಿ ತಿಳಿದಿದ್ದೇನೆ. ಅದನ್ನೇ ನಿಮಗೆ ಹೇಳುತ್ತೇನೆ -ಧರ್ಮಜ್ಞಾನಗಳಿಂದ ಸಹಿತನಾಗಿ ಶ್ರೀಕೃಷ್ಣನು ಈ ಲೋಕವನ್ನು ಬಿಟ್ಟು ಮೂಲರೂಪ ಪ್ರವೇಶಮಾಡಲಾಗಿ, ಲೋಕದಲ್ಲಿ ಅಜ್ಞಾನಾಖ್ಯಕತ್ತಲೆಯು ಆವರಿಸಿತು. ಆ ಕತ್ತಲೆಯನ್ನು ಕತ್ತರಿಸಲು ಈ ಭಾಗವತಾಖ್ಯ ಜ್ಞಾನಸೂರ್ಯನನ್ನು ವೇದವ್ಯಾಸರು ಜಗತ್ತಿಗೆ ಪ್ರಕಾಶಕ್ಕಾಗಿ ಕೊಟ್ಟರು ಎಂದರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ತೃತೀಯ ಅಧ್ಯಾಯ ಮುಗಿಯಿತು.**

## अथ चतुर्थोऽध्यायः

इति ब्रुवाणं संस्तूय मुनीनां दीर्घसत्रिणाम् ।

## अथ चतुर्थोऽध्यायः

वृद्धः कुलपतिः सूतं बह्वृचः शौनकोऽब्रवीत् ॥ १ ॥

**शौनक उवाच**

सूत सूत महाभाग वद नो वदतां वर ।
कथां भागवतीं पुण्यां यामाह भगवान् शुकः ॥ २ ॥

कस्मिन् युगे प्रवृत्तेयं स्थाने वा केन हेतुना ।
कुतः संचोदितः कृष्णः कृतवान् संहितां मुनिः ॥ ३ ॥

तस्य पुत्रो महायोगी समदृक् निर्विकल्पकः ।
एकान्तगतिरुन्निद्रो गूढो मूढ इवेयते ॥ ४ ॥

कथमालक्षितः पौरैः संप्राप्तः कुरुजाङ्गलम् ।
उन्मत्तमूकजडवद्विचरन् गजसाह्वये ॥ ५ ॥

कथं वा पाण्डवेयस्य राजर्षेर्मुनिना सह ।
संवादः समभूत्तात यत्रैषा सात्वती श्रुतिः ॥ ६ ॥

स गोदोहनमात्रं हि गृहेषु गृहमेधिनाम् ।
अवेक्षते महाभागस्तीर्थीकुर्वंस्तदाश्रमम् ॥ ७ ॥

अभिमन्युसुतं सूत प्राहुर्भागवतोत्तमम् ।
तस्य जन्म महाश्चर्यं कर्माणि च गृणीहि नः ॥ ८ ॥

स सम्रा कस्य वा हेतोः पाण्डूनां मानवर्धनः ।
प्रायोपविष्टो गङ्गायामनादृत्याधिराश्रियम् ॥ ९ ॥

नमन्ति यत्पादनिकेतमात्मनः शिवाय चानीय धनानि शत्रवः ।
कथं स धीरः श्रियमङ्ग दुस्त्यजामियेष चोत्स्रष्टुमहो सहासुभिः ॥ १० ॥

शिवाय लोकस्य भवाय भूतये य उत्तमश्लोकपरायणा जनाः ।
जीवन्ति नात्मार्थमसौ परां श्रियं मुमोच निर्विद्य कुतः कलेवरम् ॥ ११ ॥

तत्सर्वं नः समाचक्ष्व पृष्टो यदिह किञ्चिन ।
मन्ये त्वां विषये वाचां स्नातमन्यत्र छान्दसात् ॥ १२ ॥

## अथ चतुर्थोऽध्यायः

**सूत उवाच**

द्वापरे समनुप्राप्ते तृतीये युगपर्यये।
जातः पराशराद्योगी वासव्यां कलया हरेः ॥ १३ ॥

स कदाचित्सरस्वत्याः उपस्पृश्य जलं शुचिः।
विविक्त एक आसीन उदिते रविमण्डले॥ १४ ॥

परावरज्ञः स ऋषिः कालेनाव्यक्तरंहसा।
युगधर्मव्यतिकरं प्राप्तं भुवि युगे युगे॥ १५ ॥

भौतिकानां च भावानां शक्तिह्रासं च तत्कृतम्।
अश्रद्दधानान्निः सत्वान् दुर्मेधान् ह्रसितायुषः ॥ १६ ॥

दुर्भगांश्च जनान्वीक्ष्य मुनिर्दिव्येन चक्षुषा।
सर्ववर्णाश्रमाणां यद्दध्यौ चिरममोघदृक्॥ १७ ॥

चातुर्होत्रं कर्मशुद्धिं प्रजानां वीक्ष्य वैदिकम्।
व्यदधाद्यज्ञसन्तत्यै वेदमेकं चतुर्विधम्॥ १८ ॥

ऋग्यजुः सामाथर्वाख्या वेदाश्चत्वार उद्धृताः।
इतिहासपुराणं च पञ्चमो वेद उच्यते॥ १९ ॥

तत्रर्ग्वेदधरः पैलः सामगो जैमिनिः कविः।
वैशंपायन एवैको निष्णातो यजुषां ततः ॥ २० ॥

अथर्वाङ्गीरसामासीत्सुमंतुर्वारुणो मुनिः।
इतिहासपुराणानां पिता मे रोमहर्षणः ॥ २१ ॥

त एव ऋषयो वेदं स्वं स्वं व्यस्यन्ननेकधा।
शिष्यैः प्रशिष्यैस्तच्छिष्यैर्वेदास्ते शाखिनोऽभवन्॥ २२ ॥

त एव वेदा दुर्मेधैर्धार्यन्ते पुरुषैर्यथा।
एवं चकार भगवान् व्यासः कृपणवत्सलः ॥ २३ ॥

स्त्रीशूद्रद्विजबन्धूनां त्रयी न श्रुतिगोचरा।

## अथ चतुर्थोऽध्यायः

कर्मश्रेयसि मूढानां श्रेय एवं भवेदिह ।
इति भारतमाख्यानं कृपया मुनिना कृतम् ॥ २४ ॥

एवं प्रवृत्तस्य सदा भूतानां श्रेयसि द्विजाः ।
सर्वात्मकेनापि यदा नातुष्यत् हृदयं ततः ॥ २५ ॥

नातिप्रसन्नहृदयः सरस्वत्यास्तटे शुचौ ।
वितकयन्विविक्तस्थ इदं चोवाच धर्मवित् ॥ २६ ॥

धृतव्रतेन हि मया छन्दांसि गुरवोऽग्नयः ।
मानिता निर्व्यलीकेन गृहीतं चानुशासनम् ॥ २७ ॥

भारतव्यपदेशेन ह्याम्नायार्थः प्रदर्शितः ।
दृश्यते यत्र धर्मो हि स्त्रीशूद्रादिभिरप्युत ॥ २८ ॥

अथापि बत मे दैह्यो ह्यात्मा चैवात्मना विभुः ।
असंपन्न इवाभाति ब्रह्मवर्चस्विसत्तमः ॥ २९ ॥

किं वा भागवता धर्मा न प्रायेण निरूपिताः ।
प्रियाः परमहंसानां त एव ह्यच्युतप्रियाः ॥ ३० ॥

तस्यैवं खिन्नमात्मानं मन्यमानस्य खिद्यतः ।
कृष्णस्य नारदोऽभ्यागादाश्रमं प्रागुदाहृतम् ॥ ३१ ॥

तमभिज्ञाय सहसा प्रत्युत्थायागतं मुनिम् ।
पूजयामास विधिवन्नारदं सुरपूजितम् ॥ ३२ ॥

**॥ इति श्रीमद्भागवते प्रथमस्कन्धे चतुर्थोऽध्यायः ॥**

### ॥ ನಾಲ್ಕನೆಯ ಅಧ್ಯಾಯ ॥

### ಶೌನಕರಿಂದ ಪ್ರಶ್ನೆಯ ವಿವರಣೆ

ಸೂತಪೌರಾಣಿಕರು ಭಾಗವತವನ್ನು ನಿಮಗೆ ಹೇಳುತ್ತೇನೆಂದು ಮೂರನೆಯ ಅಧ್ಯಾಯದಲ್ಲಿ ಹೇಳಲು, ಜ್ಞಾನಿಗಳಲ್ಲಿ ಶ್ರೇಷ್ಠರಾದ ಶೌನಕರು ಬಹಳ ಆದರದಿಂದ, ಎಲೈ ಸೂತರೇ! ಶ್ರೀಕೃಷ್ಣಚರಿತಾಮೃತವನ್ನು ಹೇಳುವ ಶ್ರೀಮದ್ಭಾಗವತ ಕಥೆಗಳನ್ನು ನಮಗೆ ಹೇಳಿರಿ! ಈ ಭಾಗವತವು

## अथ चतुर्थोऽध्यायः

ಯಾವ ಯುಗದಲ್ಲಿ, ಯಾವ ದೇಶದಲ್ಲಿ, ಯಾರಿಗಾಗಿ, ಯಾತಕ್ಕಾಗಿ ಹೇಳಲ್ಪಟ್ಟಿತು? ನೀವು ಶುಕರಿಂದ ಪರೀಕ್ಷಿದ್ರಾಜರಿಗೆ ಹಿಂದೆ ಹೇಳಲ್ಪಟ್ಟಿತೆಂದು ಹೇಳಿರುವಿರಿ. ವ್ಯಾಸಪುತ್ರರಾದ ಶುಕಋಷಿಗಳು ಮಹಾಯೋಗೀಶ್ವರರು, ಧ್ಯಾನಶೀಲರು, ಸರ್ವದೇಶಕಾಲಗಳಲ್ಲಿ ಸರ್ವತ್ರ ಬ್ರಹ್ಮದರ್ಶನವುಳ್ಳವರು, ಸ್ವಾರ್ಥಲೇಶವೂ ಇಲ್ಲದೇ ಸರ್ವವೂ ಪರಮಾತ್ಮಾಧೀನವೆಂದು ಬಲ್ಲವರು. ಸದಾ ಪರಮಾತ್ಮನಲ್ಲಿ ಮನೋಯೋಗದಿಂದ, ನಿದ್ರಾ, ಆಲಸ್ಯ, ಅಜ್ಞಾನಾದಿ ದೋಷರಹಿತರಾಗಿ, ಶಾಂತರಾಗಿ, ನೋಡುವವರಿಗೆ ಉನ್ಮತ್ತರಂತೆ ತೋರುವವರು. ಆದ್ದರಿಂದ ಅಂತಹವರ ದರ್ಶನವು ಜನರಿಗೆ ಸುಲಭವಲ್ಲ.

ಶುಕರು ಬೊಗಸೆ ಮಾತ್ರ ಭಿಕ್ಷೆ ಬೇಡುವುದಕ್ಕಾಗಿ ಜನರಿರುವ ಸ್ಥಳಕ್ಕೆ ಹೋಗಿ, ಒಂದು ಮನೆಯ ಹೊರಗೆ ಗೋದೋಹನ ಕಾಲ ಮಾತ್ರ ಮೌನದಿಂದ ನಿಂತಿದ್ದು ಬೊಗಸೆ ತುಂಬುವವರೆಗೆ ಮಾತ್ರ ಬೇರೆ ಬೇರೆ ಗೃಹಗಳ ಸಮೀಪದಲ್ಲಿ ನಿಲ್ಲುತ್ತಾರೆ. ಅಂಥವರನ್ನು ಹಸ್ತಿನಾಪುರದ ಜನರೇ ಆಗಲಿ, ಅಂತಃಪುರದಲ್ಲಿರುವ ರಾಜನೇ ಆಗಲಿ ಹೇಗೆ ತಾನೇ ಅವರು ಶುಕಋಷಿಗಳೆಂದು ತಿಳಿಯಲೂ, ಅವರನ್ನು ಬೇಡಿಕೊಂಡು ಅವರಿಂದ ಭಾಗವತಶಾಸ್ತ್ರ ಶ್ರವಣ ಮಾಡಲೂ ಸಾಧ್ಯವಾದೀತು? ಅದನ್ನು ನಮಗೆ ತಿಳಿಸಿರಿ.

ದೇವತೆಗಳ ಐಶ್ವರ್ಯಕ್ಕೆ ಸಮಾನ ಐಶ್ವರ್ಯ ವುಳ್ಳ ಪರೀಕ್ಷಿದ್ರಾಜನು ಏತಕ್ಕೆ ಸಮಸ್ತವನ್ನೂ ತ್ಯಜಿಸಿ ಗಂಗಾತೀರದಲ್ಲಿ, ಪ್ರಾಣತ್ಯಾಗ ಮಾಡುವುದಕ್ಕಾಗಿ ಪ್ರಾಯೋಪವೇಶವ್ರತವನ್ನು ಕೈಕೊಂಡನು? ಅಭಿಮನ್ಯುವಿನ ಮಗನಾದ ಪರೀಕ್ಷಿದ್ರಾಜನು ಭಾಗವತೋತ್ತಮನೆಂದು ಕೇಳಿದ್ದೇವೆ. ಅಂತಹ ರಾಜರು ಲೋಕಕ್ಷೇಮಕ್ಕಾಗಿಯೇ, ಧರ್ಮಸ್ಥಾಪನೆಗಾಗಿಯೇ ಜೀವಿಸುತ್ತಾರೆ. ಇಂತಹ ಪರಮ ಐಶ್ವರ್ಯದಿಂದ ಕೂಡಿದ ರಾಜ್ಯವನ್ನೂ, ರಕ್ಷಣಾಯೋಗ್ಯರಾದ ಪ್ರಜೆಗಳನ್ನೂ ಏಕೆ ಪರೀಕ್ಷಿದ್ರಾಜನು ತೊರೆದು ಪ್ರಾಯೋಪವೇಶ ಮಾಡಿದ್ದು? ನಮಗೆ ತಿಳಿಸಬೇಕೆಂದು ಪ್ರಾರ್ಥಿಸಿದರು.

### ಶ್ರೀ ವೇದವ್ಯಾಸರು ಮಾಡಿದ ಮಹದುಪಕಾರ

ಈ ಪ್ರಶ್ನೆಗಳನ್ನು ಕೇಳಿ ಸೂತರು, ಎಲೈ ಶೌನಕಾದಿ ಋಷಿಗಳಿರಾ, ಮೂರನೆಯದಾದ ದ್ವಾಪರಯುಗಾಂತ್ಯ ಭಾಗದಲ್ಲಿ ಪರಾಶರರಿಂದ, ದೋಣಿ ನಡೆಸುವ ಕಾರ್ಯದಲ್ಲಿದ್ದ ಸತ್ಯವತೀದೇವಿಯಲ್ಲಿ ಶ್ರೀಪರಮಾತ್ಮ ತನ್ನ ಸ್ವಾಂಶದಿಂದ ಶ್ರೀವೇದವ್ಯಾಸದೇವರಾಗಿ

ಅವತರಿಸಿದರು. ಒಂದು ದಿನ ಅವರು ಸರಸ್ವತೀ ನದಿಯಲ್ಲಿ ಸ್ನಾನ ಪ್ರಾತರಾಹ್ನೀಕಗಳನ್ನು ಮಾಡಿ, ಏಕಾಂತವಾಗಿ ಆ ನದೀತೀರದಲ್ಲಿದ್ದ ತಮ್ಮ ಆಶ್ರಮದಲ್ಲಿ, ಸೂರ್ಯೋದಯವನ್ನು ನಿರೀಕ್ಷಿಸುತ್ತಾ ಕುಳಿತುಕೊಂಡಿದ್ದರು.

ಸರ್ವೋತ್ತಮರೂ, ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ನಡೆಯುವ ಸರ್ವವನ್ನೂ ತಿಳಿದವರೂ ಆದ ವೇದವ್ಯಾಸರು, ಯುಗಯುಗಗಳ ಭೇದದಿಂದ ಧರ್ಮಸಾಂಕರ್ಯವೂ, ಅದರಿಂದ ಜನರಿಗೆ ಅಲ್ಪಶಕ್ತಿ, ಅಲ್ಪಜ್ಞಾನ, ಅಶ್ರದ್ಧೆ, ನಿಸ್ಸತ್ವತೆ, ನಿರುತ್ಸಾಹ, ದುರ್ಬುದ್ಧಿಗಳು ಉಂಟಾಗಿ, ವೇದಾದಿ ಜ್ಞಾನಗಳನ್ನು ಪಡೆಯಲು ಮನಸ್ಸಿನಲ್ಲಿ ಧಾರಣಾಶಕ್ತಿಯು ಕಡಿಮೆಯಾಗುತ್ತಿರುವ, ಭಾವಿ ಕಾಲಗತಿಯ ಸ್ವಭಾವವನ್ನು ಯೋಚಿಸಿದರು. ಅಲ್ಪಾಯುಷ್ಯರಾಗಿ, ಸಾಧನಾಹೀನರಾಗಿರುವ ಜನರ ಮೇಲೆ ಕೃಪೆಯಿಂದ, ಲೋಕಕ್ಕೆ ಹಿತವಾವುದೆಂದು ತಮ್ಮ ಸರ್ವಜ್ಞತಾ ದೃಷ್ಟಿಯಿಂದ ತಿಳಿದು, ಯಜ್ಞಾದಿ ಸತ್ಸಾಧನೆಗಳನ್ನು ತಿಳಿಸುವುದಕ್ಕಾಗಿ ಅಖಂಡವಾಗಿ ಒಂದೇ ಆಗಿದ್ದ ವೇದವನ್ನು ಋಗ್ಯಜುಸ್ಸಾಮೋಥರ್ವಣಗಳೆಂಬ ನಾಲ್ಕು ಶಾಖೆಗಳಾಗಿ ವಿಂಗಡಿಸಿದರು.

ಈ ನಾಲ್ಕು ವೇದಗಳ ಅರ್ಥಗಳನ್ನು ಸ್ಪಷ್ಟೀಕರಿಸುವುದಕ್ಕಾಗಿಯೂ, ವೇದಕ್ಕೆ ಅಧಿ ಕಾರಿಗಳಲ್ಲದ ಸ್ತ್ರೀ ಶೂದ್ರಾದಿಗಳಿಗೂ, ಬ್ರಹ್ಮಬಂಧುಗಳಿಗೂ ಸುಜ್ಞಾನ ಹುಟ್ಟಿಸುವುದಕ್ಕಾಗಿಯೂ ಇತಿಹಾಸಪುರಾಣರೂಪವಾಗಿ ಐದನೆಯ ವೇದವೆಂಬ ಮಹಾಭಾರತವನ್ನು ರಚಿಸಿದರು. ಪರಮಾತ್ಮನ ಅರ್ಚನಾದಿಗಳನ್ನು ತಿಳಿಸುವ ಋಗ್ವೇದವನ್ನು ಪೈಲರೂ, ಗುಣಗಾನರೂಪವಾದ ಸಾಮವೇದವನ್ನು ಸೂಕ್ಷ್ಮಜ್ಞಾನಿಗಳಾದ ಜೈಮಿನ್ಯಾಚಾರ್ಯರೂ, ವೈಶಂಪಾಯನರು ಯಜುರ್ವೇದವನ್ನೂ ಶ್ರೀವೇದವ್ಯಾಸರಿಂದ ಅಧ್ಯಯನ ಮಾಡಿದರು. ನಮ್ಮ ತಂದೆಗಳಾದ ರೋಮಹರ್ಷಣರು ಪುರಾಣೇತಿ ಹಾಸಗಳನ್ನು ಅಧ್ಯಯನ ಮಾಡಿದರು. ನಂತರ ಇವರುಗಳು ಶಿಷ್ಯರು, ಪ್ರಶಿಷ್ಯರು, ಹೀಗೆ ಕ್ರಮದಿಂದ ಉಪದೇಶಿಸುತ್ತಾ ಋಷಿಪ್ರವರವು ಹುಟ್ಟಿತು. ಪೌರಾಣಿಕರೂ ಆದರು. ದೀನಜನರಲ್ಲಿ ಕೃಪೆಯುಳ್ಳ ವ್ಯಾಸರು ಆಜ್ಞಾಪಿಸಿ, ಈ ನಾಲ್ಕು ವೇದಗಳನ್ನು ನಾಲ್ಕು ಶಿಷ್ಯರ ಮೂಲಕ, ಬೇರೆ ಬೇರೆ ಶಿಷ್ಯರಿಗೆ ಒಂದೊಂದು ಭಾಗದಂತೆ ಅಧ್ಯಯನ ಮಾಡಿಸುವ ಮುಖಾಂತರ, ಅಲ್ಪಜನರೂ ವೇದದ ಸ್ವಲ್ಪ ಸ್ವಲ್ಪವನ್ನೇ ತಿಳಿದು ಮನಸ್ಸಿನಲ್ಲಿ ಧಾರಣೆ ಮಾಡಲು ಅನುಕೂಲಪಡಿಸಿದರು.

ಈ ರೀತಿ ಭಗವದ್ಭಕ್ತರಾದ ತ್ರೈವರ್ಣಿಕರಿಗೆ, ವೈದಿಕ ಕರ್ಮಾನುಷ್ಠಾನದಿಂದ ಶುದ್ಧಾಂತಃ ಕರಣವೂ, ನಂತರ ಪರಮಾತ್ಮನ ಉಪಾಸನೆಯಿಂದ ಅಪರೋಕ್ಷಜ್ಞಾನವೂ, ಮುಕ್ತಿಯೂ

ಉಂಟಾಗುವುದಕ್ಕಾಗಿ ಮಾರ್ಗಮಾಡಿ, ನಂತರ ವೇದೋಕ್ತ ಕರ್ಮಾಚರಣೆ ಎಂಬ ಶ್ರೇಯಸ್ಸಿಗೂ, ಪುರುಷಾರ್ಥ ಸಾಧನೆಗೂ ಅಶಕ್ತರಾದ ಮೂಢರ ಉದ್ಧಾರಾರ್ಥವಾಗಿ, ವೇದಬಾಹಿರರಾದ ಇವರಿಗೆ ವೇದೋಕ್ತ ಜ್ಞಾನ ಉಂಟುಮಾಡಲು ಭಾರತಾದಿ ಪುರಾಣಗಳನ್ನು ರಚಿಸಿ, ಅವರೂ ಉದ್ಧಾರವಾಗಲು ಮಾರ್ಗ ಮಾಡಿದರು.

ಈ ಇತಿಹಾಸಪುರಾಣಾದಿಗಳನ್ನು ಅಧ್ಯಯನ ಮಾಡಿದರೆ ವೇದಾಧಿಕಾರವುಳ್ಳ ಬ್ರಾಹ್ಮಣರಿಗೂ, ವೇದಾರ್ಥಗಳು ಚೆನ್ನಾಗಿ ತಿಳಿಯುತ್ತವೆ. ಆದುದರಿಂದ ಇವುಗಳಿಗೆ ವೇದಾಂಗಗಳೆಂದು ಹೆಸರು. ಈ ರೀತಿ ಸರ್ವಲೋಕೋಪಕಾರಕ್ಕಾಗಿ ಜ್ಞಾನಪ್ರಕಾಶ ಕಾರ್ಯವು ತೃಪ್ತಿ ಆಗಲಿಲ್ಲ. ಆದುದರಿಂದ, ವೇದೋಕ್ತಕರ್ಮಗಳನ್ನು ನಿರೂಪಿಸುವಾಗ, ಪ್ರಾಯಶಃ, ಪರಮಹಂಸರಿಗೂ, ಶ್ರೀಪರಮಾತ್ಮನಿಗೂ ಪರಮ ಪ್ರೀತ್ಯಾಸ್ಪದವಾದ ಶುದ್ಧಭಾಗವತಧರ್ಮಗಳು ಪ್ರತಿಪಾದಿಸಲ್ಪಡಲಿಲ್ಲ, ಈಗ ಏನು ಕಾರ್ಯವನ್ನು ಕೈಕೊಳ್ಳಲಿ? ಎಂದು ಯೋಚಿಸುತ್ತಿದ್ದರು. ಆಗ ದೇವಋಷಿಗಳಾದ ನಾರದರು ಆ ಆಶ್ರಮಕ್ಕೆ ವೀಣಾಪಾಣಿಗಳಾಗಿ ಪರಮಾತ್ಮನನ್ನು ಗಾನಮಾಡುತ್ತಾ ಬಂದರು. ಅವರನ್ನು ನೋಡಿ ವೇದವ್ಯಾಸರು ಪ್ರತ್ಯುತ್ಥಾನಾದಿಗಳಿಂದ ಸತ್ಕರಿಸಿ ಬರಮಾಡಿಕೊಂಡು, ವೇದೋಕ್ತಪ್ರಕಾರ ಆದರ ಉಪಚಾರಗಳನ್ನು ಮಾಡಿ, ಪೀಠದಲ್ಲಿ ಕುಳ್ಳಿರಿಸಿದರು. ತಾವೂ ತಮ್ಮ ಸುಖಾಸನದಲ್ಲಿ ಕುಳಿತರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ನಾಲ್ಕನೆಯ ಅಧ್ಯಾಯ ಮುಗಿಯಿತು**

# अथ पञ्चमोऽध्यायः

**सूत उवाच**

अथ तं सुखमासीन उपासीनं बृहच्छ्रवाः ।
देवर्षिः प्राह विप्रर्षिं वीणापाणिः स्मयन्निव ॥ १ ॥

**नारद उवाच**

पाराशर्य महाभाग भवतः कच्चिदात्मना ।
परितुष्यति शारीर आत्मा मानस एव वा ॥ २ ॥

जिज्ञासितं सुसंपन्नमपि ते महदद्भुतम् ।
कृतवान्भारतं यस्त्वं सर्वार्थपरिबृंहितम् ॥ ३ ॥

जिज्ञासितमधीतञ्च ब्रह्म यत्तत्सनातनम् ।

## अथ पञ्चमोऽध्यायः

तथापि शोचस्यात्मानमकृतार्थ इव प्रभो ॥ ४ ॥

**व्यास उवाच**

अस्त्येव मे सर्वमिदं त्वयोक्तं तथापि नात्मा परितुष्यते मे ।
तत्मूलमव्यक्तमगाधबोधं पृच्छामहे त्वाऽऽत्मभवात्मभूतम् ॥ ५ ॥

स वै भवान् वेदसमस्तगुह्यं उपासितो यः पुरुषः पुराणः ।
परावरेषो मनसैव विश्वं सृजत्यवत्यत्ति गुणैरसङ्गः ॥ ६ ॥

त्वं पर्यटन्नक इव त्रिलोकीमन्तश्चरो वायुरिवात्मसाक्षी ।
परावरे ब्रह्मणि धर्मतो व्रतैस्स्नातस्य मे न्यूनमलं विचक्ष्व ॥ ७ ॥

**नारद उवाच**

भवतानुदितप्रायं यशो भगवतोऽमलम् ।
येनैवासौ न तुष्येत मन्ये तद्दर्शनं खिलम् ॥ ८ ॥

यथा धर्मादयो ह्यर्था मुनिवर्यानुवर्णिताः ।
न तथा वासुदेवस्य महिमा ह्यनुवर्णिनः ॥ ९ ॥

न तद्वचश्चिपदं हरेर्यशो जगत्पवित्रं न गृणीत कर्हिचित् ।
तद्वायसं तीर्थमुशन्ति मानसा न यत्र हंसा न्यपतन्मिमंक्षया ॥ १० ॥

स वाग्विसर्गो जनताघविप्लवो यस्मिन् प्रतिश्लोकमवद्धवत्यपि ।
नामान्यनन्तस्य यशोंकितानि यत् शृण्वन्ति गायन्ति गृणन्ति साधवः ॥ ११ ॥

नैष्कर्म्यमप्यच्युतभाववर्जितं न शोभते ज्ञानमलं निरञ्जनम् ।
कुतः पुनः शश्वदभद्रमीश्वरे न चार्षितं कर्म यदप्यकारणम् ॥ १२ ॥

अतो महाभाग भवानमोघदृक् शुचिश्रवाः सत्यरतो धृतव्रतः ।
उरुक्रमस्याखिलबन्धमुक्तये समाधिनाऽनुस्मर यद्विचेष्टितम् ॥ १३ ॥

अतोन्यथा किञ्चन यद्विवक्षितं पृथग्दृशस्तत्कृतरूपनामभिः ।
न कर्हिचित्क्वापि च दुः स्थितामतिर्लभेत वाताहतनौरिवास्पदम् ॥ १४ ॥

जुगुप्सितं धर्मकृतेऽनुशासनं स्वभावरक्तस्य महान् व्यतिक्रमः ।
यद्वाक्यतो धर्म इतीतरस्थितो न मन्यते तस्य निवारणं जनः ॥ १५ ॥

## अथ पञ्चमोऽध्यायः

विचक्षणोऽस्यार्हति वेदितुं विभोरनन्तपारस्य निवृत्तितः सुखम् ।
प्रवर्तमानस्य गुणैरनात्मनस्ततो भवान् दर्शय चेष्टितं विभोः ॥ १६ ॥

त्यक्त्वा स्वधर्मं चरणाम्बुजं हरेर्भजन्नपक्वोऽथ पतेत्ततो यदि ।
यत्र क्व वा भद्रमभूदमुष्य को वाऽर्थ आप्तो भजतां स्वधर्मम् ॥ १७ ॥

तस्यैव हेतोः प्रयतेत कोविदो न लभ्यते यद्भ्रमतामुपर्यधः ।
तल्लभ्यते दुः खवदन्यतः सुखं कालेन सर्वत्र गभीररंहसा ॥ १८ ॥

न वै जनो जातु कथञ्चन व्रजेन्मुकुन्दसेव्यन्यवदङ्गसंसृतिम् ।
स्मरन्मुकुन्दाङ्घ्र्युपगूहनं पुनर्विहातुमिच्छेन्न रसग्रही जनः ॥ १९ ॥

इदं हि विश्वं भगवानिवेतरो यतो जगत्स्थाननिरोधसंभवः ।
तद्धि स्वयं वेद भवांस्तथापि प्रादेशमात्रं भवतः प्रदर्शितम् ॥ २० ॥

त्वमात्मनाऽऽत्मानमवैह्यमोघदृक् परस्य पुंसः परमात्मनः कलाम् ।
अजं प्रजातं जगतः शिवाय तन्महानुभावाभ्युदयोऽपि गण्यताम् ॥ २१ ॥

इदं हि पुंसस्तपसः श्रुतस्य वा स्विष्टस्य सूक्तस्य च बुद्धदत्तयोः ।
अविप्लुतोऽर्थः कविभिर्निरूपितो यदुत्तमश्लोकगुणानुवर्णनम् ॥ २२ ॥

अहं पुराऽतीतभवेऽभवं मुने दास्यास्तु कस्याश्चन वेदवादिनाम् ।
निरूपितो बालक एव योगिनां शुश्रूषणे प्रावृषि निर्विविक्षताम् ॥ २३ ॥

ते मय्यपेताखिलचापलेऽर्भके दान्ते यतक्रीडनकेऽनुवर्तिनि ।
चक्रुः कृपां यद्यपि तुल्यदर्शनाः शुश्रूषमाणे मुनयोऽल्पधारिणि ॥ २४ ॥

उच्छिष्टलेपाननुमोदितो द्विजैः सकृच्च भुञ्जे तदपास्तकिल्बिषः ।
एवं प्रवृत्तस्य विशुद्धचेतसस्तद्धर्म एवाभिरुचिः प्रजायते ॥ २५ ॥

तत्रान्वहं कृष्णकथाः प्रगायतामनुग्रहेणाशृणवं मनोहराः ।
ताः श्रद्धया मेऽनुसवं विशृण्वतः प्रियश्रवस्याङ्ग तदाऽभवन्मतिः ॥ २६ ॥

तस्मिंस्तदा लब्धरुचेर्महामते प्रियश्रवस्यस्खलिता मतिर्मम ।
ययाऽहमेतत्सदसत्स्वमायया पश्ये मयि ब्रह्मणि कल्पितं परे ॥ २७ ॥

## अथ पञ्चमोऽध्यायः

इत्थं शरत्प्रावृषिकावृतू हरेर्विशृण्वतो मेऽनुसवं यशोऽमलम् ।
सङ्कीत्यमानं मुनिभिर्महात्मभिर्भक्तिः प्रवृत्ताऽऽत्मरजस्तमोपहा ॥ २८ ॥

तस्यैवं मेऽनुरक्तस्य प्रश्रितस्य हतैनसः ।
श्रद्धधानस्य बालस्य दान्तस्यानुचरस्य च ॥ २९ ॥

ज्ञानं गुह्यतमं यत्तत्साक्षाद्भगवतोदितम् ।
अन्ववोचन् गमिष्यन्तः कृपया दीनवत्सलाः ॥ ३० ॥

येनैवाहं भगवतो वासुदेवस्य वेधसः ।
मायानुभावमविदं तेन गच्छन्ति तत्पदम् ॥ ३१ ॥

एतत्संसूचितं ब्रह्मन् तापत्रयचिकित्सितम् ।
यदीश्वरे भगवति कर्म ब्रह्मणि भावितम् ॥ ३२ ॥

आमयोऽयं च भूतानां जायते येन सुव्रत ।
तदेव ह्यामयद्रव्यं तत्पुनाति चिकित्सितम् ॥ ३३ ॥

एवं नृणां क्रियायोगाः सर्वे संसृतिहेतवः ।
त एवात्मविनाशाय कल्पन्ते कल्पिताः परे ॥ ३४ ॥

यदत्र क्रियते कर्म भगवत्परितोषणम् ।
ज्ञानं यत्तदधीनं हि भक्तियोगसमन्वितम् ॥ ३५ ॥

कुर्वाणा यत्र कर्माणि भगवच्छिक्षयाऽसकृत् ।
गृणन्ति गुणनामानि कृष्णस्यानुस्मरन्ति च ॥ ३६ ॥

ॐ नमो भगवते तुभ्यं वासुदेवाय धीमहि ।
प्रद्युम्नायानिरुद्धाय नमः संकर्षणाय च ॥ ३७ ॥

इति मूर्त्यभिधानेन मन्त्रमूर्तिममूर्तिकम् ।
यजते यज्ञपुरुषं स सम्यग्दर्शनः पुमान् ॥ ३८ ॥

इमं स्वधर्मनियममवेत्य मदनुष्ठितम् ।
अदान्मे ज्ञानमैश्वर्यं स्वस्मिन् भावं च केशवः ॥ ३९ ॥

**अथ पञ्चमोऽध्यायः**

त्वमप्यदभ्रश्रुत विश्रुतं विभोः समाप्यते येन विदां बुभुत्सितम् ।
प्रख्याहि दुः खैर्मुहुरर्दितात्मनां सङ्क्लेषनिर्वाणमुशन्ति नान्यथा ॥ ४० ॥

**॥ इति श्रीमद्भागवते प्रथमस्कन्धे पञ्चमोऽध्यायः ॥**

## ॥ ಪಂಚಮ ಅಧ್ಯಾಯ ॥

ಹೀಗೆ ನಾರದರೂ ವ್ಯಾಸರೂ ಸುಖಾಸೀನರಾಗಿ ಕುಳಿತ ಮೇಲೆ, ವೀಣಾಪಾಣಿಗಳಾದ ನಾರದರು ಆಶ್ಚರ್ಯವನ್ನು ಹೊಂದಿದವರಂತೆ ಸ್ವಲ್ಪ ಮುಗುಳ್ನಗೆಯಿಂದ ಎಲೈ, ಐಶ್ವರ್ಯಾದ್ಯನಂತ ಭಾಗ್ಯನಿಧಿಗಳಾದ, ಪರಾಶರ ಋಷಿ ಪುತ್ರರಾದ ಶ್ರೀವೇದವ್ಯಾಸರೇ, ನೀವು ಜ್ಞಾನಪ್ರಕಾಶಕ್ಕಾಗಿ ಮಾಡಿರುವ ಈ ಋಷಿ ಅವತಾರದಲ್ಲಿ, ವೇದಗಳನ್ನು ವಿಂಗಡಿಸಿದ್ದರಿಂದಲೂ, ಸಕಲಸಜ್ಜರಿಗೆ ವೇದಾರ್ಥಗಳನ್ನು ತಿಳಿಸಿ ಅವರು ಮೋಕ್ಷಸಾಧನೆ ಮಾಡಿಕೊಳ್ಳಲು ಅನುಕೂಲವಾಗುವಂತೆ, ಮಹಾ ಅದ್ಭುತ ಗ್ರಂಥವಾದ ಮಹಾಭಾರತವನ್ನು ಮಾಡಿದ್ದರೂ, ಏನೋ ಕೃತಕೃತ್ಯರಾಗದಂತೆ ಯೋಚನಾಪರರಾಗಿರುವಂತೆ ಇರುವಿರಲ್ಲಾ, ಅದಕ್ಕೆ ಕಾರಣವನ್ನು ತಿಳಿಯಲು ನಾನು ಅಪೇಕ್ಷಿಸುತ್ತೇನೆಂದು ಹೇಳಿದರು.

ಆದಕ್ಕೆ ವ್ಯಾಸರು ಪರಮ ಜ್ಞಾನಪೂರ್ಣರಾದಾಗ್ಯೂ, ಅಜ್ಞರಂತೆ, ದುರ್ಜನರನ್ನು ಮೋಹಿಸುವುದಕ್ಕಾಗಿ, ಎಲೈ ನಾರದನೇ, ಇತರಾಪೇಕ್ಷೆ ಇಲ್ಲದೆ ಸ್ವತಂತ್ರನಾಗಿ ಜಗತ್ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಶ್ರೀಪರಮಾತ್ಮನ ನಾಭಿಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರ ಮಗನು ನೀನಾಗಿರುತ್ತೀಯೆ. ಶ್ರೀಪರಮಾತ್ಮನ ವರಪ್ರಸಾದದಿಂದ ಸರ್ವಪ್ರಾಣಿಗಳ ಮನೋವ್ಯಾಪಾರವನ್ನು, ತ್ರಿಕಾಲಗಳಲ್ಲಿಯೂ ತಿಳಿಯುವಂತಹ ಜ್ಞಾನಿಶ್ರೇಷ್ಠನು ನೀನಾಗಿರುತ್ತೀಯೆ. ನನಗೆ ಯಾವ ನ್ಯೂನತೆಯಿಂದ ಈ ರೀತಿ ಮನಸ್ಸಿಗೆ ಅತೃಪ್ತಿಯುಂಟಾಗಿದೆಯೋ ಅದನ್ನು ತಿಳಿದು ಹೇಳಲು ಶಕ್ತನಾದ್ದರಿಂದ, ನನ್ನ ಮನೋವ್ಯಥೆಗೆ ಕಾರಣವನ್ನು ನೀನೇ ಹೇಳೆಂದು ಕೇಳಿದರು.

## अथ पञ्चमोऽध्यायः

## ಶ್ರೀಮದ್ಭಾಗವತದ ರಚನೆಗಾಗಿ ನಾರದರಿಂದ ಪ್ರಾರ್ಥನೆ

ಅದಕ್ಕೆ ನಾರದರು- ಎಲೈ ವ್ಯಾಸರೇ-ನಿಮ್ಮಿಂದ ಶ್ರೀಪರಮಾತ್ಮನ ಪರಮಮಂಗಳ ಯಶಸ್ಸುಗಳಿಂದ ಅಂಕಿತವಾದ ಗ್ರಂಥವು ಮಾಡಲ್ಪಡಲಿಲ್ಲ. ಯಾಕೆಂದರೆ ಭಾರತದಲ್ಲಿ ಹೆಚ್ಚಾಗಿ ನಾನಾ ಧರ್ಮಗಳು ಪ್ರಸಕ್ತವಾಗಿವೆ. ಅಲ್ಲಲ್ಲಿ ಹೆಚ್ಚಾಗಿ ಭಗವದ್ಗುಣಾನುವರ್ಣನೆಯು ಮಾಡಲ್ಪಟ್ಟಿದ್ದರೂ, ಮಹಾಜ್ಞಾನಿಗಳಿಗೆ ತಿಳಿಯಲಸಾಧ್ಯವಾದ ಗಹನ ಅರ್ಥವುಳ್ಳ ಭಾರತದಲ್ಲಿ, ಸಾಮಾನ್ಯರು ಪರಮಾತ್ಮನ ಮಹಾಮಹಿಮೆಗಳನ್ನು ತಿಳಿಯಲು ಶಕ್ತರಲ್ಲದ್ದರಿಂದಲೂ, ಭಾರತಾರ್ಥ ಹೇಳುವರು ವಿರಳರಾದ್ದರಿಂದಲೂ, ನಾನು ಪ್ರಾಯಶಃ ಭಗವದ್ಗುಣಾನುವರ್ಣನವು ಮಾಡಲ್ಪಡಲಿಲ್ಲವೆಂದು ಹೇಳಿದೆನು. ಧರ್ಮಾದಿ ಸ್ವರೂಪಗಳನ್ನು ಸ್ವಲ್ಪವೇ ಹೇಳಿದರೂ, ಅವು ಜನರಿಗೆ ತಿಳಿದು ಆಚರಿಸಲು ಆಗುತ್ತೆ. ಭಗವನ್ಮಹಿಮೆಗಳು ಬಹಳವಾಗಿ ಹೊಗಳಲ್ಪಟ್ಟರೂ ಅವು, ಪರಮಾತ್ಮನ ಅಪಾರಮಹಿಮೆಗಳಲ್ಲಿ ಸ್ವಲ್ಪವೇ ಆಗಿರುತ್ತವೆ.

ಆದುದರಿಂದ ಬಹು ರಮ್ಯಭಾಷೆಯಿಂದ ಒಂದು ಗ್ರಂಥವು ಮಾಡಲ್ಪಟ್ಟಿದ್ದರೂ, ಅದರಲ್ಲಿ ಶ್ರೀಪರಮಾತ್ಮನ ಮಹಾಮಹಿಮೆಗಳು ವರ್ಣಿಸಲ್ಪಡದಿದ್ದರೆ, ಆ ಗ್ರಂಥವು ಕಾಗೆಯು ಮುಳುಗುವ ತೀರ್ಥದಂತೆ ಅಲ್ಪವಾದದ್ದೇ. ತಪ್ಪು ತಪ್ಪು ವಾಕ್ಯಗಳಿಂದ ಕೂಡಿದ್ದರೂ ಅವು ದೇವರಮಹಿಮೆಗಳನ್ನು ಹೇಳಿದ್ದರೆ, ಜ್ಞಾನಿಗಳು ಅವುಗಳನ್ನು ಕೇಳುತ್ತಾರೆ, ಹಾಡುತ್ತಾರೆ, ಮತ್ತು ಸ್ವೀಕರಿಸುತ್ತಾರೆ. ಪುರುಷಾರ್ಥಸಾಧನೆಗಾಗಿ ಇಂದ್ರಿಯ ನಿಯಮ, ದೇಹನೈರ್ಮಲ್ಯಗಳಿಂದ ನಿಷ್ಕಾಮ ಕರ್ಮಾಚರಣೆಯನ್ನು ಮಾಡುವಾಗಲೂ, ವೇದಪುರಾಣೇತಿಹಾಸಗಳಿಂದ ನಿರ್ಮಲಜ್ಞಾನವನ್ನು ಉಪದೇಶ, ಅಧ್ಯಯನಗಳಿಂದ ತಿಳಿಯುವಾಗಲೂ, ಸಾಧಕರು ಶ್ರೀಪರಮಾತ್ಮನೇ ಈ ಎಲ್ಲದರಿಂದಲೂ ಉಪಾಸ್ಯ; ಸರ್ವಕರ್ಮಗಳೂ, ಸಕಲ ಭೋಗಗಳೂ ಪರಮಾತ್ಮನ ಪ್ರೀತಿಗಾಗಿಯೇ ನಿರಂತರ ಅವನಿಗೆ ಸಮರ್ಪಣೆ ಎಂದು ಧ್ಯಾನಿಸುತ್ತಾ, ಪರಮಾತ್ಮನಲ್ಲಿ ಪರಮಭಕ್ತಿಯನ್ನು ಮಾಡದೇ ಹೋದರೆ, ಆ ನಿಷ್ಕಾಮಕರ್ಮಾಚರಣೆಯು, ಅಧ್ಯಯನ ಉಪದೇಶಗಳೂ ಅಪ್ರಯೋಜಕವಾಗುತ್ತವೆ.

ಸಾಧಕನಿಗೆ ವೃಥಾ ಶ್ರಮವಾಗಿ ಆತನು ಉಧೃತನಾಗಲಾರನು. ಆದ್ದರಿಂದ ಪರಮಾತ್ಮವಿಷಯಕ ಜ್ಞಾನವಿಲ್ಲದ, ಜಡ ಕರ್ಮ ವೇದಾಧ್ಯಯನ ಮಾಡತಕ್ಕ ನಷ್ಟಪ್ರಾಯ ಜೀವರಿಗೆ, ಶ್ರೀಪರಮಾತ್ಮನ ವಿಷಯಕಜ್ಞಾನ ಉಂಟಾಗಿ ಹೇಗೆ ಉದ್ಧೃತರಾಗುವರೋ ಆ ಮಾರ್ಗವನ್ನು, ಸರ್ವಜ್ಞಶಿಖಾಮಣಿಗಳೂ, ಸ್ವೋತ್ತಮರೂ, ಭೂತದಯಾಸಂಪನ್ನರೂ, ಕರುಣಾಳುಗಳೂ ಆದ

## अथ पञ्चमोऽध्यायः

ನೀವು ಯೋಗದಿಂದ ಧ್ಯಾನಿಸಿ ತಿಳಿದು ಲೋಕಕಲ್ಯಾಣವನ್ನು ಮಾಡಿರಿ. ನೀವು ರಚಿಸಿರುವ ಮಹಾಭಾರತವು ಸಮಾಧಿಭಾಷೆಯಿಂದ ಭಗವತ್ಪರವಾಗಿ ಕೇವಲ ಮಹಾಜ್ಞಾನಿಗಳು ತಿಳಿಯಬಲ್ಲರೇ ಹೊರತು, ಕೇವಲ ದರ್ಶನಭಾಷೆಯಿಂದ ತಿಳಿಯುವ ಸಾಮಾನ್ಯಜನರಿಗೆ, ಸ್ವಭಾವದಿಂದ ಪ್ರವೃತ್ತಿಕರ್ಮದಲ್ಲಿ ನಿರತರಾಗಿ ಸದಾ ಇಂದ್ರಿಯಸುಖಾಪೇಕ್ಷೆವುಳ್ಳವರಿಗೆ, ಸ್ವರ್ಗಾದಿಸುಖಗಳನ್ನು ಕೊಡುವ ಧರ್ಮ, ಅರ್ಥಗಳನ್ನೇ ಭಾರತವು ವಿಶೇಷವಾಗಿ ಹೇಳುವುದರಿಂದ, ಸ್ವರ್ಗಾದಿ ಹೆಚ್ಚು ಸುಖಲಾಭಕ್ಕಾಗಿ ಜನರು ಹೆಚ್ಚುಪ್ರಯತ್ನವನ್ನು ಮಾಡುವುದರ ಮೂಲಕ ಪ್ರವೃತ್ತಿಕರ್ಮ ಮಾಡುವುದಕ್ಕೇ ಪ್ರೇರಿಸಿದಂತಾಯಿತು.

ಇದು ಮರದ ಮೇಲಿಂದ ಬಿದ್ದವನನ್ನು, ಯಾಕೆ ಬಿದ್ದೆ ಎಂದು ದೊಣ್ಣೆಯಿಂದ ಹೊಡೆಯುವಂತೇ ಆಯಿತು. ಅಜ್ಞಾನದಿಂದ ಕೇವಲ ದುಃಖರೂಪ ಸಂಸಾರದಲ್ಲಿ ಮುಳುಗಿರುವ ಜೀವರನ್ನು ದುಃಖಸಮುದ್ರಕ್ಕೇ ಸೇರಿಸಿದಂತಾಯಿತು. ಇಂತಹ ದುಃಖ ನಿವಾರಣೆಯು ಯಾವ ಶ್ರೀಪರಮಾತ್ಮನ ಪಾದಾರವಿಂದದಲ್ಲಿ ಮಾಡುವ ಭಕ್ತಿಯಿಂದಲೂ, ಅವನ ಮಹಾಮಹಿಮೆಗಳನ್ನು ತಿಳಿದು ಉಪಾಸನೆ ಮಾಡುವುದರಿಂದಲೂ ಆಗಿ, ಕೇವಲ ಭಕ್ತಿಮಾಡಲು ಆರಂಭಿಸಿದ ಮಾತ್ರಕ್ಕೇ ಇಹಪರಗಳಲ್ಲಿ ಜೀವರಿಗೆ ಅಮೃತಪಾನದಂತೆ ಉತ್ತಮ ಸುಖಪ್ರಾಪ್ತಿಯಾಗುವುದೋ, ಅಂತಹ ಶ್ರೀಪರಮಾತ್ಮನ ಮಹಿಮೆಗಳನ್ನು ಪ್ರತಿಪಾದಿಸಿ, ಮರೆಮಾಚದೆ ಸ್ಪಷ್ಟವಾಗಿ ಹೇಳಿ, ಜೀವರು ದೇವರಲ್ಲಿ ಭಕ್ತಿ ಹೇಗೆ ಮಾಡಬೇಕೆಂಬ ಮಾರ್ಗವನ್ನೂ, ಭಕ್ತಿಲಕ್ಷಣಗಳನ್ನೂ, ಸಾಧನ, ಉಪಾಸನೆಗಳ ಮಾರ್ಗಗಳನ್ನೂ ತಿಳಿಸಿಕೊಟ್ಟು ಜೀವರನ್ನು ಉದ್ಧಾರಮಾಡಲು ಯೋಗ್ಯವಾದ ಒಂದು ಗ್ರಂಥವನ್ನು ಮಾಡಿರೆಂದು ನಿರೂಪಿಸಿದರು. ವೇದಗಳಲ್ಲಿ ಆಜ್ಞಾರೂಪದಿಂದ ಹೇಳಿರುವ ವರ್ಣಾಶ್ರಮಧರ್ಮಗಳನ್ನು ಆಚರಿಸದೇ ಬಿಟ್ಟರೆ, ಜೀವರು ನರಕಾದಿ ದುಃಖಗಳಿಗೆ ಈಡಾಗುವರು. ಸ್ವಧರ್ಮಗಳನ್ನು ಆಚರಿಸುವ ಜೀವರಿಗೆ ಎಲ್ಲೂ ಯಾವ ಕಾಲದಲ್ಲೂ ಅಮಂಗಳಗಳು ಉಂಟಾಗುವುದಿಲ್ಲ.

ಜೀವರಿಗೆ ಹೇಗೆ ಬೇಡದೇ ಇದ್ದರೂ ಪರಂಪರೆಯಾಗಿ ದುಃಖಗಳು ಉಂಟಾಗುವವೋ, ಹಾಗೆಯೇ ವಿಷಯಸುಖಗಳು ಬಯಸದೆ ಇದ್ದರೂ ಕಾಲಕಾಲಕ್ಕೆ ಪ್ರಾಪ್ತವಾಗುವುವು. ಇವು ಪಶ್ವಾದಿ ಕ್ರಿಮಿಕೀಟಾದಿ ನೀಚಜೀವರಿಗೂ ಸಾಮಾನ್ಯವಾದ್ದರಿಂದ, ಜ್ಞಾನಿಯಾದ ಯಾವ ಮನುಷ್ಯನೇ ಆಗಲೀ, ಈ ವಿಷಯಸುಖಗಳ ಅನುಭವಕ್ಕೇನೇ ಹೆಚ್ಚು ಪ್ರಯತ್ನಿಸಾನು? ಆದುದರಿಂದ ಐಹಿಕದೇಹ ಸುಖಾಪೇಕ್ಷೆಗಳಿಂದ ಮಾಡುವ ಪ್ರವೃತ್ತಿಕರ್ಮಗಳನ್ನು ಜ್ಞಾನಿಗಳು ಬಿಟ್ಟು, ನಿರಂತರ ದಿವ್ಯಸುಖಕೊಡುವ ನಿವೃತ್ತಿ

ಕರ್ಮವನ್ನಾಚರಿಸತಕ್ಕದ್ದು. ಅಂದರೆ ಕರ್ಮಫಲಾನುಸಂಧಾನವಿಲ್ಲದೆ, ಶ್ರೀಪರಮಾತ್ಮನ ಆರಾಧನೆ ಎಂದು, ದೇವರಪ್ರಸಾದಕ್ಕಾಗಿ, ಸ್ವಧರ್ಮಾಚರಣೆಗಳನ್ನು ಮಾಡತಕ್ಕದ್ದು. ಇದರಿಂದ ಸರ್ವದೇಶಕಾಲಗಳಲ್ಲಿ ನಿರ್ದುಃಖ ಸುಖವು ಜೀವರಿಗೆ ಉಂಟಾಗುವವು. ಹೇಗೆ ಸುಖಪ್ರಾಪ್ತಿಗಾಗಿ ಪಾಪಿಗಳು ದುಷ್ಟಕರ್ಮಗಳನ್ನು ಮಾಡುತ್ತಾ ಸುಖಲೇಶವನ್ನೂ ಹೊಂದದೆ ಹೆಚ್ಚು ಹೆಚ್ಚು ದುಃಖ ಯಾತನೆಗಳನ್ನೇ ಹೊಂದುವರೋ, ಹಾಗೆಯೇ ನಿವೃತ್ತಿಕರ್ಮ ಮಾಡುವವರು ದುಃಖಬೇಕೆಂದು ಬಯಸಿದರೂ ಹೊಂದದೆ ಮೇಲೆ ಮೇಲೆ ಸ್ವಚ್ಛಸುಖಗಳನ್ನೇ ಪಡೆಯುವರು. ಮುಕುಂದನನ್ನಾರಾಧಿಸುವ ಭಕ್ತಜನರು, ಮುಕುಂದನನ್ನಾರಾಧಿಸದ ಜನರಂತೆ ಎಂದಿಗೂ ಕಷ್ಟಪರಂಪರೆಗಳಿಗೂ, ಸಂಸಾರಬಂಧನಕ್ಕೂ ಒಳಗಾಗುವುದಿಲ್ಲ.

ಜಗತ್ಸೃಷ್ಟಿಸ್ಥಿತಿಲಯ ನಿಯಮನ ಜ್ಞಾನಾಜ್ಞಾನ ಬಂಧಮೋಕ್ಷಪ್ರದನಾದ್ದರಿಂದ ಸ್ವತಃ ಇತರ ಸಹಾಯವಿಲ್ಲದೇ ಪ್ರಸಿದ್ಧನಾಗಿರುವ ಸರ್ವಜ್ಞ, ಸರ್ವಸ್ವತಂತ್ರ, ಸರ್ವಶಕ್ತ, ಸರ್ವಸ್ವಾಮಿ, ಗುಣಸಂಪೂರ್ಣ, ಜಗದ್ವಿಲಕ್ಷಣನಾದ ಶ್ರೀಮನ್ನಾರಾಯಣನಿಗೆ ಅಭಿನ್ನರಾದ ತಮ್ಮಲ್ಲಿ, ಕೇವಲ ಬಾಲಕರು ಉಪಾಧ್ಯಾಯರಲ್ಲಿ ಪಾಠ ಒಪ್ಪಿಸುವಂತೆ, ನಿಮ್ಮಿಂದ ತಿಳಿದ ವಿಷಯಗಳನ್ನೇ ನಿಮ್ಮಿಂದ ಪ್ರೇರಿತನಾಗಿ ನಿಮ್ಮಲ್ಲಿ ವಿಜ್ಞಾಪಿಸಿಕೊಂಡಿರುತ್ತೇನೆ. ಆದುದರಿಂದ ಶ್ರೀಹರಿ ಮಹಿಮಾ ವರ್ಣನೆಯಿಂದ ಸಕಲ ಜಗತ್ತಿಗೂ ಅತ್ಯಂತ ಶ್ರೇಯಸ್ಸುಂಟಾಗುವುದರಿಂದ ಅದನ್ನೇ ತಾವು ವರ್ಣಿಸತಕ್ಕದ್ದಾಗಿದೆ ಎಂದು ಯೋಚಿಸುತ್ತೇನೆ.

ಸರ್ವಭೂತದಯಾಪೂರ್ಣರೂ, ಅನುಗ್ರಹೋನ್ಮುಖರಾದ ನೀವು ಜೀವರ ಉದ್ಧಾರಾರ್ಥವಾಗಿ ಶ್ರೀಹರಿಮಹಿಮಾದಿಗಳನ್ನು ಉಪದೇಶಿಸುವ ಗ್ರಂಥಮಾಡುವುದು ನಿಮ್ಮ ಸ್ವಭಾವವೇ ಆಗಿದೆ ಎಂಬುದು, ನನ್ನ ಹಿಂದಿನ ಜನ್ಮದಲ್ಲಿ ನಾನು ಕೇವಲ ದಾಸೀಪುತ್ರ ಬಾಲಕನಾಗಿ ಮೂಢನಾಗಿದ್ದಾಗ, ಯತಿಶ್ರೇಷ್ಠರಾದ ಸಜ್ಜನರ ಸಮಾಗಮದಿಂದ ನನಗೆ ಆದ ಮಹದುಪದೇಶಾದಿಗಳು ಸಾಕ್ಷೀಭೂತವಾಗಿದೆ ಎಂದು, ನನ್ನ ಪೂರ್ವಜನ್ಮ ಕಥೆಯನ್ನು ಸ್ವಲ್ಪ ಉದಾಹರಣೆಗಾಗಿ ಹೇಳಿಕೊಳ್ಳುತ್ತೇನೆ

## ನಾರದರ ಪೂರ್ವ ವೃತ್ತಾಂತ

ಹಿಂದೆ ನಾನು ದಾಸೀಪುತ್ರನಾಗಿದ್ದೆ. ನಾವಿದ್ದ ಸ್ಥಳಕ್ಕೆ ಮಹಾತ್ಮರಾದ ಯತಿಗಳು ಶರದೃತು ವರ್ಷಋತುಗಳಲ್ಲಿ ಬಂದು ಚಾತುರ್ಮಾಸ್ಯ ವ್ರತಾಚರಣೆಗಾಗಿ ನಿಂತರು. ಕೇವಲ

## अथ पञ्चमोऽध्यायः

ಬಾಲಕನಾದಾಗ್ಯೂ ಅವರ ತೇಜಸ್ಸಿನಿಂದ ಮೋಹಿತನಾದ ನಾನು ಆಟಪಾಠಾದಿಗಳನ್ನು ಬಿಟ್ಟು, ಸ್ನಾನಾದಿಗಳಿಂದ ಶುಚಿರ್ಭೂತನಾಗಿ, ಅವರು ಹೇಳುತ್ತಿದ್ದ ಭಗವದ್ಗುಣಾನುವರ್ಣನೆಗಳನ್ನು ನಿತ್ಯವೂ ಎಡೆಬಿಡದೇ ಕೇಳುತ್ತಿದ್ದೆನು. ಕೃಪಾಳುಗಳಾದ ಆ ಯತಿಗಳು ನನ್ನಲ್ಲಿ ಪ್ರೀತಿ ಇಟ್ಟು, ಭೋಜನಾನಂತರ ಅವರ ಎಂಜಲೆಲೆ ತೆಗೆಯುವುದಕ್ಕೂ, ಗೋಮಯಾದಿಗಳಿಂದ ಸ್ಥಳವನ್ನು ಸಾರಿಸಿ ಶುದ್ಧಿಮಾಡುವುದಕ್ಕೂ, ಅಪ್ಪಣೆಕೊಟ್ಟರು. ಈ ರೀತಿ ನಾನು ಅವರ ಸೇವೆ ಮಾಡುತ್ತಿರುವಾಗ, ನನಗೆ ಪರಮಾತ್ಮನ ಕಥೆ ಕೇಳುವುದಕ್ಕೆ ಅತ್ಯಂತ ಆಸಕ್ತಿಯೂ ಆತನಲ್ಲಿ ಭಕ್ತಿಯೂ ಉಂಟಾಯಿತು. ಚಾತುರ್ಮಾಸ್ಯಾನಂತರ ಆ ಯತಿಗಳು ಹೊರಟುಹೋಗುವ ಕಾಲದಲ್ಲಿ ನನ್ನನ್ನೂ ಸಮೀಪಕ್ಕೆ ಕರೆದು

**। ಓಂನಮೋ ಭಗವತೇ ತುಭ್ಯಂ ವಾಸುದೇವಾಯ ನಮಃ।**
**ಸಂಕರ್ಷಣಾಯಾನಿರುದ್ಧಾಯ ಪ್ರದ್ಯುಮ್ನಾಯ ನಮೋ ನಮಃ**

ಎಂಬ ಮಂತ್ರೋಪದೇಶ ಮಾಡಿ, ಆ ಮೂರ್ತಿಗಳ ಲಕ್ಷಣಗಳನ್ನು ವರ್ಣಿಸಿ, ಧ್ಯಾನಮಾಡೆಂದು ನನಗೆ ಹೇಳಿ ಹೊರಟುಹೋದರು.

ಆ ಮಹಾತ್ಮರ ಉಪದೇಶದಿಂದ ಶ್ರೀಪರಮಾತ್ಮನನ್ನು ಆ ನಾಲ್ಕುರೂಪಗಳಿಂದ ಧ್ಯಾನಿಸಿ ನೋಡಲು ನನಗೆ ಸಾಧ್ಯವಾಯಿತು. ಆದುದರಿಂದ ದಯಾಳುಗಳಾದ ಅವರಿಂದ ನನಗೆ, ಪರಮಾತ್ಮನ ಮಾಯೆಯಿಂದ ಮೋಹಿತವಾಗಿರುವ ಈ ಜಗತ್ತಿನ ಪ್ರವೃತ್ತಿಯು ತಿಳಿಯಿತು. ಪರಮಾತ್ಮನೇ ಜ್ಞಾನಪ್ರದ, ಭವಬಂಧವಿಮೋಚಕನೆಂದೂ ತಿಳಿಯಿತು. ಸರ್ವಕರ್ಮಗಳೂ ಪರಮಾತ್ಮನಿಂದ ಮಾಡಿಮಾಡಿಸಲ್ಪಡುತ್ತದೆಂದೂ, ಪರಮಾತ್ಮಪ್ರೇರಿತರಾಗಿ ನಾವು ಮಾಡಿದ ದುಷ್ಕರ್ಮಗಳೂ ಕೂಡ, ಶ್ರೀಹರಿಗೆ ಜ್ಞಾನಪೂರ್ವಕ ಸ್ವಾಮಿ, ಇವೆಲ್ಲಾ ನಿನ್ನ ಪ್ರಸಾದ, ನಿನ್ನಿಂದ ದತ್ತವಾದವು, ನಿನಗೇ ಸಮರ್ಪಣೆ ಎಂದು ಅರ್ಪಿಸಿದ್ದೇ ಆದರೆ, ಆ ದುಷ್ಕರ್ಮದಲ್ಲಿರುವ ದುಷ್ಟತನವು ನಾಶಮಾಡಲ್ಪಟ್ಟು, ಅವು ಸುಖಪ್ರದಗಳಾದ ಜ್ಞಾನಕರ್ಮಗಳಾಗಿ ಪರಿವರ್ತಿಸುವುದೂ ನನಗೆ ಗೊತ್ತಾಯಿತು. ಜೀವರಿಗೆ ಭಗವದನರ್ಪಿತ ಕರ್ಮಗಳು ಬಂಧಕವಾಗುತ್ತವೆ. ಭಗವದರ್ಪಿತಗಳಾದರೆ ತಾವೇ ನಾಶವಾಗಿ ಜೀವನನ್ನು ಬಂಧಿಸುವುದಿಲ್ಲ. ಆದ್ದರಿಂದ ಸರ್ವರೂ ಪರಮಾತ್ಮನಿಗೆ ಪ್ರೀತಿ ಆಗತಕ್ಕ ಕರ್ಮಗಳನ್ನು ಆಚರಿಸಬೇಕು. ಆ ಕರ್ಮಗಳು ಪರಮಾತ್ಮಾಧೀನಗಳೆಂದು ತಿಳಿದು ನಿರಂತರ ಭಕ್ತಿಯೋಗದಿಂದ ಆಚರಿಸಲ್ಪಡಬೇಕು.

ಈ ರೀತಿ ಆಚರಿಸುವ ಕರ್ಮಗಳು ಜ್ಞಾನಯಜ್ಞಗಳಾಗಿ ಪರಿಣಮಿಸಿ, ಶ್ರೀ ಪರಮಾತ್ಮನ ಸಾಕ್ಷಾದ್ದರ್ಶನವನ್ನೂ ಪ್ರಾಪಿಸಿಕೊಡುವವು. ಇವೇ ಮೊದಲಾದ ಜ್ಞಾನಗಳೂ ನನಗೆ ಉತ್ಪನ್ನವಾದವು. ಆದುದರಿಂದ, ಕೇವಲ ನರಕಾದಿಗಳಿಗೇ ಹೋಗುವ ದುಷ್ಕರ್ಮನಿರತರಾದ ಅಜ್ಞಾನಿಗಳನ್ನು, ಜ್ಞಾನಿಗಳನ್ನಾಗಿ ಮಾಡಿ ಉದ್ಧರಿಸುವ ಶ್ರೀಹರಿ ಮಹಿಮಾರೂಪಶಾಸ್ತ್ರವನ್ನು ಮಾಡಲಿಲ್ಲವಲ್ಲಾ ಎಂದು ತಾವು ವ್ಯಾಕುಲರಾಗಿರುವಂತೆ ನನಗೆ ತೋರುತ್ತೆ. ಆದ್ದರಿಂದ ಅದಕ್ಕೆ ಏನು ಮಾಡಬೇಕೋ ಸರ್ವಜ್ಞರಾದ ತಾವು ಯೋಚಿಸಿ ಮಾಡೋಣಾಗಲಿ ಎಂದರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಐದನೆಯ ಅಧ್ಯಾಯವು ಮುಗಿಯಿತು.**

## अथ षष्ठोऽध्यायः

**सूत उवाच**

एवं निशम्य भगवान् देवर्षेर्जन्म कर्म च।
भूयः पप्रच्छ तं ब्रह्मन् व्यासः सत्यवतीसुतः ॥ १ ॥

**व्यास उवाच**

भिक्षुभिर्विप्रवसिते विज्ञानादेष्टृभिस्तव।
वर्तमानो वयस्याद्ये ततः किमकरोद्भवान् ॥ २ ॥

स्वायम्भुव कया वृत्या वर्तितं ते परं वयः।
कथं वेदमुदस्राक्षीः काले प्राप्ते कलेवरम् ॥ ३ ॥

प्राक्कल्पविषयामेतां स्मृतिं ते सुरसत्तम।
नह्येव व्यवधात्काल एष सर्वनिराकृतिः ॥ ४ ॥

**नारद उवाच**

भिक्षुभिर्विप्रवसिते विज्ञानादेष्टृभिर्मम।
वर्तमानो वयस्याद्ये तत एतदकारेषाम् ॥ ५ ॥

एकात्मजा मे जननी योषिन्मूढा च किङ्करी।
मय्यात्मजेऽनन्यगतौ चक्रे स्नेहानुबन्धनम् ॥ ६ ॥

## अथ षष्ठोऽध्यायः

साऽस्वतन्त्रा न कल्पाऽसीद्योगक्षेमं ममेच्छती।
ईशस्य हि वशे लोको योषा दारुमयी यथा॥ ७ ॥

अहं च तद्ब्रह्मकुल ऊषिवांस्तदपेक्षया।
दिग्देशकालव्युत्पन्नो बालकः पञ्चहायनः ॥ ८ ॥

एकदा निर्गतां गेहाद्दुहन्तीं निशि गां पथि।
सर्पोऽदशत्पदा स्पृष्टः कृपणां कालचोदितः ॥ ९ ॥

तदा तदहमीशस्य भक्तानां समभीप्सितम्।
अनुग्रहं मन्यमानः प्रातिष्ठं दिशमुत्तराम्॥ १० ॥

स्फीतान् जनपदांस्तत्र पुरग्रामव्रजाकरान्।
खेटान् पाट्टनवाटीश्च वनान्युपवनानि च॥ ११ ॥

विचित्रधातुचित्राद्रीनिभभग्नभुजद्रुमान्।
जलाशयांश्छिवजलान्नलिनीः सुरसेविताः ॥ १२ ॥

चित्रस्वनैः पत्ररथैर्विभ्रमद्भ्रमरश्रियः।
नलवेणुशरस्तम्बकुशकीचकगह्वरम्॥ १३ ॥

एक एवातियातोऽहमद्राक्षं विपिनं महत्।
घोरं प्रतिभयाकारं व्यालोलूकशिवाजिरम्॥ १४ ॥

परिश्रान्तेन्द्रियात्माऽहं तृरीतो बुभुक्षितः।
स्नात्वा पीत्वा ह्रदे नद्या उपस्पृष्टो गतश्रमः ॥ १५ ॥

तस्मिन्निर्मनुजेऽरण्ये पिप्पलोपस्थ आश्रितः।
आत्मनाऽऽत्मानमात्मस्थं यथाश्रुतमचिन्तयम्॥ १६ ॥

स्वप्नो मायाऽग्रहः शय्या जाग्रदाभास आत्मनः।
नामरूपक्रियावृत्तिः संविच्छास्त्रं परं पदम्॥ १७ ॥

नेन्द्रियार्थं च न स्वप्नं न सुप्तं न मनोरथम्।
न निरोधं चानुगच्छेच्चित्रं तद्भगवत्पदम्॥ १८ ॥

## अथ षष्ठोऽध्यायः

स एको भगवानग्रे क्रीडिष्यन्निदमात्मनः ।
सृष्ट्वा विहृत्य तज्जग्ध्वा उदास्ते केवलः पुनः ॥ १९ ॥

ध्यायतश्चरणाम्भोजं भावनिर्वृतचेतसः ।
उत्कण्ठाश्रुकलाक्षस्य हृद्यासीन्मे शनैर्हरिः ॥ २० ॥

प्रेमातिभारनिर्भिण्णपुलकाङ्गोऽतिनिर्वृतः ।
आनन्दसंप्लवे लीनो नापश्यमुभयं मुने ॥ २१ ॥

रूपं भगवतो यत्तन्मनः कान्तं सुखावहम् ।
अपश्यन्सहसोत्तस्थौ कैवल्याद्दुर्मना इव ॥ २२ ॥

दिदृक्षुस्तदहं भूयः प्रणिधाय मनो हृदि ।
वीक्षमाणोऽपि नापश्यमवितृप्त इवातुरः ॥ २३ ॥

एवं यतन्तं विजने मामाहागोचरो गिराम् ।
गम्भीरश्लक्ष्णया वाचा शुचः प्रशमयन्निव ॥ २४ ॥

हन्तास्मिन् जन्मनि भवान्न मां द्रष्टुमिहार्हति ।
अविपक्वकषायाणां दुर्दर्शोऽहं कुयोगिनाम् ॥ २५ ॥

सकृद्यद्दर्शितं रूपमेतत्कामाय तेऽनघ ।
मत्कामः शनकैः साधु सर्वान्मुञ्चति हृच्छ्रयान् ॥ २६ ॥

सत्सेवया दीर्घया वै जाता मयि दृढा मतिः ।
हित्वाऽवद्यमिमं लोकं गन्ता मज्जनतामसि ॥ २७ ॥

मतिर्मयि निबद्धेऽयं न विपद्येत कर्हिचित् ।
प्रजासर्गनिरोधेऽपि स्मृतिश्च मदनुग्रहात् ॥ २८ ॥

एतावदुक्त्वा विरराम तन्महद्भूतं नभोलिङ्गमलिङ्गमीश्वरम् ।
अहं च तस्मै महतां महीयसे
शीर्ष्णाऽवनामं विदधेऽनुकम्पितः ॥ २९ ॥

नामान्यनन्तस्य गतत्रपः पठन् गुह्यानि भद्राणि कृतानि च स्मरन् ।

## अथ षष्ठोऽध्यायः

गां पर्यटंस्तुष्टमना गतस्पृहः  कालं प्रतीक्षन्नपटो विमत्सरः ॥ ३० ॥

एवं कृष्णमतेर्ब्रह्मन्नसक्तस्यामलात्मनः।
कालः प्रादुरभूत्काले विद्युत्सौदामिनी यथा॥ ३१ ॥

एवं मयि प्रयुञ्जाने शुद्धां भागवतीं तनुम्।
प्रारब्धकर्मनिर्वाणो न्यपतत्पाञ्चभौतिकः ॥ ३२ ॥

कल्पान्त इदमादय शयानेऽम्भस्युदन्वतः।
शिशयिष्णोरनुप्राणं विवेशान्तरहं विभोः ॥ ३३ ॥

सहस्रयुगपर्यन्त उत्थायेदं सिसृक्षतः।
मरीचिमिश्रा ऋषयः प्राणोभ्योऽहं च जज्ञिरे॥ ३४ ॥

अन्तर्बहिश्च लोकान् त्रीन् पर्येम्यस्कन्दितव्रतः।
अनुग्रहान्महाविष्णोरविघातगतिः क्वचित्॥ ३५ ॥

देवदत्तामिमां वीणां स्वरब्रह्मविभूषिताम्।
मूर्च्छयित्वा हरिकथां गायमानश्चराम्यहम्॥ ३६ ॥

प्रगायतः स्वीर्याणि तीर्थपादः प्रियश्रवाः।
आहूत इव मे शीघ्रं दर्शनं याति चेतसि॥ ३७ ॥

एतदातुरचित्तानां मात्रास्पर्शेच्छया मुहुः।
भवसिन्धुप्लवो दृष्टो हरिचर्यानुवर्णनम्॥ ३८ ॥

यमादिभिर्योगपथैः कामलोभहतो मुहुः।
मुकुन्दसेवया यद्वत्तथात्माऽद्धा न शाम्यति॥ ३९ ॥

सर्वं तदिदमाख्यातं यत्पृष्टोऽहं त्वयानघ।
जन्मकर्मरहस्यं मे भवतश्चात्मतोषणम्॥ ४० ॥

**सूत उवाच**

एवं सम्भाष्य भगवान्नारदो वासवीसुतम्।
आमन्त्र्य वीणां रणयन् ययौ यादृच्छिको यतिः ॥ ४१ ॥

**अथ षष्टोऽध्यायः**

अहो देवर्षिर्धन्योऽयं यः कीर्तिं शार्ङ्गधन्वनः ।
गायन् माध्व्या गिरा तन्त्र्या रमयत्यातुरं जगत् ॥ ४२ ॥

## ॥ इति श्रीमद्भागवते प्रथमकन्धे षष्टोऽध्यायः ॥

### ॥ಆರನೆಯ ಅಧ್ಯಾಯ ॥

## ನಾರದರ ಪೂರ್ವ ವೃತ್ತಾಂತದ ಮುಂದುವರಿಕೆ

ಸತ್ಯವತೀ ಸುತರಾದ ವೇದವ್ಯಾಸರು ನಾರದರು ಹೇಳಿದ್ದನ್ನು ಕೇಳಿ ಪುನಃ ನಾರದರನ್ನು ಕುರಿತು ಈ ರೀತಿ ಪ್ರಶ್ನೆ ಮಾಡಿದರು. ವ್ಯಾಸರು ಸರ್ವಜ್ಞರಾದ ಕಾರಣ ನಾರದರ ಪೂರ್ವಾಪರ ವಿಚಾರಗಳನ್ನು ಸಂಪೂರ್ಣವಾಗಿ ತಿಳಿದವರಾದರೂ, ಲೋಕದಲ್ಲಿ ನಾರದರ ಕೀರ್ತಿಯನ್ನು ಹೆಚ್ಚಿಸುವುದಕ್ಕಾಗಿ, ಎಲೈ! ನಾರದನೇ! ಭಿಕ್ಷುಕರು ಉಪದೇಶಿಸಿ ಹೊರಟುಹೋದ ನಂತರ ನೀನು ಏನೇನು ಮಾಡಿದೆ? ನೀನು ನಿನ್ನ ಪೂರ್ವಜನ್ಮದ ಕಥೆಯನ್ನು, ಹಿಂದಿನ ಬ್ರಹ್ಮಕಲ್ಪದಲ್ಲಿ ನಡೆದಿದ್ದೆಂದು ಹೇಳುತ್ತೀಯೆ. ನೀನು ಈ ಬ್ರಹ್ಮಕಲ್ಪದಲ್ಲಿರುತ್ತೀಯೆ. ಹೀಗೆ ಅನೇಕ ಸಹಸ್ರಚತುರ್ಯುಗಗಳು ಕಳೆದು ಹೋಗಿದ್ದರೂ, ಬಹುಕಾಲದ ಹಿಂದಿನ ಸ್ಮೃತಿಯು, ಜ್ಞಾಪಕವು ನಿನಗೆ ಹೇಗೆ ಉಂಟಾಯಿತು? ಎಂಬುದನ್ನು ಹೇಳು, ನನಗೆ ಕೇಳಲಪೇಕ್ಷೆಯಾಗಿದೆ ಎಂದರು.

ಆದಕ್ಕೆ ನಾರದರು, ಎಲೈ!ವ್ಯಾಸರೆ! ಜ್ಞಾನೋಪದೇಶ ಮಾಡಿ ಆ ಯತಿಗಳು ಹೊರಟುಹೋದ ನಂತರ ನಾನು ಮಾಡಿದ್ದನ್ನು ನಿರೂಪಿಸುತ್ತೇನೆ - ನಮ್ಮ ತಾಯಿಗೆ ನಾನೊಬ್ಬನೇ ಮಗ. ಆದುದರಿಂದ ನಮ್ಮ ತಾಯಿಯು ನನ್ನಲ್ಲಿ ಪ್ರೀತಿಯಳ್ಳವಳಾಗಿದ್ದಳು. ಜೀವನಕ್ಕಾಗಿ ಒಬ್ಬ ಬ್ರಾಹ್ಮಣರ ಮನೆಯಲ್ಲಿ ಸೇವಾವೃತ್ತಿ ಮಾಡಿಕೊಂಡಿದ್ದಳು. ಅವಳ ಇಚ್ಛೆಯಂತೆ ಕೆಲವು ಕಾಲ ನಾನೂ ಅವಳೊಡನೆ ಆ ಬ್ರಾಹ್ಮಣರ ಮನೆಯಲ್ಲಿ ಸೇವೆಮಾಡಿಕೊಂಡು ಇದ್ದೆನು. ಹೀಗಿರುವಾಗ ದೈವವಶಾತ್ ಒಂದು ರಾತ್ರಿ ಕತ್ತಲೆಯಲ್ಲಿ ನಮ್ಮ ತಾಯಿಯು ಎಲ್ಲಿಗೋ ಹೋಗಿ ಬರುತ್ತಿದ್ದಾಗ ದಾರಿಯಲ್ಲಿದ್ದ ಒಂದು ಸರ್ಪವು ಕಚ್ಚಿ ಆದರಿಂದ ಆಕೆಯು ಮೃತಳಾದಳು. ಬೆಳಿಗ್ಗೆ ಇದು ನನಗೆ ಗೊತ್ತಾಯಿತು. ನಂತರ ನಾನು ದೇವರದಯೆಯಿಂದಲೇ ಈ ರೀತಿಯಾಗಿ, ಭಕ್ತನಾದ ನನ್ನನ್ನು ಇಷ್ಟಬಂಧು ಸ್ನೇಹಪಾಶದಿಂದ ಬಿಡಿಸಲ್ಪಟ್ಟವನನ್ನಾಗಿ ತಿಳಿದೆನು.

ನಂತರ ಏಕಾಂಗಿಯಾಗಿ ನಾನು ಇನ್ನೂ ಐದು ವರ್ಷದ ಬಾಲಕನಾದ್ದರಿಂದ, ದಿಕ್ಕುಗಳ

ಜ್ಞಾನವೂ ನನಗೆ ಇರಲಿಲ್ಲವಾದ್ದರಿಂದ, ಅಕಸ್ಮಾತ್ ಉತ್ತರಾಭಿಮುಖನಾಗಿ ಕಾಡಿಗೆ ಹೊರಟೆ. ಬಹುದೂರ ನಡೆದು ದಾರಿಯಲ್ಲಿ ಅನೇಕ ವನ, ಉಪವನ, ಪಟ್ಟಣ, ಕೋಟೆಗಳನ್ನು ನೋಡುತ್ತಾ, ಕ್ರೂರಮೃಗಗಳಿಂದಲೂ, ಮಹಾವೃಕ್ಷಗಳಿಂದಲೂ ಕೂಡಿದ ನಿರ್ಜನ ಕಾಡೊಂದನ್ನು ಸೇರಿದೆನು. ಆಗ ಮಧ್ಯಾಹ್ನವಾಗಿತ್ತು. ನನಗೆ ಬಹಳ ಹಸಿವೂ ಬಾಯಾರಿಕೆಯೂ ಆಗಿತ್ತು. ಆಗ ಆ ಕಾಡಿನಲ್ಲಿ ಒಂದು ಸರೋವರವು ಕಾಣಿಸಿತು. ನಾನು ಆ ಸರೋವರಕ್ಕೆ ಹೋಗಿ ಸ್ನಾನಮಾಡಿ, ಜಲಪಾನಮಾಡಿದೆನು. ನಂತರ ನನ್ನ ಶ್ರಮವು ಸ್ವಲ್ಪ ಕಡಿಮೆಯಾಯಿತು. ಆಯಾಸದಿಂದ ನಾನು ಅಲ್ಲಿ ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ಕುಳಿತುಕೊಂಡು, ಮೆಲ್ಲನೆ ಆ ಯತಿಗಳು ನನಗೆ ತಿಳಿಸಿಕೊಟ್ಟಿದ್ದ ಶ್ರೀವಾಸುದೇವಾದಿ ನಾಲ್ಕು ಭಗವದ್ರೂಪಗಳ ಧ್ಯಾನಕ್ಕೆ ಉಪಕ್ರಮಿಸಿದೆನು. ಹೀಗೇ ಧ್ಯಾನಿಸುತ್ತಿರುವಾಗ, ನನ್ನ ಹೃತ್‌ಕಮಲದಲ್ಲಿ ಒಂದು ಪ್ರಕಾಶವು ಕಾಣಿಸಿತು. ನಂತರ ಆ ಪ್ರಕಾಶದಲ್ಲಿ ಶ್ರೀಪರಮಾತ್ಮನ ಶಂಖಚಕ್ರಾದ್ಯಾಯುಧಗಳಿಂದಲೂ, ಸರ್ವಾಭರಣಗಳಿಂದಲೂ ಅಲಂಕೃತವಾದ ಪರಮಸುಂದರರೂಪ ಒಂದು ನನ್ನ ದೃಷ್ಟಿಗೆ ಗೋಚರವಾಗಿ, ತಕ್ಷಣ ಅದೃಶ್ಯವಾಯಿತು. ಆ ದರ್ಶನದಿಂದ ನನಗೆ ಆದ ಆನಂದವನ್ನು ವರ್ಣಿಸಲಾರೆ.

ಹೀಗೆ ಮರೆಯಾದ ರೂಪವನ್ನು ಮತ್ತೊಮ್ಮೆ ನೋಡಬೇಕೆಂದು ಆಸೆಯಾಯಿತು. ಆದರೆ ಎಷ್ಟು ಪ್ರಯತ್ನಿಸಿದರೂ, ಧ್ಯಾನಿಸಿದರೂ ಪುನಃ ಕಾಣಲಿಲ್ಲ. ಆಗ ನನಗೆ ಬಹು ದುಃಖವಾಯಿತು. ಏನು ಮಾಡಲಿ? ಎಂದು ನಾನು ವ್ಯಸನಪಡುತ್ತಾ ಯೋಚಿಸುತ್ತಿರುವಾಗ, ಆಕಾಶದಲ್ಲಿ ಒಂದು ಗಂಭೀರವಾದ ಧ್ವನಿಯು ಹುಟ್ಟಿ, ಎಲೈ! ಬಾಲಕನೇ ನನ್ನನುಗ್ರಹದಿಂದ ನನ್ನರೂಪವು ನಿನಗೆ ಒಂದು ಸಲ ತೋರಿಸಲ್ಪಟ್ಟಿತು. ಯೋಗಾದಿ ಸಿದ್ಧಿಯನ್ನು ಪಡೆಯದವರಿಗೆ ನನ್ನ ಈ ರೂಪದರ್ಶನವು ಸಾಧ್ಯವಿಲ್ಲ. ನಿನಗೆ ಈ ಜನ್ಮದಲ್ಲಿ ಪುನಃ ನನ್ನನ್ನು ನೋಡಲು ಸಾಧ್ಯವಿಲ್ಲ. ಆದರೂ ಈ ರೂಪವನ್ನು ನೀನು ಧ್ಯಾನಮಾಡಲೆಂದು ನಿನಗೆ ತೋರಿಸಿದೆನು. ಅದು ನಿನಗೆ ಮುಂದೆ ಶ್ರೇಯಸ್ಸಿಗಾಗಿ ಆಗುತ್ತೆ - ಎಂದು ಹೇಳಿತು. ನಂತರ ನಾನು ದೇಹಾವಸಾನಕಾಲವನ್ನು ನಿರೀಕ್ಷಿಸುತ್ತಾ, ಧ್ಯಾನಪರನಾಗಿ ಸಂಚರಿಸುತ್ತಾ ಇದ್ದೆನು. ಒಂದು ದಿನ ಅಂತ್ಯಕಾಲವು ಸಮೀಪಿಸಿತು. ಆಗ ನನ್ನ ಶರೀರದಲ್ಲಿ ಒಂದು ಬೆಳಕು ಕಾಣಿಸಿತು. ಆ ಬೆಳಕನ್ನು ನಾನು ಪ್ರವೇಶಿಸಿದೆನು. ಆ ಪ್ರಾಕೃತಶರೀರವು ಬಿದ್ದುಹೋಯಿತು. ಬೆಳಕಿನಿಂದ ಸಹಿತನಾದ ನಾನು, ಏಕಾರ್ಣವದಲ್ಲಿ ಆಲದೆಲೆಯ ಮೇಲೆ ಮಲಗಿದ್ದ ಪುರುಷನ ದೇಹದೊಳಗೆ ನೇರವಾಗಿ ಪ್ರವೇಶಿಸಿ, ಅಲ್ಲಿ ಒಂದು ದಿವ್ಯ ಸಹಸ್ರವರ್ಷಕಾಲ ಇದ್ದೆನು. ನಂತರ ಸಮುದ್ರಶಾಯಿಯು ಸೃಷ್ಟಿಮಾಡಲಪೇಕ್ಷಿಸಿ, ಬ್ರಹ್ಮದೇವರನ್ನು ಸೃಷ್ಟಿಸಿದನು.

ಆ ಬ್ರಹ್ಮದೇವರ ಸೃಷ್ಟಿಯಲ್ಲಿ, ಮರೀಚ್ಯಾದಿ ಇತರ ಋಷಿಗಳೊಡನೆ ನಾನೂ ನಾರದನೆಂಬ ಹೆಸರಿನಿಂದ ಸೃಷ್ಟಿಸಲ್ಪಟ್ಟೆನು. ದೇವತೆಗಳು ಈ ವೀಣೆಯನ್ನು ನನಗೆ ಕೊಟ್ಟರು. ಬ್ರಹ್ಮದೇವರ ಮತ್ತು ಶ್ರೀಮನ್ನಾರಾಯಣನ ಮಹಾಪ್ರಸಾದಗಳಿಂದ, ನಾನು ಮೂರುಲೋಕದಲ್ಲಿಯೂ ತಡೆ ಇಲ್ಲದೆ, ಶ್ರೀಪರಮಾತ್ಮನ ಗುಣಗಾನ ಮಾಡುತ್ತಾ ಸಂಚರಿಸುತ್ತಿರುತ್ತೇನೆ. ನಾನು ವೀಣೆಯನ್ನು ಶೃತಿಮಾಡಿ ಗಾನಮಾಡಲುಪಕ್ರಮಿಸಿದರೆ, ಹೇಳಿಕೊಂಡು ಕರೆದರೆ ಹೇಗೋ ಹಾಗೆ, ಕರುಣಾಸಮುದ್ರನಾದ ಶ್ರೀಹರಿಯು ನನ್ನ ಹೃತ್ಕಮಲದಲ್ಲಿ ಪ್ರತ್ಯಕ್ಷನಾಗುವನು. ಆ ದರ್ಶನದಿಂದ ಉಂಟಾದ ಅಪಾರಸುಖದಿಂದ ಮತ್ತನಾಗಿ ನಾನು, ಕುಣಿಕುಣಿದು, ಭಗವದ್ಗುಣವರ್ಣನಾರೂಪ ಗಾನಮಾಡುತ್ತಿರುತ್ತೇನೆ - ಆ ಪರಮಾತ್ಮನ ಪ್ರಸಾದದಿಂದಲೇ ನನಗೆ ಹಿಂದಿನಕಲ್ಪದ ಸ್ಮೃತಿಯೂ ಚೆನ್ನಾಗಿರುತ್ತದೆ - ಜಪತಪ, ವೇದಾಧ್ಯಯನಾದಿ ನಾನಾ ಪ್ರಯತ್ನಗಳಿಂದಲೂ, ದೇವರು ಗುಣಗಾನದಿಂದ ಒಲಿಯುವಂತೆ ಪ್ರಸನ್ನನಾಗಲಾರನು.

ಆದುದರಿಂದ ಶ್ರೀಪರಮಾತ್ಮನ ಶ್ರೇಯಸ್ಸನ್ನು, ವಿಮಲ ಚರಿತ್ರೆಯನ್ನು, ಸರ್ವರೂ ಶ್ರವಣ, ಕೀರ್ತನಾದಿಗಳಿಂದ ಗಾನಮಾಡತಕ್ಕದ್ದು. ನೀವು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹೇಳಿದ್ದೇನೆ -ಎಂದು ಹೇಳಿ ನಾರದರು ವೀಣೆಯನ್ನು ಮೀಟುತ್ತಾ ಮೇಲಕ್ಕೆ ಎದ್ದು, ಪರಮಾತ್ಮನ ಗುಣಗಾನ ಮಾಡುತ್ತಾ ತಮಗೆ ಇಷ್ಟ ಬಂದಂತೆ ಹೊರಟುಹೋದರು. ಈ ರೀತಿ ಹೊರಟುಹೋದ ನಾರದರನ್ನು ವ್ಯಾಸರು ನೋಡಿ, ಆಹಾ! ನಾರದರು ಏನು ಧನ್ಯರು? ನಿರ್ವ್ಯಾಜ ಪ್ರೇಮದಿಂದ ನಿರಂತರ ಸರ್ವದೇಶಗಳಲ್ಲಿ, ಶ್ರೀಪರಮಾತ್ಮನನ್ನು ನಲಿದುಕೊಂಡಾಡುವರು. ಇವರ ಭಾಗ್ಯವೇ ಭಾಗ್ಯ ಎಂದರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಆರನೆಯ ಅಧ್ಯಾಯವು ಮುಗಿಯಿತು**

## अथ सप्तमोऽध्यायः

**शौनक उवाच**

निर्गते नारदे सूत भगवान्बादरायणः ।
श्रुतवांस्तदभिप्रेतं ततः किमकरोद्विभुः ॥ १ ॥

**सूत उवाच**

ब्रह्मनद्याः सरस्वत्याः आश्रमः पश्चिमे तटे ।

## अथ सप्तमोऽध्यायः

शम्याप्रास इति प्रोक्तः ऋषीणां सत्रवर्धनः ॥ २ ॥

तस्मिन् ऋष्याश्रमे व्यासो बदरीषण्डमण्डिते।
आसीनोऽप उपस्पृश्य प्रणिदध्यौ मनश्चिरम्॥ ३ ॥

भक्तियोगेन मनसि सम्यक् प्रणिहितेऽमले।
अपश्यत् पुरुषं पूर्णं मायां च तदपाश्रयाम्॥ ४ ॥

यया संमोहितो जीवः आत्मानं त्रिगुणात्मकम्।
परोऽपि मनुतेऽनर्थं तत्कृतश्चाभिपद्यते॥ ५ ॥

अनर्थोपशमं साक्षाद्भक्तियोगमधोक्षजे।
लोकस्याजानतो विद्वांश्चक्रे सात्वतसंहिताम्॥ ६ ॥

यस्यां वै श्रूयमाणायां कृष्णे परमपूरुषे।
भक्तिरुत्पद्यते पुंसां शोकमोहभयापहा॥ ७ ॥

स संहितां भागवतीं कृत्वानुक्रम्य चात्मजम्।
शुकमध्यापयामास निवृत्तिनिरतं मुनिम्॥ ८ ॥

**शौनक उवाच**

स वै निवृत्तिनिरतः सर्वत्रोपेक्षको मुनिः।
कस्य वा बृहतीमेतामात्मारामः समभ्यसत्॥ ९ ॥

आत्मारामाश्च मुनयो निर्ग्रान्था अप्युरुक्रमे।
कुर्वन्त्यहैतुकीं भक्तिं इत्थंभूतगुणो हरिः ॥ १० ॥

हरेर्गुणाक्षिप्तमतिर्भगवान् बादरायणिः।
अध्यगान्महदाख्यानं नित्यं विष्णुजनप्रियम्॥ ११ ॥

परीक्षितोऽथ राजर्षेः जन्मकर्मविलापनम्।
संस्थां च पाण्डुपुत्राणां वक्ष्ये कृष्णकथोदयाम्॥ १२ ॥

यदा मृधे कौरवपाण्डवानां वीरेष्वथो वीरगतिं गतेषु।
वृकोदरोविद्धगदाभिमर्शभग्नोरुदण्डे धृतराष्ट्रपुत्रे॥ १३ ॥

भर्तुः प्रियं द्रौणिरिति स्म पश्यन् कृष्णासुतानां स्वपतां शिरांसि।
अपाहरद्विप्रियमेतदस्य जुगुप्सितं कर्म विगर्हयन्ति॥ १४ ॥

माता शिशूनां निधनं सुतानां निशम्य घोरं परितप्यमाना।
तदारुदद्वाष्पकलाकुलाक्षी तां सान्त्वयन्नाह किरीटमाली॥ १५ ॥

तन्मा शुचस्ते प्रमृजाशु भद्रे यद्ब्रह्मबन्धोः शिर आततायिनः।
गाण्डीवमुक्तैर्विशिखैरुपाहरे त्वाक्रम्य यत्स्नास्यसि नेत्रजैर्जलैः ॥ १६ ॥

इति प्रियां वल्गुविचित्रजल्पैः स सान्त्वयित्वाऽच्युतमित्रसूतः।
अभ्यद्रवद्दंशित उग्रधन्वा कपिध्वजो गुरुपुत्रं रथेन॥ १७ ॥

तमापतन्तं स विलोक्य दूरात्कुमारहोद्विग्नमना रथेन।
पराद्रवत्प्राणपरीप्सुरुर्व्यां यावद्गमं रुद्रभयाद्यथाकिः ॥ १८ ॥

यदाऽशरणमात्मनमैक्षत श्रान्तवाहनम्।
अस्त्रं ब्रह्मशिरो मेन आत्मत्राणं द्विजात्मजः ॥ १९ ॥

अथोपस्पृश्य सलिलं सन्दधेऽस्त्रं समाहितः।
अजानन्नपि संहारं प्राणकृच्छ्र उपस्थिते॥ २० ॥

ततः प्रादुष्कृतं तेजः प्रचण्डं सर्वतो दिशम्।
प्रापतत्तदभिप्रेक्ष्य विष्णुं जिष्णुरुवाच ह॥ २१ ॥

### अर्जुन उवाच

कृष्ण कृष्ण महाभाग भक्तानामभयङ्कर।
त्वमेको दह्यमानानामपवर्गोऽसि संसृतेः ॥ २२ ॥

त्वमाद्यः पुरुषः साक्षादीश्वरः प्रकृतेः परः।
मायां व्युदस्य चिच्छक्त्या कैवल्ये स्थित आत्मनि॥ २३ ॥

स एव जीवलोकस्य मायामोहितचेतसः।
विधत्सेः स्वेन वीर्येण श्रेयो धर्मादिलक्षणम्॥ २४ ॥

तथाऽयं चावतारस्ते भुवो भारजिहीर्षया।
स्वानामानन्यभावानामनुध्यानाय चासकृत्॥ २५ ॥

## अथ सप्तमोऽध्यायः

किमिदं स्वित्कुतो वेति देव देव न वेद्म्यम्।
सर्वतोमुखमायाति तेजः परमदारुणम्॥ २६ ॥

**श्रीभगवानुवाच**

वेत्थेदं द्रोणपुत्रस्य ब्राह्ममस्त्रं प्रदर्शितम्।
नैवासौ वेद संहारं प्राणबाध उपास्थिते॥ २७ ॥

न ह्यस्यान्यतमं किञ्चिदस्त्रं प्रत्यवकर्षणम्।
जह्यस्त्रतेज उन्नद्धमस्त्रज्ञो ह्यस्त्रतेजसा॥ २८ ॥

**सूत उवाच**

श्रुत्वा भगवता प्रोक्तं फल्गुनः परवीरहा।
स्पृष्ट्वाऽपस्तं परिक्रम्य ब्राह्मं ब्राह्माय सन्दधे॥ २९ ॥

संहत्यान्योन्यमुभयोस्तेजसी शरसंवृते।
आवृत्य रोदसी खं च ववृधातेऽकवह्निवत्॥ ३० ॥

दृष्ट्वाऽस्त्रतेजस्तु तयोस्त्रींल्लोकान्प्रदहन्महत्।
दह्यमानाः प्रजास्सर्वाः सांवर्तकममंसत॥ ३१ ॥

प्रजोपप्लवमालक्ष्य लोकव्यतिकरं च तम्।
मतं च वासुदेवस्य संजहारार्जुनो द्वयम्॥ ३२ ॥

तत आसाद्य तरसा दारुणं गौतमीसुतम्।
बबन्धामर्षताम्राक्षः पशुं रशनया यथा॥ ३३ ॥

शिबिराय निनीषन्तं रज्वा बध्वा रिपुं बलात्।
प्राहार्जुनं प्रकुपितो भगवानम्बुजेक्षणः ॥ ३४ ॥

मैनं पार्थार्हसि त्रातुं ब्रह्मबन्धुमिमं जहि।
योऽसावनागसः सुप्तानवधीन्निशि बालकान्॥ ३५ ॥

मत्तं प्रमत्तमुन्मत्तं सुप्तं बालं स्त्रियं जडम्।
प्रपन्नं विरथं भीतं न रिपुं हन्ति धर्मवित्॥ ३६ ॥

स्वप्राणान् यः परप्राणैः प्रपुष्णात्यघृणः खलः।

## अथ सप्तमोऽध्यायः

तद्वधस्तस्य हि श्रेयः यद्दोषाद्यात्यधः पुमान् ॥ ३७ ॥

प्रतिश्रुतं च भवता पाञ्चाल्यै शृण्वतो मम ।
आहरिष्ये शिरस्तस्य यस्ते मानिनि पुत्रहा ॥ ३८ ॥

तदसौ वध्यतां पाप आततायात्मबन्धुहा ।
भर्तुश्च विप्रियं वीर कृतवान्कुलपांसनः ॥ ३९ ॥

एवं परीक्षता धर्मं पार्थः कृष्णेन चोदितः ।
नैच्छद्धन्तुं गुरुसुतं यद्यप्यात्महनं महान् ॥ ४० ॥

अथोपेत्य स्वशिबिरं गोविन्दप्रियसारथिः ।
न्यवेदयत्तं प्रियायै शोचन्त्या आत्मजान् हतान् ॥ ४१ ॥

तथाऽऽहृतं पशुवत्पाशबद्धं अवामुखं कर्मजुगुप्सितेन ।
निरीक्ष्य कृष्णाऽपकृतं गुरोः सुतं वामस्वभावा कृपया ननाम ॥ ४२ ॥

उवा च चासहन्त्यस्य बन्धनानयनं सती ।
मुच्यतां मुच्यतामेष ब्राह्मणो नितरां गुरुः ॥ ४३ ॥

सरहस्यो धनुर्वेदः सविसर्गोपसंयमः ।
अस्त्रग्रामश्च भवता शिक्षितो यदनुग्रहात् ॥ ४४ ॥

स एष भगवान् द्रोणः प्रजारूपेण वर्तते ।
तस्यात्मनोऽर्धं पत्न्यास्ते नान्वगाद्वीरसूः कृपी ॥ ४५ ॥

तद्धर्मज्ञ महाभाग भवद्भिः कौरवं कुलम् ।
वृजिनं नार्हति प्राप्तुं पूज्यं वन्द्यमभीक्ष्णशः ॥ ४६ ॥

मा रोदीदस्य जननी गौतमी पतिदेवता ।
यथाऽहं मृतवत्साऽऽर्ता रोदिम्यश्रुमुखी मुहुः ॥ ४७ ॥

यैः कोपितं ब्रह्मकुलं राजन्यैरकृतात्मभिः ।
तत्कुलं प्रदहत्याशु सानुबन्धं शुचार्पितम् ॥ ४८ ॥

**सूत उवाच**

## अथ सप्तमोऽध्यायः

धर्म्यं न्याय्यं सकरुणं निर्व्यलीकं समं महत्।
राजा धर्मसुतो राज्ञ्याः प्रत्यनन्दद्वचो द्विजाः ॥ ४९ ॥

नकुलः सहदेवश्च युयुधानो धनञ्जयः।
भगवान् देवकीपुत्रो ये चान्ये याश्च योषितः ॥ ५० ॥

तत्राहामर्षितो भीमः तस्य श्रेयान् वधः स्मृतः।
न भर्तुर्नात्मनश्चार्थे योऽहन्सुप्तान् शिशून् वृथा ॥ ५१ ॥

निशम्य भीमगदितं द्रौपद्याश्च चतुर्भुजः।
आलोक्य वदनं सख्युरिदमाह हसन्निव ॥ ५२ ॥

**श्री भगवान् उवाच**

ब्रह्मबन्धुर्न हन्तव्य अततायी वधार्हणः।
मयैवोभयमाम्नातं परिपाह्यनुशासनम् ॥ ५३ ॥

कुरु प्रतिश्रुतं सत्यं यत्तत् सान्त्वयता प्रियाम्।
प्रियं च भीमसेनस्य पाञ्चाल्यै मह्यमेव च ॥ ५४ ॥

**सूत उवाच**

अर्जुनः सहसाऽऽज्ञाय हरेर्हार्दमथासिना।
मणिं जहार मूर्धन्यं द्विजस्य सहमूर्धजम् ॥ ५५ ॥

विमुच्य रशनाबद्धं बालहत्याहतप्रभम्।
तेजसा मणिना हीनं शिबिरान्निरवापयत् ॥ ५६ ॥

बन्धनं द्रविणादानं स्थानान्निर्यापणं तथा।
एष हि ब्रह्मबन्धूनां वधो नान्योऽस्ति दैहिकः ॥ ५७ ॥

**॥ इति श्रीमद्भागवते प्रथमस्कन्धे सप्तमोऽध्यायः ॥**

**॥ ಏಳನೆಯ ಅಧ್ಯಾಯ ॥**

## अथ सप्तमोऽध्यायः

## ಶ್ರೀಭಾಗವತದ ರಚನೆಗೆ ತೀರ್ಮಾನ

ಹಿಂದಿನ ಅಧ್ಯಾಯದಲ್ಲಿ ದೇವರ್ಷಿ ನಾರದರು ತಮ್ಮ ಪೂರ್ವವೃತ್ತಾಂತವನ್ನೂ ಮತ್ತು ವೇದವ್ಯಾಸರಿಗೆ ಭಾಗವತ ಗ್ರಂಥರಚನೆ ಮಾಡಬೇಕೆಂದು ಹೇಳಿ ಸ್ವೇಚ್ಛೆಯಿಂದ ವೀಣಾ ಸುಸ್ವರದಿಂದ ಪರಮಾತ್ಮನ ಗಾನಮಾಡುತ್ತಾ ಹೊರಟುಹೋದರೆಂದೂ ಕೇಳಿ, ನಂತರ ಶೌನಕರು ಸೂತಪುರಾಣಿಕರನ್ನು, ಎಲೈ! ಶೌನಕಾದಿ ಋಷಿಗಳಿರಾ ಮುಂದಿನ ಕಥೆಯನ್ನು ಕೇಳಿರಿ.

ನಾರದರು ವೀಣಾಪಾಣಿಗಳಾಗಿ ಹೊರಟುಹೋದನಂತರ, ವೇದವ್ಯಾಸರು ಸರಸ್ವತೀತೀರದಲ್ಲಿ, ತಮ್ಮ ಆಶ್ರಮದಲ್ಲಿ, ಯೋಗಾಸನದಿಂದ ಕುಳಿತು, ನಿರ್ಮಲವಾದ, ನಿಶ್ಚಲವಾದ ಮನಸ್ಸಿನಿಂದ, ತಮ್ಮ ಸ್ವರೂಪವೇ ಆದ ಆತ್ಮತತ್ವವನ್ನು ಧ್ಯಾನಿಸಿದರು. ಆ ಧ್ಯಾನದಿಂದ ಜಗದ್ವಿಲಕ್ಷಣನೂ, ಸರ್ವತ್ರವ್ಯಾಪ್ತನೂ, ಅಪರಿಚ್ಛಿನ್ನನೂ, ಅನಂತಸೂರ್ಯಪ್ರಕಾನೂ, ಜಗದಾದಿ ಕಾರಣನೂ ಆದ ಪರಮಪುರುಷನನ್ನೂ, ಆತನ ಜೊತೆಯಲ್ಲಿ ಸತ್ವರಜಸ್ತಮೋ ಗುಣಗಳಿಗೂ, ಜಡಪ್ರಕೃತಿಗೂ ಅಭಿಮಾನಿಯಾಗಿ, ಚಿತ್ಪ್ರಕೃತಿ ಎಂದು, ಮಾಯಾ ಎಂದು ಕರೆಸಿಕೊಂಡು, ಸಕಲಜೀವರ ಸೃಷ್ಟಿ, ಸ್ಥಿತಿ, ಮೋಕ್ಷಗಳಿಗೆ ಉಪಾದಾನಕಾರಣಳೂ ಆಗಿ, ಆ ಪರಮಾತ್ಮನ ಅಧೀನದಲ್ಲಿರತಕ್ಕ, ಮಾಯಾವಾಚ್ಯಳಾದ, ಮಹಾಮಹಿಮಳಾದ, ಅವ್ಯಕ್ತತತ್ವಾಭಿಮಾನಿ ಲಕ್ಷ್ಮಿದೇವಿಯನ್ನೂ; ಈ ಅನಾದ್ಯವಿದ್ಯಾ ಕಾಮಗಳಿಂದ ಬಂಧಿತರಾಗಿ, ಸಂಸಾರದಲ್ಲಿ ಬಿದ್ದು ನರಳುತ್ತಿರುವ ಜೀವರಾಶಿಗಳನ್ನೂ ನೋಡಿ, ಪರಮ ಕೃಪೆಯಿಂದ ಕೂಡಿದ ಮನಸ್ಸುಳ್ಳವರಾಗಿ, ಸಕಲಜೀವರೂ, ಪರಮಾತ್ಮನನ್ನು ತತ್ವದಿಂದ ತಿಳಿದು, ಭಕ್ತಿಮಾಡಿ, ಆತನ ಕೃಪಾಪಾತ್ರರಾಗಿ ಉದ್ಧೃತರಾಗಲು ಏನು ಜ್ಞಾನವು ಬೇಕೋ, ಅಂತಹ ದಿವ್ಯ ಭಕ್ತಿರಸ ಭರಿತವಾದ ಭಾಗವತಶಾಸ್ತ್ರವನ್ನು ಆತ್ಮಯೋಗದಿಂದ ರಚಿಸಿ, ಅದನ್ನು ತಮ್ಮ ಪುತ್ರರಾದ ಶುಕಮಹರ್ಷಿಗಳಿಗೆ ಉಪದೇಶಿಸಿದರು.

ಶುಕಮಹರ್ಷಿಗಳು ನಿರಂತರ ಪರಮಾತ್ಮನನ್ನು ಸಾಕ್ಷಾತ್ಕರಿಸುವವರಾಗಿ ಭಕ್ತಿಯೋಗದಿಂದ ಕೂಡಿ ಮಹಾಜ್ಞಾನಿಗಳಾದಾಗ್ಯೂ, ಯಾವ ಈ ಭಾಗವತದಲ್ಲಿ ಅತ್ಯಾಶ್ಚರ್ಯಕರಗಳಾದ ಭಕ್ತ್ಯುದ್ರೇಕಗೊಳಿಸುವಮನೋಹರಗಳಾದಪರಮಾತ್ಮನಚರಿತ್ರೆಗಳುವರ್ಣಿಸಲ್ಪಟ್ಟಿರುವುದರಿಂದ, ಶುಕಋಷಿಗಳು ಆನಂದಾಶ್ರುಗಳಿಂದ ಕೂಡಿದವರಾಗಿ ಪರಮಾದರದಿಂದ ಈ ಭಗವತ್ಕಥಾಮೃತವನ್ನು ವೇದವ್ಯಾಸರ ಮುಖಕಮಲದಿಂದ ಶ್ರವಣಪಾನಮಾಡಿ, ಮುಕ್ತಿಯಲ್ಲಿ ಆನಂದಾತಿಶಯವನ್ನು ಪಡೆಯುವಂತವರಾದರು. ಈ ಕಥೆಯನ್ನು ಶುಕರು ಪರೀಕ್ಷಿದ್ರಾಜನಿಗೆ ಹೇಳಿದರು. ಅದನ್ನೇ

ನಿಮಗೆ ಈಗ ಹೇಳಲು ಉಪಕ್ರಮಿಸುತ್ತೇನೆ.

## ಅಶ್ವತ್ಥಾಮಾಚಾರ್ಯರ ನಿಗ್ರಹ

ಭಾರತಯುದ್ಧವು ಮುಗಿದು, ಭೀಮಸೇನದೇವರ ಗದಾಪ್ರಹಾರದಿಂದ ಮುರಿದ ತೊಡೆಗಳುಳ್ಳ ದುರ್ಯೋಧನನು ರಣರಂಗದಲ್ಲಿ ಬಿದ್ದಿದ್ದನು. ಅವನನ್ನು ಅಶ್ವತ್ಥಾಮರು ಸಮೀಪಿಸಿ ಯೋಚನಾಪರನಾಗಿದ್ದವನನ್ನು ನೋಡಿ, ಅವನಿಗೆ ಪಾಂಡವರ ವಂಶವೇ ಇಲ್ಲದ ಹಾಗೆ ಮಾಡುತ್ತೇನೆ! ಯೋಚಿಸಬೇಡ, ಸುಖವಾಗಿ ಮರಣಹೊಂದು ಎಂದು ಹೇಳಿ, ರಾತ್ರಿ ಕತ್ತಲಲ್ಲಿ ಪಾಂಡವರ ಶಿಬಿರಕ್ಕೆ ನುಗ್ಗಿ, ಮಲಗಿದ್ದ ಐವರು ದ್ರೌಪದೀ ಮಕ್ಕಳನ್ನು ನಿದ್ರಿಸುತ್ತಿರುವಾಗಲೇ ಸಂಹರಿಸಿ, ನಂತರ ಭಯದಿಂದ ಓಡಿಹೋಗುತ್ತಿದ್ದರು. ಪ್ರಾತಃಕಾಲದಲ್ಲಿ ಮಕ್ಕಳು ಮೃತರಾಗಿದ್ದುದನ್ನು ನೋಡಿ ದ್ರೌಪದಾದೇವಿಯರು ಶೋಕಿಸುತ್ತಿದ್ದಾಗ, ಆ ವಾರ್ತೆಯನ್ನು ಕೇಳಿ ಅರ್ಜುನನೂ, ಶ್ರೀಕೃಷ್ಣನು ಅಲ್ಲಿಗೆ ಬಂದರು. ಶ್ರೀಕೃಷ್ಣನು ಸಮಾಧಾನವಾಕ್ಯಗಳಿಂದ, ದ್ರೌಪದಾದೇವಿಯ ಮಕ್ಕಳನ್ನು ನಿದ್ರಿಸುತ್ತಿದ್ದಾಗ, ದಯಾರಹಿತನಾಗಿ, ಅಧರ್ಮದಿಂದ ಕೊಂದ ಅಶ್ವತ್ಥಾಮನ ಶಿರಸ್ಸನ್ನು ಕತ್ತರಿಸಿ ತಂದೊಪ್ಪಿಸುವುದಾಗಿ ಹೇಳಿ, ದ್ರೌಪದಾದೇವಿಗೆ ದುಃಖವನ್ನು ಸಹಿಸುವಂತೆ ಹೇಳಿದನು. ನಂತರ ಕೃಷ್ಣಾರ್ಜುನರು ಅಶ್ವತ್ಥಾಮನ ಬೆನ್ನಟ್ಟಿ, ರಥಾರೂಢರಾಗಿ ಧನುರ್ಬಾಣಧಾರಿಗಳಾಗಿ ಹೊರಟರು.

## ದ್ರೌಪದೀದೇವಿಯರ ಉದಾರಗುಣ

ಇವರನ್ನು ದೂರದಿಂದಲೇ ನೋಡಿದ ಅಶ್ವತ್ಥಾಮನು, ಇನ್ನು ತನಗೆ ಭೂಲೋಕದಲ್ಲಿ ಆಶ್ರಯಸ್ಥಾನವು ಇಲ್ಲವೆಂದು ತಿಳಿದು, ಸೋತುಹೋಗಿ, ಮುಂದಕ್ಕೆ ಓಡಲಾಗದೆ ಇದ್ದ ತನ್ನ ಕಾಲುಗಳನ್ನೂ ನೋಡಿ, ಪ್ರಾಣರಕ್ಷಣೆಗಾಗಿ ಅರ್ಜುನನ ಮೇಲೆ ಬ್ರಹ್ಮಾಸ್ತ್ರವನ್ನು ಬಿಟ್ಟನು. ಕೃಷ್ಣನ ವಾಕ್ಯದಂತೆ ಅರ್ಜುನನು ಪ್ರತಿಬ್ರಹ್ಮಾಸ್ತ್ರವನ್ನು ಬಿಟ್ಟು ಎರಡನ್ನೂ ಉಪಸಂಹರಿಸಿ, ಅಶ್ವತ್ಥಾಮರನ್ನು ಹಿಡಿದು ಹಗ್ಗಗಳಿಂದ ಪಶುವಿನಂತೆ ಬಿಗಿದುಕಟ್ಟಿ, ರಥವೇರಿ ತಮ್ಮ ಶಿಬಿರಕ್ಕೆ ತಂದು ಕೆಡಹಿ, ದ್ರೌಪದಾದೇವಿಗೆ ತಿಳಿಸಿದನು. ಶೋಕಗ್ರಸ್ತರಾದ ದ್ರೌಪದಾದೇವಿಯರು ಬಂದು, ಹಗ್ಗಗಳಿಂದ ಕಟ್ಟಲ್ಪಟ್ಟು ನಾಚಿಕೆಯಿಂದ ತಲೆತಗ್ಗಿಸಿಕೊಂಡಿರುವ ಕಾಂತಿವಿಹೀನರಾದ ಅಶ್ವತ್ಥಾಮರನ್ನು ನೋಡಿ, ತಮ್ಮ ಸತ್ಸ್ವಭಾವದಿಂದ ಮನಕರಗಿದವರಾಗಿ ಅಶ್ವತ್ಥಾಮರ ಪಾದಗಳಿಗೆ ನಮಸ್ಕರಿಸಿ, ಬ್ರಾಹ್ಮಣರೂ, ಗುರುಪುತ್ರರೂ ಆದ ಇವರನ್ನು ತಕ್ಷಣವೇ ಧರ್ಮಶೀಲರಾದ ಪತಿಗಳಿರಾ,

ಹಗ್ಗಗಳಿಂದ ಕಟ್ಟನ್ನು ಬಿಚ್ಚಿ ಬಿಟ್ಟುಬಿಡಿ, ಬಿಟ್ಟುಬಿಡಿ! ಪೂಜ್ಯರಾದ ಬ್ರಾಹ್ಮಣರು ರಾಜರಿಂದ ಅವಮಾನಿತರಾಗಬಾರದು. ಧನುರ್ವೇದವನ್ನು ನಿಮಗೆ ಉಪದೇಶಿಸಿದ ಇವರ ತಂದೆಯಾದ ದ್ರೋಣರೂ, ಅವರ ಪತ್ನಿಯಾದ ಕೃಪೀದೇವಿಯೂ ನಮ್ಮಿಂದ ಪೂಜಾರ್ಹರು. ನನಗೆ ಮಕ್ಕಳ ಮರಣದಿಂದ ಉಂಟಾದ ದುಃಖವು ಪೂಜ್ಯಳಾದ ಈ ಅಶ್ವತ್ಥಾಮರ ತಾಯಿ ಕೃಪೀದೇವಿಗೆ ಉಂಟಾಗದಿರಲಿ! ಇವರನ್ನು ಬಂಧನದಲ್ಲಿ ನೋಡಿ ಸಹಿಸಲಾರೆ! ಬಿಡಿ! ಬಿಡಿ! ಎಂದು ಹೇಳಲು, ದ್ರೌಪದಾದೇವಿಯರ ಅನರ್ಘ್ಯ ದಯಾದೃಷ್ಟಿಯನ್ನೂ, ಧರ್ಮದೃಷ್ಟಿಯನ್ನೂ ನೋಡಿ ಕೃಷ್ಣನೇ ಮೊದಲಾಗಿ ಸರ್ವರೂ ದ್ರೌಪದಾದೇವಿಯರನ್ನು ಕೊಂಡಾಡಿದರು.

ನಂತರ, ಶ್ರೀಕೃಷ್ಣನು, ಎಲೈ! ಅರ್ಜುನನೇ! ಈ ಬ್ರಾಹ್ಮಣಕುಲಗೇಡಿಯು, ನನ್ನ ಪ್ರತಿಜ್ಞೆಯಂತೆ ವಧಾರ್ಹನು. ಧರ್ಮದೃಷ್ಟಿಯಿಂದ ಇವನನ್ನು ಕೊಲ್ಲಬಾರದು. ಆದುದರಿಂದ ನಿನ್ನ ಕತ್ತಿಯಿಂದ ಇವನ ಶಿರಸ್ಸಿನಲ್ಲಿರುವ ರತ್ನವನ್ನು ಕೆತ್ತಿ ತೆಗೆದು, ನಂತರ ಇವನನ್ನು ಶಿಬಿರದಿಂದಾಚೆಗೆ ದಾಟಿಸು. ನನ್ನ ಆಜ್ಞಾರೂಪವಾದ ವೇದೋಕ್ತಿಗಳಂತೆ, ಬ್ರಾಹ್ಮಣನು ಮಹದಪರಾಧಗಳನ್ನು ಮಾಡಿದ್ದರೂ, ವಧಾದಿಗಳಿಂದಾಗಲೀ, ದೇಹಶಿಕ್ಷೆಯಿಂದಾಗಲೀ ಶಿಕ್ಷಿಸಲ್ಪಡಲು ಅರ್ಹನಲ್ಲ. ಮಹಾಪಾಪಿಯಾದ, ಬ್ರಾಹ್ಮಣರ ವಂಶಮಾತ್ರದಿಂದ ಬ್ರಾಹ್ಮಣ ಸದೃಶನಾದ ನೀಚನಿಗೆ, ಸ್ಥಾನಭ್ರಷ್ಟತೆ, ದಾನಕೊಡದಿರುವಿಕೆ ಮತ್ತು ಅವನ ಐಶ್ವರ್ಯವನ್ನು ಕಿತ್ತುಕೊಳ್ಳುವುದು, ಈ ಮೂರು ವಿಧವಾಗಿ ಶಿಕ್ಷಿಸುವುದೇ ಆ ಬ್ರಹ್ಮಬಂಧುವಿಗೆ ವಧೆ. ದೇಹಶಿಕ್ಷೆಯಲ್ಲ. ಆದರೆ ದ್ರೌಪದಾದೇವಿಗೆ ನಾನು ಇವನ ಶಿರಚ್ಛೇದನ ಮಾಡುತ್ತೇನೆಂದು ಹೇಳಿದ್ದು ಸುಳ್ಳಾಗಬಾರದಾಗಿ, ಇವನ ಶಿರೋರತ್ನ ತೆಗೆಯುವುದಕ್ಕಾಗಿ, ಕತ್ತಿಯಿಂದ ಘಾಯಮಾಡಿ, ರತ್ನ ತೆಗೆದು ನಂತರ ಇವನನ್ನು ಇಲ್ಲಿಂದ ಓಡಿಸು. ಇದು ದ್ರೌಪದಾದೇವಿಗೂ, ನನಗೂ, ಭೀಮಸೇನನಿಗೂ ಇಷ್ಟವಾದ ಮಾರ್ಗವು ಎನ್ನಲು, ಅರ್ಜುನನು ತಕ್ಷಣ, ಕತ್ತಿಯಿಂದ ಅಶ್ವತ್ಥಾಮನ ತಲೆಯನ್ನು ಕೆತ್ತಿ, ರತ್ನವನ್ನು ತೆಗೆದುಕೊಂಡು, ನಂತರ ಅವನನ್ನು ಶಿಬಿರದಿಂದಾಚೆಗೆ ಕಳುಹಿಸಿದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಏಳನೆಯ ಅಧ್ಯಾಯವು ಮುಗಿಯಿತು.**

## अथ अष्टमोऽध्यायः

**सूत उवाच**

पुत्रशोकातुराः सर्वे पाण्डवाः सह कृष्णया ।

## अथ अष्टमोऽध्यायः

स्वानां मृतानां यत्कृत्यं चक्रुर्निर्हरणादिकम् ॥ १ ॥

अथो निशामयामास कृष्णाया भगवान्पुरा ।
पतितायाः पादमूले रुदन्त्या यत्प्रतिश्रुतम् ॥ २ ॥

पश्य राज्यरिदारांस्ते रुदतो मुक्तमूर्धजान् ।
आलिङ्ग्य स्वपतीन् भीमगदाभग्नोरुवक्षसः ॥ ३ ॥

अथ ते सम्परेतानां स्वानामुदकमिच्छताम् ।
दातुं सकृष्णा गङ्गायां पुरस्कृत्य ययुस्त्रियः ॥ ४ ॥

ते निनीयोदकं सर्वे विलप्य च भृशं पुनः ।
आप्लुता हरिपादाब्जरजः पूतसरिज्जले ॥ ५ ॥

तत्रासीनं कुरुपतिं धृतराष्ट्रं सहानुजम् ।
गान्धारीं पुत्रशोकार्तां पृथां कृष्णां च माधवः ॥ ६ ॥

सान्त्वयामास मुनिभिर्हतपुत्राञ्छुचार्पितान् ।
भूतेषु कालस्य गतिं दर्शयन्नप्रतिक्रियाम् ॥ ७ ॥

घातयित्वाऽच्युतो राज्याः कचस्पर्शहतायुषः ।
साधयित्वाऽजातशत्रोः स्वारज्यं कितवैर्हृतम् ॥ ८ ॥

याजयित्वाऽश्वमेधैस्तं त्रिभिरुत्तमकल्पकैः ।
तद्यशः पावनं दिक्षु शतमन्योरिवातनोत् ॥ ९ ॥

आमन्त्र्य पाण्डुपुत्रांश्च शैनेयोद्धवसंयुतः ।
द्वैपायनादिभिर्विप्रैः पूजितैः प्रतिपूजितः ॥ १० ॥

गन्तुं कृतमतिर्ब्रह्मन् द्वरकां रथमास्थितः ।
उपलेभेऽभिधावन्तीमुत्तरां भयविह्वलाम् ॥ ११ ॥

### उत्तरा उवाच

पाहि पाहि महायोगिन् देव देव जगत्पते ।
नान्यं त्वदभयं पश्ये यत्र मृत्युः परस्परम् ॥ १२ ॥

## अथ अष्टमोऽध्यायः

अभिद्रवति मामीश शरस्तप्तायसो विभो ।
कामं दहतु मां नाथ मा मे गर्भो निपात्यताम् ॥ १३ ॥

**सूत उवाच**

उपधार्य वचस्तस्याः भगवान्भक्तवत्सलः ।
आपाण्डवमिदं कर्तुं द्रौणेरस्त्रमबुध्यत ॥ १४ ॥

तर्ह्येवाथ भृगुश्रेष्ठ पाण्डवाः पञ्चसायकान् ।
आत्मनोऽभिमुखान् दीप्तानालक्ष्यास्त्राण्युपाददुः ॥ १५ ॥

व्यसनं वीक्ष्य तत्तेषां अनन्यविषयात्मनाम् ।
सुदर्शनेन स्वास्त्रेण स्वानां रक्षां व्यधाद्विभुः ॥ १६ ॥

अन्तस्थः सर्वभूतानामात्मा योगेश्वरो हरिः ।
स्वमाययाऽवृणोद्गर्भं वैराट्याः कुरुतन्तवे ॥ १७ ॥

यद्यप्यस्त्रं ब्रह्मशिरस्त्वमोघं चाप्रतिक्रियम् ।
वैष्णवं तेज आसाद्य समशाम्यद् भृगूद्वह ॥ १८ ॥

मा मंस्था ह्येतदाश्चर्यं सर्वाश्चर्यमयेऽच्युते ।
य इदं मायया देव्या सृजत्यवति हन्त्यजः ॥ १९ ॥

ब्रह्मतेजो विनिर्मुक्तैरात्मजैस्सह कृष्णया ।
प्रयाणाभिमुखं कृष्णमिदमाह पृथा सती ॥ २० ॥

**पृथा उवाच**

नमस्ये पुरुषं त्वाद्यमीश्वरं प्रकृतेः परम् ।
अलक्ष्यं सर्वभावानामन्तर्बहिरपि ध्रुवम् ॥ २१ ॥

मायाजवनिकाच्छन्नो मयाऽधोक्षज मर्त्यया ।
न लक्ष्यसे मूढदृशा नटो नाट्यचरो यथा ॥ २२ ॥

तथा परमहंसानां मुनीनाममलात्मनाम् ।
भक्तियोगविधानार्थं कथं पश्येमहि स्त्रियः ॥ २३ ॥

कृष्णाय वासुदेवाय देवकीनन्दनाय च ।

## अथ अष्टमोऽध्यायः

नन्दगोपकुमाराय गोविन्दाय नमो नमः ॥ २४ ॥

नमः पङ्कजनाभाय नमः पङ्कजमालिने ।
नमः पङ्कजनेत्राय नमस्ते पङ्कजांघ्रये ॥ २५ ॥

यथा हृषीकेश खलेन देवकी कंसेन रुद्धातिचिरं शुचार्पिता ।
विमोचिताऽहं च सहात्मजा विभो त्वयैव नाथेन मुहुर्विपद्गणात् ॥ २६ ॥

विषान्महाग्नेः पुरुषाददर्शनादसत्सभायाः वनवासकृच्छ्रतः ।
मृधे मृधेऽनेकमहारथास्त्रतो द्रौण्यस्त्रतश्चास्म हरेऽभिरक्षिताः ॥ २७ ॥

विपदः सन्तु नः शश्वत्तत्र तत्र जगत्पते ।
भवतो दर्शनं यत्स्यादपुनर्भवदर्शनम् ॥ २८ ॥

जन्मैश्वर्यश्रुतश्रीभिरेधमानमदः पुमान् ।
नार्ह इत्यभिधातुं वै त्वामकिञ्चनगोचरम् ॥ २९ ॥

नमोऽकिञ्चनवित्ताय निवृत्तगुणवृत्तये ।
आत्मारामाय शान्ताय कैवल्यपतये नमः ॥ ३० ॥

मन्ये त्वां कालमीशानं अनादिनिधनं परम् ।
समं चरन्तं सर्वत्र भूतानां यन्मिथः कलिः ॥ ३१ ॥

न वेद कश्चिद्भगवंश्चिकीर्षितं तवेहमानस्य नृणां विडम्बनम् ।
न यस्य कश्चिद्दयितोऽस्ति कर्हिचित् द्वेष्यश्च यस्मिन् विषमा मतिर्नृणाम् ॥ ३२ ॥

जन्म कर्म च विश्वात्मन्नजस्याकर्तुरात्मनः ।
तिर्यङ्नृपशुयादस्सु तदत्यन्तविडम्बनम् ॥ ३३ ॥

गोप्याददे त्वयि कृतागसि दाम तावद्

या ते दशाश्रुकलिलाञ्जनसम्भ्रमाक्षम् ।
वक्त्रं विनम्य भयभावनया स्थितस्य
सा मां विमोहयति भीः प्रति यं बिभेति ॥ ३४ ॥

केचिदाहुरजं जातं पुण्यश्लोकस्य कीर्तये ।

## अथ अष्टमोऽध्यायः

यदोः प्रियस्यान्ववाये मलयस्येव चन्दनम् ॥ ३५ ॥

अपरे वसुदेवस्य देवक्यां याचितोऽभ्यगात् ।
अजस्त्वमस्य क्षेमाय वधाय च सुरद्विषाम् ॥ ३६ ॥

भारावतारणायान्ते भुवो नाव इवोदधौ ।
सीदन्त्या भूतिभारेण जातो ह्यात्मभुवाऽर्थितः ॥ ३७ ॥

भावेऽस्मिन् क्लिश्यमानानामविद्याकामकर्मभिः ।
श्रवणस्मरणार्हाणि करिष्यन्निति केचन ॥ ३८ ॥

श्रुण्वन्ति गायन्ति गृणन्त्यभीक्ष्णशः स्मरन्ति नन्दन्ति तवेहितं जनाः ।
त एव पश्यन्त्यचिरेण तावकं भवप्रवाहोपरमं पदाम्बुजम् ॥ ३९ ॥

अप्यद्य नस्त्वं स्वकृतेहितः प्रभो जिहाससि स्वित्सुहृदोऽनुजीविनः ॥
येषां न चान्यद्भवतः पदाम्बुजात्परायणं राजसु योजितांहसाम् ॥ ४० ॥

ते वयं नामरूपाभ्यां यदुभिः सह पाण्डवाः ।
भवतो दर्शनं यर्हि हृषीकाणामिवेशितुः ॥ ४१ ॥

नेयं शोभिष्यते तत्र यथेदानीं गदाधर ।
त्वत्पदैरङ्किता भाति स्वलक्षणविलक्षितैः ॥ ४२ ॥

इमे जनपदाः स्वृद्धाः सुपक्वौषधिवीरुधः ।
वनाद्रिनद्युदन्वन्तो ह्येधन्ते तव वीक्षिताः ॥ ४३ ॥

अथ विश्वेश विश्वात्मन् विश्वमूर्ते स्वकेषु मे ।
स्नेहपाशमिमं छिन्दि ध्रुवं पाण्डुषु वृष्णिषु ॥ ४४ ॥

त्वयि मेऽनन्यविषया मतिर्मधुपतेऽसकृत् ।
रतिमुद्वहतादद्धा गङ्गेवौघमुदन्वति ॥ ४५ ॥

श्रीकृष्ण कृष्णसख वृष्णिवृषावनिध्रुक् राजन्यवंशदहनामरवन्द्यवीर्य ।
गोविन्द गोद्विजसुरार्तिहरावतार योगेश्वराखिलगुरो भगवन्नमस्ते ॥ ४६ ॥

**सूत उवाच**

**अथ अष्टमोऽध्यायः**

पृथयेत्थं कलपदैः परिगीताखिलोदयः ।
मन्दं जहास वैकुण्ठो मोहयन् योगमायया ॥ ४७ ॥

तां बाढमित्युपामन्त्र्य प्रविश्य गजसाह्वयम् ।
स्त्रियश्च स्वपुरं यास्यन् प्रेम्णा राज्ञा निवारितः ॥ ४८ ॥

**॥ इति श्रीमद्भागवते प्रथमस्कन्धे अष्टमोऽध्यायः ॥**

## ॥ ಏಂಟನೆಯ ಅಧ್ಯಾಯ ॥

### ಶ್ರೀಕೃಷ್ಣನಿಂದ ಸಾಂತ್ವನದ ವಚನ

ಈ ಆಧ್ಯಾಯದಲ್ಲಿ ಭಕ್ತಿವಿಧಾನಗಳನ್ನನುಸರಿಸಿ, ಭಕ್ತಾನುಗ್ರಹ ವಿಧಾನಗಳನ್ನು ಮುರ ಎಂಬ ದೈತ್ಯನ ಶತೃವಾದ ಶ್ರೀಕೃಷ್ಣನು ತನ್ನ ಭಕ್ತರಲ್ಲಿ ಮಾಡುವ ಮಹಾತ್ಮೆಗಳು ವರ್ಣಿಸಲ್ಪಡುತ್ತವೆ.

ಮಹಾಯುದ್ಧಾನಂತರದಲ್ಲಿ, ಅಶ್ವತ್ಥಾಮರಿಂದ ದ್ರೌಪದಾದೇವಿಯರ ಐದು ಜನ ಮಕ್ಕಳೂ ರಾತ್ರಿ ನಿದ್ರಿಸುತ್ತಿದ್ದಾಗ ಸಂಹರಿಸಲ್ಪಡಲು, ಕೋಪಯುಕ್ತರಾದ ಕೃಷ್ಣಾರ್ಜುನರು ಓಡಿಹೋಗುತ್ತಿದ್ದ ಅಶ್ವತ್ಥಾಮರನ್ನು ಬೆನ್ನಟ್ಟಿ ಹಿಡಿದು ಶಿಬಿರಕ್ಕೆ ತಂದು, ದ್ರೌಪದಿಯ ಇಷ್ಟದಂತೆ ಬ್ರಾಹ್ಮಣರಾದ್ದರಿಂದಲೂ, ಗುರುಪುತ್ರರಾದ್ದರಿಂದಲೂ, ಕೇವಲ ಶಿರೋರತ್ನವನ್ನು ತೆಗೆದುಕೊಂಡು ಅಶ್ವತ್ಥಾಮರನ್ನು ಶಿಬಿರದಿಂದಾಚೆಗೆ ದಾಟಿಸಿಬಿಟ್ಟರೆಂದು ಹಿಂದಿನ ಅಧ್ಯಾಯದಲ್ಲಿ ನಿರೂಪಿತವಾಗಿದೆಯಷ್ಟೆ? ನಂತರ, ಪುತ್ರಶೋಕದಿಂದ ಪೀಡಿತರಾದ ಪಾಂಡವರೂ, ದ್ರೌಪದಿಯೂ ಸಹ ಮೃತರಾದವರಿಗೆ ಮಾಡತಕ್ಕ ಉತ್ತರಕ್ರಿಯಾದಿಗಳನ್ನು ಮಾಡಿದರು.

ಆ ದಿನ ರಾತ್ರಿ ದುಃಖದಿಂದ ದ್ರೌಪದಾದೇವಿಯು ಶ್ರೀಕೃಷ್ಣನ ಪಾದಗಳಿಗೆ ನಮಸ್ಕರಿಸಿ ಹೊರಳಾಡಲು ಶ್ರೀಕೃಷ್ಣನು, ಎಲೈ! ತಂಗಿಯೇ! ನಿನಗೆ ದುಃಖಗಳನ್ನುಂಟುಮಾಡಿದ ಪಾಪಿ ದುರ್ಯೋಧನಾದಿಗಳು ಭೀಮಸೇನನ ಗದೆಯಿಂದ ತೊಡೆ, ಎದೆಗಳು ಸೀಳಲ್ಪಟ್ಟವರಾಗಿ ರಣರಂಗದಲ್ಲಿ ಬಿದ್ದಿರುವುದನ್ನೂ, ಅವರವರ ಹೆಂಡತಿಯರು ತಲೆಕೂದಲು ಕೆದರಿಕೊಂಡು, ತಮ್ಮ ತಮ್ಮ ಪತಿಯನ್ನು ತಬ್ಬಿಕೊಂಡು ರೋದಿಸುವುದನ್ನು ನೋಡು! ಎಂದು ತನ್ನ ಯೋಗಶಕ್ತಿಯಿಂದ ಕೃಷ್ಣನು ದ್ರೌಪದಿಗೆ ತೋರಿಸಿ ಸಮಾಧಾನ ಮಾಡಿದನು.

## अथ अष्टमोऽध्यायः

ನಂತರ ಎಲ್ಲರೂ ಶ್ರೀಹರಿಪಾದಸ್ಪರ್ಶದಿಂದ ಪಾವನಳಾದ ಗಂಗಾನದಿಗೆ ಹೋಗಿ ಎಲ್ಲರೂ ಸ್ನಾನಾದಿಗಳನ್ನು ಮಾಡಿದರು. ಅಲ್ಲಿಗೆ ಧೃತರಾಷ್ಟ್ರನೂ, ಸಂಜಯನೂ, ಕುಂತೀ, ಗಾಂಧಾರಿ ಮುಂತಾದವರೂ ಬಂದಿದ್ದರು. ನಂತರ ಶ್ರೀಕೃಷ್ಣನು ಶೋಕ ಪಡುತ್ತಿದ್ದ ಇವರನ್ನು, ಕಾಲನಾಮಕ ಪರಮಾತ್ಮನ ಇಚ್ಛೆಯಿಂದ, ಪ್ರಾಪ್ತಕಾಲದಲ್ಲಿ ಸರ್ವರೂ ಮರಣಹೊಂದಬೇಕಾದ್ದು ಅನಿವಾರ್ಯವಾದ್ದರಿಂದ, ಜ್ಞಾನಿಗಳು ನಡೆದುಹೋದ ಕಾರ್ಯಗಳನ್ನು ಪುನಃ ಚಿಂತಿಸಿ ಶೋಕಮಾಡಬಾರದೆಂದು ಹೇಳಿ ಸಮಾಧಾನಮಾಡಿದನು. ನಂತರ ಧೃತರಾಷ್ಟ್ರರಾಯನನ್ನು ಮುಂದುಮಾಡಿಕೊಂಡು ಎಲ್ಲರೂ, ಪಟ್ಟಣ ಪ್ರವೇಶ ಮಾಡಿದರು. ಶುಭ ಸ್ವೀಕಾರಾನಂತರ ಧರ್ಮರಾಯನಿಂದಅಶ್ವಮೇಧಾದಿಯಜ್ಞಗಳನ್ನುಮಾಡಲುಸಲಹೆಗಳನ್ನುಧೌಮ್ಯಾದಿಋಷಿಗಳೂ, ಶ್ರೀಕೃಷ್ಣ, ವೇದವ್ಯಾಸರೂ ಇತ್ತು, ಧರ್ಮರಾಜನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿದರು.

ಪರಮಪಾವನರೂ, ಪತಿವ್ರತಾಶಿರೋಮಣಿಗಳೂ, ಆದ ದ್ರೌಪದಾದೇವಿಯರ ಕೇಶಪಾಶಗಳನ್ನೂ, ವಸ್ತ್ರವನ್ನೂ ಮುಟ್ಟಿದ ಮಾತ್ರದಿಂದಲೇ ಪೂರ್ಣವಾಗಿ ಮುಗಿದ ಆಯಸ್ಸುಳ್ಳವರಾಗಿ, ಜೀವಶವಗಳಂತಿದ್ದ ದುರ್ಯೋಧನಾದಿ ನೀಚರು, ಕಳ್ಳರಂತೆ ಮೋಸದಿಂದ ಅನುಭವಿಸುತ್ತಿದ್ದ ರಾಜ್ಯವನ್ನೂ, ತಮ್ಮ ದೇಹಗಳನ್ನೂ ಕಳೆದುಕೊಂಡು, ಸರ್ವರೂ ಹತರಾದರು.

ನಿಷ್ಕಂಟಕವಾದ, ಧರ್ಮದಿಂದ ಆರ್ಜಿಸಿದ ರಾಜ್ಯವು ಪಾಂಡವರಿಗೆ ಶ್ರೀಕೃಷ್ಣನ ಕರುಣದಿಂದ ಪ್ರಾಪ್ತವಾಯಿತು. ಸಾಕ್ಷಾತ್ ಇಂದ್ರದೇವರಂತೆ ಪ್ರಜಾಸಂರಕ್ಷಣೆ ಮಾಡುತ್ತಿದ್ದ ಧರ್ಮರಾಯನ ಕೈಯಿಂದ ಮೂರು ರೂಪಗಳಿಂದಿದ್ದ ಸಾಕ್ಷಾತ್ ವೇದವ್ಯಾಸದೇವರು, ಶ್ರೀಪರಶುರಾಮದೇವರು, ಮತ್ತು ಶ್ರೀಕೃಷ್ಣರೂಪ ಪರಮಾತ್ಮನ ಅನುಗ್ರಹದಿಂದ ಮೂರು ಸಲ ಅಶ್ವಮೇಧಯಾಗ ಮಾಡಿದ ಫಲ ಬರುವಂತಹ, ಒಂದೇ ಅಶ್ವಮೇಧಯಾಗವನ್ನು ಬಹಳ ಉತ್ಕೃಷ್ಟ ರೀತಿಯಿಂದ, ಸೂರ್ಯಕೋಟಿ ಪ್ರಕಾಶರಾದ ಸ್ವಯಂ ವೇದವ್ಯಾಸ, ಕೃಷ್ಣರೇ ನಿಂತು ಮಾಡಿಸಿ, ದಶದಿಕ್ಕುಗಳಲ್ಲೂ ಪಾಂಡವರ ಯಶಸ್ಸನ್ನು ಜನರು ಕೊಂಡಾಡುವಂತೆ ಮಾಡಿದರು.

### ಉತ್ತರಾದೇವಿಯ ಗರ್ಭ ಸಂರಕ್ಷಣೆ

ನಂತರ ಶ್ರೀಕೃಷ್ಣನು ರಥದ ಸಮೀಪದಲ್ಲಿ ನಿಂತಿದ್ದಾಗ, ಅಭಿಮನ್ಯುವಿನ ಪತ್ನಿಯಾದ, ಗರ್ಭವತಿಯಾಗಿದ್ದ ಉತ್ತರಾದೇವಿಯು ಭಯದಿಂದ ಓಡಿಬರುವಳಾಗಿ, ಶ್ರೀಕೃಷ್ಣನ ಪಾದಗಳಿಗೆ ಬಿದ್ದು, ಎಲೈ! ಜಗದ್ರಕ್ಷಕನೂ, ನಮ್ಮನ್ನು ನಿರಂತರ ರಕ್ಷಿಸುತ್ತಿರುವ ಪರಮ ಕೃಪಾಳುವಾದ ಶ್ರೀಕೃಷ್ಣನೇ

ನೋಡು! ಒಂದು ಹರಿತವಾದ ಪ್ರಜ್ವಲಿಸುತ್ತಿರುವ ಬಾಣದ ಅಲಗು ನನ್ನನ್ನು ಸಂಹರಿಸಲು ಅಟ್ಟಿಕೊಂಡು ಬರುತ್ತಿದೆ. ಅದು ನನ್ನನ್ನು ಸಂಹರಿಸಿದರೆ ಸಂಹರಿಸಲಿ! ಆದರೆ ಪಾಂಡವರ ವಂಶಕ್ಕೆ ಉಳಿದಿರುವ ಒಂದೇ ಆದ ನನ್ನ ಗರ್ಭದಲ್ಲಿರುವ ಶಿಶುವನ್ನು ಮಾತ್ರ ಸಂಹಾರ ಮಾಡದಿರಲಿ! ಅನುಗ್ರಹಿಸು! ಅನುಗ್ರಹಿಸು! ಎಂದು ಕೂಗಿಕೊಂಡಳು.

ಅಷ್ಟರಲ್ಲೇ ಶ್ರೀಕೃಷ್ಣನ ಸಮೀಪದಲ್ಲಿ ನಿಂತಿದ್ದ ಐದು ಜನ ಪಾಂಡವರು ಪ್ರತ್ಯಸ್ತ್ರಗಳನ್ನು ಪ್ರಯೋಗಿಸಲು ಸಿದ್ಧರಾಗುತ್ತಿರಲು, ಶ್ರೀಕೃಷ್ಣನು ತಕ್ಷಣ ತನ್ನ ಚಕ್ರಕ್ಕೆ ಆಜ್ಞಾಪಿಸಿ, ಪಾಂಡವರ ಕಡೆಗೆ ಬರುತ್ತಿದ್ದ ಬಾಣಗಳನ್ನು ಧ್ವಂಸಮಾಡಿ, ಎಲೈ! ಉತ್ತರಾದೇವಿಯೆ! ಹೆದರಬೇಡ! ಆ ಬ್ರಾಹ್ಮಣಕುಲಕ್ಕೇ ಅಪಯಶಸ್ಸನ್ನುಂಟುಮಾಡುವ ಪಾಪಿಯಾದ, ಅಧಮನಾದ ಅಶ್ವತ್ಥಾಮನು ಪಾಂಡವರನ್ನೆಲ್ಲಾ ನಿರ್ಮೂಲ ಮಾಡಲು ಪ್ರಯೋಗಿಸಿರುವ ಬ್ರಹ್ಮಾಸ್ತ್ರಗಳು ಇವು. ನನ್ನ ಭಕ್ತರಾದ ಪಾಂಡವರನ್ನು ಮುಟ್ಟದಂತೆ ನನ್ನ ಚಕ್ರದಿಂದ ಆ ಐದುಬಾಣಗಳನ್ನು ನಾಶ ಮಾಡಿರುತ್ತೇನೆ. ನಿನ್ನನ್ನೂ ಶಿಶುವನ್ನೂ ಕಾಪಾಡುತ್ತೇನೆ! ಹೆದರಬೇಡವೆಂದು ಹೇಳಿ, ತನ್ನ ಪರಮಯೋಗಶಕ್ತಿಯಿಂದ, ಉತ್ತರಾದೇವಿಯ ಗರ್ಭದೊಳಗೆ ಪ್ರವೇಶಿಸಿ, ಅಲ್ಲಿ ತನ್ನ ವೈಷ್ಣವ ತೇಜಸ್ಸಿನಿಂದ ಗರ್ಭಗತ ಶಿಶುವನ್ನು ಆವರಿಸಿಕೊಂಡು, ನಂತರ ಗರ್ಭಗತ ಶಿಶುವನ್ನು ಸಂಹಾರಮಾಡಲು ಒಳಕ್ಕೆ ಪ್ರವೇಶಿಸಿದ ಬ್ರಹ್ಮಾಸ್ತ್ರದ ತೇಜಸ್ಸನ್ನೆಲ್ಲಾ ತಾನೇ ನುಂಗಿ, ಆ ಅಸ್ತ್ರವನ್ನು ಅಡಗಿಸಿ, ಶಿಶುವನ್ನು ಸಂರಕ್ಷಿಸಿದನು. ಗರ್ಭಗತ ಶಿಶುವು ಅಪರಿಮಿತ ತೇಜಸ್ಸುಳ್ಳ ಶ್ರೀಹರಿಯನ್ನು ತನ್ನ ಸುತ್ತಲೂ ಇರುವುದನ್ನು ನೋಡಿದ್ದರಿಂದ, ಆ ಶಿಶುವಿಗೆ ಜನನಾನಂತರದಲ್ಲಿ ಪರೀಕ್ಷಿತನೆಂದು ಹೆಸರಾಯಿತು. ಈ ರೀತಿಯಲ್ಲಿ ತನ್ನನ್ನೇ ನಂಬಿದ್ದ ಭಕ್ತರಾದ ಪಾಂಡವರ ಆಪತ್ತನ್ನು ಶ್ರೀಕೃಷ್ಣನು ಲೀಲಾಜಾಲವಾಗಿ ನಿವಾರಿಸಿದನು. ಯಾವ ಮೂಲಪ್ರಕೃತಿಯನ್ನು ತನ್ನಧೀನವಾಗಿ ಮಾಡಿಕೊಂಡು, ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಲೀಲಾಜಾಲವಾಗಿ ಅಚಿಂತ್ಯಾದ್ಭುತ ಅಪರಿಮಿತ ಶಕ್ತನಾದ ಶ್ರೀಕೃಷ್ಣನು ಮಾಡುತ್ತಾನೋ, ಅಂತಹ ಮಹಾಮಹಿಮನಿಗೆ ಈ ರೀತಿ ಬ್ರಹ್ಮಾಸ್ತ್ರಗಳಿಂದ ತನ್ನ ಭಕ್ತರನ್ನು ಕಾಪಾಡಿದ್ದು ಏನೂ ಅತಿಶಯವಲ್ಲ.

## ಕುಂತೀದೇವಿಯರಿಂದ ಶ್ರೀಕೃಷ್ಣನ ಸ್ತುತಿ

ನಂತರ ಶ್ರೀಕೃಷ್ಣನು ರಥವನ್ನು ಹತ್ತಲು ಸಿದ್ಧನಾಗಿ ನಿಂತಿದ್ದಾಗ, ಕುಂತೀದೇವಿಯು ಶ್ರೀಕೃಷ್ಣನನ್ನು ಸಮೀಪಿಸಿ ಈ ರೀತಿಯಾಗಿ ಸ್ತೋತ್ರಮಾಡಿದಳು. ಎಲೈ ಮೂಲಪ್ರಕೃತಿ ಎನಿಸಿದ ಲಕ್ಷ್ಮೀದೇವಿಗೂ ಉತ್ತಮನೂ ಸಕಲಚೇತನಾಚೇತನ ಜಗತ್ತಿಗೆ ಒಡೆಯನೂ,

ನಿಯಾಮಕನೂ, ಆದ ಜಗದಾದಿಕಾರಣ ಆದಿಪುರುಷನಾದ ಶ್ರೀಕೃಷ್ಣನೇ ನಿನಗೆ ನಮಸ್ಕಾರ! ನೀನು ಕಣ್ಣಿಗೆ ಕಾಣುತ್ತಿದ್ದರೂ, ನಮ್ಮ ಸರ್ವಪ್ರಯತ್ನಗಳಿಂದಲೂ ತಿಳಿಯಲ್ಪಡಲು ಸಾಧ್ಯನಲ್ಲ. ಸಮಸ್ತಭಾವಗಳೆನಿಸುವ ಜಡಚೇತನಾತ್ಮಕ ಸರ್ವವಸ್ತುಗಳ ಒಳಗೂ ಹೊರಗೂ ನೀನು ವ್ಯಾಪಿಸಿ ಶಾಶ್ವತನಾಗಿ ಇರುತ್ತೀಯೆ! ಜೀವಾಚ್ಛಾಧಿಕ ಪರಮಾಚ್ಛಾದಿಕಗಳೆಂಬ ನಿನ್ನ ಮಾಯೆಯಿಂದ ಮುಚ್ಚಲ್ಪಟ್ಟ ಜ್ಞಾನವುಳ್ಳ ಕೇವಲ ಮೂಢಳಾದ, ಹೆಂಗಸಾದ ನಾನು ಎಲ್ಲೆ! ಅಧೋಕ್ಷಜನೇ ನಿನ್ನ ಮಹಾಮಹಿಮೆಯನ್ನು ತಿಳಿಯಲಾರೆನು. ಪರಮಹಂಸರಾದ ಬ್ರಹ್ಮಾದಿಗಳೂ, ಸನಕಾದಿಗಳೂ ಮನಗಾಣದ ನಿನ್ನ ಅನಂತ ಯಶಸ್ಸಿನ ಬಗೆಯನ್ನು ನಾನು ಹೇಗೆ ತಾನೇ ತಿಳಿದೇನು!

ಮರಣಶೀಲವಾದ ಮನುಷ್ಯದೇಹದಿಂದ ನಿನ್ನ ಪಾದಾರವಿಂದಗಳಲ್ಲಿ ಜ್ಞಾನಪೂರ್ವಕ ಭಕ್ತಿಯೋಗವನ್ನು ಮಾಡಲನರ್ಹರಾದ ಸ್ತ್ರೀಯರು ನಿನ್ನನ್ನು ಹೇಗೆ ತಾನೇ ನೋಡಿ ಧನ್ಯರಾದಾರು! ನೀಲೋತ್ಪಲ ಶ್ಯಾಮಲವರ್ಣನೂ, ಸಮಸ್ತ ಅಜ್ಞಾನ ಪರಿಹಾರಕನೂ ಆದುದರಿಂದ ಕೃಷ್ಣಶಬ್ದವಾಚ್ಯನೇ! ಸಕಲ ಜಗತ್ತಿನೊಳಗೆ ವ್ಯಾಪಿಸಿ ಜ್ಞಾನ ಮತ್ತು ತೇಜಸ್ಸುಗಳ ಪ್ರಕಾಶಕನಾದ್ದರಿಂದ ವಾಸುದೇವ ನಾಮಕನೇ! ದೇವತಾಸ್ತ್ರೀಯರುಗಳಲ್ಲೆಲ್ಲಾ ಅತ್ಯಂತ ಸುಖಸಾರಸೌಂದರ್ಯರೂಪಳಾದ್ದರಿಂದ ದೇವಕೀ ಎಂದು ಕರೆಯಲ್ಪಡುವ ಲಕ್ಷ್ಮೀದೇವಿಯರಿಗೆ ಆನಂದವನ್ನು ಕೊಡುವವನಾದ್ದರಿಂದ ದೇವಕೀನಂದನ ನಾಮಕನಾದ ಶ್ರೀಕೃಷ್ಣನೇ! ದೇವಕೀದೇವಿ ನಂದಗೋಪರ ಕುಮಾರನಾಗಿ ಅವತರಿಸಿದ ಶ್ರೀಕೃಷ್ಣನೇ! ಗೋವುಗಳನ್ನು ಉತ್ಕೃಷ್ಟವಾಗಿ ಪರಿಪಾಲಿಸುವನೂ, ಗೋವರ್ಧನಗಿರಿಯನ್ನೆತ್ತಿದವನೂ, ವೇದಪ್ರತಿಪಾದ್ಯನೂ ಆದಕಾರಣ ಗೋವಿಂದನೆಂಬ ಹೆಸರುಳ್ಳ ಶ್ರೀಕೃಷ್ಣನೇ ನಿನಗೆ ನಮಸ್ಕಾರಗಳು. ನಮಸ್ಕಾರಗಳು! ಪದ್ಮನಾಭನೇ ನಿನಗೆ ನಮಸ್ಕಾರ. ಪದ್ಮಗಳಿಂದ ರಚಿತವಾದ ಲಕ್ಷ್ಮ್ಯಾತ್ಮಕ ವನಮಾಲಾ ಎಂಬ ಹಾರವನ್ನು ಧರಿಸಿರುವವನೇ ನಿನಗೆ ನಮಸ್ಕಾರ. ಪದ್ಮದಳನೇತ್ರನಿಗೆ ನಮಸ್ಕಾರ. ಪದ್ಮರೇಖೆಯಿಂದೊಪ್ಪುವ ಪಾದಕಮಲಗಳುಳ್ಳ ಶ್ರೀಕೃಷ್ಣನೇ ನಿನಗೆ ನಮಸ್ಕಾರ.

ದುಷ್ಟನಾದ ಕಂಸನಿಂದ ನಿರ್ಬಂಧಿಸಲ್ಪಟ್ಟು ಬಹುಕಾಲ ದುಃಖಪಟ್ಟು ಕಾತರಳಾಗಿದ್ದ ದೇವಕೀದೇವಿಯ ಶೋಕವನ್ನು ನಾಶಮಾಡಿದಂತೆ, ನನಗೂ ನನ್ನ ಮಕ್ಕಳಿಗೂ ಉಂಟಾದ ಅನೇಕ ವಿಪತ್ತುಗಳಿಂದ ನಮ್ಮನ್ನೆಲ್ಲಾ ಕಾಪಾಡಿ, ಅನಾಥರಾದ ನಮಗೆ ನಾಥನಾದ, ಎಲೈ ಜಗನ್ನಾಥ ಸರ್ವದಯಾಪರಮೂರ್ತಿ ಶ್ರೀಕೃಷ್ಣನೇ ನಮ್ಮನ್ನು ಶೋಕಸಾಗರದಿಂದ ಪಾರುಮಾಡಿರುತ್ತೀಯೆ! ವಿಷಭಕ್ಷಗಳನ್ನು ಕೌರವರು ಭೀಮನಿಗೆ ಬಡಿಸಿದಾಗ ಆ ವಿಷದಿಂದ ಭೀಮನನ್ನು

ರಕ್ಷಿಸಿರುತ್ತೀಯೆ! ಮನೆಯಲ್ಲಿ ಅಗ್ನಿಯಿಂದ ಸುಡಲ್ಪಟ್ಟ ನಮ್ಮನ್ನೆಲ್ಲಾ ಆ ಅಗ್ನಿಮುಖದಿಂದ ಪಾರುಮಾಡಿ ರಕ್ಷಿಸಿರುತ್ತೀಯೆ. ಅರಣ್ಯದಲ್ಲಿ ಮನುಷ್ಯ ಭಕ್ಷಕರಾದ ಹಿಡಿಂಬಾಸುರ, ಕಿರ್ಮೀರ ಮುಂತಾದವರಿಂದ ಭೀಮಸೇನನ ದ್ವಾರಾ ನಮ್ಮನ್ನು ಕಾಪಾಡಿರುತ್ತೀಯೆ! ಅಧಮರ ಸಭೆಯಾದ ದುರ್ಯೋಧನ, ಧೃತರಾಷ್ಟ್ರನ ಸಭೆಯಲ್ಲಿ ಮಾನಭಂಗ ಹೊಂದುತ್ತಿದ್ದ ಸತೀಶಿರೋಮಣಿಯಾದ ದ್ರೌಪದಿಯ ಮಾನರಕ್ಷಣೆಯನ್ನು ಮಾಡಿ ಅಕ್ಷಯವಸ್ತ್ರಗಳನ್ನಿತ್ತಿರುತ್ತೀಯೆ! ವನವಾಸಕಾಲದಲ್ಲಿ ನಮಗೆ ಉಂಟಾದ ಕಷ್ಟಪರಂಪರೆಗಳಲ್ಲಿ, ನಮಗೆ ನೇರವಾಗಿ ನಮ್ಮನ್ನು ರಕ್ಷಿಸುತ್ತಲೂ, ನಂತರ ಯುದ್ಧವು ಪ್ರಾಪ್ತವಾದಾಗ ಭೀಷ್ಮ, ದ್ರೋಣ, ಮಹಾರಥಿಕರಿಂದ ಬಿಡಲ್ಪಟ್ಟ ಅಮೋಘಗಳಾದ ಶಸ್ತ್ರಾಸ್ತ್ರಗಳಿಂದ ನನ್ನ ಮಕ್ಕಳನ್ನೂ, ಈಗ ಅಶ್ವತ್ಥಾಮನ ಅಸ್ತ್ರಗಳಿಂದ ನಮ್ಮೆಲ್ಲರನ್ನೂ ನಮ್ಮ ಕುಲವನ್ನೂ ರಕ್ಷಿಸಿ ಕಾಪಾಡಿರುತ್ತೀಯೆ! ಆ ಕಾಲಗಳಲ್ಲೆಲ್ಲಾ, ಯಾವ ನಿನ್ನ ಪರಮಮಂಗಳರೂಪ ದರ್ಶನ ಮಾಡಿದವರಿಗೆ ಪುನರ್ಜನ್ಮಾದಿ ಸಂಸಾರ ಭಯವಿಲ್ಲವೋ, ಅಂತಹ ನಿನ್ನ ದಿವ್ಯದರ್ಶನವನ್ನು ನೀನು ನಮಗೆ ಕರುಣಿಸಿರುತ್ತೀಯೆ!

ಆದ್ದರಿಂದ ಎಲೈ! ಶ್ರೀಕೃಷ್ಣನೇ ನಮಗೆ ನಿನ್ನ ಪರಮಮಂಗಳದರ್ಶನಗಳಿಗೆ ಕಾರಣಗಳಾದ ಮಹಾ ವಿಪತ್ತುಗಳೇ ಪದೇ ಪದೇ ನಿರಂತರವಾಗಿರಲಿ! ನಾವು ನಿನ್ನ ಮಂಗಳಮೂರ್ತಿಯನ್ನು ಆ ಮೂಲಕವಾದರೂ ನಿರಂತರ ನೋಡುವಂತಾಗಲಿ! ನೀನು ಅಕಿಂಚನರೆಂಬ ನಿರಪೇಕ್ಷ ಭಕ್ತರಿಗೆ ಒಲಿಯತಕ್ಕವನು. ಐಶ್ವರ್ಯ, ಉತ್ತಮಕುಲದಲ್ಲಿ ಜನ್ಮ, ವಿದ್ಯೆಗಳಿಂದಲೂ ಮತ್ತು ಯೌವ್ವನದಿಂದಲೂ ಕೂಡಿ ಮೆರೆಯುವ ಮದೋನ್ಮತ್ತರಿಗೆ ನೀನು ಗೋಚರನಾಗತಕ್ಕವನಲ್ಲ. ಆದುದರಿಂದ ಮದವನ್ನುಂಟುಮಾಡುವ ಐಶ್ವರ್ಯಾದಿಗಳು ನಮಗೆ ಬೇಡ. ನಿನ್ನ ಪಾದದರ್ಶನವೀಯುವ ಕಷ್ಟಪರಂಪರಗಳನ್ನೇ ನಮಗೆ ಕೊಡು ಸ್ವಾಮಿ! ನಿಷ್ಕಿಂಚಿನರೊಡೆಯನೂ, ನಿಷ್ಕಿಂಚಿನರ ಐಶ್ವರ್ಯನೂ, ನಿವೃತ್ತಧರ್ಮಗಳಿಗೆ ಆಶ್ರಯನೂ, ಸ್ವರಮಣನೂ, ಶಾಂತಮೂರ್ತಿಯೂ, ಮೋಕ್ಷದಾಯಕನೂ ಆದ ನಿನಗೆ ನಮಸ್ಕಾರ.

ಜನ್ಮಮರಣರಹಿತನಾಗಿ ಶಾಶ್ವತನಾಗಿರುವವನೂ, ಜಗಜ್ಜೀವನನಾದ ಪ್ರಾಣದೇವರನ್ನು ಸೃಷ್ಟಿಸಿ ಸಂಹಾರಮಾಡುವವನೂ ಆದುದರಿಂದ ಅನಾದಿನಿಧನನೆಂದು ಪ್ರಖ್ಯಾತನಾದವನೂ, ನಮ್ಮೆಲ್ಲರಿಂದ ಬೇರೆಯಾದವನೂ ಸರ್ವೋತ್ತಮನೂ ಆದುದರಿಂದ ಪರಶಬ್ದವಾಚ್ಯನೂ, ಉಮಾಪತಿಯಾದ ಈಶ್ವರನಿಗೂ ಚೇಷ್ಟಾಪ್ರದನಾದ್ದರಿಂದ ಈಶಾನನಾಮಕನೂ, ಸರ್ವೇಶ್ವರನೂ, ಆಯಾಯಜೀವರ ಯೋಗ್ಯತೆ ಕರ್ಮಾನುಗುಣವಾಗಿ ಫಲಕೊಡುವವನಾದ್ದರಿಂದ, ಸಮಸ್ತ

ಪ್ರಾಣಿಗಳಲ್ಲಿ ಸಮಾನವಾದ ದಯೆ ಮಾಡುವವನೂ, ಯಾವ ಕೌರವ ಪಾಂಡವರೆಂಬ ಎರಡು ಕಾಡುಗಳಲ್ಲಿ ಪರಸ್ಪರ ಸಂಘರ್ಷಣಾರೂಪ ಯುದ್ಧದಿಂದ ಉಂಟಾದ ಅಗ್ನಿಜ್ವಾಲೆಯಿಂದ, ಇಬ್ಬರ ಕುಲಗಳನ್ನೂ ಸಂಹರಿಸಿದವನೂ ಆದ ನಿನಗೆ, ಕಾಲನಾಮಕನಿಗೆ ನಮಸ್ಕಾರ. ಲೋಕದಜನರು ದ್ವೇಷಿಸುವವರನ್ನು ದ್ವೇಷಮಾಡುವರು. ಪ್ರೀತಿಸುವರಲ್ಲಿ ಪ್ರೀತಿಮಾಡುವರು. ನೀನು ಹಾಗಲ್ಲ.

ನಿನ್ನಲ್ಲಿ ಭಕ್ತಿಮಾಡಿ ಬೇಡಿಕೊಂಡ ಅರ್ಜುನನಿಗೆ ನೀನು ಸಾರಥಿಯಾದೆ. ದ್ವೇಷಮಾಡುವ ದುರ್ಯೋಧನನಿಗೂ ಅವನು ಬೇಡಿದ ಯಾದವಸೈನ್ಯಬಲವನ್ನು ಕೊಟ್ಟೆ! ಪ್ರಿಯರಲ್ಲಿಯೂ ದ್ವೇಷಿಗಳಲ್ಲಿಯೂ ಈ ರೀತಿ ಸಹನೆಯಿಂದ ಸಮಾನವಾಗಿ ನಡೆದುಕೊಳ್ಳುವ ನಿನ್ನ ಮಹಿಮೆಗೆ ಎಲ್ಲಿ ಸರಿಯುಂಟು? ಹಾಗಾದರೂ ದುರ್ಯೋಧನನ ಮನೆಗೆ ಸಂಧಿಗೋಸ್ಕರವಾಗಿ ನೀನು ಹೋಗಿದ್ದಾಗ ಅವನು ಮಾಡಿದ್ದ ಔತಣದ ಏರ್ಪಾಡನ್ನು, ಎಲೈ! ದುರ್ಯೋಧನನೇ! ನೀನು ನಿರಂತರ ನನ್ನನ್ನೂ ಪಾಂಡವರನ್ನೂ ದ್ವೇಷಿಸುತ್ತೀಯೆ. ನಮ್ಮಲ್ಲಿ ಹಿತನಲ್ಲದ ನಿನ್ನಲ್ಲಿ ಹೇಗೆ ನಾನು ಭೋಜನಾದಿಗಳನ್ನು ಮಾಡಲಾದೀತು? ನಿನ್ನ ಔತಣವನ್ನು ನಾನೊಲ್ಲೆನೆಂದು ಉಪೇಕ್ಷೆ ಮಾಡಿ, ಲೋಕಜನರಂತೆಯೂ ವಿಡಂಬನಾದಿಗಳನ್ನು ಮಾಡಿ ತೋರಿಸಿರುತ್ತೀಯೆ! ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ಹಯಗ್ರೀವಾದಿ ತಿರ್ಯಗ್ರೂಪಗಳಿಂದ ಚಿನ್ಮಯ ಸಾರಸೌಂದರ್ಯರೂಪನಾದನೀನು ಅವತಾರಗಳನ್ನುಮಾಡಿ, ಅವುಗಳ ಚರ್ಯೆಗಳನ್ನು ಅನುಕರಿಸಿ ಲೋಕಕ್ಕೆ ಆಶ್ಚರ್ಯವನ್ನುಂಟುಮಾಡಿರುತ್ತೀಯೆ! ಇಂತಹ ನಿನ್ನ ಲೋಕಮೋಹಕಚರ್ಯೆಗಳಿಂದ ರಮಾ ಬ್ರಹ್ಮಾದಿಗಳು ಮೋಹಿತರಾಗಿರುವಾಗ ನಾವುಗಳು ಮೋಹಿತರಾಗುವುದು ಏನು ಹೆಚ್ಚು ಸ್ವಾಮಿ!

ನೀನು ಹಾಲು ಮೊಸರುಗಡಿಗೆಗಳನ್ನೊಡೆದು, ಬೆಣ್ಣೆಯನ್ನೆಲ್ಲಾ ಬೆಕ್ಕು ಕೋತಿಗಳ ಪಾಲುಮಾಡಿ, ನಿನ್ನ ತಾಯಿ ಯಾವ ಯಶೋದೆಯನ್ನು ರೇಗಿಸಿದಾಗ, ಅವಳು ಒಂದು ಹಗ್ಗದಿಂದ ಕಟ್ಟಲು ಪ್ರಯತ್ನಿಸಿ, ಎಷ್ಟೆಷ್ಟು ಹಗ್ಗಗಳನ್ನು ಸೇರಿಸಿ ಉದ್ದಮಾಡಿಕೊಂಡು ಕಟ್ಟಲು ಪ್ರಯತ್ನಿಸಿದರೂ, ಆ ಹಗ್ಗಗಳು ಇನ್ನೂ ತುಂಡಾಗಿಯೇ ಇದ್ದು ನಿನ್ನನ್ನು ಕಟ್ಟಲಾಗಲಿಲ್ಲವೊ! ಆಗ ಬಾಯಾರಿ ಬೆವರಿ ಆಯಾಸಪಟ್ಟು ನಿನ್ನ ಮುಖ ನೋಡುತ್ತಿದ್ದ ಯಶೋದೆಗೆ, ಮೊದಲು ಆಕಳಿಸಿ ನಿನ್ನ ಪುಟ್ಟ ಬಾಯಲ್ಲಿ ಇಡೀ ಬ್ರಹ್ಮಾಂಡವನ್ನು ತೋರಿಸಿ, ನಂತರ ಆಯಾಸಪಟ್ಟು, ಇವನನ್ನು ಹೇಗೆ ಕಟ್ಟುವುದು ಎಂದು ತಿಳಿಯಲಾರದೇ ಇದ್ದ ತಾಯನ್ನು ನೋಡಿ ಕರುಣೆಯಿಂದ, ಆ ಹಗ್ಗದ ಒಂದು ಭಾಗದಲ್ಲೇ ಕಟ್ಟಿಹಾಕಿಸಿಕೊಂಡವನಾಗಿ, ನಂತರ ಅವಳಿಗೂ, ಸಕಲ ಜಗತ್ತಿಗೂ ಭಯಪಡಿಸಿದ

## अथ अष्टमोऽध्यायः

ನೀನು, ಬಹಳ ಭಯಪಟ್ಟವನಂತೆ ಮುಖಮಾಡಿಕೊಂಡು ಅಳುತ್ತಾ, ನಿನ್ನ ಪುಟ್ಟ ಕೈಗಳಿಂದ ಕಣ್ಣುಗಳನ್ನುಜ್ಜಿಕೊಂಡು ಕಣ್ಣಿನ ಕಾಡಿಗೆಯನ್ನು ಮುಖಕ್ಕೆಲ್ಲಾ ಬಳಿದುಕೊಂಡು ರಮ್ಯವಾಗಿ ತೋರುತ್ತಾ ಇದ್ದ ನಿನ್ನ ಪರಮಸುಂದರ ಬಾಲರೂಪವು ನಮ್ಮನ್ನೂ, ಯಶೋದೆಯನ್ನೂ ಎಷ್ಟು ಮೋಹಗೊಳಿಸಿತ್ತು! ಎಷ್ಟು ಆನಂದಗೊಳಿಸಿತ್ತು! ಸ್ವಾಮಿ! ನಿನ್ನ ಲೋಕಮೋಹಕವಾದ ಈ ವಿಡಂಬನೆಯ ನೆಲೆ ಕಂಡವರಾರು?

ಈ ವಿಧವಾದ ಕ್ರೀಡೆಗಳನ್ನು ಮಾಡಿದ ನಿನ್ನ ಅವತಾರವು ಯಾದವಕುಲದಲ್ಲಿ, ಜ್ಞಾನಿಗಳು ನಿನ್ನ ಪಾವನ ಕೀರ್ತಿಯನ್ನೂ ಅದ್ಭುತಮಹಿಮೆಗಳನ್ನೂ ಲೋಕಜನರು ನೋಡಿ ಆನಂದಿಸಿ, ಹೊಗಳಿ, ಸದ್ಗತಿಯನ್ನು ಪಡೆಯುವುದಕ್ಕಾಗಿ ಆದದ್ದೆಂದೂ; ಇನ್ನೂ ಕೆಲವರು ದೇವಕಿವಸುದೇವರು ಕಷ್ಟಪಡುತ್ತಾ, ಕಷ್ಟಪರಿಹಾರಕ್ಕಾಗಿ ನಿನ್ನನ್ನು ಪ್ರಾರ್ಥಿಸಲಾಗಿ, ನೀನು ಅವರ ಮಗನಂತೆ ಆವಿರ್ಭವಿಸಿದೆ ಎಂದೂ ಹೇಳುತ್ತಾರೆ. ಇನ್ನೂ ಕೆಲವರು ದುಷ್ಟರಾದ ದೈತ್ಯರು ಭೂಲೋಕದಲ್ಲಿ ಹುಟ್ಟಿ, ಲೋಕಕಂಟಕರಾಗಿರಲಾಗಿ, ಲೋಕದ ಜೀವರ ಕಷ್ಟಪರಿಹಾರ ಮಾಡಿ ರಕ್ಷಿಸುವುದಕ್ಕಾಗಿಯೂ ಭೂಭಾರಪರಿಹಾರಕ್ಕಾಗಿಯೂ ಜನ್ಮಾದಿ ದೋಷರಹಿತನಾದ ನೀನು ನಾಭಿಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರಿಂದಲೂ, ದೇವತೆಗಳಿಂದಲೂ ಪ್ರಾರ್ಥಿತನಾಗಿ, ದುಷ್ಟಶಿಕ್ಷಣ ಶಿಷ್ಟರಕ್ಷಕನಾಗಿ ಅವತಾರಮಾಡಿರುವೆ ಎಂದು ಹೇಳುತ್ತಾರೆ. ಇನ್ನೂ ಕೆಲವು ಪಂಡಿತರು, ಅವಿದ್ಯಾಕಾಮಕರ್ಮಗಳೆಂಬ ಪ್ರವಾಹದಲ್ಲಿ ಸಿಕ್ಕಿ ಬಳಲುವ ಜೀವರು, ಶ್ರವಣ, ಮನನ, ಪೂಜಾದಿಗಳಿಂದಲೂ, ಧ್ಯಾನದಿಂದಲೂ ಉಪಾಸನೆ ಮಾಡಲು ಅನುಕೂಲಕ್ಕಾಗಿ ನಿನ್ನ ಕೃಷ್ಣಾದ್ಯವತಾರಗಳಾದವೆಂದೂ ಹೇಳುತ್ತಾರೆ. ಸರ್ವಾಭೀಷ್ಟಪ್ರದಗಳಾದ ನಿನ್ನ ಗುಣರೂಪಕ್ರಿಯಾದಿಗಳನ್ನು ಸಜ್ಜನರು ಆದರದಿಂದ ಕೇಳಿ, ಗುಣಗಾನಮಾಡಿ, ಆನಂದಿಸಿ, ನಿರಂತರ ಸ್ಮರಣೆಮಾಡಿ, ಪ್ರವಾಹರೂಪ ಸಂಸಾರಬಂಧನದಿಂದ ಬಿಡಿಸುವ ನಿನ್ನ ಚರಣಕಮಲಗಳ ಆಶ್ರಯದಿಂದ ಸಮಸ್ತದುಃಖಗಳನ್ನು ಕಳೆದುಕೊಂಡು, ನಿರ್ಮಲಹೃದಯರಾಗಿ ನಿನ್ನ ಪಾದದರ್ಶನವನ್ನು ಮಾಡುತ್ತಾರೆ. ಅಂತಹವರಿಗೇ ಮೋಕ್ಷಸುಖವೂ ಲಭಿಸುವುದು.

ನಿನ್ನ ಅನಿಮಿತ್ತ ಉಪಕಾರಗಳಿಂದ ನೀನು ನಮಗೆ ಸ್ವಜನ, ಪುತ್ರಮಿತ, ್ರಕಳತ್ರಾದಿ ಬಾಂಧವರಿಗಿಂತಲೂ, ಪ್ರಿಯತಮನೂ ಆಪ್ತನೂ ಆಗಿರುತ್ತೀಯೆ. ನಿನ್ನ ಅಗಲಿಕೆಯನ್ನು ನೋಡಿ ನಾವು ದುಃಖಿತರಾಗಿದ್ದೇವೆ. ನಿನ್ನ ಮಂಗಳಮೂರ್ತಿಯು ನಮ್ಮ ಕಣ್ಣಿಂದ ಮರೆಯಾಗುವ ಕಾಲವು ಪ್ರಾಪ್ತವಾಗಿರುವುದನ್ನು ನಾವು ಸಹಿಸಲು ಶಕ್ತರಲ್ಲರಾಗಿದ್ದೇವೆ. ನಿನ್ನ

ದರ್ಶನವೇ ನಮ್ಮ ಸಕಲೇಂದ್ರಿಯಗಳಿಗೆ ಪ್ರಯೋಜನ. ನೀನು ದ್ವಾರಕಾಪಟ್ಟಣಕ್ಕೆ ತೆರಳಿದ ನಂತರ, ನಮ್ಮ ಇಂದ್ರಿಯಗಳಿಗೆ ಉತ್ಸಾಹಕಾರಣವಿಲ್ಲದ್ದರಿಂದ ನಾವು ನಿರುತ್ಸಾಹಿಗಳಾಗಿ ಪುನರ್ದರ್ಶನಾಪೇಕ್ಷಿಗಳಾಗಿಯೇ ಇರುತ್ತೇವೆ. ದುಷ್ಟರಿಂದ ಬಹುವಾಗಿ ಪೀಡಿತರಾದ ನಮಗೆ ನಿನ್ನ ಪಾದಾಶ್ರಯದ ಹೊರತು ಬೇರೆ ಇಲ್ಲ. ನಾವೂ ನಮ್ಮ ಈ ರಾಜ್ಯ ಐಶ್ವರ್ಯಗಳೂ ನಿನ್ನ ಪಾದಸನ್ನಿಧಿಯಿಂದ ಬಹುಶೋಭಾಯಮಾನರಾಗಿದ್ದೇವೆ ಸ್ವಾಮಿ! ನಿನ್ನ ಅಗಲಿಕೆಯುಂಟಾದ ನಂತರ ನಾವೆಲ್ಲರೂ ಕಾಂತಿ ಇಲ್ಲದವರಂತೆಯೇ ಇರುತ್ತೇವೆ. ನಮ್ಮ ರಾಜ್ಯಾದಿ ಐಶ್ವರ್ಯಗಳೂ ನಮಗೆ ಸಂತೋಷವನ್ನುಂಟುಮಾಡುವುದಿಲ್ಲ. ನಿನ್ನ ಕೃಪಾದೃಷ್ಟಿಗೆ ಪಾತ್ರರಾದ ಈ ನಮ್ಮ ರಾಜ್ಯದ ಪ್ರಜೆಗಳೂ, ಚತುರಂಗಬಲಗಳೂ, ನಾವೂ ಮತ್ತು ನದೀ, ಪರ್ವತ, ಓಷಧಿಗಳು, ವೃಕ್ಷಗಳೂ, ಸೂರ್ಯಚಂದ್ರಾಗ್ನಿ ನಕ್ಷತ್ರಾದಿಗಳೂ, ಅತ್ಯಂತ ಪುಷ್ಟಿಯನ್ನೂ, ಸುಖವನ್ನೂ, ತೇಜಸ್ಸನ್ನೂ, ಅಭಿವೃದ್ಧಿಯನ್ನೂ ಹೊಂದುತ್ತಿದ್ದೇವೆ.

ಎಲೈ! ವಿಶ್ವೇಶ್ವರನೇ! ವಿಶ್ವವ್ಯಾಪಿಯೇ! ವಿಶ್ವಮೂರ್ತಿಯೇ! ಪಾಂಡವ ಯಾದವರಲ್ಲಿ ನನಗೆ ಮನಸ್ಸಿನಲ್ಲಿರುವ ಪ್ರೀತಿಯೆಂಬ ನಿನ್ನ ಮೋಹಪಾಶವನ್ನು ದೃಢವಾಗಿ ಕತ್ತರಿಸಿಬಿಡು. ಇವರು ನಿನ್ನ ಭಕ್ತರಾದ್ದರಿಂದ ಪ್ರೀತಿಸಲು ಅರ್ಹರಾದಾಗ್ಯೂ, ನನಗೆ ನಿನ್ನ ಮಾಯಾಶಕ್ತಿಯಿಂದ, ಪುತ್ರಮಿತ್ರಾದಿ ಬಂಧುಸ್ನೇಹವೆಂಬ ದುಷ್ಟಭಾವವೂ ಅಂಟಿಕೊಂಡಿರುವುದರಿಂದ, ಸ್ನೇಹಪಾಶಚ್ಛೇದನವನ್ನು ನಾನು ಬೇಡುತ್ತೇನೆ - ನಿನ್ನ ಅತ್ಯಂತ ನಿರ್ಮಲವಾದ ಪಾದದಲ್ಲಿ, ಗಂಗಾನದಿಯು ಹೇಗೆ ಸಮುದ್ರದಲ್ಲಿ ಸೇರುತ್ತವೆಯೋ ಅದರಂತೆ ಮನೋಭಕ್ತಿಭಾವವು ನನಗೆ ನಿರಂತರ ಉಂಟಾಗಲಿ! ಇತರ ವಿಷಯಗಳಲ್ಲಿ ನನ್ನ ಮನಸ್ಸು ಪ್ರವೇಶಿಸದಿರಲಿ! ಶ್ರೀದೇವಿಯರ ಬಾಹುಲತೆಗಳಿಂದ ಆಲಿಂಗಿತನಾಗಿ, ಶ್ರೀದೇವಿಯರ ದೇಹದ ಕುಂಕುಮದಿಂದ ರಂಜಿತವಾದ ಕೃಷ್ಣನೀಲವರ್ಣನಾದ, ಕಮನೀಯಗಾತ್ರನಾದ ಶ್ರೀಕೃಷ್ಣನೇ! ಅರ್ಜುನಪ್ರಿಯಮಿತ್ರನೇ! ದುಷ್ಟರಾದ ಲೋಕಕಂಟಕರಾದ ರಾಜರೆಂಬ ಬಿದಿರುಮೆಳೆಗೆ ಅಗ್ನಿಸ್ವರೂಪನೇ! ದೇವತೆಗಳಿಂದಲೂ, ಭಕ್ತರಾದ ರಾಜರುಗಳಿಂದಲೂ ಸ್ತುತ್ಯನೇ! ಪೂರ್ಣಶಕ್ತನೇ! ಸಕಲವೇದೈಕಲಭ್ಯನೇ! ಗೋಬ್ರಾಹ್ಮಣ ದೇವತೆಗಳ ದೈನ್ಯಪರಿಹರಿಸಿ ಪರಮಪ್ರೀತಿಯಿಂದ ತ್ವರೆಯಾಗಿ ರಕ್ಷಿಸಲು ಅವತಾರಗಳನ್ನು ಮಾಡುವ ಸ್ವಭಾವವುಳ್ಳವನೇ! ಯೋಗಿಗಳಿಗೆಲ್ಲಾ ಸ್ವಾಮಿಯಾದವನೇ! ಬ್ರಹ್ಮಾದಿ ಸಕಲ ಜಗತ್ತಿಗೆ ಜ್ಞಾನಪ್ರದನಾದ ಆದಿಗುರುವೇ! ಅಷ್ಟೈಶ್ವರ್ಯಸಂಪನ್ನನಾದ ಶ್ರೀಕೃಷ್ಣನೇ ನಿನಗೆ ನಮಸ್ಕಾರ! ಎಂದಳು. ಈ ರೀತಿಯಾಗಿ ಅವ್ಯಕ್ತ ಮಧುರಸ್ವರ ವಾಕ್ಯಗಳಿಂದ ಸರ್ವಶಾಸ್ತ್ರಸಮ್ಮತ ರೀತಿಯಲ್ಲಿ ಕುಂತೀದೇವಿಯು ಶ್ರೀಕೃಷ್ಣನನ್ನು

ಸ್ತುತಿಸಿ ಸುಮ್ಮನಾದಳು.

ನಂತರ ಶ್ರೀಕೃಷ್ಣನು ಮುಗುಳ್ನಗೆಯಿಂದ ಕುಂತೀದೇವಿಯನ್ನು ನೋಡಿ, ನಿನ್ನ ಇಷ್ಟದಂತೆಯೇ ಎಲ್ಲವೂ ಆಗಲಿ! ಎಂದು ಹೇಳಿ ನಂತರ ದ್ರೌಪದಾದೇವಿ ಮುಂತಾದವರಿಗೆ, ನಾನು ದ್ವಾರಕಾಪಟ್ಟಣಕ್ಕೆ ಹೋಗಿ ಬರುವೆನೆಂದು ಹೇಳಿ, ಅನುಸರಿಸಿ ಬರುತ್ತಿದ್ದ ಪಾಂಡವರನ್ನು ಅಲ್ಲಿಯೇ ನಿಲ್ಲುವಂತೆ ಹೇಳಿ, ಸ್ವಾಮಿಯು ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಲುದ್ಯುಕ್ತನಾಗಿ ಪುನಃ ಸ್ವಲ್ಪ ಕಾಲ ಇದ್ದು, ಧರ್ಮರಾಯನಿಗೆ ಮನಸ್ಸಮಾಧಾನ ಮಾಡಬೇಕೆಂದು ಸರ್ವರಿಂದಲೂ ಪ್ರಾರ್ಥಿತನಾಗಿ, ಪ್ರಯಾಣ ಮಾಡದೇ ನಿಂತನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಎಂಟನೆಯ ಅಧ್ಯಾಯವು ಮುಗಿಯಿತು.**

## अथ नवमोऽध्यायः

**सूत उवाच**

व्यासाद्यैरीश्वरेहाज्ञैः कृष्णेनाद्भुतकर्मणा ।
प्रबोधितोऽपीतिहासैः नाबुध्यत शुचार्पितः ॥ १ ॥

आह राजा धर्मसुतः चिन्तयन् सुहृदां वधम् ।
प्राकृतेनात्मना विप्राः स्नेहमोहवशं गतः ॥ २ ॥

अहो मे पश्यताज्ञानं हृदि रूढं दुरात्मनः ।
पारक्यस्यैव देहस्य वह्वीर्मेऽक्षोहिणीर्हताः ॥ ३ ॥

न मे स्यान्निरयान्मोक्षो ह्यपि वर्षायुतायुतैः ।
बालद्विजसुहृन्मित्रपितृभ्रातृगुरुद्रुहः ॥ ४ ॥

नैनो राज्ञः प्रजाभर्तुः धर्मो युद्धे वधो द्विषाम् ।
इति मे न तु बोधाय कल्पते शाश्वतं वचः ॥ ५ ॥

स्त्रीणां मद्धतबन्धूनां द्रोहो योऽसाविहान्वितः ।
कर्मभिर्हयमेधीयैर्नाहं कल्पो व्यपोहितुम् ॥ ६ ॥

यथा पङ्केन पङ्काम्भ सुरया वा सुराकृतम् ।
भूतहत्यां तथैवैतां न यज्ञो मार्ष्टुमर्हति ॥ ७ ॥

## अथ नवमोऽध्यायः

**सूत उवाच**

इति भीतः प्रजाद्रोहात्सर्वधर्मविवित्सया ।
ततो विशसनं प्रायाद्यत्र देवव्रतोऽपतत् ॥ ८ ॥

तदा तद्भ्रातरः सर्वे सदश्वैस्स्वर्णभूषितैः ।
अन्वगच्छन् रथैर्विप्राः व्यासधौम्यादयस्तथा ॥ ९ ॥

भगवानपि विप्रर्षे रथेन सधनञ्जयः ।
स तैर्व्यरोचत नृपः कुबेर इव गुह्यकैः ॥ १० ॥

दृष्ट्वा निपतितं भूमौ दिवश्च्युतमिवामरम् ।
प्रणेमुः पाण्डवा भीष्मं सानुगाः सहचक्रिणः ॥ ११ ॥

तत्र ब्रह्मर्षयः सर्वे देवर्षयश्च सत्तम ।
राजर्षयश्च तत्रासन् द्रष्टुं भरतपुङ्गवम् ॥ १२ ॥

पर्वतो नारदो धौम्यः भगवान् बादरायणः ।
बृहदश्वो भरद्वाजः सशिष्यो रेणुकासुतः ॥ १३ ॥

वसिष्ठ इन्द्रप्रमदस्त्रितो गृत्समदोऽसितः ।
कक्षीवान् गौतमोऽत्रिश्च कौशिकोऽथ सुदर्शनः ॥ १४ ॥

अन्ये च मुनयो ब्रह्मन् ब्रह्मरातादयोऽमलाः ।
शिष्यैरुपेता आजग्मुः कश्यपाङ्गिरसादयः ॥ १५ ॥

तान् समेतान् महाभाग उपलभ्य वसूत्तमः ।
पूजयामास धर्मज्ञो देशकालविभागवित् ॥ १६ ॥

कृष्णं च तत्प्रभावज्ञ आसीनं जगदीश्वरम् ।
हृदिस्थं पूजयामास माययोपात्तविग्रहम् ॥ १७ ॥

पाण्डुपुत्रानुपासीनान् प्रश्रयप्रेमसन्नतान् ।
अभ्याचष्टानुरागास्रैरन्धीभूतेन चक्षुषा ॥ १८ ॥

**भीष्म उवाच**

## अथ नवमोऽध्यायः

अहो कष्टमहोऽन्याय्यं यद्यूयं धर्मनन्दन।
जीवितुं नार्हथ क्लिष्टं विप्रधर्माच्युताश्रयाः ॥ १९ ॥

संस्थितेऽतिरथे पाण्डौ पृथा बालप्रजा वधूः।
युष्मत्कृते बहून् क्लेशान् प्राप्ता(ऽ)तोकवती यथा ॥ २० ॥

सर्वं कालकृतं मन्ये भवतां च यदप्रियम्।
सकालो यद्वशे लोको वायोरिव घनावलिः ॥ २१ ॥

यत्र धर्मसुतो राजा गदापाणिर्वृकोदरः।
कृष्णोऽस्त्री गाण्डिवं चापं सुहृत्कृष्णस्ततो विपत् ॥ २२ ॥

न ह्यस्य कर्हिचिद्राजन् पुमान् वेद विधित्सितम्।
यद्विजिज्ञासया युक्ताः मुह्यन्ति कवयोऽपि हि ॥ २३ ॥

तस्माज्जगद्दैवतन्त्रं व्यवस्य भरतर्षभ।
तस्यानुविहितोऽनाथा नाथ पाहि प्रजाः प्रभो ॥ २४ ॥

एष वै भगवान् साक्षादाद्यो नारायणः पुमान्।
मोहयन् मायया लोकं गूढश्चरति वृष्णिषु ॥ २५ ॥

अस्यानुभावं भगवान् वेद गुह्यतमं शिवः।
देवर्षिर्नारदः साक्षाद्भगवान् कपिलो नृप ॥ २६ ॥

यं मन्यसे मातुलेयं प्रियं मित्रं सुहृत्तमम्।
अकरोः सचिवं दूतं सौहृदादथ सारथिम् ॥ २७ ॥

सर्वात्मनः समदृशो ह्यद्वयस्यानहकृतेः।
तत्कृतं मतिवैषम्यं निरवद्यस्य न क्वचित् ॥ २८ ॥

तथाप्येकान्तभक्तेषु पश्य भूपानुकम्पितम्।
यन्मेऽसूंस्त्यजतः साक्षात्कृष्णो दर्शनमागतः ॥ २९ ॥

भक्त्याऽऽवेश्य मनो यस्मिन् वाचा यन्नाम कीर्तयन्।
त्यजन् कलेवरं योगी मुच्यते कामकर्मभिः ॥ ३० ॥

स देवदेवो भगवान् प्रतीक्षतां कलेवरं यावदिदं हिनोम्यहम्।
प्रसन्नहासारुणलोचनोल्लसन्मुखाम्बुजो ध्यानपथश्चतुर्भुजः ॥ ३१ ॥

**सूत उवाच**

युधिष्ठिरस्तदाकर्ण्य शयानं शरपञ्जरे।
अपृच्छद्विविधान् धर्मान् ऋषीणामनुशृण्वताम्॥ ३२ ॥

पुरुषस्वभावविहितान् यथावर्णं यथाश्रमम्।
वैराग्यरागोपाधिभ्यामाम्नातोभयलक्षणान्॥ ३३ ॥

दानधर्मान् राजधर्मान् मोक्षधर्मान् विभागशः।
स्त्रीधर्मान् भगवद्धर्मान् समासव्यासयोगतः ॥ ३४ ॥

धर्मार्थकाममोक्षांश्च सहोपायान् यथा मुने।
नानाख्यानेतिहासेषु वर्णयामास तत्ववित्॥ ३५ ॥

धर्मान् प्रवदतस्तस्य स कालः प्रत्युपस्थितः।
यो योगिनश्छन्दमृत्योर्वाञ्छितस्तूत्तरायणः ॥ ३६ ॥

तदोपसंहृत्य गिरं सहस्रणीः विमुक्तसङ्गं मन आदिपूरुषे।
कृष्णे लसत्पीतपटे चतुर्भुजे पुरः स्थितेऽमीलितदृग्व्यधारयत्॥ ३७ ॥

विशुद्धया धारणया धुताशुभः तदीक्षयैवाशु गतायुधव्यथः।
निवृत्तसर्वेन्द्रियवृत्तिविभ्रमः तुष्टाव जल्पं विसृजन् जनार्दनम्॥ ३८ ॥

**भीष्म उवाच**

इति मतिरुपकल्पिता वितृष्णा भगवति सात्वतपुङ्गवे विभूम्नि।
स्वसुख उपगते क्वचिद्विहर्तुं प्रकृतिमुपेयुषि यद्भवप्रवाहः ॥ ३९ ॥

त्रिभुवनकमनं तमालवर्णं रविकरगौरवराम्बरं दधाने।
वपुरलककुलावृताननाब्जं विजयसखे रतिरस्तु मेऽनवद्या॥ ४० ॥

युधि तुरगरजोविधूम्रविष्वक् कचलुलितश्रमवार्यलंकृतास्ये।
मम निशितशरैर्विभिद्यमानत्वचि विलसत्कवचेऽस्तु कृष्ण आत्मा॥ ४१ ॥

सपदि सखिवचो निशम्य मध्ये निजपरयोर्बलयो रथं निवेश्य।

## अथ नवमोऽध्यायः

स्थितवति परसैनिकायुरक्ष्णा हृतवति पार्थसखे रतिर्ममास्तु ॥ ४२ ॥

व्यवसितपृतनामुखं निरीक्ष्य स्वजनवधाद्विमुखस्य दोषबुद्ध्या ।
कुमतिमहरदात्मविद्यया यश्चरणरतिः परमस्य तस्य मेऽस्तु ॥ ४३ ॥

स्वनियममपहाय मत्प्रतिज्ञां ऋतमधिकर्तुमवप्लुतो रथस्थः ।
धृतरथचरणोऽभ्ययाद् बलाग्रे हरिरिव हन्तुमिमं गतोत्तरीयः ॥ ४४ ॥

शितविशिखहतो विशीर्णदंसः क्षतजपरिप्लुत आततायिनो मे ।
प्रसभमभिससार मद्वधार्थं स भवतु मे भगवान् मुदे मुकुन्दः ॥ ४५ ॥

विजयरथकुटुम्ब आत्ततोत्रे धृतहयरश्मिजितश्रमेक्षणीये ।
भगवति रतिरस्तु मे मुमूर्षोः यमिह निरीक्ष्य हता गताः स्वरूपम् ॥ ४६ ॥

ललितगतिविलासवल्गुहासप्रणयनिरीक्षणकल्पितोरुमानाः ।
कृतमनुकृतवत्य उन्मदान्धाः प्रकृतिमगुः किल यस्य गोपवध्वः ॥ ४७ ॥

मुनिगणनृपवर्यसंकुलेऽन्तः सदसि युधिष्ठिरराजसूय एषाम् ।
अर्हणमभिपेद ईक्षणीयो मम दृशिगोचर एष आविरात्मा ॥ ४८ ॥

तमिममहमजं शरीरभाजां हृदि हृदि विष्ठितमात्मकल्पितानाम् ।
प्रतिदृशमिव नैकधाकमेकं समधिगतोऽस्मि विधूतभेदमोहः ॥ ४९ ॥

क्षितिभरमवरोपितं कुरूणां श्वसन इवासृजदक्षवंशवह्निम् ।
तमिममजमनुव्रतार्तिहांघ्रिं हृदि परिरभ्य जहामि मर्त्यनीडम् ॥ ५० ॥

### सूत उवाच

कृष्ण एवं भगवति मनोवाग्दृष्टिवृत्तिभिः ।
आत्मन्यात्मानमाविश्य सोऽन्तः श्वास उपारमत् ॥ ५१ ॥

संपद्यमानमाज्ञाय भीष्मं ब्रह्मणि निष्कले ।
सर्वे बभूवुस्ते तूष्णीं वयांसीव दिनात्यये ॥ ५२ ॥

तत्र दुन्दुभयो नेदुः देवगन्धर्वनादिताः ।
शशंसुः साधवो ब्रह्मन् खात्पेतुः पुष्पवृष्टयः ॥ ५३ ॥

तस्य निर्हरणादीनि संपरेतस्य भार्गव ।
युधिष्ठिरः कारयित्वा मुहूर्तं दुः खितोऽभवत् ॥ ५४ ॥

तुष्टुवुर्मुनयो हृष्टाः कृष्णं तद्गुह्यनामभिः ।
ततस्ते कृष्णहृदयाः स्वाश्रमान् प्रययुः पुनः ॥ ५५ ॥

ततो युधिष्ठिरो गत्वा सकृष्णो गजसाह्वयम् ।
पितरं सान्त्वयामास गान्धारीं च तपस्विनीम् ॥ ५६ ॥

पित्रा चानुमतो राजा वासुदेवानुमोदितः ।
चकार राज्यं धर्मेण पितृपैतामहं विभुः ॥ ५७ ॥

**॥ इति श्रीमद्भागवते प्रथमस्कन्धे नवमोऽध्यायः ॥**

## ॥ ಒಂಭತ್ತನೆಯ ಅಧ್ಯಾಯ ॥

### ಶ್ರೀಧರ್ಮರಾಜರ ಪ್ರಲಾಪ

ಈ ಅಧ್ಯಾಯದಲ್ಲಿ, ಸ್ವಸ್ವರೂಪಾನುಭವರೂಪವಾದ ಮೋಕ್ಷವು ಪುರುಷಾರ್ಥಗಳಲ್ಲೆಲ್ಲಾ ಉತ್ತಮೋತ್ತಮವಾದದ್ದೆಂದೂ, ಇಂತಹ ಮೋಕ್ಷವು ಶ್ರೀಪರಮಾತ್ಮನ ಅಪರೋಕ್ಷ ಜ್ಞಾನದಿಂದುಂಟಾಗುವ ಭಗವತ್ಪ್ರಸಾದದಿಂದ ಲಭ್ಯವೆಂದೂ ನಿರೂಪಿಸಲ್ಪಡುತ್ತದೆ. ಇಂತಹ ಅಪರೋಕ್ಷಜ್ಞಾನವನ್ನು ನಿರೂಪಿಸುವ ಸಂದರ್ಭವುಳ್ಳ ಕಥಾ ಪ್ರಾರಂಭ ಮಾಡುವರಾಗಿ ಅದಕ್ಕೆ ಪೀಠಿಕಾ ಪ್ರಕರಣವನ್ನು ನಿರೂಪಿಸಿತ್ತಾರೆ.

ಸಾಕ್ಷಾತ್ ಶ್ರೀಕೃಷ್ಣ, ವೇದವ್ಯಾಸದೇವರಿಂದಲೇ ಸಿಂಹಾಸನದಲ್ಲಿ ಸ್ಥಾಪಿಸಲ್ಪಟ್ಟು ರಾಜ್ಯಾಭಿಷಿಕ್ತನಾದ ಧರ್ಮರಾಯನು, ಪ್ರಾಕೃತಸಂಬಂಧವಾದ ಮನಸ್ಸುಳ್ಳವನಾಗಿ, ತನ್ನ ಬಾಂಧವರೆಲ್ಲರೂ ಮಹಾಯುದ್ಧದಲ್ಲಿ ಮೃತರಾದದ್ದನ್ನು ನೆನೆನೆನೆಸಿಕೊಂಡು, ಆ ಬಂಧುಮರಣದಿಂದುಟಾದ ಪಾಪಗಳು ತನ್ನನ್ನಾವರಿಸಿವೆ ಎಂದು ಭಾವಿಸಿ ದುಃಖವನ್ನು ಬಿಡಲು ಶಕ್ತನಾಗಲಿಲ್ಲ. ದುಷ್ಟನಿಗ್ರಹ, ಶಿಷ್ಟಪರಿಪಾಲನೆಯು ರಾಜನಿಗೆ ಮಹಾಧರ್ಮವೆಂದೂ,

## अथ नवमोऽध्यायः

ಧರ್ಮಯುದ್ಧದಲ್ಲಿದುಷ್ಟರಾಜರನ್ನು ಸಂಹರಿಸುವುದು ಪುಣ್ಯವೆಂದೂ, ಧರ್ಮರಹಸ್ಯಗಳನ್ನು, ಶ್ರೀಕೃಷ್ಣನೂ, ವ್ಯಾಸರೂ, ಧೌಮ್ಯಾದಿಋಷಿಗಳೂ ಹೇಳಿದರೂ, ಧರ್ಮರಾಯನು ಅವರ ಮಾತನ್ನು ಕೇಳದೇ ಗೋಳಾಡುತ್ತಾ ಈ ರೀತಿ ಹೇಳಿದನು

ಅಹೋ! ಆಶ್ಚರ್ಯ! ನಾಯಿನರಿಗಳು ತಿಂದು ನಾಶವಾಗತಕ್ಕ ನನ್ನ ಈ ದೇಹಸುಖಕ್ಕಾಗಿ, ನನ್ನ ಬಂಧು, ಮಿತ್ರ, ಗುರು, ಬ್ರಾಹ್ಮಣ, ಆಪ್ತ ಸ್ನೇಹಿತರಿಂದ ಕೂಡಿದ ಈ ಅನೇಕ ಅಕ್ಷೋಹಿಣೀ ಸಂಖ್ಯಾಕವಾದ ಸೈನ್ಯವನ್ನು ನಾಶಮಾಡಿ, ಈ ರಾಜ್ಯಯವನ್ನನುಭವಿಸುವುದು ಎಂತಹ ಮೌಢ್ಯ! ಎಂತಹ ಪಾಪ ಕೆಲಸ! ಧರ್ಮಯುದ್ಧವೆಂಬ ನೆವದಿಂದ ಇಷ್ಟು ಪ್ರಾಣಿಗಳ ಪ್ರಾಣಹತ್ಯೆಯನ್ನು ಮಾಡಿದ ನನಗೆ ಘೋರವಾದ ನರಕಯಾತನೆಯಿಂದ ಅಯುತಾಯುತ ವರ್ಷಗಳು ಅನುಭವಿಸಿದರೂ, ಪಾಪನಾಶವಾಗುವುದೆಂಬ ನಂಬಿಕೆ ನನಗಿಲ್ಲ! ವೇದೋಕ್ತಿಗಳು ಯುದ್ಧದಲ್ಲಿ ಎದುರಾಗಿ ಬಂದವರನ್ನೂ, ದುಷ್ಟರನ್ನೂ ರಾಜನು ಯುದ್ಧದಲ್ಲಿ ಸಂಹರಿಸಿದರೆ, ಅವನ ಧರ್ಮವೇ ಆದಾದ್ದರಿಂದ, ಅವನಿಗೆ ಪಾಪವಿಲ್ಲವೆಂದು ಹೇಳುವುದು ನನ್ನ ಮನಸ್ಸಿನ ಮೇಲೆ ಪರಿಣಾಮಕಾರಿಗಳಾಗಿಲ್ಲ! ಏಕೆಂದರೆ, ಸತ್ತುಹೋದ ಅನೇಕ ಸೈನಿಕರ ಪತ್ನಿಯರಾದ ಅನೇಕ ಸ್ತ್ರೀಯರು, ತಮಗೆ ಊಂಟಾದ ವೈಧವ್ಯದಿಂದ ಈಗ ಪ್ರತಿಕ್ಷಣದಲ್ಲೂ ನೊಂದುಕೊಳ್ಳುತ್ತಿರುವಾಗ, ಇವರಿಗೆ ಉಂಟಾದ ಈ ಹಿಂಸೆಗೆ ಕಾರಣನಾದ ನನ್ನನ್ನು ಪಾಪಗಳು ಹೇಗೆ ಬಿಟ್ಟುಹೋಗಬಲ್ಲವು? ನನ್ನ ಬುದ್ಧಿಗೆ ಅಶ್ವಮೇಧಾದಿಯಾಗಗಳನ್ನು ಮಾಡಿದ್ದರಿಂದಲೂ, ನನ್ನ ಪಾಪಗಳು ಹತವಾಗಲಾರವು ಎಂದು ತೋರುತ್ತದೆ. ನಿರ್ಭಾಗ್ಯನಾದ ನನಗೆ ಮುಂದೇನು ಗತಿ! ಎಂದು ಹೇಳಿಕೊಂಡು ದುಃಖಿಸುತ್ತಿದ್ದನು.

### ಭೀಷ್ಮಾಚಾರ್ಯರ ಬಳಿಗೆ ಧರ್ಮರಾಜರ ಆಗಮನ

ಅದನ್ನು ನೋಡಿ ಶ್ರೀಕೃಷ್ಣನು, ಎಲೈ! ಧರ್ಮರಾಯನೇ! ನಮ್ಮ ಮಾತುಗಳಲ್ಲಿ ನಿನಗೆ ವಿಶ್ವಾಸ ಹುಟ್ಟಲಿಲ್ಲವಾಗಿ ನಡಿ, ರಣರಂಗದಲ್ಲಿ ಮಲಗಿರುವ ನಿಮ್ಮ ಪಿತಾಮಹರಿಂದಲೇ ಧರ್ಮಲಕ್ಷಣಗಳನ್ನು ತಿಳಿದು, ಯಾವ ಭೀಷ್ಮರ ಮಾತುಗಳು ಎಂದಿಗೂ ಅಸತ್ಯಗಳಲ್ಲವೋ ಅಂತಹ ಉಪದೇಶದಿಂದಾರೂ ಮನಃಶಾಂತಿ ಪಡೆದು ಧರ್ಮರಾಜ್ಯ ಪರಿಪಾಲನೆ ಮಾಡುವಿಯಂತೆ, ಎಂದು ಹೇಳಿದನು. ಅದನ್ನು ಕೇಳಿ, ಧರ್ಮರಾಯನು ಒಪ್ಪಿ , ಭೀಷ್ಮರ ಸಂದರ್ಶನಾರ್ಥವಾಗಿ ಹೊರಟನು. ಅವನನ್ನು ಹಿಂಬಾಲಿಸಿ ಭೀಮಾರ್ಜುನ ನಕುಲ ಸಹದೇವರೂ, ಬಂಗಾರದ ಜೀನು

ಲಗಾಮು, ಕಿಂಕಾಪಿನ ಹೊದ್ದಿಕೆಗಳಿಂದ ದಿವ್ಯಾಲಂಕೃತಗಳಾದ ದಿವ್ಯಾಶ್ವಗಳನ್ನೇರಿ ಹೊರಟರು. ಶ್ರೀಕೃಷ್ಣನೂ, ಸಾತ್ಯಕಿಯೂ ರಥಾರೂಢರಾಗಿ ಹಿಂಬಾಲಿಸಿದರು. ವೇದವ್ಯಾಸ, ಧೌಮ್ಯಾದಿಗಳೂ ಸಹ ಇವರ ಜೊತೆಯಲ್ಲಿ ಹೊರಟರು.

ಹೀಗೆ ಪರಿವಾರ ಸಹಿತನಾಗಿ ಹೊರಟ ಧರ್ಮರಾಯನು, ಗುಹ್ಯಕರಿಂದ ಕೂಡಿದ ಕುಬೇರನಂತೆ ಪ್ರಕಾಶಿಸುತ್ತಿದ್ದನು. ಇವರೆಲ್ಲರೂ ರಣರಂಗಕ್ಕೆ ಬಂದು, ಅಂತರಿಕ್ಷದಿಂದ ಭೂಮಿಗಿಳಿದು ಬಂದ ದೇವತೆಯೋ ಎಂಬಂತೆ ಪ್ರಕಾಶಿಸುತ್ತಾ, ಸರಳಮಂಚದ ಮೇಲೆ ಧ್ಯಾನಪ್ರದರಾಗಿ ಮಲಗಿದ್ದ ಭೀಷ್ಮರನ್ನು ನೋಡಿ, ದೂರದಲ್ಲೇ ತಮ್ಮತಮ್ಮ ವಾಹನಗಳನ್ನಿಳಿದು, ಎಲ್ಲರೂ ಭೀಷ್ಮರಿಗೆ ನಮಸಿದರು. ಸರ್ವಧರ್ಮಜ್ಞರಾದ ಭೀಷ್ಮರು ಆನಂದಪರವಶರಾಗಿ ಬಂದಂಥ ಸರ್ವರಿಗೂ ಯಥಾಯೋಗ್ಯ ಪೂಜೆಯನ್ನು, ನಮಸ್ಕಾರ, ಆಶೀರ್ವಾದಪೂರ್ವಕ ವಾಕ್ಯಗಳಿಂದ ಮಾಡಿದರು. ನಂತರ ಎಲ್ಲರೂ ಭೀಷ್ಮರ ಸಮೀಪದಲ್ಲಿ ಸುಖಾಸನಗಳಲ್ಲಿ ಕುಳಿತರು. ಆವಾಗ ಅಲ್ಲಿಗೆ ಬ್ರಹ್ಮರ್ಷಿ, ದೇವರ್ಷಿ, ರಾಜರ್ಷಿಗಳೂ, ಪರ್ವತರೂ, ನಾರದರೂ, ಬೃಹದಶ್ವರೂ, ಭರದ್ವಾಜರೂ, ಶಿಷ್ಯರ ಸಮೇತ ಪರಶುರಾಮರೂ, ವಸಿಷ್ಠರೂ, ಇಂದ್ರಪ್ರಮದ, ಶ್ರಿತ, ಗೃತ್ಸ್ಯ, ಅಸಿತರೂ; ಕಕ್ಷಿವಾನರೂ, ಗೌತಮರೂ, ಅತ್ರಿಋಷಿಗಳೂ, ಕೌಶಿಕರೂ, ಸುದರ್ಶನರೂ, ಶುಕಮಹರ್ಷಿಗಳೂ, ಮುಂತಾದ ಮಹಾಜ್ಞಾನಿಗಳೂ ಪವಿತ್ರರೂ, ಶಿಷ್ಯಸಮೇತರಾದ ಕಶ್ಯಪ, ಅಂಗೀರಸ ಋಷಿಗಳೂ ಬಂದರು. ಇವರನ್ನೆಲ್ಲಾ ಧರ್ಮರಾಯನು ಆಸನ, ಅರ್ಘ್ಯಪಾದ್ಯದಾಚಮನಾದಿಗಳಿಂದ ಎಲ್ಲರನ್ನೂ ಸತ್ಕರಿಸಿದನು. ಹೀಗೆ ತಮ್ಮನ್ನು ಸಮೀಪಿಸಿದ ಸರ್ವರನ್ನೂ ವಸುಶ್ರೇಷ್ಠರಾದ ಭೀಷ್ಮಾಚಾರ್ಯರು ನೋಡಿ, ಅಭಿವಂದನೆಯಿಂದ ಸರ್ವರನ್ನೂ ಸತ್ಕರಿಸಿದರು.

## ಭೀಷ್ಮಾಚಾರ್ಯರ ಉಪದೇಶ

ನಂತರ ತಮ್ಮ ಎದುರಲ್ಲಿ ಕುಳಿತಿದ್ದ ಶ್ರೀಕೃಷ್ಣನ ಮಂಗಳಮೂರ್ತಿಯನ್ನು ತಮ್ಮ ಹೃತ್ಸಲದಲ್ಲಿ ಧ್ಯಾನಿಸಿ ಮಾನಸಿಕ ಪೂಜಾದಿಗಳನ್ನು ಮಾಡಿದರು. ಪ್ರಶ್ನೆಗಳನ್ನು ಮಾಡಲಪೇಕ್ಷಿಸಿ ಸಮೀಪದಲ್ಲಿ ಪ್ರೇಮಾತಿಶಯಗಳಿಂದ ತುಂಬಿದ ದೃಷ್ಟಿಯಿಂದ ನೋಡುತ್ತಾ, ಭೀಷ್ಮರ ಕಟಾಕ್ಷ ನಿರೀಕ್ಷಣೆಯಲ್ಲಿದ್ದ ಪಾಂಡವರ ಮೇಲೆ ಭೀಷ್ಮರ ದೃಷ್ಟಿಯು ಪಸರಿಸಿತು. ಅನುರಾಗದಿಂದ ಭೀಷ್ಮರ ಕಣ್ಣುಗಳಲ್ಲಿ ನೀರು ತುಂಬಿ ಏನೂ ಕಾಣದಂತಾಯಿತು. ಬಾಷ್ಪ ಬಿಂದುಗಳುದುರಿದವು. ನಂತರ ಭೀಷ್ಮರು ಪಾಂಡವರನ್ನುದ್ದೇಶಿಸಿ ಹೀಗೆ ಹೇಳಿದರು.

## अथ नवमोऽध्यायः

ಎಲೈ! ಧರ್ಮಾದಿ ಭ್ರಾತೃಗಳಿರಾ! ನೀವು ಅತಿರಥನಾದ ಪಾಂಡು ಚಕ್ರವರ್ತಿಯ ಮಕ್ಕಳಾಗಿ, ರಾಜಕುಲಭೂಷಣರೂ, ಗದಾಯುಧಧರನಾದ ಮಾಹಾಪರಾಕ್ರಮಿಯಾದ ಭೀಮನಿಂದಲೂ, ಗಾಂಢೀವಧನುರ್ಧಾರಿಯಾದ ಲೋಕೈಕವೀರನಾದ ಅರ್ಜುನನಿಂದಲೂ, ಕೂಡಿದವರಾದಾಗ್ಯೂ, ರಾಜಧರ್ಮಗಳನ್ನು ಬಿಟ್ಟು, ಬ್ರಾಹ್ಮಣಧರ್ಮವಾದ ಶ್ರೀಕೃಷ್ಣಪಾದಾಶ್ರಯಾವಲಂಬಿಗಳಾಗಿರುವುದೂ; ನೀವು ಬ್ರಾಹ್ಮಣ, ಪಿತೃ, ದೇವತಾಉಪಾಸಕರೂ, ಪ್ರಿಯರೂ ಆಗಿದ್ದು, ನಿಮ್ಮತಾಯಿಯಾದ ಕುಂತೀದೇವಿಯ ಸಮೇತರಾಗಿ ಕಷ್ಟಪರಂಪರೆಗಳನ್ನು ಹೊಂದುತ್ತಿರುವುದೂ ನನಗೆ ಪರಮಾಶ್ಚರ್ಯವನ್ನುಂಟು ಮಾಡುತ್ತಿದೆ. ಕ್ಷತ್ರಿಯರಿಗೆ ಬ್ರಾಹ್ಮಣವೃತ್ತಿಯ ಅವಲಂಬನೆಯು ಅಧರ್ಮ. ರಾಜ್ಯಪರಿಪಾಲನೆಯೂ, ಧರ್ಮಸ್ಥಾಪನೆಯೂ, ಯಜ್ಞಯಾಗಾದಿಗಳಿಂದ ಭಗವತ್ಪೂಜೆಯೂ, ಭಗವದ್ವೇಷಿಗಳ ಸಂಹಾರವೂ ಕ್ಷತ್ರಿಯರಿಗೆ ಪಾವನವಾದ ಧರ್ಮವು. ಆದ್ದರಿಂದ ರಾಜ್ಯಪರಿಪಾಲನೆ ಮಾಡದೇ ಬಿಟ್ಟರೆ, ನೀನು ಪಾಪಿಯಾಗುತ್ತೀ ಎಂಬುದು ಅಭಿಪ್ರಾಯ.

ಇಂತಹ ಸ್ಥಿತಿಯು ನಿಮಗೆ ಉಂಟಾಗಲು, ಸರ್ವನಿಯಾಮಕನಾದ ಕಾಲರೂಪಿ ಪರಮಾತ್ಮನ ಇಚ್ಛೆಯೇ ಇದಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆ. ಪತಿಯಿಂದ ವಿರಹವುಳ್ಳವಳಾಗಿ, ನಿಮ್ಮನ್ನು ಸಾಕಲು ಎಷ್ಟೋ ಕಷ್ಟಪಟ್ಟು, ಇದುವರೆವಿಗೂ ನಿಮ್ಮ ವನವಾಸ, ಅಜ್ಞಾತವಾಸ, ಯುದ್ಧಾದಿಗಳ ಪ್ರಯುಕ್ತ ಇನ್ನೂ ಕಷ್ಟಪಡುತ್ತಿರುವ ನಿಮ್ಮ ತಾಯಿಗೆ ಯೋಗ್ಯವಾದ ರಾಜಮಾತೆಯಂತೆ ಸುಖಿಸುವ ಯೋಗವನ್ನು ನಿಮ್ಮಂತಹ ಪುತ್ರರು ಉಂಟುಮಾಡದಿದ್ದರೆ, ನಿಮ್ಮಂತಹ ಪುತ್ರರಿಂದ ನೊಂದ ನಿಮ್ಮ ತಾಯಿಗೆ ಏನು ಸುಖವಾದಂತಾಯಿತು? ನೀವು ಭಗವದ್ಭಕ್ತರೂ, ಭೂಭಾರವಿಳುಹಲು ಅವತರಿಸಿರುವ ದೇವತೆಗಳೂ ಆದ್ದರಿಂದ, ಲೋಕದಲ್ಲಿ ಜನರು ಕಷ್ಟವೆಂದು ಭಾವಿಸುವ ಕಷ್ಟವು ನಿಮಗೆ ಇಲ್ಲದಿದ್ದರೂ, ರಾಜರಿಗೆ ಧರ್ಮದಿಂದ ಪ್ರಾಪ್ತವಾದ ರಾಜಭೋಗವು ಭಗವತ್ಪೂಜಾತ್ಮಕವಾಗಿ ಅನುಭವಿಸುವುದು ಪರಮಧರ್ಮವು. ಈ ಶ್ರೀಕೃಷ್ಣನೇ ನಿಮಗೆ ಪರಮಪ್ರಿಯ ಮಿತ್ರನಾಗಿರುವಾಗ, ನಿಮಗೆ ವಿಪತ್ತಾಗಲೀ ಪಾಪಸಂಬಂಧವಾಗಲೀ ಹೇಗಾದೀತು?

ಯಾವ ಶ್ರೀಕೃಷ್ಣನ ಮಾತುಗಳೇ ವೇದಸ್ವರೂಪಗಳೋ! ಆ ವೇದಗಳೆಂಬ ಶ್ರೀಕೃಷ್ಣನ ಮಾತಿನಂತೆ ಬ್ರಹ್ಮಾದಿಗಳೂ ಶಿರಸಾವಹಿಸಿ, ಆಜ್ಞಾರೂಪದಿಂದ ಮಾಡಿ ಧನ್ಯರೂ, ಸುಖಿಗಳೂ ಆಗಿರುವರೋ! ಅಂತಹ ಶ್ರೀಕೃಷ್ಣನು ನಿಮಗೆ, ದುಷ್ಟದುರ್ಯೋಧನಾದಿಗಳನ್ನೂ, ಅವನನ್ನು ಅನುಸರಿಸಿದ್ದವರನ್ನೂ ಯುದ್ಧದಲ್ಲಿ ಸಂಹಾರಮಾಡುವುದು ಮಹಾಪುಣ್ಯವೆಂದೂ,

ಯಜ್ಞಸಮವೆಂದೂ, ನೀನು ಧರ್ಮರಾಜ್ಯ ಪರಿಪಾಲನೆಮಾಡಬೇಕೆಂದೂ ಹೇಳಿದ್ದನ್ನು ಏನು ಕಾರಣ ಕೇಳದೇ ಉನ್ಮತ್ತನಾಗುತ್ತೀಯೆ? ಕೃಷ್ಣನ ಶಾಸನವನ್ನು ಮೀರಿ ಬದುಕತಕ್ಕವರಿಲ್ಲ. ಆದುದರಿಂದ ನೀನೂ ಆತನ ಪವಿತ್ರ ಆಜ್ಞಾಧಾರಕನಾಗಿ ನಿನ್ನ ಧರ್ಮವಾದ ರಾಜ್ಯಪರಿಪಾಲನೆಗೆ ಮನಸ್ಸುಮಾಡು.

ಈ ಶ್ರೀಕೃಷ್ಣನೇ ಆದಿಪುರುಷನಾದ ಶ್ರೀಮನ್ನಾರಾಯಣನು. ತನ್ನ ಮಾಯೆಯನ್ನು ಬೀರಿ ಲೋಕದಲ್ಲಿ ವಸುದೇವಕುಮಾರನಾಗಿ ವೃಷ್ಣಿಕುಲದಲ್ಲಿ ಹುಟ್ಟಿದ ಸಾಮಾನ್ಯನಂತೆ ಮೂಢಜನರಿಗೆ ಕಾಣಿಸುತ್ತಾನೆ. ಇವನ ಮಹಿಮೆಗಳನ್ನು ಪ್ರತಿನಿತ್ಯವೂ ಕಾಣಲ್ಪಡುತ್ತಿದ್ದರೂ, ನಾವು ಮರೆಯುತ್ತಿದ್ದೇವೆ. ಈತನ ಮಹಾತ್ಮೆಗಳು ವೇದಪ್ರತಿಪಾದ್ಯಗಳೂ, ಮಂಗಳಪ್ರದಗಳೂ ಆಗಿವೆ. ಇಂತಹ ಮಹಿಮೆಗಳನ್ನು ದೇವರ್ಷಿಗಳಾದ ನಾರದರೂ, ಕಪಿಲರೂ ಬಲ್ಲರು. ಯಾರನ್ನು ನೀನು ಮಾವನ ಮಗನೆಂದು ತಿಳಿದು ಸರಸದಿಂದ, ಸ್ನೇಹಿತನೆಂದು ತಿಳಿದು ದೂತನನ್ನಾಗಿಯೂ, ಮಂತ್ರಿಯನ್ನಾಗಿಯೂ, ಸಾರಥಿಯನ್ನಾಗಿಯೂ ಮಾಡಿಕೊಂಡು ಆತನ ಸರ್ವೋತ್ತಮತ್ವ, ಸರ್ವಜ್ಞತ್ವಾದಿ, ಅನಂತಾನಂತ ಮಹಿಮೆಗಳನ್ನು ತಿಳಿಯದೇ ಇರುವೆಯೋ ಅವನೇ ಭಕ್ತಿಗೆ ಪ್ರಸನ್ನನಾಗಿ, ನಿಮ್ಮ ವಶನಾದವನಂತೆ ಈ ಕಾರ್ಯಗಳನ್ನೆಲ್ಲಾ ನಿಮ್ಮ ಜೊತೆಯಲ್ಲಿದ್ದು ಮಾಡುತ್ತಿರುವನೂ, ಸರ್ವಭೂತದಯಾಪರನೂ, ಸರ್ವಸಮನೂ, ಭಕ್ತರಲ್ಲಿ ನಿರ್ವ್ಯಾಜಾನುಗ್ರಹಮಾಡುವವನೂ ಆದ ಈ ಶ್ರೀಕೃಷ್ಣನು ನನಗೆ ಮರಣಕಾಲವು ಪ್ರಾಪ್ತವಾಗುತ್ತಿರಲಾಗಿ, ತಾನಾಗಿಯೇ ನಾನಿದ್ದಲ್ಲಿಗೇ ಬಂದು, ನನಗೆ ದರ್ಶನವನ್ನೂ ಈಗ ಕರುಣಿಸುತ್ತಿರುವ ಈತನ ದಯಾಘನತೆಯನ್ನು ವರ್ಣಿಸಲ್ಯಾರಿಂದ ಸಾಧ್ಯವು?

ಮನಸ್ಸನ್ನು ಈ ಯಾವ ಶ್ರೀಕೃಷ್ಣನ ಪಾದಾರವಿಂದಗಳಲ್ಲಿಟ್ಟು ಯೋಗಿಗಳು ತಮ್ಮ ಮರಣಕಾಲದಲ್ಲಿ, ಈ ಶ್ರೀಕೃಷ್ಣನ ರೂಪವನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ, ಬಾಯಲ್ಲಿ ನಾಮೋಚ್ಚಾರಣೆ ಮಾಡುತ್ತಾ ದೇಹತ್ಯಾಗಮಾಡಿದರೆ, ಅವರು ಅನಾದ್ಯವಿದ್ಯಾ ಕಾಮಕರ್ಮಗಳಿಂದ ಬಿಡಲ್ಪಟ್ಟವರಾಗಿ ಮುಕ್ತರಾಗುವರು. ಪ್ರಸನ್ನವಾದ ಮಂದಹಾಸದಿಂದಲೂ, ಕಮಲದಳ ನೇತ್ರಗಳಿಂದಲೂ, ರಾಜಿಸುವ ಮನೋಹರವಾದ ಮುಖಕಮಲವುಳ್ಳವನೂ, ಶಂಖಚಕ್ರಗದಾಪದ್ಮಗ್ಗಳನ್ನು ಧರಿಸಿದ ನಾಲ್ಕು ಕರಕಮಲಗಳುಳ್ಳವನೂ, ಪೀತಾಂಬರ, ಕಿರೀಟ, ವನಮಾಲಾ, ಶ್ರೀವತ್ಸ, ಕೌಸ್ತುಭಾಭರಣಭೂಷಿತನೂ ಆದ ಈ ಶ್ರೀಕೃಷ್ಣನ ದಿವ್ಯರೂಪವು, ನನ್ನ ದೇಹದಿಂದ ಪ್ರಾಣವು ಹೊರಗೆ ಬರುವತನಕ ನನಗೆ ಕಾಣಿಸುತ್ತಿರಲಿ! ಈ ಶ್ರೀಕೃಷ್ಣರೂಪವನ್ನು

ನೋಡುತ್ತಾ ನಾನು ನನ್ನ ಈ ಮಾನುಷದೇಹವನ್ನು ಬಿಡುವೆನು ಎಂದರು.

ಭೀಷ್ಮರ ವಾಕ್ಯವನ್ನು ಕೇಳಿ ನಂತರ ಧರ್ಮರಾಯನು ಭೀಷ್ಮರನ್ನು ಸಮೀಪಿಸಿ, ಎಲೈ! ಕುರುಪಿತಾಮಹರಾದ ಭೀಷ್ಮರೇ! ದೇಹತ್ಯಾಗಕ್ಕೆ ಸಿದ್ಧರಾಗುತ್ತಿರುವ ನಿಮ್ಮಿಂದ ಧರ್ಮರಹಸ್ಯಗಳನ್ನು ತಿಳಿಯಲಪೇಕ್ಷಿಸುತ್ತೇನೆ. ಪುರುಷರ ಜಾತಿ, ವರ್ಣಾಶ್ರಮ ಧರ್ಮಗಳೇನು? ವೈರಾಗ್ಯ, ರಾಗ ಇವುಗಳ ವೇದೋಕ್ತ ಲಕ್ಷಣಗಳೇನು? ರಾಜಧರ್ಮ, ದಾನಧರ್ಮ, ಮೋಕ್ಷಧರ್ಮಗಳ್ಯಾವುವು? ಅವುಗಳ ವಿಭಾಗಗಳ್ಯಾವುವು? ಸ್ತ್ರೀಧರ್ಮ ಭಗವದ್ಧರ್ಮಗಳನ್ನು ಸೂಕ್ಷ್ಮವಾಗಿಯೂ ವಿಸ್ತಾರವಾಗಿಯೂ ಹೇಳಿರಿ!

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದರೇನು? ಇವುಗಳನ್ನು ಸಾಧಿಸತಕ್ಕ ಕ್ರಮಗಳ್ಯಾವುವು? ಎಂದು ಅನೇಕ ವಿಧವಾಗಿ ಧರ್ಮವಿಷಯಗಳಾದ ಪ್ರಶ್ನೆಗಳನ್ನು ಕೇಳಿದನು. ನಂತರ ಆದರದಿಂದ ಭೀಷ್ಮರು ಎಲ್ಲಾ ಪ್ರಶ್ನೆಗಳಿಗೂ, ಇತಿಹಾಸ, ನಿದರ್ಶನಪೂರ್ವಕವಾಗಿ ಧರ್ಮರಹಸ್ಯಗಳನ್ನು ವಿರಳವಾಗಿ ಉಪದೇಶಿಸಿದರು. ಅಷ್ಟರಲ್ಲಿ, ಯೋಗಿಶ್ರೇಷ್ಠರು ದೇಹತ್ಯಾಗಕ್ಕೆ ನಿರೀಕ್ಷಿಸುವ ಉತ್ತರಾಯಣ ಪುಣ್ಯಕಾಲವು ಪ್ರಾಪ್ತವಾಯಿತು. ಆವಾಗ ಭೀಷ್ಮರು ತಮ್ಮ ಉಪದೇಶವನ್ನು ನಿಲ್ಲಿಸಿ, ಸ್ವಲ್ಪ ಹೊತ್ತು ಹೃತ್ಸ್ಥಲದಲ್ಲಿ ದೇವರಧ್ಯಾನದಲ್ಲಿ ಮಗ್ನರಾದರು. ಈ ವಿಧವಾಗಿ ಭೀಷ್ಮರ ನಿರ್ಯಾಣ ನಿಶ್ಚಯವನ್ನು ತಿಳಿದು ಎಲ್ಲರೂ ನಿಶ್ಶಬ್ದವಾಗಿ ಕುಳಿತರು.

## ಭೀಷ್ಮಾಚಾರ್ಯರಿಂದ ಶ್ರೀಕೃಷ್ಣಸ್ತುತಿ

ಭೀಷ್ಮರು ಅರೆಗಣ್ಣಿನಿಂದ ಶ್ರೀಕೃಷ್ಣನನ್ನು ನೋಡುತ್ತಾ, ಆಯುಧ ಶಸ್ತ್ರಾಸ್ತ್ರಗಳ ಘಾಯಗಳ ವೇದನೆಯು ಸ್ವಲ್ಪವೂ ಇಲ್ಲದೆ, ಮನಸ್ಸನ್ನು ನಿಗ್ರಹಿಸಿ, ಏಕಾಗ್ರಚಿತ್ತದಿಂದ ಶ್ರೀಕೃಷ್ಣನನ್ನು ಈ ರೀತಿ ಸ್ತೋತ್ರ ಮಾಡಲು ಉಪಕ್ರಮಿಸಿದರು. ಸರ್ವಕರ್ತನಾದ ಪರಮಾತ್ಮನ ಪ್ರೇರಣೆಯಿಂದ, ಸಕಲ ಶಾಸ್ತ್ರಾರ್ಥ ನಿರೂಪಣರೂಪವಾದ ಧರ್ಮಪ್ರಶಂಸೆಯಿಂದ, ಇದುವರೆವಿಗೂ ಮನೋಯೋಗವು ಆ ಪರಮಾತ್ಮನಲ್ಲೇ ಮಾಡಲ್ಪಟ್ಟಿತು. ಈಗ ಮರಣಕಾಲವು ಸನ್ನಿಹಿತವಾಗುತ್ತಿದೆಯಾಗಿ, ದೇಶಕಾಲಗಳಿಂದ ಅಪರಿಚ್ಛಿನ್ನವಾದ ಗುಣಪೂರ್ಣನೂ, ನಿರವಧಿಕಜ್ಞಾನಐಶ್ವರ್ಯ ಆನಂದಸ್ವರೂಪನೂ, ಸುಖಮಯನೂ ಆದ ಸ್ವರೂಪಾನಂದೈಕ ಭೋಕ್ತೃವಾದ ಈ ಯಾದವಕೃಷ್ಣನ ಸಂಗಡ ಸ್ವಲ್ಪವಿಹಾರಮಾಡುವೆನೆಂಬ ಇಚ್ಛೆಯಿಂದ ಯಾವ ಪ್ರಕೃತಿಯೆಂಬ ಜಡಪ್ರಕೃತಿನಿಯಾಮಕ ಲಕ್ಷ್ಮಿಯು, ಸಮೀಪಕ್ಕೆ ಬರಲು, ಇವರ ಸಂಭೋಗರೂಪ ಸ್ವಸ್ವರೂಪಾನಂದ ಕ್ರೀಡೆಯೇ ಈ

अथ नवमोऽध्यायः

ಮಹದಾದಿ ಸಕಲ ಜೀವಜಡಾತ್ಮಕ ಪ್ರಪಂಚಕ್ಕೆ ಪ್ರವಾಹರೂಪವಾಗಿ ಸೃಷ್ಟಿಗೆ ಕಾರಣವಾಯಿತೋ, ಅಂತಹ ಮೂಲರೂಪಾಭಿನ್ನನೂ, ಅರ್ಜುನಸಖನೂ ಆದ ಶ್ರೀಕೃಷ್ಣನಲ್ಲಿ ಅಶ್ರಯವನ್ನು ಹೊಂದುತ್ತೇನೆ.

ಜಗನ್ಮೋಹಕರೂಪನೂ, ಮನೋಹರ ನೀಲಮೇಘಶ್ಯಾಮನೂ, ಬಾಲಸೂರ್ಯನಂತೆ ಹೊಳೆಯುವ ಪೀತಾಂಬರಧಾರಿಯೂ, ಗುಂಗುರು ಗುಂಗುರಾಗಿ ಸುಳಿದಾಡುವ ಕೋಮಲ ಮುಂಗುರುಳುಗಳಿಂದ ಶೋಭಾಯಮಾನವಾದ ಮುಖಕಮಲ ವುಳ್ಳವನೂ ಆದ ಶ್ರೀಕೃಷ್ಣನಲ್ಲಿ ನನಗೆ ನಿರ್ಮಲವಾದ ಭಕ್ತಿಯುಂಟಾಗಲಿ. ಯುದ್ಧರಂಗದಲ್ಲಿ ಕುದುರೆಗಳ ಓಡಾಟದಿಂದ ಎದ್ದ ಕೆಂಧೂಳಿಯಿಂದ ಮುಚ್ಚಲ್ಪಟ್ಟು, ಕಿರು ಬೆವರಿಟ್ಟಿರುವ ಸುಂದರವಾದ ಮುಖ ವುಳ್ಳವನೂ, ನನ್ನ ಹರಿತವಾದ ಬಾಣದಿಂದ ಭೇದಿಸಲ್ಪಟ್ಟ, ಮತ್ತು ಚರ್ಮಗಳಿಂದ ಕೂಡಿರುವಂತೆ, ತೋರಿಸುವವನಾದ, ಅಚ್ಛೇದ್ಯ ಅಭೇಧ್ಯನಾದ ಶ್ರೀಕೃಷ್ಣನು ನನ್ನ ಹೃದಯಕಮಲದಲ್ಲಿ ಶೋಭಿಸಲಿ! ಎರಡು ಸೈನ್ಯಗಳ ಮಧ್ಯದಲ್ಲಿ ಅರ್ಜುನನಿಂದ ಪ್ರಾರ್ಥಿತನಾದ ಯಾವ ಶ್ರೀಕೃಷ್ಣನು ತನ್ನ ರಥವನ್ನು ನಿಲ್ಲಿಸಿ, ಆ ರಥದಲ್ಲಿ ಕುಳಿತು ತನ್ನ ದೃಷ್ಟಿಯನ್ನು ಸ್ವಪರಸೈನ್ಯಗಳ ಮೇಲೆ ಬೀಳಿಸುವ ಮಾತ್ರದಿಂದಲೇ, ತನ್ನ ಅಪರಿಮಿತ ಶಕ್ತಿಯಿಂದ ಆ ಸೈನ್ಯದಲ್ಲಿದ್ದ ಸರ್ವರ ಆಯಸ್ಸನ್ನೂ ಆಕರ್ಷಿಸಿದನೋ, ಆ ಕೃಷ್ಣರೂಪದಲ್ಲಿ ನನ್ನ ಮನಸ್ಸು ಚಲಿಸದೇ ನಿಲ್ಲಲಿ!

ಕ್ಷತ್ರಿಯನಾದ ಅರ್ಜುನನು ತನ್ನ ಧರ್ಮವಾದ ಯುದ್ಧವು ಪ್ರಾಪ್ತವಾಗಿರಲಾಗಿ, ಎರಡೂ ಸೈನ್ಯಗಳ ಮಧ್ಯದಲ್ಲಿ ಶ್ರೀಕೃಷ್ಣನ ಸಹಿತ ರಥದಲ್ಲಿ ಕುಳಿತು, ಸುತ್ತಲೂ ಯುದ್ಧಕ್ಕಾಗಿ ನೆರೆದಿರುವ ಬಂಧುವರ್ಗಗಳನ್ನು ನೋಡಿ, ದೋಷಬುದ್ದಿಯಿಂದ ನಾನು ಬಂಧುವಧಾರೂಪವಾದ ಯುದ್ಧವನ್ನು ಒಲ್ಲೆನೆಂದು ಶೋಕಾರ್ತನಾಗಲಾಗಿ, ಆಗ ಶ್ರೀಮದ್ಭಗವದ್ಗೀತಾರೂಪವಾಗಿ ಸಕಲಧರ್ಮಗಳನ್ನೂ ಕರುಣದಿಂದ ಯಾವ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದನೋ ಮತ್ತು ಅರ್ಜುನನ ದುರ್ಬುದ್ಧಿಯನ್ನು ಬಿಡಿಸಿದನೋ, ಅಂತಹ ಶ್ರೀಕೃಷ್ಣನ ಪಾದಕಮಲಗಳಲ್ಲಿ ಭಕ್ತಿಯು ನನಗುಂಟಾಗಲಿ!

## ಭಕ್ತಪರಾಧೀನ ಶ್ರೀಕೃಷ್ಣ

ಯುದ್ಧದಲ್ಲಿ ಆಯುಧ ಹಿಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ ಶ್ರೀಕೃಷ್ಣನನ್ನು, ರಣರಂಗದಲ್ಲಿ ನೋಡಿ ನಾನು, ಎಲೈ! ಕೃಷ್ಣನೇ ನಾನು ನಿನ್ನ ಕೈಯಿಂದ ಆಯುಧವನ್ನು

## अथ नवमोऽध्यायः

ಹಿಡಿಸುತ್ತೇನೆ; ನೋಡೆಂದು ಹೇಳಿ ಹರಿತವಾದ ಬಾಣಗಳಿಂದ ಶ್ರೀಕೃಷ್ಣನನ್ನು ಹೊಡೆದನು. ಆಗ ದಯಾಳುವಾದ ಶ್ರೀಕೃಷ್ಣನು ಭಕ್ತನಾದ ನನ್ನ ಈ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡಲುದ್ದೇಶಿಸಿ, ತನ್ನ ಪ್ರತಿಜ್ಞೆಯನ್ನೂ ಉಲ್ಲಂಘಿಸಿ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ತಕ್ಷಣ ಚಕ್ರವನ್ನು ಹಿಡಿದುಕೊಂಡು, ತನ್ನ ರಥದಿಂದ ನೆಲಕ್ಕೆ ಹಾರಿ, ಅರ್ಜುನನ ಮಹಾಸ್ತ್ರಗಳಿಂದ ಮಯ್ಯೆಲ್ಲಾ ಘಾಯವಾಗಿ ಸುರಿದ ರಕ್ತದಿಂದ ಸ್ನಾನ ಮಾಡಿದಂತೆ ಇದ್ದ ಸ್ವಾಮಿದ್ರೋಹಿಯಾದ ನನ್ನನ್ನು ಸಂಹಾರಮಾಡಲು ಬಂದು, ನಾನು ನಮಸ್ಕರಿಸಿದ ತಕ್ಷಣ ಚಕ್ರವನ್ನು ಹಿಂತಿರುಗಿಸಿದನೋ, ಆ ಕೃಷ್ಣರೂಪವು ನನ್ನ ಮನಸ್ಸಿನಲ್ಲಿ ನಲಿದಾಡಿ ಆನಂದವೀಯಲಿ! ಅರ್ಜುನನ ರಥದ ಮುಂಭಾಗದಲ್ಲಿ ಕುಳಿತು ರಥಾಶ್ವಗಳ ಲಗಾಮನ್ನು ಕೈಯಲ್ಲಿ ಹಿಡಿದಿರುವ, ಕೆಂಧೂಳಿಯಿಂದಾವೃತವಾದ ಯಾವ ಶ್ರೀಕೃಷ್ಣನ ದರ್ಶನೀಯ ರೂಪವನ್ನು ನೋಡಿ, ಯುದ್ಧದಲ್ಲಿ ಸಂಹಾರವನ್ನು ಹೊಂದಿದವರೆಲ್ಲಾ, ಯಾವ ವೈಕುಂಠಲೋಕವೆಂಬ ವಿಷ್ಣುಪದವನ್ನೇ ಸೇರಿದರೋ, ಆ ಕೃಷ್ಣರೂಪವು ಸದಾ ನನ್ನ ಧ್ಯಾನಕ್ಕೆ ಗೋಚರವಾಗಲಿ.

ಮೃದುವಾದ ಪಾದವಿಕ್ಷೇಪ ಮಾಡುತ್ತಾ ಅನೇಕ ವಿಧವಾದ ಬೆಡಗುಗಳನ್ನು ತೋರಿಸುತ್ತಾ, ಮೃದುನಗೆಯಿಂದ ಕೂಡಿದ ಮುದ್ದುಮಾತುಗಳಿಂದಲೂ, ಪ್ರೇಮಪೂರ್ಣವಾದ ಸುಂದರಮನೋಹರ ವಾರೆನೋಟದಿಂದಲೂ, ಯಾವ ಶ್ರೀಕೃಷ್ಣನು ಸಕಲಗೋಪಸ್ತ್ರೀಯರನ್ನೂ ಮದಾಂಧರನ್ನಾಗಿ ಮಾಡಿದನೋ! ಮುಗ್ಧರಾದ ಆ ಗೋಪಸ್ತ್ರೀಯರು ಯಾವ ಪೂತನಾಸಂಹಾರ, ಶಕಟಾಸುರಸಂಹಾರ, ಗೋವರ್ಧನೋದ್ಧಾರಣ, ಕಾಳೀಯಮಥನ, ಮುಂತಾದ ಕೃಷ್ಣನ ಲೀಲೆಗಳನ್ನು ರಾಸಕ್ರೀಡೆ ಕಾಲದಲ್ಲಿ, ಶ್ರೀಕೃಷ್ಣನ ಮುಂದೆಯೂ ತಮ್ಮತಮ್ಮಲ್ಲಿಯೂ ಅನುಕರಣೆಮಾಡಿ, ಪರಮಯೋಗಿಗಳಂತೆ, ಭವಸಮುದ್ರವನ್ನು ಪರಮಸುಖದಿಂದ ದಾಟಿ ಮುಕ್ತರಾಗಿ, ಸ್ವರೂಪಸುಖಾವಿರ್ಭಾವವನ್ನು ಹೊಂದಿದರೋ, ಆ ಲೀಲಾವಿಗ್ರಹ ಶ್ರೀಕೃಷ್ಣರೂಪವು ನನ್ನ ಮನಸ್ಸಿನಲ್ಲಿ ಸದಾ ನರ್ತಿಸಲಿ! ರಾಜಸೂಯಾಯಾಗದಲ್ಲಿ ಸಕಲ ರಾಜರ, ಋಷಿಗಳ ಮಧ್ಯದಲ್ಲಿ ಭೀಷ್ಮರ ವಾಕ್ಯದಂತೆ ಧರ್ಮರಾಯನಿಂದ ಅಗ್ರಪೂಜೆಯನ್ನು ಮಾಡಿಸಿಕೊಂಡು ಯಾವ ಶ್ರೀಕೃಷ್ಣರೂಪವು ಸಿಂಹಾಸನದಲ್ಲಿ ಶೋಭಿಸುತ್ತಿತ್ತೋ ಅಂತಹ ಸ್ವರ್ಚಿತ ಶ್ರೀಕೃಷ್ಣರೂಪವು ಮರಣೋನ್ಮುಖನಾದ ನನ್ನ ದೃಷ್ಟಿಗೆ ಗೋಚರವಾಗಲಿ!

ಯಾವ ಬಾಹ್ಯಗೋಚರನಾಗುವ ಸೂರ್ಯನೇ ಅನೇಕ ಜೀವರಾಶಿಗಳ ಚಕ್ಷುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಗೋಚರನಾಗುತ್ತಾ ಇದ್ದಾಗ್ಯೂ, ಜನರು ಹಾಗೆ ಕಾಣುವ ಸೂರ್ಯನು

# अथ नवमोऽध्यायः

ಒಬ್ಬನೇ ಎಂದು ಸಂಶಯಾದಿರಹಿತರಾಗಿ ತಿಳಿಯುತ್ತಾರೋ ಮತ್ತು ಆ ಬಾಹ್ಯಗೋಚರನಾಗುವ ಸೂರ್ಯನೊಬ್ಬನೇಹೇಗೆಸಮಸ್ತರಕಣ್ಣುಗಳಿಗೆಅಭಿಮಾನಿದೇವತಾರೂಪದಿಂದಬೇರೆಬೇರೆಯಾಗಿ ಇದ್ದು ದೃಷ್ಟಿಶಕ್ತಿಯನ್ನು ಕೊಡುತ್ತಾನೆಯೋ, ಹಾಗೆಯೇ ಬುದ್ಧಿಭ್ರಮಾದಿಗಳಿಂದ ವಿರಹಿತನಾಗಿ ಪರಮಾತ್ಮನ ಪ್ರಸಾದಲಬ್ಧ ವಿಜ್ಞಾನದಿಂದ ಕೂಡಿರುವ ನಾನು, ಜನ್ಮಾದಿ ದೋಷರಹಿತನೂ, ಸಕಲಜಗತ್ಸೃಷ್ಟ್ಯಾದಿ ಸಕಲವ್ಯಾಪಾರಕರ್ತನೂ ಆದ, ಸಮಸ್ತಜೀವರಿಂದ ಅತ್ಯಂತ ವಿಲಕ್ಷಣನೂ ಬೇರೆಯಾದವನೂ ಆದ ಆ ಒಬ್ಬನಾದ ಪರಬ್ರಹ್ಮವಸ್ತುವನ್ನೇ ನಿಖಿಳಜೀವರ ಹೃತ್ಕಮಲಗಳಲ್ಲಿ ಬೇರೆ ಬೇರೆ ರೂಪದಿಂದ ಆತ್ಮಶಬ್ದವಾಚ್ಯನಾಗಿ ಇರುವುದನ್ನು ಪ್ರತ್ಯಕ್ಷವಾಗಿ ನೋಡಿ ಸುಖಿಸುತ್ತೇನೆ.

ನನಗೆ ಮೋಹಾದಿ ಮಾಯಾಬಂಧನವು ಇರುವುದಿಲ್ಲ. ಈ ಜೀವಾಂತರ್ಯಾಮಿ, ಭಗವದ್ರೂಪಗಳೂ, ಅವತಾರ ರೂಪಗಳೂ, ಮೂಲರೂಪದಿಂದ ಒಂದು ದೀಪದಿಂದ ಅನೇಕದೀಪಗಳನ್ನು ಹೇಗೆ ಹಚ್ಚಬಹುದೋ, ಹಾಗೆಯೇ ಅಭಿವ್ಯಕ್ತವಾದವುಗಳೆಂದೂ, ಗುಣ, ಕರ್ಮ, ಕ್ರಿಯಾದಿಗಳಿಂದಲೂ ಪರಮಾತ್ಮನಿಗೆ ಅಭಿನ್ನವೂ, ಸಮಾನವಾದವುಗಳೂ ಎಂದೂ ಪ್ರತ್ಯಕ್ಷವಾಗಿ ನೋಡಿ ತಿಳಿದಿರುತ್ತೇನೆ. ಇದರಿಂದ ಪರಮಾತ್ಮನಿಗೂ, ಪರಮಾತ್ಮನ ಗುಣರೂಪಕ್ರಿಯಾದಿಗಳಿಗೂ ಭೇದವಿಲ್ಲವೆಂದು, ಎಂದರೆ, ಪರಮಾತ್ಮನ ಗುಣಗಳೂ ಭಗವದ್ರೂಪಗಳೇ, ಅವತಾರಗಳಾದ ರೂಪಗಳೂ ಭಗವದ್ರೂಪಗಳೇ, ಕ್ರಿಯೆಗಳೂ ಭಗವದ್ರೂಪದಂತೆಯೇ ಸರ್ವಕಾರ್ಯ ಸಮರ್ಥವಾದವುಗಳೆಂದೂ ತಿಳಿಯಬೇಕು.

## ಭೀಷ್ಮರ ವಸುಲೋಕ ಗಮನ

ವಾಯುವು ಬೀಸೋಣ ಮಾತ್ರದಿಂದ ಬೇರೆ ಬೇರೆಯಾದ ಬಿದಿರು ಮೆಳೆಗಳನ್ನು ಪರಸ್ಪರ ಉಜ್ಜಿ ಅಗ್ನಿಯುಂಟುಮಾಡಿ ಅವುಗಳನ್ನು ಹೇಗೆ ನಾಶಮಾಡುತ್ತದೋ ಅದರಂತೆಯೇ, ಜನ್ಮಾದಿರಹಿತನಾದ ಈ ಶ್ರೀಕೃಷ್ಣನು ಕೌರವ ಪಾಂಡವರೆಂಬ ಬಿದಿರು ಮೆಳೆಗಳಲ್ಲಿ ದ್ಯೂತವೆಂಬ ಬೆಂಕಿಯನ್ನು ಹುಟ್ಟಿಸಿ, ಆ ಅಗ್ನಿಯಿಂದ ಸಕಲ ಭೂಭಾರಪರಿಹಾರ ಮಾಡಿದನು. ಇಂತಹ, ನನ್ನ ಹೃತ್ಕಮಲದಲ್ಲಿಯೂ, ಹೊರಗೂ ಶೋಭಿಸುತ್ತಾ ಪ್ರಕಾಶಮಾಡುತ್ತಾ ಗೋಚರನಾಗಿರುವ ಈ ಶ್ರೀಕೃಷ್ಣನನ್ನೇ ನೋಡುತ್ತಾ ನಾನು ಈ ಮಾನುಷ ಶರೀರವನ್ನು ಬಿಡುವೆನು ಎಂದು ಹೇಳಿ ಭೀಷ್ಮರು ಮೌನವಾಗಿ, ತಮ್ಮ ಶ್ವಾಸವನ್ನು ರೇಚಕ, ಪೂರಕ, ಕುಂಭಕಮಾರ್ಗಗಳಿಂದ ನಿರೋಧಿಸಿ, ಹೃತ್ಕಮಲದಲ್ಲಿರುವ ಸ್ವಬಿಂಬಮೂರ್ತಿಯನ್ನೂ, ಪ್ರಾಣನನ್ನೂ, ನಾಭಿಕಮಲದಿಂದಾರಂಭಿಸಿ, ಕ್ರಮವಾಗಿ ಸುಷುಮ್ನಾ

ನಾಡಿಯ ಮೂಲಕ ಉದಾನವಾಯುವನ್ನು ಉದ್ರೇಕಿಸಿ, ಷಟ್ಕಮಲಗಳಲ್ಲೂ ಇರುವ ಭಗವದ್ರೂಪಗಳನ್ನು ಸ್ವಬಿಂಬರೂಪದಲ್ಲಿ ಐಕ್ಯಚಿಂತನೆಮಾಡಿ, ಪೂಜಿಸಿ, ಶಿರೋದ್ವಾರವಾದ ಬ್ರಹ್ಮರಂಧ್ರದ ಮೂಲಕ ಪ್ರಾಣವನ್ನು ಬಿಡುವಾಗ ತಮ್ಮ ಮೂಲರೂಪವಾದ ವಸುರೂಪವು ಜ್ಞಾಪಕಕ್ಕೆ ಬಂದಿತಾಗಿ, ಅವರು ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಜ್ಯೋತಿರ್ಮಯರೂಪರಾಗಿ ದೇಹಬಿಟ್ಟು ವಸುಲೋಕಕ್ಕೆ ಹೊರಟುಹೋದರು. ಈ ಅದ್ಭುತವಾದ ದೇಹತ್ಯಾಗ ಕ್ರಮವನ್ನು ನೋಡುತ್ತಾ ಆಶ್ಚರ್ಯಚಕಿತರಾಗಿದ್ದ, ಸಕಲ ಋಷಿಗಳೂ, ಪಾಂಡವರೂ ನಿಶ್ಶಬ್ದವಾಗಿ ನಿಂತಿದ್ದರು.

ಆ ಸಮಯದಲ್ಲಿ ಅಂತರಿಕ್ಷದಲ್ಲಿ ನೆರೆದಿದ್ದ ದೇವತೆಗಳೂ, ಗಂಧರ್ವರೂ, ದೇವತಾವಾದ್ಯ ಜಯಭೇರಿಗಳನ್ನು ಮಾಡಿದರು. ಗಂಧರ್ವರು ಗಾನನರ್ತನಾದಿಗಳನ್ನು ಮಾಡಿ, ಭೀಷ್ಮರ ದೇಹದ ಮೇಲೆ ದೇವತಾಪುಷ್ಪ ವೃಷ್ಟಿಯನ್ನು ಸುರಿಸಿದರು. ಯುಧಿಷ್ಠಿರನು ದೇಹಸಂಸ್ಕಾರಗಳನ್ನು ಮಾಡಿ ಒಂದು ಮುಹೂರ್ತ ಕಾಲ ದುಃಖಪಟ್ಟನು. ನಂತರ ನೆರೆದಿದ್ದ ಮಹರ್ಷಿಗಳೆಲ್ಲರೂ ಶ್ರೀಕೃಷ್ಣನನ್ನು ರಹಸ್ಯನಾಮಗಳಿಂದ ಸ್ತೋತ್ರಮಾಡಿ, ಆ ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ತಮ್ಮತಮ್ಮ ಆಶ್ರಮಗಳಿಗೆ ಹೋದರು. ನಂತರ, ಶ್ರೀಕೃಷ್ಣನೂ ಪಾಂಡವರೂ ಪಟ್ಟಣಕ್ಕೆ ಹಿಂತಿರುಗಿ, ಭೀಷ್ಮರ ಅದ್ಭುತ ನಿರ್ಯಾಣಕ್ರಮವನ್ನು, ಧೃತರಾಷ್ಟ್ರ, ಗಾಂಧಾರಿ, ಕುಂತೀದೇವಿ ಮೊದಲಾದವರಿಗೆ ತಿಳಿಸಿ ಅವರ ದುಃಖ ಸಮಾಧಾನ ಮಾಡಿದರು. ನಂತರ, ಶ್ರೀಕೃಷ್ಣನ ಆಜ್ಞಾನುಸಾರವಾಗಿಯೂ, ಧೃತರಾಷ್ಟ್ರನ ಅನುಮತಿಯಿಂದಲೂ ಧರ್ಮರಾಜ್ಯ ಪರಿಪಾಲನೆಯನ್ನು ಮಾಡುವವನಾದನು. ಶ್ರೀಕೃಷ್ಣನು ದ್ವಾರಕಾಪಟ್ಟಣಕ್ಕೆ ತೆರಳಲುದ್ಯುಕ್ತನಾದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಒಂಭತ್ತನೆಯ ಅಧ್ಯಾಯವು ಮುಗಿಯಿತು.**

## अथ दशमोऽध्यायः

**शौनक उवाच**

हत्वा स्वरिक्थस्पृध आततायिनो युधिष्ठिरो धर्मभृतां गवि स्थिरः ।
सहानुजैः प्रत्यवरुद्धभोजनः कथं प्रवृत्तः किमकार्षीत्ततः ॥ १ ॥

**सूत उवाच**

वंशं कुरोर्वंशदवाग्निनिर्हृतं संरोहयित्वा भवतापनो हरिः ।
निवेशयित्वा निजराज्य ईश्वरो युधिष्ठिरं प्रीतमना बभूव ह ॥ २ ॥

## अथ दशमोऽध्यायः

याजयित्वाऽश्वमेधैस्तान् त्रिभिरुत्तमकल्पकैः ।
तद्यशः पावनं दिक्षु शतमन्योरिवातनोत् ॥ ३ ॥

निशम्य भीष्मोक्तमथाच्युतोदितं प्रवृत्तविज्ञानविधूतविभ्रमः ।
शशास गामिन्द्र इवाजिताश्रयः प्रणिध्युपात्तामनुजानुवर्तितः ॥ ४ ॥

कामं ववर्ष पर्जन्यः सर्वकामदुघा मही ।
सिषिचुः स्म व्रजं गावः पयसाऽत्यूधसो मुदा ॥ ५ ॥

नद्यः समुद्रा गिरयः सवनस्पतिवीरुधः ।
फलन्त्योषधयः सर्वाः काममन्वृतु तस्य वै ॥ ६ ॥

नाधयो व्याधयः क्लेशाः दैवभूतात्महेतवः ।
अजातशत्रावभवन् जन्तूनां राज्ञि कर्हिचित् ॥ ७ ॥

उषित्वा हस्तिनपुरे मासान्कतिपयान्हरिः ।
सुहृदां च विशोकाय स्वसुश्च प्रियकाम्यया ॥ ८ ॥

आमन्त्र्य चाभ्यनुज्ञातः परिष्वज्याभिवाद्य तम् ।
आरुरोह रथं कैश्चित्परिष्वक्तोऽभिवादितः ॥ ९ ॥

सुभद्रा द्रौपदी कुन्ती विदुरोऽथ युधिष्ठिरः ।
गान्धारी धृतराष्ट्रश्च युयुत्सुर्गौतमो यमौ ॥ १० ॥

वृकोदरश्च धौम्यश्च स्त्रियो मत्स्यसुतादयः ।
न सेहिरे विमुह्यन्तो विरहं शार्ङ्गधन्वनः ॥ ११ ॥

तत्सङ्गान्मुक्तदुः सङ्गो हातुं नोत्सहते बुधः ।
कीर्त्यमानं यशो यस्य सकृदाकर्ण्य रोचनम् ॥ १२ ॥

तस्याभ्यस्तधियः पार्थाः सहेरन्विरहं कथम् ।
दर्शनस्पर्शनालापशयनासनभोजनैः ॥ १३ ॥

सर्वे तेऽनिमिषैरक्षैस्तमनुद्रुतचेतसः ।
वीक्ष्यन्तः स्नेहसंबन्धाद्विचेरुस्तत्र तत्र ह ॥ १४ ॥

## अथ दशमोऽध्यायः

न्यरुन्धन्नुद्गलद्बाष्पमौत्कण्ठ्याद्देवकीसुते ।
निर्यात्यगारान्नाभद्रमिति स्याद्बान्धवस्त्रियः ॥ १५ ॥

मृदङ्गशङ्खभेर्यश्च वीणापणवगोमुखाः ।
धुन्धुर्यानकघण्टाद्याः नेदुर्दुन्दुभयस्तथा ॥ १६ ॥

प्रासादशिखरारूढाः कुरुनार्यो दिदृक्षया ।
ववृषुः कुसुमैः कृष्णे प्रेमव्रीडस्मितेक्षणाः ॥ १७ ॥

सितातपत्रं जग्राह मुक्तादामविभूषितम् ।
रत्नदण्डं गुडाकेशः प्रियः प्रियतमस्य हि ॥ १८ ॥

उद्धवः सात्यकिश्चैव व्यजने परमाद्भुते ।
विकीर्यमाणैः कुसुमै रेजे मधुपतिः पथि ॥ १९ ॥

अश्रूयन्ताशिषः सत्यास्तत्र तत्र द्विजेरिताः ।
नानुरूपानुरूपाश्च निर्गुणस्य गुणात्मनः ॥ २० ॥

अन्योन्यमासीत्सञ्जल्प उत्तमश्लोकचेतसाम् ।
कौरवेन्द्रपुरस्त्रीणां सर्वश्रुतिमनोहरः ॥ २१ ॥

**स्त्रिय ऊचुः**

स वै किलायं पुरुषः पुरातनो य एक आसीदविशेष आत्मनि ।
अग्रे गुणेभ्यो जगदात्मनीश्वरे निमीलितात्मा निशि सुप्तशक्तिषु ॥ २२ ॥

स एव भूयो निजवीर्यचोदितां स्वजीवमायां प्रकृतिं सिसृक्षतीम् ।
अनामरूपात्मनि रूपनामनी विधित्समानोऽनुससार शास्त्रिकृत् ॥ २३ ॥

स वा अयं यत्पदमत्र सूरयो जितेन्द्रिया निर्जितमातरिश्वनः ।
पश्यन्ति भक्त्युत्कलितामलात्मना न त्वेष सत्वं परिमार्ष्टुमर्हति ॥ २४ ॥

स वा अयं सख्यनुगीतसत्कथो वेदेषु गुह्येषु च वेदवादिभिः ।
य एक ईशो जगदात्मलीलया सृजत्यवत्यत्ति न तत्र सज्जते ॥ २५ ॥

यदा ह्यधर्मेण तमोऽधिका नृपाः जीवन्ति तत्रैष हि सात्वतः किल ।
धर्मं भगं सत्यमृतं दयां यशो भवाय रूपाणि दधद्युगे युगे ॥ २६ ॥

## अथ दशमोऽध्यायः

अहो अलं श्लाघ्यतमं यदोः कुलं त्वहो अलं पुण्यतमं मधोर्वनम् ।
यदेष पुंसामृषयः प्रियश्रवाः स्वजन्मना चङ्क्रमणेन चाञ्चति ॥ २७ ॥

अहो बत स्वर्यशसस्तिरस्करी कुशस्थली पुण्ययशस्करी भुवः ।
पश्यन्ति नित्यं यदनुग्रहेक्षितस्मितावलोकं स्वपतिं स्म यत्प्रजाः ॥ २८ ॥

नूनं व्रतस्नानहुतादिनेश्वरः समर्चितो ह्यस्य गृहीतपाणिभिः ।
पिबन्ति याः सख्यधरामृतं मुहुः व्रजस्त्रियः सम्मुमुहुर्यदाशया ॥ २९ ॥

या वीर्यशुल्केन हृताः स्वयंवरे प्रमथ्य चैद्यप्रमुखान् विशुष्मिणः ।
प्रद्युम्नसाम्बप्रमुखात्मजाः परा याश्चाहृता भौमवधे सहस्रशः ॥ ३० ॥

एताः पुरा स्त्रीत्वमवाप्तये समं निरस्तशोकं बत साधु कुर्वते ।
यासां गृहात्पुष्करलोचनः पतिः न जात्वपैत्याकृतिभिः हृदि स्पृशन् ॥ ३१ ॥

**सूत उवाच**

एवंविधा गदन्तीनां स गिरः पुण्ययोषितां ।
निरीक्षणेनाभिनन्दन् सस्मितेन ययौ हरिः ॥ ३२ ॥

अजातशत्रुः पृतनां गौपीथाय मधुद्विषः ।
परेभ्यः शङ्कितः स्नेहात् प्रायुंक्त चतुरङ्गिणीम् ॥ ३३ ॥

अथ दूरागतान् शौरिः कौरवान् विदुरान्वितान् ।
सन्निवर्त्य दृढं स्निग्धान् प्रायात्स्वनगरीं प्रियैः ॥ ३४ ॥

कुरुजाङ्गलपाञ्चालान् शूरसेनान् सयामुनान् ।
ब्रह्मावर्तं कुरुक्षेत्रं मत्स्यान् सारस्वतानथ ॥ ३५ ॥

मरुधन्वमतिक्रम्य सौवीराभीरसैन्धवान् ।
आनर्तान् भार्गवोपागाच्छ्रान्तवाहो मनाग्विभुः ॥ ३६ ॥

तत्र तत्र च तत्रत्यैर्हरिः प्रत्युद्यतार्हणः ।
सायं भेजे दिशं पश्चाद्गविष्ठो गां गतस्तदा ॥ ३७ ॥

आनर्तान् स उपव्रज्य स्वृद्धान् जनपदान् स्वकान् ।
दध्मौ दरवरं तेषां विषादं शमयन्निव ॥ ३८ ॥

## अथ दशमोऽध्यायः

स उच्चकाशे धवलोदरो दरोऽप्युरुक्रमस्याधरशोणशोणिमा ।
दाध्मायमानः करकञ्जसम्पुटे यथाऽब्जषण्डे कलहंस उत्स्वनः ॥ ३९ ॥

तमुपश्रुत्य निनदं जगद्भवभयापहम् ।
प्रत्युद्ययुः प्रजाः सर्वाः भर्तृदर्शनलालसाः ॥ ४० ॥

नत्वोपनीतवलयो रवेर्दिपमिवादृताः ।
आत्मारामं पूर्णकामं निजलाभेन नित्यदा ॥ ४१ ॥

प्रीत्युत्फुल्लमुखाः प्रोचुर्हर्षगद्गदया गिरा ।
पितरं सर्वसुहृदमवितारमिवार्भकाः ॥ ४२ ॥

नताः स्म ते नाथ सदाङ्घ्रिपङ्कजं विरिञ्चवैरिञ्चसुरेन्द्रवन्दितम् ।
परायणं क्षेममिहेच्छतां परं न यत्र कालः प्रभवेत्परप्रभुः ॥ ४३ ॥

भवाय नस्त्वं भव विश्वभावन त्वमेव माताऽऽत्मसुहृत्पतिः पिता ।
त्वं सद्गुरुर्नः परमञ्च दैवतं यस्यानुवृत्या कृतिनो बभूविम ॥ ४४ ॥

अहो सनाथा भवता स्म यद्वयं त्रैविष्टपानामपि दूरदर्शनम् ।
प्रेमस्मितस्निग्धनिरीक्षणाननं पश्येम रूपं तव सर्वसौभगम् ॥ ४५ ॥

यर्ह्यम्बुजाक्षाञ्चति माधवो भवान् कुरून् मधून्वाऽथ सुहृद्दिदृक्षया ।
तत्राब्दकोटिप्रतिमः क्षणो भवेत् रविं विनाऽक्ष्णामिव नस्तवाच्युत ॥ ४६ ॥

इति चोदीरिता वाचः प्रजानां भक्तवत्सलः ।
शृण्वानोऽनुग्रहं दृष्ट्या वितन्वन्प्राविशत्पुरीम् ॥ ४७ ॥

मधुभोजदशार्हार्हकुकुरान्धकवृष्णिभिः ।
आत्मतुल्यबलैर्गुप्तां नागैर्भोगवतीमिव ॥ ४८ ॥

सर्वर्तुसर्वविभवैः पुष्पवृक्षलताश्रमैः ।
उद्यानोपवनारामैर्धृतपद्माकरश्रियम् ॥ ४९ ॥

गोपुरद्वारमार्गेषु कृतकौतुकतोरणाम् ।
चित्रध्वजपताकाग्रैरन्तः प्रतिहतातपाम् ॥ ५० ॥

## अथ दशमोऽध्यायः

सम्मार्जितमहामार्गरथ्यापणकचत्वराम् ।
सिक्तां गन्धजलैरुप्तां फलपुष्पाक्षतांकुरैः ॥ ५१ ॥

द्वारि द्वारि गृहाणाञ्च दध्यक्षतफलेक्षुभिः ।
अलङ्कृतां पूर्णकुम्भैर्बलिभिर्धूपदीपकैः ॥ ५२ ॥

निशम्य कृष्णमायान्तं वसुदेवो महामनाः ।
अक्रूरश्चोग्रसेनश्च रामश्चाद्भुतविक्रमः ॥ ५३ ॥

प्रद्युम्नश्चारुदेष्णश्च साम्बो जाम्बवतीसुतः ।
प्रहर्षवेगोच्छ्वसितशयनासनभोजनाः ॥ ५४ ॥

वारणेन्द्रं पुरस्कृत्य ब्राह्मणैः ससुमङ्गलैः ।
शङ्खतूर्यनिनादेन ब्रह्मघोषेण चादृतः ।
प्रत्युज्जग्मू रथैर्हृष्टाः प्रणयागतसाध्वसाः ॥ ५५ ॥

वारमुख्याश्च शतशो यानैस्तद्दर्शनोत्सुकाः ।
चलत्कुण्डलनिर्भातकपोलवदनश्रियः ॥ ५६ ॥

नटनर्तकगन्धर्वाः सूतमागधवन्दिनः ।
गायन्ति चोत्तमश्लोकचरितान्यद्भुतानि च ॥ ५७ ॥

भगवांस्तत्र बन्धूनां पौराणामनुवर्तिनाम् ।
यथाविध्युपसङ्गम्य सर्वेषां मानमादधे ॥ ५८ ॥

प्रह्वाभिवन्दनाश्लेषकरस्पर्शस्मितेक्षणैः ।
आश्वस्य आ श्वपाकेभ्यः वरैश्चाभिमतैर्विभुः ॥ ५९ ॥

स्वयञ्च गुरुभिर्विप्रैस्सदारैः स्थविरैरपि ।
आशीर्भिर्युज्यमानोऽन्यैर्बन्धुभिश्चाविशत्पुरम् ॥ ६० ॥

राजमार्गं गते कृष्णे द्वारकायाः कुलस्त्रियः ।
हर्म्याण्यारुरुहुर्विप्रास्तदीक्षणमहोत्सवाः ॥ ६१ ॥

नित्यं निरीक्षमाणानां यद्यपि द्वारकौकसाम् ।

## अथ दशमोऽध्यायः

न वितृप्यन्ति हि दृशः श्रियो धामाङ्गमच्युतम् ॥ ६२ ॥

श्रियो निवासो यस्योरः पानपात्रं मुखं दृशाम् ।
बाहवो लोकापालानां सारङ्गाणां पदाम्बुजम् ॥ ६३ ॥

सितातपत्रव्यजनैरुपस्कृतः प्रसूनवर्षैरभिवर्षितः पथि ।
पिशङ्गवासा वनमालया बभौ
घनो यथार्कोडुपचापवैद्युतैः ॥ ६४ ॥

प्रविष्टस्तु गृहं पित्रोः परिष्वक्तः स्वमातृभिः ।
ववन्दे शिरसा सप्त देवकीप्रमुखा मुदा ॥ ६५ ॥

ताः पुत्रमङ्कमारोप्य स्नेहस्नुतपयोधराः ।
हर्षविह्वलितात्मानः सिषिचुर्नेत्रजैर्जलैः ॥ ६६ ॥

अथाविशत्स्वभवनं सर्वकाममनुत्तमम् ।
प्रासादा यत्र पत्नीनां सहस्राणि च षोडश ।
शतमष्टोत्तरं चैव वज्रवैडूर्यमण्डिताः ॥ ६७ ॥

पत्न्यः पतिं प्रोष्य गृहानुपागतं विलोक्य सञ्जातमनोमहोत्सवाः ।
उत्तस्थुरारात्सहसाऽऽसनाश्रयाः साकम्पितव्रीडितलोचनाननाः ॥ ६८ ॥

तमात्मजैर्दृष्टिभिरन्तरात्मा दुरन्तभावाः परिरेभिरे पतिम् ।
निरुद्धमप्यस्रवदम्बु नेत्रयोः विलज्जतीनां भृगुवर्य वैक्लवात् ॥ ६९ ॥

यद्यप्यसौ पार्श्वगतो रहोगतस्तासां यथाप्यङ्घ्रियुगं नवं नवम् ।
पदे पदे का विरमेत तत्पदाच्चलापि यं श्रीर्न जडाति कर्हिचित् ॥ ७० ॥

एवं नृपाणां क्षितिभारजन्मनामक्षौहिणीभिः परिवृत्ततेजसाम् ।
विधाय वैरं श्वसनो यथानलं मिथो वधेनोपरतो निरायुधः ॥ ७१ ॥

स एष नरलोकेऽस्मिन्नवतीर्णः स्वमायया ।
रेमे स्त्रीरत्नकूटस्थः भगवान्प्राकृतो यथा ॥ ७२ ॥

उद्दामभावपिशुनामलवल्गुहासव्रीडावलोकविहतो मदनोऽपि यासाम् ।

**अथ दशमोऽध्यायः**

सम्मुह्य चापमजहात् प्रमदोत्तमास्ता
यस्येन्द्रियं विमथितुं कुहकैर्न शेकुः ॥ ७३ ॥

मन्यते तन्मयं लोको ह्यसङ्गमपि सङ्गिनम् ।
आत्मौपम्येन मनुजं प्रावृण्वानमतोऽबुधः ॥ ७४ ॥

यत्तदीशनमीशस्य प्रकृतिस्थोऽपि तद्गुणैः ।
न युज्यते सदात्मस्थैर्यथा बुद्धिस्तदाश्रया ॥ ७५ ॥

तं मेनिरे खला मूढास्त्रैणश्चानुव्रतं हरेः ।
अप्रमाणविदो भर्तुरीश्वरं मतयो यथा ॥ ७६ ॥

**॥ इति श्रीमद्भागवते प्रथमस्कन्धे दशमोऽध्यायः ॥**

## ॥ ಹತ್ತನೆಯ ಅಧ್ಯಾಯ ॥

### ಶ್ರೀಧರ್ಮರಾಜರ ರಾಜ್ಯಪರಿಪಾಲನೆ

ಶೌನಕರು ಪುನಃ ಸೂತಪುರಾಣಿಕರನ್ನು ಕುರಿತು ಎಲೈ! ಪೂಜ್ಯರಾದ ಸೂತರೇ, ನ್ಯಾಯವಾಗಿ ಪಾಂಡವರಿಗೆ ಸಲ್ಲಬೇಕಾದ ರಾಜ್ಯಭಾಗವೂ ತನಗೇ ಇರಲಿ ಎಂದು, ಅನ್ಯಾಯವಾಗಿ ರಾಜ್ಯಭೋಗಾಪೇಕ್ಷೆ ವುಳ್ಳ ಪಾಪಿ ದುರ್ಯೋಧನಾದಿಗಳನ್ನು ಯುದ್ಧದಲ್ಲಿ ಸಂಹರಿಸಿ, ಶ್ರೀಕೃಷ್ಣನ ಅನುಗ್ರಹದಿಂದ ನ್ಯಾಯವಾಗಿ ರಾಜ್ಯೈಶ್ವರ್ಯವನ್ನು ಹೊಂದಿದ ಧರ್ಮರಾಯನು, ಶ್ರೀವೇದವ್ಯಾಸರ, ಭೀಷ್ಮರ ದಿವ್ಯ ಉಪದೇಶಗಳಿಂದ ಮನಶ್ಶಾಂತಿ ಪಡೆದವನಾಗಿ, ನಿಯಮವಾದ ಆಹಾರ ವುಳ್ಳವನೂ, ವಿಷಯಭೋಗಗಳನ್ನು ಬಿಟ್ಟವನೂ ಆಗಿ, ಮುಂದೆ ಯಾವ ರೀತಿಯಾಗಿ ರಾಜ್ಯಪರಿಪಾಲನೆಯನ್ನು ಮಾಡಿದನು? ಭೀಷ್ಮರ ನಿರ್ಯಾಣಾನಂತರ, ಪಾಂಡವರ ಜೊತೆಯಲ್ಲಿದ್ದ ಶ್ರೀಕೃಷ್ಣನು ಹಸ್ತಿನಾಪುರದಲ್ಲಿ ಏನು ಮಾಡಿದನು? ಶ್ರೀಕೃಷ್ಣಚರಿತಾಮೃತ ಪಾನವಿಷಯದಲ್ಲಿ, ನಿಮ್ಮ ಮುಖಕಮಲಗಳಿಂದ ವರ್ಣಿಸಲ್ಪಡುವ ಅತಿಮನೋಹರ ವಾಗ್ವಿಲಾಸದಲ್ಲಿ, ನಾವು ಇನ್ನೂ ಪಾನ, ಶ್ರವಣಾಪೇಕ್ಷಿಗಳಾಗಿರುತ್ತೇವೆ, ಹೇಳಬೇಕೆಂದು ಪ್ರಾರ್ಥಿಸಿದರು.

ಆಗ ಸೂತಪುರಾಣಿಕರು ಶೌನಕಾದಿ ಋಷಿಗಳಿಗೆ ಮುಂದಿನ ಕಥೆಯನ್ನು ಹೇಳಲುಪಕ್ರಮಿಸಿದರು.

## अथ दशमोऽध्यायः

ಎಲೈ! ಶೌನಕಾದಿಋಷಿಗಳಿರಾ! ಕೌರವ ಪಾಂಡವರೆಂಬ ಎರಡು ಅರಣ್ಯಗಳಲ್ಲಿ ಯುದ್ಧವೆಂಬ ಅಗ್ನಿಯನ್ನು ಹುಟ್ಟಿಸಿ, ಆ ಮೂಲಕ ಆ ಎರಡು ವಂಶಗಳನ್ನೂ, ಸಕಲ ದುಷ್ಟರಾಜರನ್ನೂ ಪರಿವಾರ ಸಮೇತ ನಾಶಮಾಡಿ, ಯುಧಿಷ್ಠಿರನಿಗೆ ರಾಜ್ಯಾಭಿಷೇಕಮಾಡಿ, ಶ್ರೀಕೃಷ್ಣನು ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿ, ಅದರಿಂದ ತಾನು ನಿತ್ಯತೃಪ್ತನಾಗಿದ್ದರೂ, ಲೋಕಕ್ಕೆ ತೃಪ್ತಿ ಹೊಂದಿ ಸಂತೋಷಪಟ್ಟವನಂತೆ ತೋರಿಸಿದನು. ನಂತರ ಯುಧಿಷ್ಠಿರನಿಂದ ಪರಮ ಉತ್ಕೃಷ್ಟವಾಗಿ ಅಶ್ವಮೇಧಯಾಗವನ್ನು ಮಾಡಿಸಿ, ಪಾಂಡವರ ಯಶಸ್ಸು ಸರ್ವತ್ರ ಬೆಳಗುವಂತೆ ಮಾಡಿದನು. ಯುಧಿಷ್ಠಿರನೂ ಕೂಡ ಭೀಷ್ಮರ, ಶ್ರೀಕೃಷ್ಣನ, ವಿಜ್ಞಾನಮಯ ಉಪದೇಶಗಳಿಂದ ಭಾವಶುದ್ಧಿಯನ್ನು ಪಡೆದು ಸಂತೋಷದಿಂದ ಧರ್ಮರಾಜ್ಯ ಪರಿಪಾಲನೆ ಮಾಡಿದನು.

ಮೂರು ಲೋಕಗಳಲ್ಲಿ ಅಸಮವೀರರಾದ ಭೀಮಾರ್ಜುನರ ಬಾಹುಬಲದಿಂದ ಜಯಿಸಲ್ಪಟ್ಟ ಸಮುದ್ರಪರಿಯಂತ ಭೂಮಂಡಲದಲ್ಲಿದ್ದ ಸಮಸ್ತ ಅಧಿರಾಜರುಗಳ ಕಿರೀಟ ಶೋಭಿತ ಶಿರಸ್ಸುಗಳಿಂದ ನಮಸ್ಕರಿಸಲ್ಪಡುವ ಪಾದಕಮಲಗಳುಳ್ಳವನಾಗಿ, ಸಿಂಹಾಸನಾರೂಢನಾಗಿ, ತಮ್ಮಂದಿರಿಂದ ಸಮೇತನಾದ ಯುಧಿಷ್ಠಿರನು ದೇವೇಂದ್ರನಂತೆ ಶೋಭಿಸುತ್ತಿದ್ದನು. ಅವನ ಸಭೆಯು ಜ್ಞಾನಿಗಳಿಂದಲೂ, ಪರಮತಪಸ್ವಿಗಳಿಂದಲೂ, ಧರ್ಮನಿಷ್ಠರಾದ ಸಜ್ಜನರಿಂದಲೂ ಕೂಡಿ ಇಂದ್ರನ ಸಭೆಯಂತೆ ಪ್ರಕಾಶಿಸುತ್ತಿತ್ತು. ಧರ್ಮರಾಜನ ರಾಜ್ಯಭಾರ ಕಾಲದಲ್ಲಿ ಮೇಘಗಳು ಕಾಲಕಾಲಕ್ಕೆ ಸರಿಯಾಗಿ ಸುವೃಷ್ಟಿಗಳನ್ನು ಸುರಿಸುತ್ತಿದ್ದವು.

ಭೂಮಿಯು ಸರ್ವ ಓಷಧಿ, ಫಲ, ಪುಷ್ಪ ಭರಿತಗಳಾದ ವೃಕ್ಷಗಳಿಂದ ತುಂಬಿ ತುಳುಕುತ್ತಿತ್ತು. ಗೋವುಗಳೂ ಕರುಗಳೂ ಪುಷ್ಟವಾಗಿ ಕಾಮಧೇನುಗಳಂತೆ ಇದ್ದು ಸಮೃದ್ಧಿಯಾಗಿ ಕ್ಷೀರವನ್ನು ಕೊಡುತ್ತಿದ್ದವು. ನದಿಗಳೂ ಶಾಂತವಾಗಿ ಪೂರ್ಣಪ್ರವಾಹದಿಂದ ನಿರ್ಮಲೋದಕದಿಂದ ಹರಿಯುತ್ತಿದ್ದವು. ಬೆಟ್ಟಪರ್ವತಪ್ರದೇಶಗಳು ಕುಶಾದಿಗಳಿಂದಲೂ, ಸಮಸ್ತವನಸ್ಪತಿಗಳಿಂದಲೂ ಭರಿತವಾಗಿದ್ದವು. ಸಮುದ್ರವು ಸರ್ವ ರತ್ನಗಳನ್ನು ಕೊಡುತ್ತಿತ್ತು. ಸರ್ವ ಋತು ಭೇದಗಳಲ್ಲಿ ಬೆಳೆಯುವ ಫಲಪುಷ್ಪಾ ದಿಗಳೂ, ಏಕರೀತಿಯಾಗಿ ಎಲ್ಲಾ ಕಾಲದಲ್ಲಿಯೂ ಬೆಳೆಯುತ್ತಿದ್ದವು.

ಜನರಿಗೆ ರೋಗರುಜಿನಗಳಾಗಲೀ ದುಃಖಗಳಾಗಲೀ ಎಲ್ಲೂ ಇರಲಿಲ್ಲ. ದೈವಿಕ, ಭೌತಿಕ, ದೈಹಿಕ ಉಪದ್ರವಗಳು ಪ್ರಜೆಗಳಿಗಿರಲಿಲ್ಲ. ಶತೃಭಯವಿರಲಿಲ್ಲ. ದುಷ್ಟಜನರಿರಲಿಲ್ಲ. ಎಲ್ಲರೂ ರಾಜಶಾಸನವನ್ನು ಶಿರಸಾವಹಿಸಿ ಪ್ರೀತಿಯಿಂದ ಅನುಸರಿಸುತ್ತಿದ್ದರು. ಶ್ರೀಕೃಷ್ಣನ ಸಾನ್ನಿಧ್ಯದಿಂದ ಇಡೀ ಭೂಮಂಡಲವು ಅತಿಶಯ ವಿಲಕ್ಷಣ ಕಾಂತಿ, ಸೌಂದರ್ಯಗಳಿಂದಲೂ, ಸುಖದಿಂದಲೂ

ತುಂಬಿ ಶೋಭಿಸುತ್ತಿತ್ತು. ಈ ರೀತಿ ಸಮಸ್ತ ಭೂಭಾರಹರಣ ಮಾಡಿ ಶ್ರೀಕೃಷ್ಣನು ಕೆಲವು ಕಾಲ ಪಾಂಡವರೊಡನೆ ವಾಸಮಾಡಿ, ನಂತರ ದ್ವಾರಕಾಪಟ್ಟಣಕ್ಕೆ ಹೊರಡಲು ಸಿದ್ಧನಾದನು.

## ಶ್ರೀಕೃಷ್ಣನ ದ್ವಾರಾಕಾಗಮನ

ಯಾವ ಶ್ರೀಕೃಷ್ಣನೊಡನೆ ಸಂಭಾಷಣ, ಶಯನ, ಆಸನ, ಭೋಜನ ಸುಖಗಳನ್ನೂ, ನಿತ್ಯವೂ ಆ ಪರಮಪುರುಷನ ಅತಿಸುಂದರ, ಪಾವನ ದೇಹಸ್ಪರ್ಶವನ್ನೂ ಹೊಂದುತ್ತಿದ್ದ ಭೀಮಾರ್ಜುನಾದಿ ಪಾಂಡವರೂ, ಧೃತರಾಷ್ಟ್ರ, ಕುಂತೀ, ಗಾಂಧಾರೀ, ದ್ರೌಪದೀ ಮೊದಲಾದ ಸ್ತ್ರೀಯರು, ಕೃಷ್ಣನ ವಿರಹವನ್ನು ತಾಳಲಾರದೇ, ಕಣ್ಣುಗಳಲ್ಲಿ ಬಾಷ್ಪ ಭರಿತರಾಗಿ, ಗದ್ಗದಕಂಠರಾಗಿ, ಬಹಳ ಪ್ರಯತ್ನದಿಂದ ಉಕ್ಕಿಬರುತ್ತಿದ್ದ ವಿರಹಶೋಕವನ್ನು ಹೊರಗೆ ತೋರಿಸದಿರುವುದಕ್ಕೆ ಪ್ರಯತ್ನಿಸುತ್ತಿದ್ದರು. ಶ್ರೀಕೃಷ್ಣನು ನಮಸ್ಕರಿಸುವವರಿಗೆ ಕೈಯಿಂದೆತ್ತಿ ಆಶೀರ್ವಾದ ಮಾಡುತ್ತಲೂ, ಸಮಾನೀಕರಂತೆ ಬಂದವರನ್ನು ಆಲಿಂಗನಾದಿಗಳಿಂದ ಬಹುಮಾನಿಸುತ್ತಲೂ, ಹಿರಿಯರಿಗೂ, ಬ್ರಾಹ್ಮಣರಿಗೂ ತಾನು ನಮಸ್ಕರಿಸಿ ಆಲಿಂಗನಾದಿಗಳಿಂದ ಬಹುಮಾನಿಸುತ್ತಲೂ, ಹಿರಿಯರಿಗೂ, ಬ್ರಾಹ್ಮಣರಿಗೂ ತಾನು ನಮಸ್ಕರಿಸಿ ಅವರ ವೇದೋಕ್ತ ಆಶೀರ್ವಚನಗಳನ್ನು ಕೇಳುತ್ತಲೂ, ಸಿದ್ಧವಾಗಿ ನಿಂತಿದ್ದ ರಥವನ್ನು ಹತ್ತುವುದಕ್ಕಾಗಿ ಸಿದ್ಧನಾಗಿದ್ದನು.

ಇತರ ಅಂತಃಪುರ ಸ್ತ್ರೀಯರೂ ಜನರುಗಳೂ ಅಲ್ಲಿಇಲ್ಲಿಗೆ ಓಡಾಡುವ ನೆವಮಾಡಿಕೊಂಡು ಅನೇಕಾವರ್ತಿ ಶ್ರೀಕೃಷ್ಣನ ಪರಮಮಂಗಳ ಮೂರ್ತಿಯನ್ನು ಬಿಟ್ಟಕಣ್ಣಿಂದ ನೋಡುತ್ತಾ ತಮ್ಮ ದೃಷ್ಟಿಗಳನ್ನು ಹಿಂತೆಗೆಯಲಾರದವರಾಗಿದ್ದರು. ಈ ರೀತಿಯಲ್ಲಿ ಸ್ನೇಹ, ಸಂಬಂಧ ಜನರಿಂದ ಶ್ರೀಕೃಷ್ಣನು ಸುತ್ತಲ್ಪಟ್ಟಿದ್ದನು.

ಮೃದಂಗ, ಶಂಖ, ಭೇರಿ, ವೀಣೆ, ಪಣವಕ, ಗೋಮುಖ, ಧುಂಧು, ಆನಕ, ಘಂಟಾ, ದುಂದುಭಿ ಮುಂತಾದ ಅನೇಕ ವಾದ್ಯಘೋಷಗಳು ಸುಸ್ವರವಾಗಿ, ಇಂಪಾಗಿ, ಬಾರಿಸಲ್ಪಡುತ್ತಿದ್ದವು. ಶ್ರೀಕೃಷ್ಣನು ರಥವೇರಿ ಕುಳಿತನು. ಅರಮನೆಯ ಮೇಲ್ಭಾಗದ ಮಹಡಿಯಲ್ಲಿ ನೋಡುತ್ತಾ ನಿಂತಿದ್ದ ಕೌರವ ಸ್ತ್ರೀಜನರು ಶ್ರೀಕೃಷ್ಣನ ಮೇಲೆ ಪುಷ್ಪ ವೃಷ್ಟಿಯನ್ನು ಮಾಡಿದರು. ರತ್ನಖಚಿತವಾದ ನಿರ್ಮಲ ಶ್ವೇತಛತ್ರಿಯನ್ನು ಅರ್ಜುನನು ಹಿಡಿದುಕೊಂಡು ರಥದಮೇಲೆ ಕೃಷ್ಣನ ಹಿಂಭಾಗದಲ್ಲಿ ನಿಂತನು. ಸಾತ್ಯಕೀ ಉದ್ಧವರು ಚಾಮರ, ಬೀಸಣಿಗೆ ಮುಂತಾದವನ್ನು ಬೀಸುತ್ತಿದ್ದರು. ಹಸ್ತಿನಾಪುರದ ಬೀದಿಗಳೂ, ರಥ ಹೋಗುವ ರಾಜಮಾರ್ಗವೂ, ಪನ್ನೀರಿನಿಂದ ಸಾರಿಸಲ್ಪಟ್ಟು,

ಮುತ್ತಿನ ರಂಗವಲ್ಲಿಗಳಿಂದ ಚಿತ್ರಿತಗಳಾಗಿದ್ದವು. ಉದ್ದಕ್ಕೂ ಪುಷ್ಪ ಮಾಲಿಕೆಗಳಿಂದಲೂ, ತಳಿರುತೋರಣಗಳಿಂದಲೂ, ದಿವ್ಯಮಂಟಪಗಳಿಂದಲೂ, ಪಟ್ಟಣದ ಬೀದಿಗಳು ಅಲಂಕೃತಗಳಾಗಿದ್ದವು.

## ಹಸ್ತಿನಾಪುರದ ನಾರಿಯರಿಂದ ಶ್ರೀಕೃಷ್ಣನ ಗುಣಗಾನ

ಬೀದಿಯಲ್ಲಿ ಬ್ರಾಹ್ಮಣರು ವೇದಾಶೀರ್ವಾದಗಳನ್ನು, ಸ್ವರಪೂರ್ವಕ ಘೋಷಿಸುವುದನ್ನು ಅನುರೂಪವಾಗಿಯೂ, ಅನುರೂಪವಲ್ಲದೆಯೂ ಇರುವುದನ್ನು ನಿರ್ಗುಣನೂ ಗುಣಪೂರ್ಣನೂ ಆದ ಶ್ರೀಕೃಷ್ಣನು ಕೇಳುತ್ತಾ ಬರುತ್ತಿದ್ದನು. ಕೌರವ ಪಟ್ಟಣದ, ಸ್ತ್ರೀಯರು, ತಮ್ಮತಮ್ಮ ಮನೆಗಳ ಉಪ್ಪರಿಗೆಗಳನ್ನೇರಿ ಗಟ್ಟಿಯಾಗಿ, ಮಂಜುಳ ಸ್ವರದಿಂದ, ಎಲ್ಲರಿಗೂ ಕೇಳುವಂತೆ ತಮ್ಮತಮ್ಮಗಳಲ್ಲಿ ಕೃಷ್ಣನ ಮಹಿಮೆಗಳನ್ನು ವರ್ಣಿಸುತ್ತಾ ಮಾತನಾಡಿಕೊಳ್ಳುತ್ತಿದ್ದರು. ಪುಣ್ಯಶ್ಲೋಕನಾದ ಶ್ರೀಕೃಷ್ಣನ ಗುಣರೂಪಕ್ರಿಯಾದಿಗಳಲ್ಲಿ ಆಸಕ್ತವಾದ ಮನಸ್ಸುಳ್ಳ ಈ ಪುಣ್ಯಸ್ತ್ರೀಯರ ಸಂಭಾಷಣೆಯು ಕೇಳುವವರಿಗೆ ಅತಿ ಮನೋಹರವಾಗಿಯೂ, ಶ್ರವಣ ಮಾತ್ರದಿಂದ ಪಾವನರನ್ನಾಗಿ ಮಾಡತಕ್ಕದ್ದಾಗಿಯೂ ಆಗಿತ್ತು. ಆ ಸ್ತ್ರೀಯರು ಈ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು

ಒಬ್ಬಳು, ಲೇ! ನೋಡೇ ಇವನ್ನಾ! ಇವನೇ ಅಲ್ವೇನೇ, ಹಿಂದೆ ಯಾವಾಗ್ಲೋ ಮಹಾಪ್ರಳಯ ಆಗಿತ್ತಂತಲ್ಲಾ ಆವಾಗ, ಎಲ್ಲೆಲ್ಲೂ ಬರೀ ಅಗಾಧವಾದ ಸಮುದ್ರಜಲವೇ ಇತ್ತಂತೆ, ಅದರ ಮೇಲೆ ಭೂಮುದೇವಿಯೇ ಒಂದು ಆಲದೆಲೆ ಆಗ್ಬಿಟ್ಟಂತೆ, ದುರ್ಗಾದೇವಿ ಗಾಢಾಂಧಕಾರ ಕತ್ತಲೇ ಆಗಿ ಮುಚ್ಚಿಕೊಂಡುಬಿಟ್ಟಂತೆ, ತಾನು ಒಂದು ದೊಡ್ಡ ಮಗುವಿನ ರೂಪ ತೆಗೆದುಕೊಂಡು ಫಳಫಳ ಅಂತ ಹೊಳೀತಾ, ತನ್ನ ಹೆಂಡತಿ ಲಕ್ಷ್ಮೀದೇವಿಯ ಶ್ರೀರೂಪವನ್ನು ತನ್ನ ಜೊತೆಯಲ್ಲಿ ಮಲಗಿಸಿಕೊಂಡು, ಸಮಸ್ತ ಜಗತ್ತನ್ನೂ ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡು, ಅರೆಗಣ್ಣಮುಚ್ಚಿಕೊಂಡು, ಶ್ರೀದೇವಿಯರ ಬಾಹುಲತೆಗಳಿಂದ ಬಿಗಿದಪ್ಪಲ್ಪಟ್ಟು, ನಿರ್ಭಯನೂ, ಒಬ್ಬನೇ ಆಗಿ ಇದ್ದವನು ಈ ಶ್ರೀಕೃಷ್ಣನೇ ಅಂತೆ ಕಣೆ! ಎಂದಳು.

ಇನ್ನೊಬ್ಬಳು, ಹೌದು! ನನಗೂ ಗೊತ್ತು! ಇವನೇ ಆಮೇಲೆ ಸೃಷ್ಟಿಮಾಡುತ್ತೇನೆಂದು ಅಪೇಕ್ಷಿಸಿ, ತನ್ನ ಉದರಲ್ಲಿದ್ದ ನಾಮರೂಪ ದೇಹಾದಿಗಳಿಲ್ಲದ ಲಿಂಗದೇಹ ಸಹಿತರಾಗಿ ಚಿದ್ರೂಪರಾದ ಜೀವರನ್ನು ತನ್ನ ವೀರ್ಯರೂಪದಿಂದ, ಮಾಯಾರೂಪಳೂ, ಪ್ರಕೃತಿ ಅಭಿಮಾನಿಯೂ ಆದ

ಈ ಶ್ರೀದೇವಿಯನ್ನು ಸಂಭೋಗ ಮಾಡಿ, ಅವಳ ಉದರದಲ್ಲಿಟ್ಟು, ಆ ಶ್ರೀದೇವಿಯರ ಗರ್ಭದ ಮೂಲಕ ಬ್ರಹ್ಮದೇವರನ್ನೂ, ನಂತರ ಸಕಲ ಜಗತ್ತನ್ನೂ ಸೃಷ್ಟಿಸಿದವನೂ ಈ ಶ್ರೀಕೃಷ್ಣನೇ ಅಂತೆ! ಎಂದಳು.

ಇನ್ನೊಬ್ಬಳು - ಕೇಳ್ರೇ ಇವರು ಹೇಳೋ ಹಿಂದಿನ ಕಾಲದ ಕಂತೆ ಪುರಾಣಾನ! ಈಗಿರೋ ಜ್ಞಾನಿಗಳು, ಪ್ರಾಣಾಯಾಮ, ಪ್ರತ್ಯಾಹಾರ, ಶ್ವಾಸನಿರೋಧಗಳಿಂದ ಯೋಗಾಭ್ಯಾಸ ಮಾಡುವ ಯೋಗಿಗಳೂ, ಇಂದ್ರಿಯನಿಗ್ರಹ ವುಳ್ಳವರೂ, ಕೂಡ ಯಾರ ಪಾದಕಮಲಗಳನ್ನು ನಿರ್ಮಲ ಮನಸ್ಸಿನಿಂದ ತಮ್ಮ ಹೃದಯಗಳಲ್ಲಿ ಧ್ಯಾನಿಸಿ ನೋಡಿ, ಭಕ್ತಿ ಉದ್ರೇಕದಿಂದ ಸಮಸ್ತ ವೇದಗಳ ಜ್ಞಾನಸಹಿತರಾಗಿ ಚಿಂತಿಸಿದರೂ, ಮನಗಾಣದ ಅತ್ಯಂತ ಅದ್ಭುತ ಮಹಿಮನಂತೆ ಕಣೇ! ಈ ಶ್ರೀಕೃಷ್ಣ! ಎಂದಳು.

ಎಲೈ ಸ್ತ್ರೀಯರೇ! ನಾನ್ಹೇಳೋದ ಕೇಳಿರಿ! ಈ ವೇದ, ಇತಿಹಾಸ, ಪುರಾಣ ಇವುಗಳಲ್ಲಿ ರಹಸ್ಯವಾಗಿರುವ ಕಥೆಗಳನ್ನು ಪುರಾಣರೂಪದಲ್ಲಿ, ಪಂಡಿತರು ನಮಗೆ ಅನೇಕ ಕಥೆಗಳನ್ನು ಹೇಳುತ್ತಾರಲ್ಲಾ, ಅದಷ್ಟೂ ಈ ಶ್ರೀಕೃಷ್ಣನ ಕಥೆಗಳೇ ಅಂತೆ! ಇವನೇ ಕೇವಲ ಲೀಲೆಗಾಗಿ ಈ ಸಮಸ್ತ ಜಗತ್ಸೃಷ್ಟಿ ಮಾಡುತ್ತಾನಂತೆ, ರಾಮ, ಕೃಷ್ಣ, ಮತ್ಸ್ಯಾದಿ ಅವತಾರಗಳನ್ನು ಮಾಡಿ ಲೋಕಕಂಟಕರಾದ ದುಷ್ಟರನ್ನು ಸಂಹರಿಸಿ ಜಗತ್ತನ್ನು ಧರ್ಮದಿಂದ ರಕ್ಷಿಸುತ್ತಾನಂತೆ. ವೇದವ್ಯಾಸ, ಕಪಿಲಾದಿರೂಪಗಳಿಂದ ನಮಗೆ ಜ್ಞಾನೋಪದೇಶ ಮಾಡುತ್ತಾನಂತೆ, ಇವನೇ ಈ ಸಮಸ್ತ ಜಗತ್ತಿಗೊಡೆಯನಂತೆ! ಈ ಜಗತ್ತಿನ ಪ್ರಾಕೃತ ಸುಖದುಃಖಾದಿಗಳು ಇವನನ್ನು ಮುಟ್ಟಲಾರವಂತೆ, ಆದರೆ ಇತರರಿಗೆ ಆ ಸುಖದುಃಖಾದಿಗಳನ್ನೂ ಈತನೇ ಕೊಡತಕ್ಕ ಸ್ವತಂತ್ರ ಪುರುಷನಂತೆ ಕಣೆ! ಈ ಶ್ರೀಕೃಷ್ಣ!! ಎಂದಳು.

ಇನ್ನೊಬ್ಬಳು, ಲೋಕದಲ್ಲಿ ತಾಮಸರಾದ ಅಸುರರು ಹುಟ್ಟಿ, ಪರಹಿಂಸೆ, ಕೊಲೆ ಇತ್ಯಾದಿಗಳಿಂದ ತಮ್ಮ ಜೀವನವನ್ನು ನಿರ್ವಾಹಮಾಡಿಕೊಂಡು, ಸಜ್ಜನರಿಗೆ ಪ್ರಾಣಹಿಂಸೆ ಮಾಡುತ್ತಿದ್ದಾಗ, ಈ ಶ್ರೀಕೃಷ್ಣನೇ, ಅಂತಹ ದುಷ್ಟರಾಜರುಗಳನ್ನು ಸಂಹಾರಮಾಡಿ, ಸಜ್ಜನರಿಗೆ ಅಭಯಕೊಡುವುದಕ್ಕಾಗಿ ಪ್ರಿಯವ್ರತ, ಪೃಥು ಮುಂತಾದವರಲ್ಲಿ ಆವಿಷ್ಟನಾಗಿ ಲೋಕಸಂರಕ್ಷಕನಾಗಿರುತ್ತಾನೆ. ಈ ಧರ್ಮರಾಯನಲ್ಲೂ ಈಗ ಒಂದು ರೂಪದಿಂದಿದ್ದು, ದುಷ್ಟಹನನ, ಶಿಷ್ಟಪರಿಪಾಲನೆ ಮಾಡಿಸುತ್ತಿರುತ್ತಾನೆ. ಮತ್ಸ್ಯ, ವರಾಹಾದಿ ರೂಪಗಳಿಂದ ಭೂಮಿಯನ್ನುದ್ಧರಿಸಿ ಧರ್ಮನೆಂದು ಕರೆಸುತ್ತಾನೆ. ಕಪಿಲಾದಿ ರೂಪಗಳಿಂದ ಅಣಿಮಾದಿ ಅಷ್ಟೈಶ್ವರ್ಯವಂತನಾಗಿ ಭಗವಂತನೆಂದು

ಕರೆಸುತ್ತಾನೆ. ಕಲ್ಕ್ಯಾದಿ ರೂಪಗಳಿಂದ ಅಧರ್ಮ ಪ್ರವರ್ತಕರನ್ನು ಸಂಹರಿಸಿ ಸತ್ತ್ವಾದಿ ಗುಣಗಳ ಪ್ರಾಚುರ್ಯಕ್ಕೆ ಸಹಕಾರಿಯಾಗಿ ಸತ್ಯಶಬ್ದವಾಚ್ಯನಾಗಿರುತ್ತಾನೆ, ಇಂತಹವೇ ಈಗ ತನ್ನ ಚರಣಕಮಲಗಳನ್ನಾಶ್ರಯಿಸಿದ ಭಕ್ತರನ್ನು ಜರಾಸಂಧ, ಕಂಸಾದಿಗಳ ಭಯದಿಂದ ಬಿಡಿಸಿ ಸಜ್ಜನಪರಿಪಾಲಕನಾಗಿ ಸದಾ ಸಂರಕ್ಷಿಸುವ ಈ ಕೃಷ್ಣರೂಪದಿಂದ ಅವತರಿಸಿ, ನಮ್ಮ ದೃಷ್ಟಿಗೆ ಗೋಚರನಾಗಿರುತ್ತಾನೆ, ಅಲ್ವೇನೇ! ಎಂದಳು.

ಇನ್ನೊಬ್ಬಳು ಎಲೈ! ಸಖಿಯೆ! ಕೇಳು! ಈ ಶ್ರೀಕೃಷ್ಣನು ಕ್ರೀಡಿಸತಕ್ಕ ಆ ಮಧುವನವೇ ಪರಮಪುಣ್ಯ ಸ್ಥಳವು. ಧ್ವಜವಜ್ರಾಂಕುಶಪದ್ಮಾದಿಗಳ ಚಿನ್ಹೆಗಳಿಂದಲಂಕೃತವಾದ ಶ್ರೀಕೃಷ್ಣನ ಪಾದಸ್ಪರ್ಶಗಳಿಂದ ನಿರಂತರ ಚಿನ್ಹಿಸಲ್ಪಡುತ್ತಿದ್ದ ಅವನ ಜನ್ಮಸ್ಥಳವಾದ ಗೋಕುಲವೇ ಸ್ವರ್ಗಲೋಕಕ್ಕಿಂತ ಮಿಗಿಲು. ಶ್ರೀಕೃಷ್ಣನ ಪ್ರೇಮಪೂರಿತವಾದ ಓರೆನೋಟಗಳಿಂದ ನೋಡಲ್ಪಟ್ಟ ವ್ರಜದ ಗೋಪಿಕಾಸ್ತ್ರೀಯರೇ ಧನ್ಯರು, ಪರಮಸುಖಿಗಳು.

ಧರ್ಮವಾದ ಪಾಣಿಗ್ರಹಣದಿಂದ ಶ್ರೀಕೃಷ್ಣಪತ್ನಿಯರಾಗಿ, ತಮ್ಮ ಕೈಗಳಿಂದ ಶ್ರೀಕೃಷ್ಣನಿಗೆ ಸ್ನಾನಾದಿಗಳನ್ನು ಮಾಡಿಸಿ, ಮೈವರೆಸಿ, ತಿಲಕಾದಿಗಳನ್ನಿಟ್ಟು, ಅಲಂಕಾರಮಾಡಿ, ಅವನನ್ನು ಬಿಗಿದಪ್ಪಿ ಮುಖವನ್ನು ಚುಂಬಿಸಿ, ಶ್ರೀಕೃಷ್ಣನ ಅಧರಾಮೃತಪಾನಮಾಡುವ ಆ ಕೃಷ್ಣಪತ್ನಿಯರು ಎಷ್ಟು ಸುಖಿಗಳು! ಎಷ್ಟು ಧನ್ಯರೇ! ಆ ದ್ವಾರಕಾಪಟ್ಟಣದ ಪುರಜನರು, ನಿತ್ಯವೂ ಈ ಶ್ರೀಕೃಷ್ಣನ ಪರಮಮಂಗಳ ವಿಗ್ರಹವನ್ನು ಧ್ಯಾನಮಾಡಿ, ಆನಂದದಲ್ಲಿ ಮುಳುಗಿ ಮುಳುಗಿ, ಆ ಶ್ರೀಕೃಷ್ಣನ ಪ್ರಜಾನುರಾಗಪೂರ್ವಕ ಕಟಾಕ್ಷವೀಕ್ಷಣದಿಂದ ನೋಡಲ್ಪಟ್ಟ ಆ ದ್ವಾರಕಾಪುರ ನಿವಾಸಿಗಳ ಐಶ್ವರ್ಯವೂ, ಸುಖವೂ, ದೇವತೆಗಳಿಗೂ ಇಲ್ಲ! ಅಲ್ಲವೇನೇ! ಎಂದಳು.

ಮತ್ತೊಬ್ಬಳು, ಎಲೈ!ಸಖಿಯರೇ! ಈ ಶ್ರೀಕೃಷ್ಣನು, ಜರಾಸಂಧ, ಶಿಶುಪಾಲಾದಿಗಳನ್ನು, ಸ್ವಯಂವರ ಕಾಲಗಳಲ್ಲಿ ಜಯಿಸಿ, ತನ್ನ ಅಪ್ರತಿಮ ವೀರ್ಯದಿಂದ ಅಪಹರಿಸಿ ತಂದ ಆ ರುಕ್ಮಿಣೀದೇವಿಯೂ, ಸತ್ಯಭಾಮೆ, ಷಣ್ಮಹಿಷಿಯರು, ಪ್ರಧಾನರಾದ ಕಶೇರು ಮುಂತಾದ ನೂರು ಜನ ಪತ್ನಿಯರೂ ಸಹ ಬಹು ತಪಸ್ಸು ಮಾಡಿ ಶ್ರೀಕೃಷ್ಣನನ್ನು ಪತಿಯಾಗಿ ಪಡೆದರಂತೆ! ಉಳಿದ ಹದಿನಾರು ಸಹಸ್ರ ಗೋಪಿಕಾಸ್ತ್ರೀಯರೆಂಬ ಹೆಂಡತಿಯರು, ಹಿಂದೆ ಅಗ್ನಿಪುತ್ರರಾದ ಮಹಾತಪಸ್ವಿಗಳಾದ ಋಷಿಗಳಂತೆ, ಅವರು ದೇವರ ಅಂಗಸಂಗವನ್ನು ಬಯಸಿ, ಬಹುತಪಸ್ಸು ಮಾಡಿ, ಸ್ತ್ರೀಯರಾಗಿ ಹುಟ್ಟಿ ಈ ಶ್ರೀಕೃಷ್ಣನ ಪತ್ನಿಯರಾದರಂತೆ! ಪತಿರೂಪನಾದ ಶ್ರೀಕೃಷ್ಣನು ತನ್ನ ಕೋಮಲವಾದ ಕರಗಳಿಂದ, ಪತಿಚೇಷ್ಟೆಗಳನ್ನು ಮಾಡುತ್ತಾ, ಇವರ ಅಂಗಾಂಗಗಳನ್ನು

ಮುಟ್ಟಿದಾಗ ಇವರ ಸುಖವೆಂತಹುದೇ? ಎಂದಳು.

ಈ ರೀತಿಯಾಗಿ ಮುದ್ದುಮುದ್ದಾಗಿ ತಮ್ಮತಮ್ಮಲ್ಲಿ ಗಟ್ಟಿಯಾಗಿ ಮಾತನಾಡಿಕೊಳ್ಳುತ್ತಿದ್ದ ಈ ಪುಣ್ಯಸ್ತ್ರೀಯರ ಮಾತುಗಳನ್ನು ಕೇಳಿ ಶ್ರೀಕೃಷ್ಣನು ಮುಗುಳುನಗೆಯಿಂದ ನಗುತ್ತಾ ಇವರನ್ನೆಲ್ಲಾ ನೋಡಿ, ತನ್ನ ದೃಷ್ಟಿಯಿಂದ ಇವರ ಸ್ತೋತ್ರರೂಪಗಳಾದ ಮಾತುಗಳನ್ನು ಅನುಮೋದಿಸಿ ಅವರನ್ನು ಸಂತೋಷಪಡಿಸಿದನು. ನಂತರ ಊರನ್ನು ದಾಟಿ ಸಾಯಂಕಾಲದ ಸಮೀಪದಲ್ಲಿ ಗಂಗಾತೀರವನ್ನು ಸೇರಿದನು. ಅಲ್ಲಿಯವರೆಗೂ ಹಿಂಬಾಲಿಸಿ ಬರುತ್ತಿದ್ದ ಕೌರವಪಾಂಡವರನ್ನೂ, ಚತುರಂಗ ಬಲಗಳನ್ನೂ ಬಹಳ ದೂರ ಬಂದಿರಿ, ಇನ್ನು ನೀವು ಇಲ್ಲೇ ನಿಲ್ಲಿ! ಪಟ್ಟಣಕ್ಕೆ ಹಿಂತಿರುಗಿಸಿ, ನಾನು ಸಂಧ್ಯಾಕಾಲವಾಗುತ್ತಿದೆಯಾಗಿ ಮುಂದಕ್ಕೆ ಜಾಗ್ರತೆಯಾಗಿ ಪ್ರಯಾಣ ಮಾಡುತ್ತೇನೆ ಎಂದು ಹೇಳಿ, ಅವರನ್ನೆಲ್ಲಾ ಪಟ್ಟಣಕ್ಕೆ ಕಳುಹಿಸಿ, ನಂತರ, ವೇಗವಾಗಿ, ಕುರುಗಳ, ಪಾಂಚಾಲರ, ಶೂರಸೇನ, ಯಾಮುನರ, ಬ್ರಹ್ಮವರ್ತ, ಕುರುಕ್ಷೇತ್ರ, ಮತ್ಸ್ಯರ, ಸಾರಸ್ವತರ, ಮರುಧನ್ವ, ಸೌವೀರ, ಭೀರ, ಸೈಂಧವ, ಆನರ್ತರ ರಾಜ್ಯಗಳನ್ನೂ ದಾಟಿಸಿದನು. ಆವಾಗ ಸಾಯಂಕಾಲವಾಯಿತು.

ರಥಾಶ್ವಗಳು ಬಳಲಿದವೆಂದು ರಥವನ್ನು ನದೀತೀರದಲ್ಲಿ ನಿಲ್ಲಿಸಿ, ಸಂಧ್ಯಾದಿ ಕರ್ಮಗಳನ್ನಾಚರಿಸಿ, ದಾರಿಯುದ್ದಕ್ಕೂ ಆದರಿಸುತ್ತಾ, ಪೂಜಿಸುತ್ತಾ, ಬರುತ್ತಿದ್ದವರ ಸೇವೆಗಳನ್ನು ಸ್ವೀಕಾರಮಾಡಿ, ಶ್ರೀಕೃಷ್ಣನು ತನ್ನ ಪಟ್ಟಣದ ಸಮೀಪದಲ್ಲಿರುವ ಉದ್ಯಾನವನದ ಸಮೀಪದಲ್ಲಿ ಶಂಖಧ್ವನಿಯನ್ನು ಮಾಡಿದನು.ಆ ಶಂಖಧ್ವನಿಯು ತರಂಗತರಂಗವಾಗಿ ಆಕಾಶವನ್ನೆಲ್ಲಾ ವ್ಯಾಪಿಸಿತು. ಶ್ರೀಕೃಷ್ಣನ ಕರಸಂಪುಟದಲ್ಲಿ ಹಿಡಿಯಲ್ಪಟ್ಟ ಸ್ವಚ್ಛ ಶ್ವೇತವರ್ಣವುಳ್ಳ ಶಂಖದಲ್ಲಿ, ತಳಭಾಗದಲ್ಲಿ ಕರಕಮಲಗಳ ಕೆಂಪುವರ್ಣವು ಪ್ರತಿಬಿಂಬಿಸಿಯೂ, ಮೇಲ್ಭಾಗದಲ್ಲಿ ಪದ್ಮರಾಗದಂತೆ ಶೋಭಿಸುತ್ತಿದ್ದ ಪರಮಾತ್ಮನ ತುಟಿಗಳಿಂದ ಕೆಂಪುವರ್ಣಗಳು ಪ್ರತಿಬಿಂಬಿಸಿ ಆ ಶಂಖವು ಮೂರ್ತಿಮತ್ತಾದ ಪದ್ಮಸರೋವರವೋ ಎಂಬಂತೆ ಪ್ರಕಾಶಿಸುತ್ತಾ, ಆ ಪ್ರತಿಬಿಂಬಿಸಿದ ಆ ಪದ್ಮದ್ವಯವರ್ಣಗಳು ಶಂಖದಲ್ಲಿ ನಾನು ಹೆಚ್ಚು ಸುಂದರ, ನಾನು ಹೆಚ್ಚು ಸುಂದರವಾಗಿದ್ದೇನೆಂದು ಪರಸ್ಪರ ಸ್ಪರ್ಧಿಸಿ ಕಲಹ ಮಾಡುತ್ತಿವೆಯೋ ಎಂಬಂತೆ ಊದುತ್ತಿದ್ದಾಗ ಉಂಟಾದ ಕರ, ತುಟಿಗಳ ಚಲನೆಯಿಂದ, ಪ್ರತಿಬಿಂಬದ ಕಮಲವರ್ಣಗಳು ಚಲಿಸಿ ಹೋರಾಡುತ್ತಿದ್ದವು. ಪರಮಾತ್ಮನ ಅಧರಾಮೃತವನ್ನು ಈ ರೀತಿ ಆ ಶಂಖವು ಆತನ ತುಟಿಗಳನ್ನು ಕಚ್ಚಿ ಪಾನಮಾಡುತ್ತಿರಲಾಗಿ, ಲಕ್ಷ್ಮೀದೇವಿಯೇ, ಪ್ರತಿಬಿಂಬಿಸಿ ಕಮಲವರ್ಣಗಳಲ್ಲೇ ಇದ್ದು, ಶಂಖಕ್ಕೆ ಆವರಕಳಾಗಿ, ಶಂಖವನ್ನು

## ಅಥ ದಶಮೋऽಧ್ಯಾಯಃ

ದೇವರ ತುಟಿಗೆ ತಗುಲಿಸದೇ ತಾನೇ ಸ್ಪರ್ಶಮಾಡಿ ಪಾನಮಾಡಿದಳೋ ಏನೋ!

ಅದಕ್ಕೇ ಅವಳಿಗೆ ಶಂಖದಲ್ಲಿ ಮತ್ಸರವಿರಲಿಲ್ಲವೆಂದು ತೋರುತ್ತೆ. ಭಕ್ತಜನರಿಗೆ ಸರ್ವಭಯಾಪಹಾರಕವೂ, ಶತೃಗಳಿಗೆ ಮಹದ್ಭಯೋತ್ಪಾದಕವೂ, ಆದ ಆ ಶಂಖಧ್ವನಿಯನ್ನು ಪುರಜನರು ಕೇಳಿ, ಶ್ರೀಕೃಷ್ಣನ ಆಗಮನವನ್ನು ತಿಳಿದು, ಥಟ್ಟನೆ ಎದ್ದು, ಮನೆಮನೆಗಳನ್ನೂ ಬೀದಿಗಳನ್ನೂ, ಪುರವನ್ನೂ ಶೃಂಗಾರಮಾಡಲು ಏರ್ಪಡಿಸಿ, ಚತುರಂಗದಳ ಸಮೇತರಾಗಿ ಶ್ರೀಕೃಷ್ಣನನ್ನು ಎದುರುಗೊಳ್ಳಲು ಹೊರಟರು. ಶ್ರೀಕೃಷ್ಣನನ್ನು ಸಮೀಪಿಸಿ ನಿಂತಾಗ, ಶ್ರೀಕೃಷ್ಣನು ಸೂರ್ಯನಂತೆಯೂ, ಚತುರಂಗಬಲ ಸಮೇತರಾದ ಪುರಜನಜರು ದೀಪಗಳಂತೆಯೂ ಕಾಣುತ್ತಿದ್ದರು. ಕೃಷ್ಣನ ಕೃಪೆಗೆ ಪಾತ್ರರಾಗಿ ನಿರಂತರ ಸರ್ವೇಷ್ಟಗಳನ್ನೂ ಪಡೆದು, ಕೃಷ್ಣನೇ ತಮಗೆ ಸರ್ವಲಾಭಪ್ರದನೆಂದು ತಿಳಿದಿದ್ದ ಇವರು ಪ್ರೇಮ, ಉತ್ಸಾಹ, ಗೌರವ, ವಿನಯಗಳಿಂದ ಕೂಡಿದವರಾಗಿ, ಆತ್ಮಾರಾಮನೂ, ಪೂರ್ಣಕಾಮನೂ, ಆದ ಶ್ರೀಕೃಷ್ಣನನ್ನು ಕುರಿತು, ಪ್ರೀತಿವಿಶೇಷದಿಂದ ಗದ್ಗದಸ್ವರವುಳ್ಳವರಾಗಿ ಈ ರೀತಿ ಹೇಳಿದರು.

### ದ್ವಾರಕಾಪುರ ಜನರಿಂದ ಶ್ರೀಕೃಷ್ಣನಿಗೆ ಸ್ವಾಗತ

ಸ್ವಾಮಿ! ಹೇ ನಾಥ! ಯಾವ ನಿನ್ನ ಚರಣಕಮಲಗಳು, ರಮಾಬ್ರಹ್ಮರುದ್ರಾದಿಗಳಿಂದ ನಮಸ್ಕರಿಸಲ್ಪಡುತ್ತವೆಯೋ, ಆ ನಿನ್ನ ಶ್ರೀಚರಣಕಮಲಗಳಿಗೆ ನಾವು ಯಾವಾಗಲೂ ನಮಸ್ಕರಿಸುತ್ತಿರುವಂತೆಯೇ ಈಗಲೂ ನಮಸ್ಕರಿಸುತ್ತೇವೆ ಸ್ವಾಮಿ! ಮೋಕ್ಷವನ್ನು ಅಪೇಕ್ಷಿಸುವ ಅಸ್ಮದಾದಿ ಸರ್ವರಿಗೂ ನಿನ್ನ ಪಾದಕಮಲಗಳೇ ಆಶ್ರಯಗಳಾಗಿರುತ್ತವೆ. ಯಾವ ಜರಮರಣಾದಿಗಳನ್ನು ಸಾಮಾನ್ಯರಿಗೆ ಉಂಟುಮಾಡಲು ಸಮರ್ಥನಾದ ಯಮದೇವರು, ನಿನ್ನ ಭಕ್ತಜನರಿಗೆ ಜರಾಮರಣಗಳನ್ನು ಕೊಡಲು ಶಕ್ತನಲ್ಲವೋ, ಅಂತಹ ಮಹದ್ಭಯ ಪರಿಹಾರಕವಾದ ನಿನ್ನ ಪಾದಕಮಲಗಳಿಗೆ ನಮಸ್ಕಾರಗಳು. ಎಲೈ ಸರ್ವಜಗತ್ತಿಗೆ ಸತ್ತಾಪ್ರದಾಯಕನೇ, ನೀನು ನಮಗೆ ಜ್ಞಾನಭಕ್ತ್ಯಾದಿ ಸದ್ಗುಣೈಶ್ವರ್ಯಗಳನ್ನು ಕರುಣಿಸು. ನಿನ್ನ ಪಾದಾರವಿಂದಗಳ ಸೇವೆಯಿಂದ, ನಾವು ದುಷ್ಕೃತ್ಯಗಳನ್ನು ಮಾಡಿದಾಗ್ಯೂ ಸುಕೃತರೇ ಆಗುತ್ತೇವೆ

ಸ್ವಾಮಿನ್. ನೀನೇ ನಮಗೆ ಇಷ್ಟದೇವನೂ, ಸುಜ್ಞಾನಪ್ರದನಾದ ಸರ್ವಶ್ರೇಷ್ಠ ಗುರುವೂ, ತಾಯಿಯೂ, ತಂದೆಯೂ, ಆತ್ಮಸ್ವರೂಪದಿಂದ ನಿಯಾಮಕನಾದ ಸ್ವಾಮಿಯೂ, ಸ್ನೇಹಿತನೂ, ಪಾಲಕನೂ, ಪೋಷಕನೂ ಆಗಿರುತ್ತೀಯೆ. ನಿನ್ನ ಸೇವಕನಾಗಿ ನಿನ್ನನ್ನು ಅನುಸರಿಸಿ ನಾವು ಸಮಸ್ತ

ವಿಪತ್ತುಗಳಿಂದ ಪಾರಾಗುತ್ತೇವೆ. ನಿನ್ನ ಆಶ್ರಯದಿಂದ ನಾವು ಹೇಗೆ ಸನಾಥರಾಗಿರುತ್ತೇವೋ ಹಾಗೆ ದೇವತೆಗಳೂ ದೇವೇಂದ್ರನಿಂದ ಆಗಲು ಶಕ್ಯವಲ್ಲ. ನಿನ್ನ ಪ್ರೇಮಪೂರಿತ, ಗಂಭೀರದೃಷ್ಟಿಯುಳ್ಳ, ನಗುಮುಖವನ್ನು ನಾವು ಯಾವಾಗಲೂ ನೋಡಿ ಹೇಗೆ ಆನುಸರಿಸುವೆವೋ ಅಂತಹ ಆನಂದವು ದೇವತೆಗಳಿಗೂ ಪ್ರಾಪ್ಯವಾದದ್ದು. ನಿನ್ನ ದರ್ಶನವು ನಮಗೆ ಸಕಲ ಸೌಭಾಗ್ಯವು. ಮೋಕ್ಷಸಮಾನವಾದ ಸುಖವನ್ನು ನೀನು ನಿನ್ನ ಸಹವಾಸದಿಂದ ನಮಗೆ ಕೊಡುತ್ತಿದ್ದೀಯೆ ಸ್ವಾಮಿ. ಮೋಕ್ಷದಲ್ಲೂ ಕೂಡ ನಾವು ಇಲ್ಲಿ ನಿನ್ನಲ್ಲಿ ಹೇಗೆ ವರ್ತಿಸಿ ಸುಖಿಸುತ್ತಿರುವೆವೋ ಅದರಂತೆ ವರ್ತಿಸಲು ಶಕ್ಯವಲ್ಲವಾದ್ದರಿಂದ, ನಿನ್ನ ಪುರವಾಸಿಗಳಾಗುವ ಈ ನಮ್ಮ ಭಾಗ್ಯವು ಮೋಕ್ಷಕ್ಕೂ ಅತಿಶಯವೆನ್ನಿಸುತ್ತದೆ ಸ್ವಾಮಿ!

ಸ್ವಾಮಿ! ನೀನು ನಮ್ಮನ್ನು ಬಿಟ್ಟು ಬಹುಕಾಲ, ಕೌರವಪಾಂಡವರ ಪಟ್ಟಣಕ್ಕೆ ಪ್ರಯಾಣ ಮಾಡಿದ್ದರಿಂದ, ನಮಗೆ ಸೂರ್ಯೋದಯವಿಲ್ಲದಿದ್ದರೆ, ದಿನಗಳು ಹೇಗೋ ಹಾಗೆಯೇ ಪ್ರತಿದಿನವೂ ಆಗಿ, ನಾವು ಎಲ್ಲರೂ ಉತ್ಸಾಹರಹಿತರಾಗಿದ್ದೇವೆ ಸ್ವಾಮಿ! ನಮಗೆ ಇದುವರೆವಿಗೂ ಪ್ರತಿನಿಮಿಷವೂ, ನಿನ್ನ ಅಗಲಿಕೆಯಿಂದ ಕೋಟಿಕೋಟಿ ವರ್ಷಗಳಂತೆ ಕಾಲ ಕಾಳೆಯಲು ಅಸಾಧ್ಯವಾಗಿತ್ತು. ನಿನ್ನ ಪ್ರಸನ್ನ ಸನ್ನಿಧಾನದಲ್ಲಿ ಕೋಟಿ ವರುಷಗಳು ನಮಗೆ ಇರಲು ಸಾಧ್ಯವಾದರೆ ಅದು ನಮಗೆ ಒಂದು ನಿಮಿಷದಂತೆ ಕಾಣುತ್ತೆ ಸ್ವಾಮಿ! ನಮಗೆ ಹೋಗಿದ್ದ ಎರಡು ಕಣ್ಣುಗಳೂ ಈಗ ನಿನ್ನ ಸಂದರ್ಶನದಿಂದ ಪ್ರಾಪ್ತವಾದವು ಎಂದು ನಾನಾವಿಧವಾಗಿ ಪುರಜನರು ಹೇಳುತ್ತಿದ್ದದ್ದನ್ನು ಶ್ರೀಕೃಷ್ಣನು ಕೇಳಿ, ಎಲ್ಲರನ್ನೂ ಕೃಪಾದೃಷ್ಟಿಯಿಂದ ಮನ್ನಿಸಿ ಪಟ್ಟಣವನ್ನು ಪ್ರವೇಶಿಸಿದನು. ಉತ್ಕೃಷ್ಟವಾದ ಸಮಾನಬಲವುಳ್ಳ ಪರ್ವತೋಪಮ ಆನೆಗಳಿಂದ ಹೇಗೆ ಭೋಗವತೀ ಪಟ್ಟಣವು ರಕ್ಷಿಸಲ್ಪಟ್ಟಿದೆಯೋ, ಅದರಂತೆ ಸಮಾನಬಲರಾದ, ಮಧು, ಭೋಜ, ದಶಾರ್ಹ, ಅರ್ಹ, ಕುಕುರ, ಅಂಧಕ, ವೃಷ್ಣಿಗಳೆಂಬ ಯಾದವರಿಂದ ಆ ದ್ವಾರಕಾ ಪಟ್ಟಣವು ರಕ್ಷಿತವಾಗಿತ್ತು.

## ದ್ವಾರಕಾ ಪಟ್ಟಣದ ವರ್ಣನೆ

ದ್ವಾರಕಾ ಪಟ್ಟಣದಲ್ಲಿ ಎಲ್ಲಾ ಋತುಗಳ ಲಕ್ಷಣವೂ ಸದಾಕಾಲಗಳಲ್ಲಿ ಏಕಪ್ರಕಾರವಾಗಿ, ಸಮಸ್ತವೈಭವಗಳಿಂದಲೂ, ಪುಣ್ಯವನ್ನು ನೋಡುವವರಿಗೆ ಉಂಟುಮಾಡುವಂತೆ ಇದ್ದ ತರು, ವೃಕ್ಷ, ಲತಾದಿಗಳು, ಫಲಪುಷ್ಪ ಗಳಿಂದ ರಂಜಿತವಾಗಿ ಶೋಭಿಸುತ್ತಿದ್ದವು. ಅನೇಕ ಸರೋವರಗಳೂ,

## अथ दशमोऽध्यायः

ಜಲಾಶಯಗಳೂ, ಕೈತೋಟಗಳೂ, ರಮ್ಯವಾದ ಉದ್ಯಾನವನಗಳೂ ನೋಡುವವರಿಗೆ ಎರಡು ಕೈಗಳಲ್ಲೂ ಪದ್ಮಪುಷ್ಪ ಗಳನ್ನು ಧರಿಸಿ ಕುಳಿತಿರುವ ಲಕ್ಷ್ಮೀದೇವಿಯರನ್ನು ನೋಡಿದರೆ ಹೇಗೆ ಸಂತೋಷ ಉಂಟಾಗುತ್ತದೋ, ಅದರಂತೆ ಆಹ್ಲಾದದಾಯಕವಾಗಿತ್ತು. ಗೋಪುರಗಳ ಮೇಲೂ, ಪ್ರತಿಬಾಗಿಲುಗಳಲ್ಲೂ, ದಾರಿಯುದ್ದಕ್ಕೂ ವಿಚಿತ್ರವಿಚಿತ್ರಗಳಾದ ತೋರಣ, ಧ್ವಜಸ್ತಂಭ, ಬಾವುಟಗಳಿಂದ ಅಲಂಕೃತವಾಗಿತ್ತು. ಪ್ರವೇಶಮಾಡಿದವರಿಗೆ ಶರೀರದೊಳಗಿನ ಸಕಲ ತಾಪಗಳನ್ನೂ ಅಡಗಿಸಿ ಸಂತೋಷವನ್ನು ಕೊಡುವಂತಿತ್ತು.

ಬೀದಿಬೀದಿಗಳು ಚೆನ್ನಾಗಿ ಗುಡಿಸಲ್ಪಟ್ಟು, ಸುಗಂಧಪರಿಮಳ ನೀರಿನಿಂದ ಸಾರಿಸಲ್ಪಟ್ಟು, ರಂಗವಲ್ಲಿಗಳಿಂದಲೂ, ಫಲ, ಪುಷ್ಪ, ಅಕ್ಷತೆಗಳಿಂದ ಅಲಂಕರಿಸಲ್ಪಟ್ಟಿದ್ದವು. ಪ್ರತಿ ಮನೆಯ ಬಾಗಿಲೂ, ಫಲ, ಪುಷ್ಪ ತೋರಣಗಳಿಂದಲೂ, ಪೂರ್ಣಕುಂಭ, ಕಬ್ಬಿನಜಲ್ಲೆಗಳಿಂದಲೂ ಅಲಂಕರಿಸಲ್ಪಟ್ಟು ದಿವ್ಯ ಪರಿಮಳಗಳನ್ನು ಬೀರುತ್ತಿದ್ದವು.

ಕೃಷ್ಣನ ಆಗಮನವನ್ನು ಕೇಳಿ, ವಸುದೇವ, ಉಗ್ರಸೇನ, ಅಕ್ರೂರ, ಬಲರಾಮ, ಪ್ರದ್ಯುಮ್ನ, ಚಾರುದೇಷ್ಣ, ಸಾಂಬ ಮುಂತಾದವರು, ಬೇಗ ತಮ್ಮ ತಮ್ಮ ಆಸನಗಳಿಂದೆದ್ದು, ಕಲಶ, ಕನ್ನಡಿ, ಸುವಾಸಿನಿಯರು, ಬ್ರಾಹ್ಮಣರಿಂದೊಡಗೂಡಿ, ರಥಾಶ್ವಗಳನ್ನೇರಿ, ಕೃಷ್ಣನನ್ನೆದುರುಗೊಳ್ಳಲು ಬಂದರು. ಶಂಖ, ತೂರ್ಯ, ಬ್ರಹ್ಮಘೋಷಾದಿಗಳು ಮೊಳಗುತ್ತಿದ್ದವು. ಚಲಿಸುವ ಕುಂಡಲಗಳ ಕಾಂತಿಯಿಂದ ಶೋಭಿತಗಳಾದ ಕಪೋಲಗಳೆಂಬ ಸಂಪತ್ತುಳ್ಳ ನಟ, ನರ್ತನ ಮಾಡುವ ನರ್ತಕಿಯರೂ, ಗಂಧರ್ವರೂ, ಗಾಯಕರೂ, ಹೊಗಳುಭಟ್ಟರೂ, ಗಾನ, ನರ್ತನಾದಿಗಳನ್ನು ಮಾಡುತ್ತಾ ಬಂದರು.

ಬಂದ ಬಂಧು ಜನರನ್ನೂ, ಇತರರನ್ನೂ ಶ್ರೀಕೃಷ್ಣನು ಯಥಾಯೋಗ್ಯವಾಗಿ ಆದರಿಸಿ, ಅವರಿಂದ ತಾನು ಸತ್ಕೃತನಾಗಿ, ಬಂದಂತಹ ಬಂಧುಮಿತ್ರಪರಿವಾರ ಸಮೇತ, ಪಟ್ಟಣದ ರಾಜಮಾರ್ಗವನ್ನು ಪ್ರವೇಶಿಸಿದನು. ಹೀಗೆ ಬರುತ್ತಿರುವ ಶ್ರೀಕೃಷ್ಣನ ಸಂದರ್ಶನಾಪೇಕ್ಷಿಗಳಾಗಿ, ದ್ವಾರಕಾ ಪಟ್ಟಣದ ಸುಮಂಗಲಿಯರು ತಮ್ಮ ತಮ್ಮ ಮನೆಯ ಉಪ್ಪರಿಗೆಗಳನ್ನೇರಿ, ಪರಮೋತ್ಸಾಹದಿಂದ ಶ್ರೀಕೃಷ್ಣನ ಆಗಮನವನ್ನೂ ನಿರೀಕ್ಷಿಸುತ್ತಿದ್ದರು. ಅವರು ನಿತ್ಯವೂ ಶ್ರೀಕೃಷ್ಣನನ್ನು ನೋಡುತ್ತಿದ್ದರೂ, ಯಾವ ಲಕ್ಷ್ಮೀದೇವಿಯರು ವಿರಹವನ್ನು ಸಹಿಸದೆ ಅವನ ವಕ್ಷಸ್ಥಳದಲ್ಲಿ ಸದಾ ವಾಸಮಾಡುತ್ತಿರುವರೋ, ಅಂತಹ ಅಸದೃಶಗಳಾದ ಸೌಂದರ್ಯರೂಪನಾದ ಶ್ರೀಕೃಷ್ಣ ಸಂದರ್ಶನ ವಿಷಯದಲ್ಲಿ ತೃಪ್ತರಾಗಿರಲಿಲ್ಲ.

## अथ दशमोऽध्यायः

ಇದೇನೂ ಆಶ್ಚರ್ಯವಲ್ಲ. ಏಕೆಂದರೆ, ಶ್ರೀಕೃಷ್ಣನ ವಕ್ಷಸ್ಥಳವು ಲಕ್ಷ್ಮೀವಾಸಸ್ಥಾನವಾಗಿ ಶೋಭಿಸುತ್ತಿತ್ತು. ಆ ಕೃಷ್ಣನ ಮುಖವು ನೋಡತಕ್ಕವರ ದೃಷ್ಟಿಗೆ ಲಾವಣ್ಯವೆಂಬ ಅಮೃತದಿಂದ ತುಂಬಿದಪಾನಪಾತ್ರೆಯಂತಿತ್ತು. ಆತನಭುಜಗಳೂ,ಕೈಗಳೂಲೋಕಪಾಲಕರಾದದಿಗ್ದೇವತೆಗಳಿಗೂ ಬಲಪ್ರದವಾಗಿತ್ತು. ಪಾದಗಳು ಸಾರಗ್ರಾಹಿಗಳಾದ ಬ್ರಹ್ಮಾದಿಗಳಿಗೂ ಆಶ್ರಯವಾಗಿತ್ತು. ನೀಲಮೇಘಶ್ಯಾಮನಾದ ಶ್ರೀಕೃಷ್ಣನು, ಸೂರ್ಯನಂತೆ ಇರುವ ಶ್ವೇತಚ್ಛತ್ರಿಯಿಂದಲೂ, ಚಂದ್ರನಂತಿರುವ ಬೀಸಣಿಗೆಯಿಂದಲೂ, ಇಂದ್ರಚಾಪವೆನಿಸುವ ಕಾಮನಬಿಲ್ಲಿನಂತೆ ಇರುವ ನಾನಾ ವರ್ಣರಂಜಿತಗಳಾದ, ತುಳಸಿಮಾಲಾ, ವನಮಾಲಾದಿಗಳಿಂದಲೂ, ಮಿಂಚಿನಂತಿರುವ ಪೀತಾಂಬರಗಳಿಂದಲೂ, ಮಧ್ಯಾನ್ಹಸೂರ್ಯನಂತಿರುವ ಕಿರೀಟದಿಂದಲೂ ಆವೃತನಾಗಿ, ಸೂರ್ಯ, ಚಂದ್ರ, ಮಿಂಚು, ಇಂದ್ರಚಾಪಗಳಿಂದ ಕೂಡಿದ ನೀಲಾಕಾಶದಂತೆ ಪ್ರಕಾಶಿಸುತ್ತಿದ್ದನು.

ತನ್ನ ತಂದೆಯ ಅರಮನೆಯು ಪ್ರಾಪ್ತವಾಗಲು ರಥದಿಂದಿಳಿದು, ಅರಮನೆಯೊಳಗೆ ಹೋಗಿ ತಾಯಿತಂದೆಗಳಿಗೂ, ಹಿರಿಯರಿಗೂ ನಮಸ್ಕಾರಮಾಡಿ, ಅವರಿಂದ ಆಲಿಂಗಿಸಲ್ಪಟ್ಟು, ಆಶೀರ್ವಚನಗಳನ್ನು ಸ್ವೀಕರಿಸಿದನು. ನಂತರ ತನ್ನ ಪತ್ನಿಯರ ಗೃಹಗಳಿಗೆ ಬೇರೆ ಬೇರೆ ಒಂದೊಂದು ಮನೆಗೆ ಒಂದೊಂದು ರೂಪದಿಂದ, ಸಮಸ್ತ ಸುಖಸಾಧನಗಳಿಂದ ತುಂಬಿದ ವಿಶಾಲವಾದ ೧೬೧೦೮ ಅರಮನೆಗಳನ್ನು ಪ್ರವೇಶಿಸಿದನು.

ಶ್ರೀಕೃಷ್ಣಪತ್ನಿಯರು ತಮ್ಮ ಪತಿಯು ಮನೆಗೆ ಬಂದದ್ದನ್ನು ನೋಡಿ ಪರಮೋತ್ಸ್ಸಾಹದಿಂದ ತಮ್ಮ ಆಸನಗಳಿಂದೆದ್ದು, ಶ್ರೀಕೃಷ್ಣನನ್ನು ಎದುರುಗೊಂಡು, ಹರ್ಷ, ಲಜ್ಜೆ, ಮೋಹಗಳಿಂದ ಕೂಡಿದ ದೃಷ್ಟಿಗಳಿಂದ ತಮ್ಮ ಪತಿಗೆ ನೀರಾಜನವನ್ನು ಬೆಳಗುವರೋ ಎಂಬಂತೆ ಅವನ ಸರ್ವಾಯವಗಳನ್ನು ನೋಡುತ್ತಾ, ಬಗ್ಗಿದ ಶಿರಸ್ಸುಳ್ಳವರಾಗಿ, ಶ್ರೀಕೃಷ್ಣನನ್ನು ಸುಖಾಸನಗಳಿಗೆ ಕರೆದೊಯ್ದರು. ಈ ರೀತಿ ಶ್ರೀಕೃಷ್ಣನು ತಮ್ಮ ಪಾರ್ಶ್ವಗತನಾಗಿದ್ದರೂ, ಆ ಕೃಷ್ಣಪತ್ನಿಯರು ಪದೇಪದೇ ಶ್ರೀಪರಮಾತ್ಮನ ಪಾದಮೂಲದಲ್ಲೇ ಕುಳಿತು, ಪಾದಸೌಂದರ್ಯವನ್ನು ನೋಡುತ್ತಾ ಸೇವಿಸಲಪೇಕ್ಷಿಸುತ್ತಿದ್ದರು. ಶ್ರೀದೇವಿಯರೇ ಶ್ರೀಕೃಷ್ಣನ ಪಾದಮೂಲವನ್ನು ಬಿಟ್ಟಗಲಲು ಅಪೇಕ್ಷಿಸದಿರುವಾಗ ಬಾಕಿಯವರು ಪಾದಾಶ್ರಯವನ್ನಪೇಕ್ಷಿಸುವುದು ಏನು ತಾನೇ ಆಶ್ಚರ್ಯ?

ಈ ರೀತಿಯಾಗಿ ಭೂಭಾರಕರಾದ ರಾಜರೂಪ ದೈತ್ಯಸಮೂಹವನ್ನೂ, ಅವರ ಪರಿವಾರ ಸೈನ್ಯಗಳನ್ನೂ, ಯುದ್ಧವೆಂಬ ಅಗ್ನಿಯಲ್ಲಿ ಭಸ್ಮ ಮಾಡಿ, ಭೂಭಾರವನ್ನಿಳುಹಿ, ಧರ್ಮಸಂಸ್ಥಾಪನೆಯನ್ನು ಮಾಡಿದ ಅಲೌಕಿಕನಾದ ಈ ಶ್ರೀಕೃಷ್ಣನೆಂಬ ಗೃಹಸ್ಥನು, ತನ್ನ

ಪತ್ನಿಯರೆಂಬ ಅನೇಕ ಸಹಸ್ರ ಸ್ತ್ರೀಯರ ಜೊತೆಯಲ್ಲಿ ಕ್ರೀಡೆ ಮಾಡಿದನು. ಲೌಕಿಕ ಗೃಹಸ್ಥರಂತೆಯೇ ಅವರೊಡನೆ ಸಂಸಾರಗಳನ್ನು ಮಾಡಿದನು. ಆದರೆ ಲೋಕಸುಂದರಿಯರಾದ ಈ ಸ್ತ್ರೀಯರ, ಅಸಮವಾದ ವೈಯ್ಯಾರ, ಬೆಡಗು, ಮೋಹಯುಕ್ತ ನೋಟ, ಪ್ರಿಯಕರ ಮುದ್ದು ಮಾತು, ಮಂದಹಾಸ, ದರ್ಪ, ಶೃಂಗಾರ ಚೇಷ್ಟೆ ಮುಂತಾದ ಅನೇಕ ಮೋಹಜನಕ ತಂತ್ರಗಳೂ ಶ್ರೀಕೃಷ್ಣನನ್ನು ಮೋಹಿಸುವುದಕ್ಕಾಗಲೀ, ಅವನ ಇಂದ್ರಿಯಗಳ ಸ್ಥಿರತೆಯನ್ನು ಅಲುಗಿಸಲಿಕ್ಕಾಗಲೀ ಸಮರ್ಥಗಳಾಗಲಿಲ್ಲ.

ಯಾವ ಎಲ್ಲಾ ಈ ಶೃಂಗಾರಚೇಷ್ಟೆಗಳಿಗೂ ಸ್ವಾಮಿಯಾದ ಮನ್ಮಥನು, ಈ ಶ್ರೀಕೃಷ್ಣನ ಮಗನೋ, ಅಂತಹ ಶ್ರೀಕೃಷ್ಣನಿಗೆ ಮನ್ಮಥನೂ, ಅವನ ಪರಿಚರರೂ ಅಧೀನರಾಗಿ, ವಿಧೇಯರಾಗಿರುವುದೇನು ಹೆಚ್ಚು? ಹಾಗಾದರೂ ಸ್ತ್ರೀಕಾಮುಕರಾದ ಮಂದಜನರು ಶ್ರೀಕೃಷ್ಣನ ಮಹಾಮಹಾತ್ಮೆಗಳನ್ನರಿಯದೆ, ತಮ್ಮಂತೆಯೇ ಶ್ರೀಕೃಷ್ಣನು ಸ್ತ್ರೀವ್ಯಾಮೋಹದಿಂದ ಅಷ್ಟುಜನ ಸ್ತ್ರೀಯರನ್ನು ಮದುವೆಯಾಗಿ, ಸ್ತ್ರೀಲೋಲಪನಾಗಿದ್ದನೆಂದು ಭಾವಿಸುತ್ತಾರೆ. ಆದರೆ ಜ್ಞಾನಿಗಳು, ಯಾವ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಭಕ್ತಿಮಾಡಿ ಅವನ ಕೃಪಾಪಾತ್ರರಾದ ನಮ್ಮನ್ನೇ, ಆ ಪ್ರಕೃತಿಯ ಗುಣಗಳಾದ ಸತ್ವರಜಸ್ತಮೋ ಸಂಬಂಧಗಳಿಂದ ರಾಗ, ಮೋಹ, ದ್ವೇಷಾದಿಗಳೂ, ವಿಷಯಾಪೇಕ್ಷೆಗಳೂ ಮುಟ್ಟಲಾರವೋ, ಅಂತಹ ಪ್ರಕೃತಿಯೇ ಯಾವ ಶ್ರೀಕೃಷ್ಣನ ಅಧೀನಳೋ, ಅಂತಹ ಶ್ರೀಕೃಷ್ಣನಿಗೆ ಸ್ತ್ರೀಮೋಹಾದಿಗಳಿಲ್ಲ.

ಅನೇಕ ಜನ್ಮಗಳಲ್ಲಿ ಬಹು ತಪಸ್ಸುಮಾಡಿ ತನ್ನ ಅಂಗಸಂಗಸುಖವನ್ನು ಬೇಡಿಕೊಂಡಿದ್ದ ಮಹಾತಪಸ್ವಿಗಳಿಗೆ, ತಾನು ಕೃಷ್ಣಾವತಾರದಲ್ಲಿ ಅವರ ಅಪೇಕ್ಷೆ ಪೂರೈಸುವುದಾಗಿ ವರಗಳನ್ನು ಕೊಟ್ಟಿದ್ದುದರಿಂದ, ಸ್ತ್ರೀಯರಾಗಿ ಆ ತಪಸ್ವಿಗಳು ಹುಟ್ಟಿ, ಶ್ರೀಕೃಷ್ಣಪತ್ನಿಯರಾಗಿ, ತಾವು ಸುಖಪಟ್ಟರೇ ಹೊರತು, ಸ್ವರಮಣನೂ, ಪೂರ್ಣಕಾಮನೂ, ಆದ ಶ್ರೀಕೃಷ್ಣನಿಗೆ ವಿಕಾರಾದಿಗಳು ಎಂದಿಗೂ ಇಲ್ಲವೆಂದು ತಿಳಿಯುತ್ತಾರೆ.

**ಎಂಬಲ್ಲಿಗೆ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹತ್ತನೆಯ ಅಧ್ಯಾಯದ ಕನ್ನಡ ತಾತ್ಪರ್ಯಾರ್ಥವು ಮುಗಿಯಿತು.**

## अथ एकादशोऽध्यायः

**शौनक उवाच**

## अथ एकादशोऽध्यायः

अश्वत्थाम्ना विसृष्टेन ब्रह्मशीर्ष्णोरुतेजसा ।
उत्तराया हतो गर्भ ईशेनोज्जीवितः पुनः ॥ १ ॥

तस्य जन्म महाबुद्धेः कर्माणि च गृणीहि नः ।
निधनञ्च यथैवासीत्स प्रेत्य गतवान्यथा ॥ २ ॥

तदिदं श्रेतुमिच्छामि वक्तुं वा यदि मन्यसे ।
ब्रूहि नः श्रद्दधानानां यस्य ज्ञानमदाच्छुकः ॥ ३ ॥

**सूत उवाच**

अपीपलद्धर्मराजः पितृवद्रञ्जयन्प्रजाः ।
निस्पृहः सर्वकामेभ्यः कृष्णपादानुसेवया ॥ ४ ॥

सम्पदः क्रतवो विप्रा महिषी भ्रातरो मही ।
जम्बुद्वीपाधिपत्यञ्च यशश्च त्रिदिवं गतम् ॥ ५ ॥

किन्ते कामातुरस्यार्थाः मुकुन्दमनसो द्विजाः ।
नाधिजह्रुर्मुदं राज्ञः क्षुधितस्य यथेतरे ॥ ६ ॥

मातुर्गर्भगतो वीरः स तदा भृगुनन्दन ।
ददर्श पुरुषं कञ्चिद्दह्यमानोऽस्त्रतेजसा ॥ ७ ॥

अङ्गुष्ठमात्रममलं स्फुरत्पुरटमौलिनम् ।
आपीच्यदर्शनं श्यामं तटिद्वाससमच्युतम् ॥ ८ ॥

श्रीमद्दीर्घचतुर्बाहुं तप्तकाञ्चनकुण्डलम् ।
क्षतजाक्षं गदापाणिमात्मनः सर्वतोदिशम् ॥ ९ ॥

परिभ्रमन्तमुल्काभां भ्रामयन्तं गदां मुहुः ।
अस्त्रतेजः स्वगदया नीहारमिव गोपतिः ।
विधमन्तं सन्निकर्षे पर्यैक्षत क इत्यसौ ॥ १० ॥

विधूय तदमेयात्मा भगवान् धर्मगुब्विभुः ।
मिषतो दशमास्यस्य तत्रैवान्तर्दधे हरिः ॥ ११ ॥

## अथ एकादशोऽध्यायः

ततः सर्वगुणोदर्के सानुकूलग्रहोदये।
जज्ञे वंशधर; पाण्डोर्भूयः पाण्डुरिवौजसा॥ १२ ॥

तस्य प्रीतमना राजा विप्रैर्धौम्यकृपादिभिः।
जातकं कारयामास वाचयित्वा च मङ्गलम्॥ १३ ॥

हिरण्यं गां महीं ग्रामान्हस्त्यश्वान्नृपतिर्वरान्।
प्रादात्स्वन्नञ्च विप्रेभ्यः प्रजातीर्थे स तीर्थवित्॥ १४ ॥

तमूचुर्ब्राह्मणास्तुष्टा राजानं प्रश्रयानतम्।
एष ह्यस्मिन्प्रजातन्तौ कुरूणां पौरवर्षभ॥ १५ ॥

दवेनाप्रतिघातेन कुले संस्थामुपेयुषि।
रातो वोऽनुग्रहार्थाय विष्णुना प्रभविष्णुना॥ १६ ॥

तस्मान्नम्ना विष्णुरात इति लोके बृहच्छ्रवाः।
भविष्यति न सन्देहो महाभागवतो महान्॥ १७ ॥

राजोवाचअप्येष वंश्यान्राजर्षीन्पुण्यश्लोकान्महात्मनः।
अनुवर्तिता स्विद्यशसा साधुवादेन सत्तमाः ॥ १८ ॥

**ब्राह्मणा ऊचुः**

पार्थ प्रजाविता साक्षादिक्ष्वाकुरिव मानवः।
ब्रह्मण्यः सत्यसन्धश्च रामो दाशरथिर्यथा॥ १९ ॥

एष धाता शरण्यश्च यथा ह्यौशीनरः शिबिः।
यशो वितनिता स्वानां दौष्यन्तिरिव यज्वनाम्॥ २० ॥

धन्विनामग्रणीरेषः तुल्यश्चार्जुनयोर्द्वयोः।
हुताश इव दुर्धर्षः समुद्र इव दुस्तरः ॥ २१ ॥

मृगेन्द्र इव विक्रान्तो निषेव्यो हिमवानिव।
तितिक्षुर्वसुधेवासौ सहिष्णुः पितराविव॥ २२ ॥

पितामहसमः साम्ये प्रसादे गिरिशोपमः।
आश्रयः सर्वभूतानां यथा देवो रमाश्रयः ॥ २३ ॥

## अथ एकादशोऽध्यायः

सर्वसद्गुणमाहात्म्य एष कृष्णमनुव्रतः ।
रन्तिदेव इवोदारो ययातिरिव धार्मिकः ॥ २४ ॥

धृत्यां बलिसमः कृष्णे प्रह्लाद इव सहः ।
आहर्तैषोऽश्वमेधानां वृद्धानां पर्युपासकः ॥ २५ ॥

राजर्षीणां जनयिता शास्ता चोत्पथगामिनाम् ।
निगृहीता कलेरेष भुवो धर्मस्य कारणात् ॥ २६ ॥

तक्षकादात्मनो मृत्युं द्विजपुत्रोपसर्जितात् ।
प्रपत्स्यत उपश्रुत्य मुक्तसङ्गः पदं हरेः ॥ २७ ॥

जिज्ञासितात्मयाथात्म्यो मुनेर्व्याससुतादसौ ।
हित्वेदं नृप गङ्गायां यास्यत्यद्धाऽकुतोभयम् ॥ २८ ॥

इति राज्ञ उपादिश्य विप्रा जातककोविदाः ।
लब्धापचितयः सर्वे प्रतिजग्मुः स्वकान्गृहान् ॥ २९ ॥

स एष लोके विख्यातः परीक्षिदिति यः प्रभुः ।
सर्पदष्टिमनुध्यायन्परीक्षेत नरेष्विह ॥ ३० ॥

स राजपुत्रो ववृधे आशु शुक्ल इवोडुपः ।
आपूर्यमाणः पितृभिः काष्ठाभिरिव सोऽन्वहम् ॥ ३१ ॥

यक्ष्यमाणोऽश्वमेधेन ज्ञातिद्रोहजिहासया ।
राजलब्धधनो दध्यावन्यत्र करदण्डयोः ॥ ३२ ॥

तदभिप्रेतमालक्ष्य भ्रातरोऽच्युतनोदिताः ।
धनं प्रहीणमाजह्रुरुदीच्या भूरिशो दिशः ॥ ३३ ॥

तेन सम्भृतसम्भारो लब्धकामो युधिष्ठिरः ।
वाजिमेधैस्त्रिभी राजा यज्ञेशमयजद्धरिम् ॥ ३४ ॥

आहूतो भगवान् राज्ञा याजयित्वा द्विजैर्नृपम् ।
उवास कतिचिन्मासान्सुहृदः प्रियकाम्यया ॥ ३५ ॥

**अथ एकादशोऽध्यायः**

ततो राज्ञाऽभ्यनुज्ञातः कृष्णया सह बन्धुभिः ।
ययौ द्वारवतीं ब्रह्मन्सार्जुनो यदुभिर्वृतः ॥ ३६ ॥

**॥ इति श्रीमद्भागवते प्रथमस्कन्धे एकादशोऽध्यायः ॥**

## ॥ ಹನ್ನೊಂದನೆಯ ಅಧ್ಯಾಯ ॥

### ಪರೀಕ್ಷಿತ್‌ರಾಜರ ಜನ್ಮ ವೃತ್ತಾಂತ

ಶೌನಕರು ಸೂತರನ್ನು ಕುರಿತು, ಎಲೈ! ಸೂತಪುರಾಣಿಕರೇ! ಅಶ್ವತ್ಥಾಮರು ಬಿಟ್ಟ ಬ್ರಹ್ಮಾಸ್ತ್ರದಿಂದ ಉತ್ತರೆಯ ಗರ್ಭದಲ್ಲಿದ್ದ ಶಿಶುವು ಹ್ಯಾಗೆ ಸಂರಸಕ್ಷಿಸಲ್ಪಟ್ಟಿತು? ನಂತರ ಪರಮಾತ್ಮನಿಂದ ಸಂರಕ್ಷಿಸಲ್ಪಟ್ಟ ಮಗುವಿನ ಉತ್ಪತ್ತಿಕ್ರಮವೆಂಬ ಜನನ ಚರಿತ್ರೆಯನ್ನೂ, ಪರೀಕ್ಷಿದ್ರಾಜನ ಜೀವನ ಚರಿತ್ರೆಯನ್ನೂ, ಅವನ ನಿರ್ಯಾಣ ಕ್ರಮವನ್ನೂ, ಕೇಳಬೇಕೆಂದಿಚ್ಛಿಸುವ ನಮಗೆ, ತಾವು ಅನುಗ್ರಹಮಾಡಿ, ಹೇಳಬಹುದಾಗಿದ್ದರೆ, ಅದನ್ನು ನಮಗೆ ಹೇಳಿರಿ! ಎಂದು ಪ್ರಾರ್ಥಿಸಿದರು.

ಅದಕ್ಕೆ ಸೂತರು, ಎಲೈ ಶೌನಕಾದಿಗಳೇ ಕೇಳಿ! ಧರ್ಮರಾಯನು ತಂದೆಯು ಮಕ್ಕಳನ್ನೋ ಎಂಬಂತೆ ಪರಮ ಪ್ರೀತಿಯಿಂದ ಪ್ರಜೆಗಳನ್ನು ಸಂರಕ್ಷಿಸಿದನು. ಸಮಸ್ತ ಕಾಮ್ಯವಸ್ತುಗಳಲ್ಲಿ ಮಮತೆ ಇಲ್ಲದವನಾಗಿ, ಕೃಷ್ಣಪಾದಾರವಿಂದ ಧ್ಯಾನಾಸಕ್ತನಾಗಿದ್ದನು. ಐಶ್ವರ್ಯವಾಗಲೀ, ಯಜ್ಞಗಳಾಗಲೀ, ಬ್ರಾಹ್ಮಣರಿಂದಾಗಲೀ, ಹೆಂಡತಿ, ಭ್ರಾತೃಗಳು, ಭೂಮಿ, ಆ ಜಂಬೂದ್ವೀಪಾಧಿಪತ್ಯ, ವಿಖ್ಯಾತವಾದ ಯಶಸ್ಸೂ ಕೂಡ, ಅವನಿಂದ ಅಪೇಕ್ಷಿಸಲ್ಪಡಲಿಲ್ಲ. ಇವೆಲ್ಲಾ ಅಲ್ಪರಾದ ಜನರ ಮನಸ್ಸಾಕರ್ಷಿಸಬಲ್ಲವೇ ಹೊರತು, ಮೋಕ್ಷದಾಯಕನಾದ ಶ್ರೀಪರಮಾತ್ಮನಲ್ಲಿ ಏಕನಿಷ್ಠೆಯುಳ್ಳ ಮಹಾತ್ಮರನ್ನು ಮರುಳುಗೊಳಿಸಲಾರವಷ್ಟೆ? ಹಸಿವಾದವನ ಮುಂದೆ ವೀಣಾದಿಗಳನ್ನು ಬಾರಿಸಿದರೆ ಹೇಗೆ ಅವನಿಗೆ ತೃಪ್ತಿಕೊಡಲಾರದೋ, ಅದರಂತೆ ಭಗವತ್ಪರನಾದವನಿಗೆ ವಿಷಯಸುಖಗಳು ತೃಪ್ತಿ ಕೊಡಲಾರವು.

ಉತ್ತರಾದೇವಿಯ ಗರ್ಭಕ್ಕೆ ಅಶ್ವತ್ಥಾಮರ ಅಸ್ತ್ರವು ಪ್ರವೇಶಿಸಿದಾಗ, ಅಲ್ಲಿದ್ದ ಮಗುವಿಗೆ ಬಹಳ ತಾಪ ಉಂಟಾಯಿತು. ಅಷ್ಟರಲ್ಲಿ ಅಂಗುಷ್ಠಮಾತ್ರ ರೂಪ ವುಳ್ಳ, ಕಿರೀಟ, ಕುಂಡಲ, ಹಾರ, ನೂಪುರ, ಪೀತಾಂಬರಾದಿಗಳಿಂದ ಅಲಂಕೃತನಾಗಿ, ಜಾಜ್ವಲ್ಯಮಾನನಾಗಿ ಪ್ರಕಾಶಿಸುತ್ತಿರುವ

ಒಂದು ಪುರುಷ ರೂಪವು ಮಗುವಿಗೆ ಕಾಣಿಸಿತು. ಈ ಪುರುಷನು ಅತಿವೇಗದಿಂದ ಒಂದು ಗದೆಯನ್ನು ತಿರುಗಿಸುತ್ತಾ, ಮಗುವಿನ ಸುತ್ತಲೂ ಸರ್ವತೋಮುಖವಾಗಿ ಸಂಚರಿಸುತ್ತಾ ಒಂದು ದೊಡ್ಡ ಹಸುವಿನ ಮಂದೆಯನ್ನು ಗೋಪಾಲಕನು ಹೇಗೆ ಒಂದು ಕೋಲಿನಿಂದ ತಡೆಯುವನೋ ಅದೇ ರೀತಿಯಾಗಿ, ಅಸ್ತ್ರವು ಮಗುವನ್ನು ಮುಟ್ಟದಂತೆ ತಡೆದು, ಒಂದು ಕ್ಷಣದಲ್ಲೇ ಆ ಅಸ್ತ್ರದ ತೇಜಸ್ಸನ್ನಡಗಿಸಿ, ಮಗುವು ನೋಡುತ್ತಿದ್ದ ಹಾಗೆಯೇ ಅದೃಶ್ಯನಾದನು. ತಾಯಿಗೆ ಹತ್ತನೆಯ ತಿಂಗಳಲ್ಲಿ ಈ ಮಗುವಿನ ಜನನವಾಯಿತು.

ಪಾಂಡುವಂಶೋದ್ಧಾರಕನಾಗಿ ಮೊಮ್ಮಗನು ಹುಟ್ಟಿದನೆಂಬುದನ್ನು ಧರ್ಮರಾಯನು ಕೇಳಿ ಬ್ರಾಹ್ಮಣರಿಗೆ, ಹಿರಣ್ಯ, ಗೋ, ಭೂ, ಗ್ರಾಮಗಳ ದಾನಗಳನ್ನು ಕೊಟ್ಟು, ಉತ್ತಮ ಬ್ರಾಹ್ಮಣರನ್ನು ಕರೆಸಿ, ಬಾಲಕನಿಗೆ ಜಾತಕ, ನಾಮಕರಣಗಳನ್ನು ಮಾಡಿರೆಂದು ಪ್ರಾರ್ಥಿಸಿದನು. ಬ್ರಾಹ್ಮಣರು ಮಗುವು ಸುಲಕ್ಷಣಗಳಿಂದ ಕೂಡಿರುವುದನ್ನು ನೋಡಿ, ಪಾಂಡುರಾಯನ ಸದೃಶನಾದ ಪೌತ್ರನು ಹುಟ್ಟಿರುವನೆಂದು ಧರ್ಮರಾಯನನ್ನು ಅಭಿವಂದಿಸಿದರು. ನಂತರ ಶ್ರೀಕೃಷ್ಣರೂಪ ಪರಮಾತ್ಮನು, ಗರ್ಭವನ್ನು ವಿಷ್ಣುರೂಪದಿಂದ ಪ್ರವೇಶಿಸಿ ಮಗುವನ್ನು ಸಂರಕ್ಷಿಸಿ, ಮಗುವಿಗೆ ತನ್ನ ದಿವ್ಯದರ್ಶನವಿತ್ತನಾದ್ದರಿಂದ, ಜನನವಾದ ಆ ಶಿಶುವಿಗೆ ವಿಷ್ಣುರಾತನೆಂದು ನಾಮಕರಣ ಮಾಡಿದರು.

ಅನಂತರ ಧರ್ಮರಾಯನು, ಎಲೈ! ಬ್ರಾಹ್ಮಣೋತ್ತಮರೇ! ಈ ಶಿಶುವಿನ ಜಾತಕವನ್ನು ಬರೆಯಿರಿ. ಇವನು ನಮ್ಮ ಹಿರಿಯರಾದ ರಾಜರ್ಷಿಗಳ ವಂಶಕ್ಕೆ ಕೀರ್ತಿ ತರತಕ್ಕವನೇ? ಧರ್ಮಿಷ್ಠನೇ? ಸರಿಯಾಗಿ ಪ್ರಜಾರಕ್ಷಣೆ ಮಾಡುವನೇ? ಎಂಬ ವಿಚಾರಗಳನ್ನು ನನಗೆ ತಿಳಿಸಬೇಕೆಂದು ಪ್ರಾರ್ಥಿಸಿದನು.

## ಪರೀಕ್ಷಿತನ ಜಾತಕ ವರ್ಣನೆ

ಬ್ರಾಹ್ಮಣರು ಜಾತಕವನ್ನು ಬರೆದು, ಸರ್ವಗ್ರಹಗಳೂ ಉತ್ತಮ ಶುಭಸ್ಥಾನಗಳಲ್ಲಿರುವುದನ್ನು ನೋಡಿ, ಆನಂದಭರಿತರಾಗಿ, ಎಲೈ! ಧರ್ಮರಾಯನೇ! ಈಗ ಹುಟ್ಟಿರುವ ಮಗುವು ಸಾಮಾನ್ಯನೆಂದು ಭಾವಿಸಬೇಡ! ಇವನು ಸಾಕ್ಷಾತ್ ಇಕ್ಷ್ವಾಕುರಾಜನಂತೆ ಪ್ರಜಾಪರಿಪಾಲಕನಾಗುತ್ತಾನೆ! ಶ್ರೀರಾಮನಂತೆ ಬ್ರಾಹ್ಮಣಪ್ರಿಯನೂ ಸತ್ಯಸಂಧನೂ ಆಗುತ್ತಾನೆ! ಉಶೀನರ ಪುತ್ರನಾದ ಶಿಬಿಚಕ್ರವರ್ತಿಯಂತೆ ಶರಣಾಗತರಕ್ಷಕನೂ, ದಾನಿಯೂ ಆಗುವನು! ದುಷ್ಯಂತಪುತ್ರನಂತೆ ಯಜ್ಞಗಳನ್ನು ಮಾಡುವನೂ,

ಕೀರ್ತಿಶಾಲಿಯೂ ಆಗುವನು!

ಅರ್ಜುನ, ಕಾರ್ತವೀರ್ಯಾರ್ಜುನರಂತೆ ಧನುರ್ಧಾರಿಗಳಲ್ಲಿ ಉತ್ಕೃಷ್ಟನಾಗುವನು. ಅಗ್ನಿಯಂತೆ ತೇಜಸ್ಸುಳ್ಳವನೂ, ಸಮುದ್ರದಂತೆ ತಡೆಯಲಶಕ್ಯನೂ ಆಗುವನು. ಸಿಂಹನಂತೆ ವಿಕ್ರಮವುಳ್ಳವನೂ, ಹಿಮವತ್ಪರ್ವತದಂತೆ ದಾರ್ಢ್ಯ ವುಳ್ಳವನೂ, ಭೂಮಿಯಂತೆ ಕ್ಷಮೆಯುಳ್ಳವನೂ, ಪಿತೃದೇವತೆಗಳಂತೆ ಸಹನೆಯುಳ್ಳವನೂ ಆಗುವನು. ಸಮತ್ವದಲ್ಲಿ ಬ್ರಹ್ಮನಂತೆಯೂ, ಅನುಗ್ರಹಮಾಡುವುದರಲ್ಲಿ ಗಿರಿಜಾಪತಿಯಾದ ಮಹದೇವರಂತೆಯೂ, ಸರ್ವಭೂತಗಳಿಗೆ ರಮಾಪತಿಯಂತೆ ಆಶ್ರಯ ಕೊಡತಕ್ಕವನಾಗಿಯೂ ಆಗುವನು. ಸಮಸ್ತ ಸದ್ಗುಣಗಳಲ್ಲಿ ಇವನು ಶ್ರೀಕೃಷ್ಣನನ್ನೇ ಅನುಕರಿಸುವನು.

ರಂತಿದೇವನಂತೆ ಉದಾರಿಯೂ, ಯಯಾತಿಯಂತೆ ಧಾರ್ಮಿಕನೂ ಆಗುವನು. ಧೃತಿಯಲ್ಲಿ ಬಲಿಚಕ್ರವರ್ತಿಯಂತೆಯೂ, ಸದ್ವೃತ್ತಿಯಲ್ಲಿ ಪ್ರಹ್ಲಾದನಂತೆಯೂ ಆಗುವನು. ಇವನು ಅನೇಕ ಯಜ್ಞಾದಿಗಳನ್ನು ಮಾಡಿ, ಗುರುಹಿರಿಯರಿಗೆ ಪ್ರಿಯನೂ, ಅವರ ಪೂಜಕನೂ ಆಗುವನು. ರಾಜರ್ಷಿಗಳು ಇವನ ಕುಲದಲ್ಲಿ ಹುಟ್ಟುವರು. ದುರ್ಮಾರ್ಗರನ್ನೂ, ಕಲಿಯನ್ನೂ ನಿಗ್ರಹಿಸಿ, ಸಜ್ಜನರನ್ನು ರಕ್ಷಿಸಿ, ಧರ್ಮಸಂಸ್ಥಾಪಕನಾಗುತ್ತಾನೆ. ಕೊನೆಗೆ ಬ್ರಾಹ್ಮಣಪುತ್ರನ ಶಾಪದಿಂದ ತಕ್ಷಕನೆಂಬ ಸರ್ಪದಿಂದ ಕಚ್ಚಲ್ಪಟ್ಟವನಾಗಿ ಮರಣವನ್ನು ಹೊಂದುತ್ತಾನೆ!

ಮರಣಹೊಂದುವುದಕ್ಕೆ ಮುಂಚೆ, ತನ್ನ ಮರಣ ಸಮಾಚಾರವನ್ನು ಬ್ರಾಹ್ಮಣರಿಂದ ತಿಳಿದು, ಸರ್ವಸಂಗ ಪರಿತ್ಯಾಗಮಾಡಿ, ಗಂಗಾ ಮಧ್ಯೆ ಪ್ರಾಯೋಪವೇಶದಿಂದ ಕುಳಿತಿದ್ದಾಗ, ತಾವಾಗಿಯೇ ಅಲ್ಲಿಗೆ ಬಂದ ಶುಕಋಷಿಗಳಿಂದ ಭಾಗವತಶಾಸ್ತ್ರವೆಂಬ ಸಕಲವೇದಗಳ ಸಾರರೂಪವಾದ ವಿಜ್ಞಾನೋಪದೇಶವನ್ನು ಹೊಂದಿ, ಯೋಗಿಗಳಿಗೆ ಪ್ರಾಪ್ಯವಾಗುವ ಪರಮಸದ್ಗತಿಯನ್ನೇ ಪಡೆಯುವನು! ಎಂದು ಜಾತಕಫಲವನ್ನು ಹೇಳಿ ಬ್ರಾಹ್ಮಣರು ಸನ್ಮಾನಿತರಾಗಿ ತಮ್ಮ ತಮ್ಮ ಮನೆಗಳಿಗೆ ಹೋದರು.

ಶಿಶುವು ದಿನೇದಿನೇ ಅಭಿವೃದ್ಧನಾಗಿ ದೊಡ್ಡವನಾದನು. ಹಿರಿಯರಿಂದ ತನಗೆ ಸರ್ಪದಿಂದ ಮರಣವೆಂದು ತಿಳಿದು, ಆ ಮರಣವು ಎಂದಿಗೆ ಬರುವುದೋ ಎಂದು, ಬಂದ ಬ್ರಾಹ್ಮಣರನ್ನೆಲ್ಲಾ ತಕ್ಷಕನೇ ಬಂದನೇನೋ ಬ್ರಾಹ್ಮಣರೂಪದಿಂದ, ಎಂದು ಇವನು ಪರೀಕ್ಷಿಸುತ್ತದ್ದ ಕಾರಣ ಪರೀಕ್ಷಿದ್ರಾಜನೆಂದು ಹೆಸರಾಯಿತು. ಆದೂ ಅಲ್ಲದೇ, ಗರ್ಭದಲ್ಲಿದ್ದಾಗ ತನ್ನ ಸುತ್ತಲೂ

ಸುತ್ತುತ್ತಿದ್ದ ಅಂಗುಷ್ಠ ಪ್ರಮಾಣ ಪರಮಾತ್ಮನ ರೂಪವನ್ನು ನೋಡುತ್ತಾ, ಇದು ಏನಿರಬಹುದು? ಎಂದು ಪರೀಕ್ಷಿಸುತ್ತಿದ್ದ ಕಾರಣದಿಂದಲೂ, ಪರೀಕ್ಷಿದ್ರಾಜನೆಂಬ ಹೆಸರಾಯ್ತು.

ಈ ಪರೀಕ್ಷಿದ್ರಾಜನು ಜ್ಞಾತಿಗಳ ವಧೆಗಳ ದೋಷಪರಿಹಾರಕ್ಕಾಗಿ ನಾನೂ ಅಶ್ವಮೇಧಯಾಗ ಮಾಡುತ್ತೇನೆಂದು ದಿಗ್ವಿಜಯ ಮಾಡಿ ಸಮೃದ್ಧಿಯಾಗಿ ಧನರಾಶಿಗಳನ್ನು ಗಳಿಸಿದನು. ಶ್ರೀಕೃಷ್ಣನಿಂದ ಪ್ರೇರಿತರಾದ ಅರ್ಜುನ, ಭೀಮ, ನಕುಲ, ಸಹದೇವರೂ ಉತ್ತರ ದಿಗ್ವಿಜಯ ಮಾಡಿ ಧನರಾಶಿಗಳನ್ನು ತಂದರು. ಧರ್ಮರಾಯನು ಶ್ರೀಕೃಷ್ಣನನ್ನು ಬರಮಾಡಿಕೊಂಡು, ಪುನಃ ಸಂಭ್ರಮದಿಂದ, ಬ್ರಾಹ್ಮಣರ ವೇದಘೋಷ, ಮಂತ್ರೋಚ್ಚಾರಣಾ ಪೂರ್ವಕವಾಗಿ, ಅಶ್ವಮೇಧ ಯಾಗವನ್ನು ಮಾಡಿದನು. ನಂತರ ಕೆಲವು ತಿಂಗಳು ಕಾಲ ಶ್ರೀಕೃಷ್ಣನು ಪಾಂಡವರಿಗೆ ಸಂತೋಷ ಉಂಟುಮಾಡುವುದಕ್ಕಾಗಿ ಅವರೊಡನೆ ವಾಸಿಸುತ್ತಿದ್ದು, ನಂತರ ಎಲ್ಲರ ಸಮ್ಮತಿಯಿಂದ, ಅರ್ಜುನನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು, ಸಕಲ ಯಾದವರೊಡನೆ ದ್ವಾರಕಾ ಪಟ್ಟಣಕ್ಕೆ ಪ್ರಯಾಣಮಾಡಿದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹನ್ನೊಂದನೆಯ ಅಧ್ಯಾಯವು ಮುಗಿಯಿತು.**

## अथ द्वादशोऽध्यायः

**सूत उवाच**

विदुरस्तीर्थयात्रायां मैत्रेयादात्मनो गतिम् ।
ज्ञात्वाऽऽगाद्धस्तिनपुरं तयाऽवाप्तविवित्सितः ॥ १ ॥

यावतः कृतवान्प्रश्नान्क्षत्ता कौषारवाग्रतः ।
जातैकभक्तिर्गोविन्दे तेभ्यश्चोपरराम ह ॥ २ ॥

तं बन्धुमागतं दृष्ट्वा धर्मपुत्रः सहानुजः ।
धृतराष्ट्रो युयुत्सुश्च सूतः शारद्वतः पृथा ॥ ३ ॥

गान्धारी द्रौपदी ब्रह्मन्सुभद्रा चोत्तरा कृपी ।
अन्याश्च जामयः पाण्डोर्ज्ञातयः ससुताः स्त्रियः ॥ ४ ॥

प्रत्युज्जग्मुः प्रहर्षेण प्राणांस्तन्व इवागतान् ।

## अथ द्वादशोऽध्यायः

अभिसङ्गम्य विधिवत्परिष्वङ्गाभिवन्दनैः ॥ ५ ॥

मुमुचुः प्रेमबाष्पौघं मिथ औत्कण्ठ्यकातराः ।
राजा तमर्हयाञ्चक्रे कृतासनपरिग्रहम् ॥ ६ ॥

तं भुक्तवन्तमासीनं विश्रान्तं सुखमासने ।
प्रश्रयावनतो राजा प्राह स्वानाञ्च शृण्वताम् ॥ ७ ॥

**युधिष्ठिर उवाच**

अपि स्मरथ नो युष्मत्पक्षच्छाया समेधितान् ।
विपद्गणाद्विषाग्न्यादेर्मोचिता यत्समातृकाः ॥ ८ ॥

कया वृत्या वर्तितं वै चरद्भिः क्षितिमण्डलम् ।
तीर्थानि क्षेत्रमुख्यानि सेवितानीह भूतले ॥ ९ ॥

भवद्विधा भागवतास्तीर्थभूतास्स्वयं प्रभो ।
तीर्थीकुर्वन्ति तीर्थानि स्वात्मस्थेन गदाभृता ॥ १० ॥

अपि नः सुहृदस्तात बान्धवाः कृष्णदैवताः ।
दृष्टाः श्रुता वा यदवः स्वपुर्यां सुखमासते ॥ ११ ॥

इत्युक्तो धर्मराजेन सर्वं तत्समवर्णयत् ।
यथानुभूतं भ्रमता विना यदुकुलक्षयम् ॥ १२ ॥

तत्वप्रियं दुर्विषयं नृणां स्वयमुपस्थितम् ।
नावेदयत्सुरुणो दुः खितान्द्रष्टुमक्षमः ॥ १३ ॥

कञ्चित्कालमथावात्सीत्सत्कृतो देववत्स्वकैः ।
भ्रातुर्ज्येष्ठस्य श्रेयस्कृत्सर्वेषां प्रीतिमावहन् ॥ १४ ॥

अबिभ्रदर्यमा दण्डं यथाघमघकारिषु ।
यावद्दभार शूद्रत्वं शापाद्वर्षशतं यमः ॥ १५ ॥

युधिष्ठिरो लब्धराज्यो दृष्ट्वा पौत्रं कुलन्धरम् ।
भ्रातृभिर्लोकपालाभैर्मुमुदे परया श्रिया ॥ १६ ॥

## अथ द्वादशोऽध्यायः

अथामन्त्र्याच्युतो बन्धून्निवर्त्यानुगतान्विभुः ।
अर्जुनोद्धवशैनेयैर्ययौ द्वारवतीं हयैः ॥ १७ ॥

एवं गृहेषु सक्तानां प्रमत्तानां गृहेहया ।
अत्यक्रामदविज्ञातः कालः परमदुस्तरः ॥ १८ ॥

विदुरस्तदभिप्रेत्य धृतराष्ट्रमभाषत ।
राजन्निर्गम्यतां शीघ्रं पश्येदं भयमागतम् ॥ १९ ॥

प्रतिक्रिया न यस्येह कुतश्चित्कर्हिचित् प्रभो ।
स एष भगवान् कालः सर्वेषां नः समागतः ॥ २० ॥

येन चेहाभिपन्नोऽयं प्राणैः प्रियतमैरपि ।
जनः सद्यो वियुज्येत किमुतान्यैर्धनादिभिः ॥ २१ ॥

पितृभ्रातृसुहृत्पुत्रा हतास्ते विगतं वयः ।
आत्मा च जरसा ग्रस्तः परगेहमुपाससे ॥ २२ ॥

अहो महीयसी जन्तोर्जीविताशा यया भवान् ।
भीमापवर्जितं पिण्डमादत्से गृहपालवत् ॥ २३ ॥

अग्निर्निसृष्टो दत्तश्च गरो दाराश्च दूषिताः ।
हृतं क्षेत्रं धनं येषां तदन्नैरसुभिः कियत् ॥ २४ ॥

तस्यापि तव देहोऽयं कृपणस्य जिजीविषोः ।
परैत्यनिच्छतो जीर्णो जरया वाससी इव ॥ २५ ॥

गतस्वार्थमिमं देहं वियुक्तो मुक्तबन्धनः ।
अविज्ञातगतिर्जह्यात्स वै धीर उदाहृतः ॥ २६ ॥

यः स्वतः परतो वेह जातनिर्वेद आत्मवान् ।
हृदि कृत्वा हरिं गेहात्प्रव्रजेत्स नरोत्तमः ॥ २७ ॥

अथोदीचीं दिशं यातु स्वैरज्ञातगतिर्भवान् ।
इतोऽर्वाक्प्रायशः कालः पुंसां गुणविकर्षणः ॥ २८ ॥

## अथ द्वादशोऽध्यायः

एवं राजा विदुरेणानुजेन प्रज्ञाचक्षुर्बोधित आजमीढः।
छित्वा स्वेषु स्नेहपाशान्द्रढिम्नो निश्चक्राम भ्रातृसन्दर्शिताध्वा॥ २९ ॥

पतिं प्रयान्तं सुबलस्य पुत्री पतिव्रता चानुजगाम साध्वी।
हिमालयं न्यस्तदण्डप्रहर्षं मनस्विनामवसत्संविहारम्॥ ३० ॥

अजातशत्रुः कृतमैत्रो हुताग्निर्विप्रान्नत्वा तिलगोवस्त्ररुग्मैः।
गृहान् प्रविष्टो गुरुवन्दनाय न चापश्यत्पितरौ सौबलीञ्च॥ ३१ ॥

तत्र सञ्जयमासीनं पप्रच्छोद्विग्नमानसः।

गावल्गणे क्व नस्तातो वृद्धो हीनश्च नेत्रयोः।
अंबा वा हतपुत्रार्ता पितृव्यः क्व गतः सुहृत्॥ ३२ ॥

अपि मय्यकृतप्रज्ञे हतबन्धुः स्वभार्यया।
आशंसमानः शमलं गङ्गायां दुः खितोऽपतत्॥ ३३ ॥

पितर्युपरते पाण्डौ सर्वान्नः सुहृदः शिशून्।
अरक्षतां व्यसनतः पितृव्यौ क्व गतावितः ॥ ३४ ॥

**सूत उवाच**

कृपया स्नेहवैक्लव्यात्सूतो विरहकर्शितः।
आत्मेश्वरमचक्षाणो न प्रत्याहातिपीडितः ॥ ३५ ॥

विसृज्याश्रूणि पाणिभ्यां विष्टभ्यात्मानमात्मना।
अजातशत्रुं प्रत्यूचे प्रभोः पादावनुस्मरन्॥ ३६ ॥

**सञ्जय उवाच**

अहञ्च व्यंसितो राजन् पित्रोर्वः कुलनन्दन।
न वेद साध्व्या गान्धार्या मुषितोऽस्मि महात्मभिः ॥ ३७ ॥

**सूत उवाच**

एतस्मिन्नन्तरे विप्राः नारदः प्रत्यदृश्यत।
वीणां त्रितन्त्रीं ध्वनयन् भगवान् सहतुम्बुरुः ॥ ३८ ॥

राज्ञादरोपनीतार्घ्यं प्रत्युत्थानाभिवन्दितम्।

परमासन आसीनं कौरवेन्द्रोऽभ्यभाषत ॥ ३९ ॥

**युधिष्ठिर उवाच**

नाहं वेद गतिं पित्रोर्भगवान्क्वगतावितः ।
कर्णधार इवापारे सीदतां पारदर्शनः ॥ ४० ॥

**नारद उवाच**

मा कञ्चन शुचो राजन् यदीश्वरवशं जगत् ।
स संयुनक्ति भूतानि स एव वियुनक्ति च ॥ ४१ ॥

यथा गावो नसि प्रोता तन्त्यां बद्धाः स्वदामभिः ।
वाक्तन्त्यां नामभिर्बद्धा वहन्ति बलिमीशितुः ॥ ४२ ॥

यथा क्रीडोपस्कराणां संयोगविगमाविह ।
इच्छया क्रीडितुः स्यातां तथैवेशेच्छया नृणाम् ॥ ४३ ॥

यन्मन्यसे ध्रुवं लोकमध्रुवं वाथवोभयम् ।
सर्वथा हि न शोच्यास्ते स्नेहादन्यत्र मोहजात् ॥ ४४ ॥

तस्माज्जह्यङ्ग वैक्लव्यमज्ञानकृतमात्मनः ।
कथं त्वनाथाः कृपणा वर्तेरन् बत मामृते ॥ ४५ ॥

कालकर्मगुणाधीनो देहोऽयं पाञ्चभौतिकः ।
कथमन्यांस्तु गोपायेत् सर्पग्रस्तो यथा परम् ॥ ४६ ॥

अहस्तानि सहस्तानामपदो द्विचतुष्पदाम् ।
अणूनि तात महतां जीवो जीवस्य जीवनम् ॥ ४७ ॥

तदिदं भगवान् राजन्नेक आत्माऽऽत्मनां स्वदृक् ।
अन्तरोऽनन्तरो भाति पश्य त्वं माययोरुताम् ॥ ४८ ॥

सोऽयमद्य महाराज भगवान् भूताभवनः ।
कालरूपोऽवतीर्णोऽस्यामभावाय सुरद्विषाम् ॥ ४९ ॥

निष्पादितं देवकृत्यमवशेषं प्रतीक्षते ।
तावद्यूयमवेक्षध्वं भवेद्यावदिहेश्वरः ॥ ५० ॥

## अथ द्वादशोऽध्यायः

धृतराष्ट्रः सह भ्रात्रा गान्धार्या च स्वभार्यया ।
दक्षिणेन हिमवत ऋषीणामाश्रमं गतः ॥ ५१ ॥

स्रोतोभिः सप्तभिर्यत्र स्वर्धुनी सप्तधाऽभ्यगात् ।
सप्तानां प्रीतये नाम्ना सप्तस्रोतः प्रचक्षते ॥ ५२ ॥

स्नात्वा त्रिषवणं तस्मिन् हुत्वा चाग्नीन् यथाविधि ।
अब्भक्ष उपशान्तात्मा स आस्ते विगतेक्षणः ॥ ५३ ॥

जितासनो जितश्वासः प्रत्याहृतषडिन्द्रियः ।
हरिभावनया ध्वस्तरजः सत्वतमोमलः ॥ ५४ ॥

विज्ञानात्मनि संयोज्य क्षेत्रज्ञे प्रविलाप्य तम् ।
ब्रह्मण्यात्मानमाधारे घटाम्बरमिवाम्बरे ॥ ५५ ॥

ध्वस्तमायागुणोद्रेको निरुद्धकरणाशयः ।
निवर्तिताखिलाहार आस्ते स्थाणुरिवाधुना ।
तस्यन्तरायो नैवाभूत् सन्यस्ताखिलकर्मणः ॥ ५६ ॥

स वा अद्यतनाद्राजा परतः पञ्चमेऽहनि ।
कलेवरं हास्यति ह तच्च भस्मीभविष्यति ॥ ५७ ॥

दह्यमानेऽग्निभिर्देहे पत्युः पत्नी सहोटजे ।
बहिः स्थिता पतिं साध्वी तमग्निमनुवेक्ष्यति ॥ ५८ ॥

विदुरस्तु तदाश्चर्यं निशाम्य कुरुनन्दन ।
हर्षशोकयुतस्तस्माद्गन्ता तीर्थनिषेवकः ॥ ५९ ॥

इत्युक्त्वाऽथारुहत्स्वर्गं नारदः सहतुम्बुरुः ।
युधिष्ठिरो वचस्तस्य हृदि कृत्वाऽजहाच्छुचः ॥ ६० ॥

**॥ इति श्रीमद्भागवते प्रथमस्कन्धे द्वादशोऽध्यायः ॥**

## ॥ ಹನ್ನೆರಡನೆಯ ಅಧ್ಯಾಯ ॥

## अथ द्वादशोऽध्यायः

## ವಿದುರ ಧರ್ಮರಾಜರ ಸಮಾಗಮ

ಈ ಅಧ್ಯಾಯದಲ್ಲಿ, ವಿಷಯಗಳಲ್ಲಿ ಅಭಿಲಾಷೆಯು ಸಂಸಾರಕ್ಕೂ, ವಿಷಯಗಳಲ್ಲಿ ಜಿಗುಪ್ಸೆಯಿಂದ ಸಂಪಾದಿಸಲ್ಪಟ್ಟ ವೈರಾಗ್ಯವೇ ಭಕ್ತಿಯನ್ನು ಹುಟ್ಟಿಸಿ ಮೋಕ್ಷಕ್ಕೂ ಕಾರಣವಾಗುವುದೆಂದು ಪ್ರತಿಪಾದಿಸಲ್ಪಡುತ್ತದೆ.

ಶುದ್ಧವಾದ ಅಂತಃಕರಣ ವುಳ್ಳವರಿಗೆ ವಿಷಯಗಳಲ್ಲಿ ವೈರಾಗ್ಯವು ಹುಟ್ಟುತ್ತೆ. ಶುದ್ಧಾಂತಃ ಕರಣವನ್ನು ಹೊಂದುವುದಕ್ಕಾಗಿ ಜ್ಞಾನಿಗಳೂ ತೀರ್ಥಯಾತ್ರಾದಿ ಸಂಚಾರಮಾಡುತ್ತಾರಾಗಿ, ಸೂತಪುರಾಣಿಕರು ಶೌನಕರನ್ನು ಕುರಿತು, ಎಲೈ! ಶೌನಕರೇ! ವಿದುರನು ತೀರ್ಥಯಾತ್ರೆಗಳನ್ನು ಮಾಡುತ್ತಾ ಮೈತ್ರೇಯ ಋಷಿಗಳಿಂದ ಆತ್ಮಜ್ಞಾನವನ್ನು ಪಡೆದು ನಂತರ ಧರ್ಮರಾಜಾದಿಗಳನ್ನು ನೋಡಲಪೇಕ್ಷಿಸಿ ಹಸ್ತಿನಾಪುರಕ್ಕೆ ಬಂದನು. ವಿದುರನು ಮೈತ್ರೇಯರು ಉಪದೇಶಿಸಿದ್ದ ಪರಮಾತ್ಮನ ಮಹಿಮೆಗಳಿಂದಲೂ ಜೀವರಿಗೆ ಸ್ವರ್ಗ, ಭೂ, ನರಕಗಮನಾದಿ ಕಾರಣ ಜ್ಞಾನದಿಂದಲೂ, ಪರಮಾತ್ಮ ಭಕ್ತಿಯಿಂದ ಭಗವತ್ಪ್ರಸಾದರೂಪ ಮೋಕ್ಷಪ್ರಾಪ್ತಿ ವಿಧಾನ ಜ್ಞಾನದಿಂದಲೂ, ಉಂಟಾದ ಪರಮವೈರಾಗ್ಯದಿಂದ, ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಪ್ರವೃದ್ಧವಾದ ಭಕ್ತ್ಯುದ್ರೇಕದಿಂದ ಕೂಡಿದವರಾಗಿ, ಸಾಂಸಾರಿಕ ಕ್ಲೇಶಗಳಿಂದುಂಟಾದ ದುಃಖಗಳ ಬಾಧೆಗಳಿಂದ ಬಿಡಲ್ಪಟ್ಟವನಾಗಿದ್ದನು.

ಹಸ್ತಿನಾಪುರಕ್ಕೆ ಬಂದಂತಹ ವಿದುರನನ್ನು ಧರ್ಮರಾಯನು ನೋಡಿ, ಬಹಳ ಸಂತೋಷ ಸಂಭ್ರಮಗಳಿಂದ, ತನ್ನ ತಮ್ಮಂದಿರನ್ನೂ, ಧೃತರಾಷ್ಟ್ರ, ಯುಯುತ್ಸು, ಸಂಜಯ, ಕೃಪಾಚಾರ್ಯರು, ಕುಂತೀದೇವಿ, ಗಾಂಧಾರೀ, ದ್ರೌಪದೀ, ಸುಭದ್ರಾ, ಉತ್ತರಾದೇವಿಯರ ಸಹಿತನಾಗಿ ಎದುರ್ಗೊಂಡು ಬಹಳ ಆದರ ಉಪಚಾರಗಳಿಂದ ಅರಮನೆಗೆ ಕರೆತಂದು, ಆಸನಾದ್ಯುಪಚಾರಗಳಿಂದ ಸತ್ಕರಿಸಿದನು.

ಬಂಧುವರ್ಗದವರೆಲ್ಲರೂ ಬಹುಕಾಲಾನಂತರ ಬಂದ ವಿದುರನನ್ನು ನೋಡಿ ಉಕ್ಕುವ ಪ್ರೇಮಪೂರಿತ ಬಾಷ್ಪ , ಗದ್ಗದಕಂಠ ವುಳ್ಳವರಾಗಿ, ನಮಸ್ಕಾರ, ಆಲಿಂಗನಾದಿಗಳನ್ನು ಮಾಡಿದರು. ವಿದುರನಿಗೆ ಬಹು ಆತಿಥ್ಯಾದಿಗಳನ್ನು ಮಾಡಿ, ಶ್ರಮ ಪರಿಹರಿಸಿಕೊಂಡು ಸುಖಾಸೀನನಾಗಿ ಕುಳಿತಮೇಲೆ, ಧರ್ಮರಾಯನು ಮೆಲ್ಲನೆ ವಿದುರನನ್ನು ಸಮೀಪಿಸಿ ನಮಸ್ಕರಿಸಿ, ಕೈಮುಗಿದುಕೊಂಡು ವಿನಯದಿಂದ ಈ ರೀತಿ ಪ್ರಶ್ನೆಮಾಡಿದನು ನಿಮ್ಮ ನೆರಳಾಶ್ರಯದಲ್ಲಿ

ಬೆಳೆದು, ನಿಮ್ಮ ಸಹಾಯದಿಂದ ಬೆಂಕಿ, ವಿಷ ಮುಂತಾದ ವಿಪತ್ತುಗಳಿಂದ ತಾಯಿಸಹಿತನಾಗಿ ನಿಮ್ಮಿಂದ ಸಂರಕ್ಷಿಸಲ್ಪಟ್ಟ ನಮ್ಮನ್ನು, ನಮಗೆ ಪರಮಪ್ರಿಯರಾದ ತಾವು ನೆನಪಿನಲ್ಲಿಟ್ಟಿರುವಿರಾ? ತಾವು ಭೂಮಂಡಲದ ಸಂಚಾರವನ್ನು ತೀರ್ಥಯಾತ್ರೆಯ ವ್ಯಾಜದಿಂದ ಸಂಚರಿಸುವಾಗ ಯಾವ ವೃತ್ತಿಯನ್ನವಲಂಬಿಸಿ ಸಂಚರಿಸಿದಿರಿ? ನೋಡಿದ ತೀರ್ಥಕ್ಷೇತ್ರಮಹಿಮೆಗಳನ್ನು ನಮಗೆ ಹೇಳಿರಿ!

ಗದಾಧರನಾದ ಶ್ರೀಪರಮಾತ್ಮನ ಪಾದಾರವಿಂದಗಳಲ್ಲಿ ಅನವರತ ಭಕ್ತಿಯೋಗ ವುಳ್ಳ ನೀವು ನಿರಂತರ ಪರಿಶುದ್ಧರಾದುದರಿಂದ, ನೀವು ತೀರ್ಥಗಳಲ್ಲಿ ಸ್ನಾನಾದಿಗಳನ್ನು ಮಾಡುವುದರಿಂದ, ಆ ತೀರ್ಥಗಳು ಪವಿತ್ರವಾಗುತ್ತವೆ! ತಮ್ಮ ಸಂಚಾರಕಾಲದಲ್ಲಿ ಯಾದವರ ಪಟ್ಟಣದ ಕಡೆಗೆ ಹೋಗಿ, ನಮ್ಮ ಪ್ರಿಯಬಂಧುಗಳಾದ ಯಾದವರನ್ನೂ, ಶ್ರೀಕೃಷ್ಣನನ್ನೂ ನೋಡಿದ್ದಿರಾ? ಅವರೆಲ್ಲಾ ಕ್ಷೇಮವಾಗಿರುವರೆ? ಈ ಎಲ್ಲಾ ವಿಚಾರಗಳನ್ನೂ ತಿಳಿಸಿರಿ! ಎಂದು ಪ್ರಾರ್ಥಿಸಿದನು.

ನಂತರ ವಿದುರನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ವಿಹಿತ ಉತ್ತರಗಳನ್ನು ಕೊಟ್ಟು, ತಾನು ಉದ್ಧವನಿಂದ ತಿಳಿದ ಯಾದವಕುಲ ನಾಶ ವಿಚಾರವನ್ನು ಮಾತ್ರ ಹೇಳದೇ ಸುಮ್ಮನಾದನು. ಏಕೆಂದರೆ ಆ ಸುದ್ದಿಯನ್ನು ಧರ್ಮರಾಜಾದಿಗಳಿಗೆ ಹೇಳಿದರೆ ಅವರಿಗುಂಟಾಗುವ ದುಃಖವನ್ನು ನೋಡಿ ಸಹಿಸಲಾರದವನಾಗಿದ್ದನು. ಆದುದರಿಂದ ಅಪ್ರಿಯವಾರ್ತೆಯನ್ನು ಹೇಳಲಿಲ್ಲ. ಭಗವತ್ಸಂಕಲ್ಪದಿಂದ ಜನರಿಗೆ ದುಷ್ಕಾಲವೂ ಮೃತ್ಯುವೂ ಸನ್ನಿಹಿತವಾದರೆ ಅದು ಸ್ವಯಂ ಜಾಗ್ರತೆಯಾಗಿ ತಾನೇ ಪ್ರಾಪ್ತವಾಗುವುದರಿಂದ, ತಿಳಿದವರು ಕರುಣೆಯಿಂದ ಮುಂಚಿತವಾಗಿ ಹೇಳುವುದಿಲ್ಲ.

## ವಿದುರರಿಂದ ಧೃತರಾಷ್ಟ್ರನಿಗೆ ಹಿತೋಪದೇಶ

ಅದರಂತೆ, ವಿದುರನು ಸ್ವಲ್ಪ ದಿನಗಳು ಧರ್ಮಾದಿಗಳ ಆದರೋಪಚಾರಗಳನ್ನು ಸ್ವೀಕರಿಸಿದವನಾಗಿ, ನಂತರ ತನ್ನ ಅಣ್ಣನಾದ ಧೃತರಾಷ್ಟ್ರನಿಗೆ ಜ್ಞಾನೋಪದೇಶದಿಂದ ವೈರಾಗ್ಯ ಹುಟ್ಟುವಂತೆ ಮಾಡಿ, ಆಪತ್ಕಾಲಕ್ಕೆ ಮುಂಚೆಯೇ ಎಚ್ಚೆತ್ತು ಸಾಧನೆ ಮಾಡಿಕೊಳ್ಳಲೆಂಬ ಉದ್ದೇಶ್ಯದಿಂದ, ಧೃತರಾಷ್ಟ್ರನನ್ನು ಒಂದು ದಿನ ರಾತ್ರೆ ಸಮೀಪಿಸಿ ಈ ರೀತಿ ಹೇಳಿದನು ಎಲೈ! ಅಣ್ಣನೇ! ನೀನು ಪತ್ನಿಸಮೇತನಾಗಿ ಈ ರಾತ್ರೆಯೇ ಮನೆಯನ್ನು ಬಿಟ್ಟು ಯಾರಿಗೂ ಹೇಳದೆ ಅರಣ್ಯಕ್ಕೆ ಹೊರಡುವನಾಗು. ನಾನು ಜಗತ್ತಿಗೂ, ನಿನಗೂ ವಿನಾಶಕರವಾದ ಸೂಚನೆಯುಳ್ಳ ಭಯಂಕರ ದುಶ್ಶಕುನಗಳನ್ನು ಕಾಣುತ್ತಿದ್ದೇನೆ. ಕಾಲನಾಮಕನಾದ ಯಾವ ಶ್ರೀಕೃಷ್ಣನ ಕೃಪೆಯಿಂದ

## अथ द्वादशोऽध्यायः

ಇದುವರೆವಿಗೆ ನೀವು ಕೇವಲ ಗೃಹಪೋಷಣೆ, ದೇಹಪೋಷಣೆ, ಧನಾರ್ಜನೆ ಮುಂತಾದ ದುಷ್ಟವ್ಯಾಪಾರಗಳಿಲ್ಲಿಯೇ ನಿರತರಾಗಿ, ಪರಮಾತ್ಮನನ್ನು ಮರೆತಿದ್ದಿರೋ ಅಂತ: ಕಾಲನಾಮಕನು ಯಾದವಕುಲವನ್ನು ನಾಶಮಾಡಿ ಈ ಭೂಮಂಡಲವನ್ನು ಬಿಡಲು ನಿರ್ಧರಿಸಿರುವನು.

### ಶ್ರೀಕೃಷ್ಣರಹಿತವಾದ ಈ ಪ್ರಪಂಚಕ್ಕೆ ಇನ್ನು ಕ್ಷೇಮವಿಲ್ಲ.

ನಿನಗೆ ಪ್ರಿಯರಾದ ಪಾಂಡವರೂ ಉಳಿದ ಬಂಧುಗಳೂ ಸಹ ಶೀಘ್ರದಲ್ಲಿಯೇ ದೇಹಗಳನ್ನು ಬಿಡುವವರಾಗಿದ್ದಾರೆ! ಆದರೂ ಸಕಲ ಪುತ್ರಮಿತ್ರಬಾಂಧವರನ್ನು ಕಳೆದುಕೊಂಡ ನಿನಗೆ, ಯಾವ ಪಾಂಡವರನ್ನು ನೀನು ಅರಗಿನಮನೆಯಲ್ಲಿ ಸುಡಲು ಹಿಂಜರಿಯಲಿಲ್ಲವೋ! ಯಾವ ಭೀಮನನ್ನು ವಿಷಹಾಕಿ ಕೊಲ್ಲಲು ಪ್ರಯತ್ನಿಸಿದೆಯೋ, ಅಂತಹ ಬೀಮಸೇನನು ಅಸಹನೆಯಿಂದ ಎಡಗೈಯಿಂದ ಹಾಕುವ ಪಿಂಡಪ್ರಾಯ ಅನ್ನವನ್ನು ತಿಂದುಕೊಂಡು ನಿನಗೆ ಇನ್ನೂ ಜೀವಿಸಿರಬೇಕೆಂಬ ಆಶೆ ಇರುವುದು ಪರಮಾಶ್ಚರ್ಯವಾಗಿದೆ. ಯಾರಿಗೆ ಸಲ್ಲಬೇಕಾಗಿದ್ದ ಧನರಾಜ್ಯಗಳನ್ನೂ ನಿರ್ಘೃಣನಾಗಿ ಕಿತ್ತುಕೊಂಡು ಪಾಂಡವರನ್ನು ನೀನು ಅರಣ್ಯಕ್ಕಟ್ಟಿ ನಿನ್ನ ದುಷ್ಟಮಕ್ಕಳೊಂದಿಗೆ ಸುಖಪಡುತ್ತಿದ್ದೆಯೋ, ಅಂತ: ಪಾಂಡವರ ಮನೆಯನ್ನೇ ನೀನು ಈಗ ಸೇರಿಕೊಂಡು, ಅವರು ಕೊಡತಕ್ಕ ಅನ್ನ ತಿಂದು ಜೀವಿಸಲು ಇನ್ನೂ ನಾಚಿಕೆಯಾಗಿಲ್ಲವೆ? ಲೋಕದಲ್ಲಿ ಧೈರ್ಯಶಾಲಿಗಳು ಅಂತ್ಯಕಾಲದಲ್ಲಾದರೂ ಸರ್ವಸಂಗಪರಿತ್ಯಾಗ ಮಾಡಿ, ವನವನ್ನಾಶ್ರಯಿಸಿ ಪರಮಾತ್ಮನಿಷ್ಠರಾಗುವರು. ಈಗಲಾದರೂ ನೀನೂ ನಿನ್ನ ಮುಂದಿನ ಸದ್ಗತಿಗಾಗಿ ಆ ಮಾರ್ಗವನ್ನು ಹಿಡಿದು ಉದ್ಧೃತನಾಗು ಎಂದನು. ಈ ಮಾತುಗಳನ್ನು ಕೇಳಿದ ಕುರುಡನಾದ ಧೃತರಾಷ್ಟ್ರನಿಗೆ, ಅಂತ:ಚಕ್ಷುಗಳು ತೆರೆದವು. ವಿದುರನ ಮಾತುಗಳಿಂದ ಉಂಟಾದ ವೈರಾಗ್ಯದಿಂದ, ಪತ್ನೀಸಮೇತನಾಗಿ ಆ ರಾತ್ರಿಯೇ ಅರಮನೆಯನ್ನು ಬಿಟ್ಟು ಉತ್ತರಾಭಿಮುಖವಾಗಿ ಹಿಮವತ್ಪರ್ವತಕ್ಕೆ ಹೊರಟುಹೋದನು. ವಿದುರನೂ ಸಹ ಅವರ ಜೊತೆಯಲ್ಲಿಯೇ ಹೊರಟುಹೋದನು.

### ಧರ್ಮರಾಜರಿಗೆ ನಾರದರಿಂದ ಉಪದೇಶ

ಪ್ರಾತ:ಕಾಲದಲ್ಲಿ ಧರ್ಮರಾಯನು ಪ್ರಾತರಾಹ್ನೀಕಗಳನ್ನು ಮುಗಿಸಿ, ಗೋಬ್ರಾಹ್ಮಣರುಗಳ ಸೇವೆ, ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಿ, ಗುರುಗಳೂ ತಾಯಿತಂದೆಗಳೂ ಆದ ಧೃತರಾಷ್ಟ, ಗಾಂಧಾರೀ, ವಿದುರರಿಗೆ ನಮಸ್ಕಾರಮಾಡಲು ಬಂದಾಗ ಒಬ್ಬರನ್ನೂ ಕಾಣದೇ, ಬಹುದು:ಖಿತನಾಗಿ ಅಲ್ಲಿಯೇ ಇದ್ದ ಸಂಜಯನನ್ನು ಕಂಡು, ಎಲೈ! ಸಂಜಯನೇ! ವೃದ್ಧರು,

ನೇತ್ರವಿಹೀನರೂ ಆದ ನಮ್ಮ ತಂದೆಯಾದ ಧೃತರಾಷ್ಟ್ರನೂ, ತಾಯಿಯಾದ ಗಾಂಧಾರಿಯೂ, ನಮ್ಮ ಚಿಕ್ಕಪ್ಪ ನಾದ ವಿದುರನೂ ಎಲ್ಲಿ ಹೋದರು? ಪುತ್ರಶೋಕದಿಂದ ಗಂಗಾನದಿಯಲ್ಲೇನಾದರೂ ಬಿದ್ದು ಮೃತರಾದರೆ? ನನ್ನ ಅಜಾಗರೂಕತೆಯಿಂದ ಹೀಗಾಗಿದೆಯಲ್ಲಾ! ಅವರ ವಿಷಯ ನಿನಗೆ ತಿಳಿದದ್ದು ಹೇಳು ಎಂದನು.

ಸಂಜಯನೂ ಧೃತರಾಷ್ಟ್ರಗಾಂಧಾರಿಯರ ವಿಯೋಗದಿಂದ ದು:ಖಿತನಾಗಿ, ಕಣ್ಣೀರುಗಳನ್ನು ವರೆಸಿಕೊಳ್ಳುತ್ತಾ, ಸ್ವಲ್ಪಕಾಲಾನಂತರ ಯುಧಿಷ್ಠಿರನಿಗೆ ಧೃತರಾಷ್ಟ್ರನೂ ಗಾಂಧಾರಿಯೂ ತನಗೂ ಕೂಡ ತಿಳಿಸದೇ ಹೋಗಿದ್ದಾರೆಂದೂ! ಅವರ ವಿಷಯ ಗೊತ್ತಿಲ್ಲವೆಂದೂ ತಿಳಿಸಿದನು. ಆ ಸಮಯಕ್ಕೆ ಮೂರು ತಂತಿಗಳುಳ್ಳ ವೀಣಾಧ್ವನಿ ಮಾಡುತ್ತಾ ದೇವರ್ಷಿಗಳಾದ ನಾರದರು ಇವರ ದೃಷ್ಟಿಗೆ ಗೋಚರರಾದರು. ಧರ್ಮರಾಯನು ನಾರದರಿಗೆ ಆದರೋಪಚಾರಗಳನ್ನು ಮಾಡಿ, ಶ್ರೇಷ್ಠವಾದ ಆಸನದಲ್ಲಿ ಕುಳ್ಳಿರಿಸಿ ನಂತರ ನಾರದರಲ್ಲಿ ಈ ರೀತಿ ವಿಜ್ಞಾಪಿಸಿಕೊಂಡನು.

ಪೂಜ್ಯರೇ! ನಮ್ಮ ತಂದೆತಾಯಿಗಳಾದ ಧೃತರಾಷ್ಟ್ರಗಾಂಧಾರೀದೇವಿಯರು ಎಲ್ಲಿಗೆ ಹೋಗಿರುವರು? ಅವರನ್ನು ಕಾಣದೆ ನಾನು ಬಹುದು:ಖಿತನಾಗಿದ್ದೇನೆ, ಎಂದನು. ನಾರದರು, ಎಲೈ! ಧರ್ಮರಾಯನೇ, ಪರಮಾತ್ಮನ ವಶವಾದ ಈ ಜಗತ್ತಿನಲ್ಲಿ ಭಗವದಿಚ್ಛೆಯಂತೆ ಕಾರ್ಯಗಳು ನಡೆಯುತ್ತೆಂದು ಭಾವಿಸಿ, ನೀನು ಯಾತಕ್ಕೂ ದು:ಖಿತನಾಗಬೇಡ. ಬಂಧುಜನರನ್ನು ದೇವರೇ ಒಟ್ಟುಗೂಡಿಸುವನು, ನಂತರ ತನ್ನ ಇಚ್ಛೆಯಂತೆ ವಿಯೋಗವನ್ನೂ ಮಾಡಿಸುವನು. ಹೇಗೆ ಮೂಗಿನದಾರದಿಂದ ದನಗಳು ಬದ್ಧವಾಗಿ ಮನುಷ್ಯರ ವಶವನ್ನು ಹೊಂದುವವೋ, ಆದರಂತೆ ವೇದಗಳೆಂಬ ಪರಮಾತ್ಮನ ಮಾತುಗಳೆಂಬ ಹಗ್ಗಗಳಿಂದ ನಾವು ಕಟ್ಟಲ್ಪಟ್ಟವರಾಗಿ, ಅವನ ಇಚ್ಛೆಯಂತೆ ಸರ್ವಕರ್ಮಗಳನ್ನೂ ಮಾಡಿ, ಯಜ್ಞತ್ವೇನ ದೇವರಿಗೆ ಸಮರ್ಪಿಸುತ್ತೇವೆ!

ಆಟಕ್ಕಾಗಿ ಹುಡುಗರು ಗುಂಪುಕೂಡಿ ಆಟಮುಗಿದ ಮೇಲೆ ಹೇಗೆ ಅವರು ನಿಶ್ಚಿಂತೆಯಿಂದ ಬೇರೆಬೇರೆ ಹೊರಟುಹೋಗುತ್ತಾರೆಯೋ, ಹಾಗೆಯೇ ಈ ಸಂಸಾರದಲ್ಲೂ ಜನರು ಸೇರುತ್ತಾರೆ, ಹೊರಟುಹೋಗುತ್ತಾರೆ. ಈ ಪ್ರಪಂಚವನ್ನು ಶಾಶ್ವತವಾದದ್ದನ್ನಾಗಲೀ, ಅಶಾಶ್ವತವೆಂದಾಗಲೀ ನೀನು ಭಾವಿಸಿದಾಗ್ಯೂ, ಬಂಧುಮಿತ್ರಾದಿಗಳಲ್ಲಿ ಸ್ನೇಹಪಾಶವೆಂಬ ಮೋಹಕ್ಕೊಳಗಾಗಿ ನೀನು ಸರ್ವಥಾ ದು:ಖಪಡಬಾರದು.

ಅಜ್ಞಾನವೇ ದು:ಖಕ್ಕೆ ಕಾರಣವು. ಕಾಡಿನಲ್ಲಿರುವ ಪ್ರಾಣಿಗಳಿಗೆ ರಕ್ಷಕರ್ಯಾರು? ಅವುಗಳು

ಉತ್ತಮರೀತಿಯಲ್ಲಿ ಜೀವಿಸಿಲ್ಲವೆ? ಪಶ್ವಾದಿಗಳು ತೃಣಾದಿಗಳನ್ನು ತಿಂದೂ, ಮೃಗಗಳು ಇತರಪ್ರಾಣಿಗಳನ್ನು ತಿಂದೂ, ಮನುಷ್ಯರು ಎಲ್ಲಾ ಆಹಾರಗಳನ್ನು ತಿಂದೂ, ರಾಕ್ಷಸರು ಮನುಷ್ಯರನ್ನು ತಿಂದೂ, ಒಂದು ಪ್ರಾಣಿಯು ಇನ್ನೊಂದು ಪ್ರಾಣಿಯನ್ನು ತಿಂದು ಉಪಜೀವಿಸುತ್ತಿಲ್ಲವೆ? ಲೋಕದಲ್ಲಿ ಪರಮಾತ್ಮನೊಬ್ಬನೇ ಸ್ವತಂತ್ರನು. ಅವನೇ ಸರ್ವಾಂತರ್ಯಾಮಿಯಾಗಿದ್ದು ಸಕಲರ ಯೋಗಕ್ಷೇಮಗಳನ್ನೂ ನೋಡತಕ್ಕವನು. ಅಂತ: ಪರಮಾತ್ಮನು ಯಾವ ಶ್ರೀಕೃಷ್ಣರೂಪದಿಂದವತರಿಸಿ, ದುಷ್ಟಸಂಹಾರ ಕಾರ್ಯವನ್ನು ಈಗ ಮುಗಿಸಿರುವನೋ, ಆತನು ಇಷ್ಟರಲ್ಲೇ ಈ ಭೂಲೋಕದಿಂದ ಹೊರಡಲು ಉದ್ಯುಕ್ತನಾಗಿರುತ್ತಾನೆ.

ಶ್ರೀಕೃಷ್ಣನು ಭೂಲೋಕವನ್ನು ಬಿಟ್ಟ ಮೇಲೆ ಲೋಕಕ್ಕೆ ಮಂಗಳವಿಲ್ಲ. ಆದುದರಿಂದ ಅಂತ: ಕಾಲವು ಪ್ರಾಪ್ತವಾಗುವುದಕ್ಕೆ ಮುಂಚೆಯೇ ನೀವುಗಳೂ ಸರ್ವಸಂಗ ಪರಿತ್ಯಾಗ ಮಾಡಿ ಅಂ ತ್ಯಕಾಲಾನ್ವೀಕ್ಷಣಮುಖರಾಗತಕ್ಕದ್ದು. ನಿನ್ನ ತಾಯಿತಂದೆಗಳಾದ ಗಾಂಧಾರೀ ಧೃತರಾಷ್ಟ್ರರು ಹಿಮವಪರ್ವತದ ದಕ್ಷಿಣಭಾಗದಲ್ಲಿ ಗಂಗೆಯು ಏಳು ಮುಖಗಳಿಂದ ಹರಿದು ಬೀಳುತ್ತಿರುವ, ಅತಿ ನಿರ್ಮಲವಾದ ಋಷಿಗಳ ಆಶ್ರಮದಲ್ಲಿರುತ್ತಾರೆ. ಅವರು ದಿನವೂ ಮೂರು ಬಾರಿ ಗಂಗಾಸ್ನಾನ, ಅಗ್ನಿಹೋತ್ರ, ಜಪ, ಧ್ಯಾನಾದಿಗಳನ್ನು ಮಾಡುವರಾಗಿ, ನಿಯಮಿತ ಆಹಾರ, ಇಂದ್ರಿಯನಿಗ್ರಹ ವುಳ್ಳವರಾಗಿ, ಭಗವಧ್ಯಾನಮಾಡುತ್ತಾ, ಸ್ಥಾಣುವಿನಂತೆ ನಿಶ್ಚೇಷ್ಟರಾಗಿರುತ್ತಾರೆ. ಇಂದಿಗೆ ಐದು ದಿನಗಳ ನಂತರ ಅವರು ದೇಹತ್ಯಾಗ ಮಾಡುವರು. ನಂತರ ಅವರ ದೇಹಗಳು ಭಸ್ಮೀಭೂತವಾಗುವವು. ವಿದುರನೂ ಕೂಡ, ಇವರ ಯೋಗಗತಿಯನ್ನು ನೋಡಿ ಆಶ್ಚರ್ಯ ವ್ಯಸನಾದಿಗಳಿಂದ ಕೂಡಿದವನಾಗಿ, ವಿರಕ್ತ ಭಾವದಿಂದ ತೀರ್ಥಾಟನೆಗಳನ್ನು ಮಾಡುತ್ತಾ ವನದಲ್ಲಿಯೇ ವಾಸಿಸುವನು ಎಂದು ಹೇಳಿ ನಾರದರು ತುಂಬುರರ ಸಹಿತರಾಗಿ ಸ್ವರ್ಗಲೋಕಕ್ಕೆ ಪ್ರಯಾಣಮಾಡಿದರು. ನಂತರ ಯುಧಿಷ್ಠಿರನು ದು:ಖವನ್ನು ಬಿಟ್ಟು ಮುಂದಿನ ಕಾರ್ಯಗಳೇನು ಮಾಡಬೇಕೆಂದು ಯೋಚಿಸುವನಾದನು.

**ಇತಿ ಶ್ರೀಮದ್ಭಾಗವತ ಮಹಾಪುರಾಣದ ಪ್ರಥಮಸ್ಕಂಧದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿಯಿತು.**

## अथ त्रयोदशोऽध्यायः

**सूत उवाच**

## अथ त्रयोदशोऽध्यायः

सम्प्रस्थिते द्वारकायां जिष्णौ बन्धुदिदृक्षया।
ज्ञातुं मायामनुष्यस्य वासुदेवस्य चेहितम्॥ १ ॥

व्यतीताः कतिचिन्मासास्तदा तु शतशो नृपः।
ददर्श घोररूपाणि निमित्तानि भृगूद्वह॥ २ ॥

कालस्य च गतिं रौद्रां विपर्यस्तर्तुधर्मिणः।
पापीयसीं नृणां वार्तां क्रोधलोभानृतात्मनाम्॥ ३ ॥

जिह्मप्रायं व्यवहृतं साध्यमिश्रञ्च सौहृदम्।
पितृमातृसुहृद्भ्रातृदम्पतीनाऽञ्च कल्किताम्॥ ४ ॥

निमित्तान्यप्यरिष्टानि काले त्वनुगते नृणाम्।
लोभाद्यधर्मप्रकृतिं दृष्ट्वोवाचानुजं नृपः ॥ ५ ॥

**युधिष्ठिर उवाच**

सम्प्रेषिते द्वारकायां जिष्णौ बन्धुदिदृक्षया।
ज्ञातुञ्च पुण्यश्लोकस्य कृष्णस्य च विचेष्टितम्॥ ६ ॥

गताः सप्ताधुना मासा भीमसेन तवानुजः।
नायाति कस्य वा हेतोर्नाहं वेदेदमञ्जसा॥ ७ ॥

अपि देवर्षिणाऽऽदिष्टः स कालः प्रत्युपस्थितः।
यदाऽऽत्मनोऽङ्गमाक्रीडं भगवानुत्सिसृक्षति॥ ८ ॥

येषां नः सम्पदो राज्यं दाराः प्राणाः कुलं प्रजाः।
आसन् सपत्नविजयो लोकाश्च यदनुग्रहात्॥ ९ ॥

पश्योत्पातान्नरव्याघ्र भौमान् दिव्यान् सदैहिकान्।
घोरमाशंसतोऽदूराद्भयं नो बुद्धिमोहनम्॥ १० ॥

ऊर्वक्षिबाहवो मह्यं स्फुरन्त्यङ्ग पुनः पुनः।
वेपथुश्चापि हृदये आराद्दास्यन्ति विप्रियम्॥ ११ ॥

शिवैषोद्यन्तमरुणमभिरौत्यनलानना।
मामङ्ग सारमेयोऽयमभिधावत्यभीतवत्॥ १२ ॥

## अथ त्रयोदशोऽध्यायः

शस्ताः कुर्वन्ति मां सव्यं दक्षिणं पशवोऽपरे।
वाहांश्च पुरुषव्याघ्र लक्षते रुदतो मम॥ १३ ॥

मृत्युदूतः कपोतोऽग्नावुलूकः कम्पयन्मनः।
प्रत्युलूकश्च हुङ्कारैरनिद्रौ शून्यमिच्छतः ॥ १४ ॥

धूम्रा दिशः परिधयः कम्पते कुः सहाद्रिभिः।
निर्घातश्च महांस्तात साकञ्च स्तनयित्नुभिः ॥ १५ ॥

वायुर्वाति खरस्पर्शो रजसा विसृजंस्तमः।
असृग्वर्षन्ति जलदाः बीभत्समिव सर्वतः ॥ १६ ॥

सूर्यं हतप्रभं पश्य ग्रहमर्दं मिथो दिवि।
ससङ्कुले तु भगणे ज्वलिते इव रोदसी॥ १७ ॥

नद्यो नदाश्च क्षुभिताः सरांसि च मनांसि च।
न ज्वलत्यग्निराज्येन कालोऽयं किं विधास्यति॥ १८ ॥

न पिबन्ति स्तनं वत्साः न दुह्यन्ति च मातरः।
रुदन्त्यश्रुमुखा गावो न हृष्यन्त्यृषभा व्रजे।
दैवतानि रुदन्तीव स्विद्यन्ति ह्युच्चलन्ति च॥ १९ ॥

इमे जनपदाः ग्रामाः पुरोद्यानकराश्रमाः।
भ्रष्टश्रियो निरानन्दाः किमघं दर्शयन्ति नः ॥ २० ॥

मन्य एतैर्महोत्पातैर्नूनं भगवतः पदैः।
अनन्यपुरुषस्त्रीभिर्हीना भूर्हतसौभगा॥ २१ ॥

इति चिन्तयतस्तस्य दृष्टारिष्टेन चेतसा।
राज्ञः प्रत्यागमद्ब्रह्मन्यदुपुर्याः कपिध्वजः ॥ २२ ॥

तं पादयोर्निपतितमयथापूर्वमातुरम्।
अधोवदनमब्बिन्दून्मुञ्चन्तं नयनाब्जयोः ॥ २३ ॥
विलोक्योद्विग्नहृदयो विच्छायमनुजं नृप।

पृच्छति स्म सुहृन्मध्ये संस्मरन्नारदेरितम् ॥ २४ ॥

**युधिष्ठिर उवाच**

कच्चिदानर्तपुर्यां नः स्वजनाः सुखमासते ।
मधुभोजदशार्हार्हसात्वतान्धकवृष्णयः ॥ २५ ॥

शूरो मातामहः कच्चित्स्वस्त्यास्ते चाथ मारिषः ।
मातुलः सानुजः कच्चित्कुशल्यानकदुन्दुभिः ॥ २६ ॥

सप्तस्वसारः तत्पत्न्यो मातुलान्यः सहात्मजाः ।
आसते सस्नुषा क्षेमं देवकीप्रमुखा स्त्रियः ॥ २७ ॥

कच्चिद्राजाऽऽहुको जीवत्यसत्पुत्रोऽस्य चानुजः ।
हृदीकः ससुतोऽक्रूरो जयन्तगदसारणाः ॥ २८ ॥

आसते कुशलं कच्चिद्ये च शत्रजिदादयः ।
कच्चिदास्ते सुखं रामो भगवान्सात्वतां पतिः ॥ २९ ॥

प्रद्युम्नः सर्ववृष्णीनां सुखमास्ते महारथः ।
गम्भीररयोऽनिरुद्धो वर्तते भगवानुत ॥ ३० ॥

सुषेणश्चारुदेष्णश्च साम्बो जाम्बवतीसुतः ।
अन्ये च कार्ष्णिप्रवराः सपुत्राः ऋषभादयः ॥ ३१ ॥

तथैवानुचराः शौरेः श्रुतसेनोद्धवादयः ।
सुनन्दनन्दशीर्षण्या ये चान्ये सात्वतर्षभाः ॥ ३२ ॥

अपि स्वस्त्यासते सर्वे रामकृष्णभुजाश्रयाः ।
अपि स्मरन्ति कुशलमस्माकं बद्धसौहृदाः ॥ ३३ ॥

भगवानपि गोविन्दो ब्रह्मण्यो भक्तवत्सलः ।
कच्चित्पुरे सुधर्मायां सुखमास्ते सुहृद्वृतः ॥ ३४ ॥

मङ्गलाय च लोकानां क्षेमाय च भवाय च ।
आस्ते यदुकुलाम्भोधावाद्योऽनन्तसखः पुमान् ॥ ३५ ॥

यद्बाहुदण्डैर्गुप्तायां स्वपुर्यां यदवोऽर्चिताः ।
क्रीडन्ति परमानन्दं महापौरुषिका इव ॥ ३६ ॥

यत्पादशुश्रूषणमुख्यकर्मणा सत्यादयो व्द्यष्टसहस्रयोषितः ।
निर्जित्य सङ्ख्ये त्रिदशांस्तदाशिषो हरन्ति वज्रायुधवल्लभोचिताः ॥ ३७ ॥

यद्बाहुदण्डाभ्युदयानुजीविनो यदुप्रवीराः ह्यकुतोभयाः मुहुः ।
अधिक्रमन्त्यङ्घ्रिभिराहतां बलात् सभां सुधर्मां सुरसत्तमोचिताम् ॥ ३८ ॥

कच्चित्तेऽनामयं तात भ्रष्टतेजा विभासि मे ।
अलब्धमानोऽवज्ञातः किं वा तात चिरोषितः ॥ ३९ ॥

कच्चिन्नाभिहतो भावैः शब्दादिभिरमङ्गलैः ।
न दत्तं युक्तमर्थिभ्यः आशया यत्प्रतिश्रुतम् ॥ ४० ॥

कच्चित्त्वं ब्राह्मणं बालं गां वृद्धं रोगिणं स्त्रियम् ।
शरण्योपसृतं सत्वं नात्याक्षीः शरणप्रदः ॥ ४१ ॥

कच्चित्त्वं नागमोऽगम्यां गम्यां वाऽसत्कृतां स्त्रियम् ।
पराजितो वाऽथ भवान्नोत्तमैर्नाधमैः पथि ॥ ४२ ॥

अपिस्वित्पर्यभुथास्त्वं सम्भोज्या(न्)वृद्धबालकान् ।
जुगुप्सितं कर्म किञ्चित्कृतवानसदक्षमम् ॥ ४३ ॥

कच्चित्प्रेष्ठतमेनाथ हृदयेनात्मबन्धुना ।
शून्योऽसि रहितो नित्यं मन्यसे तेऽन्यथा हि रुक् ॥ ४४ ॥

**॥ इति श्रीमद्भागवते प्रथमस्कन्धे त्रयोदशोऽध्यायः ॥**

## ॥ ಹದಿಮೂರನೆಯ ಅಧ್ಯಾಯ ॥

### ಧರ್ಮರಾಜರ ಶೋಕ ಚಿಂತನೆ

ಈ ಅಧ್ಯಾಯದಲ್ಲಿ ಸಂಸಾರಿಗಳಿಗೆ ದುಶ್ಶಕುನಾದಿಗಳುಂಟಾಗಿ ಮುಂದೆ ಪ್ರಾಪ್ತವಾಗುವ ಸುಖ ದುಃಖ, ವಿನಾಶಾದಿಗಳು ಸೂಚಿಸುತ್ತಿರಲಾಗಿ, ಆ ಕಾಲದಲ್ಲಿ ಜೀವನದ ಅಸ್ಥಿರತೆಯನ್ನು

## अथ त्रयोदशोऽध्यायः

ಸಂಸಾರಿಗಳು ತಿಳಿದು, ಪ್ರಾಪ್ತವಾದ ಸಂಸಾರ ಕ್ಲೇಶಗಳ ವರ್ಣನೆಯಿಂದುಂಟಾದ ವೈರಾಗ್ಯದಿಂದ, ಶ್ರೀಪರಮಾತ್ಮನಲ್ಲಿ ಭಕ್ತ್ಯಾತಿಶಯವು ಪ್ರಾಪ್ತವಾಗುತ್ತೆಂದು ನಿರೂಪಿಸಲ್ಪಡುತ್ತದೆ. ನಾರದರು ಮುಂದೆ ಉಂಟಾಗತಕ್ಕ ಅನಿಷ್ಠಗಳನ್ನು ಸೂಚಿಸಿ ಹೊರಟುಹೋದ ನಂತರ ಧರ್ಮರಾಯನು, ಮನಸ್ಸಿನ ದುಃಖವನ್ನು ಬಿಟ್ಟು ಕೆಲವು ಕಾಲ ಸುಖವಾಗಿ ರಾಜ್ಯಪರಿಪಾಲನೆಯನ್ನು ಮಾಡಿಕೊಂಡಿದ್ದನು. ನಂತರ ಯಾದವರ ಮತ್ತು ಶ್ರೀಕೃಷ್ಣನ ಯೋಗಕ್ಷೇಮವನ್ನು ತಿಳಿಯಲಪೇಕ್ಷಿಸಿ, ಅರ್ಜುನನನ್ನು ದ್ವಾರಕಾಪಟ್ಟಣಕ್ಕೆ ಹೋಗಿ ನೋಡಿಕೊಂಡು ಬರುವುದೆಂದು ಹೇಳಿ ಕಳುಹಿಸಿಕೊಟ್ಟನು. ಆಮೇಲೆ ಕೆಲವು ದಿನಗಳಾದರೂ ಅರ್ಜುನನು ವಾಪಸು ಬರಲಿಲ್ಲ. ಆ ಸಮಯದಲ್ಲಿ ಅನೇಕ ದುಶ್ಶಕುನಗಳು ಧರ್ಮರಾಯನ ದೃಷ್ಟಿಗೆ ಬೀಳುವುಗಳಾದವು. ದುಶ್ಶಕುನ ಪರಂಪರೆಗಳುಂಟಾಗ ುತ್ತಿದ್ದುದನ್ನು ನೋಡಿ, ಧರ್ಮರಾಜನು ಭೀಮನನ್ನು ಕರೆದು ಈ ರೀತಿ ಹೇಳಿದನು

ಎಲೈ! ಭೀಮಸೇನನೆ! ನಿನ್ನ ತಮ್ಮನಾದ ಅರ್ಜುನನನ್ನು ದ್ವಾರಕಾಪಟ್ಟಣಕ್ಕೆ ಹೋಗಿ ಶ್ರೀಕೃಷ್ಣ ಮುಂತಾದವರ ಕ್ಷೇಮ ಸಮಾಚಾರ ತಿಳಿದು ಬಾ ಎಂದು ಕಳುಹಿಸಿ ಅನೇಕ ತಿಂಗಳುಗಳಾದರೂ, ಅರ್ಜುನನೂ ಇನ್ನೂ ವಾಪಸು ಬರಲಿಲ್ಲ. ಕಾರಣವೇನೋ ತಿಳಿಯದು. ದೇವರ್ಷಿಗಳಾದ ನಾರದರು ಸೂಚಿಸಿದ ದುಷ್ಕಾಲವೇನಾದರೂ ಪ್ರಾಪ್ತವಾಗಿದೆಯೋ ಏನೋ! ಯಾವ ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಕೃಷ್ಣನ ಕೃಪೆಯಿಂದ ನಮ್ಮಗಳಿಗೆ ಐಶ್ವರ್ಯವೂ, ರಾಜ್ಯವೂ, ಪತ್ನೀಪುತ್ರಾದಿಗಳೂ, ಪ್ರಾಣಗಳೂ, ನಮ್ಮ ಕುಲವೂ, ಪ್ರಜೆಗಳೂ, ಅನುಕೂಲರಾಗಿಯೂ, ಸುಖಪ್ರದರಾಗಿಯೂ, ತಾವು ಸುಖಿಗಳಾಗಿಯೂ ಇದ್ದರೋ, ಅಂತಹ ಶ್ರೀಕೃಷ್ಣನು ಈಗ ಯಾದವಕುಲನಾಶ ಮಾಡಿ ತನ್ನ ಸ್ವಧಾಮಕ್ಕೆ ಹಿಂತಿರುಗಲು ಸಿದ್ಧನಾಗಿರುವಂತೆ ತೋರುತ್ತದೆ! ಏಕೆಂದರೆ ನಮ್ಮ ಮನೆಯಲ್ಲೂ, ಪಟ್ಟಣದಲ್ಲೂ, ರಾಜ್ಯದಲ್ಲೂ ಸಹ ಅಲ್ಲಲ್ಲಿ ಬಂಧುಮಿತ್ರರೇ ಅಂತಃಕಲಹಗಳನ್ನು ಮಾಡುವವರಾಗಿರುತ್ತಾರೆ. ಸುಳ್ಳೂ, ದಂಭವೂ, ಅಸಹನೆಯು, ಲೋಭವೂ ತಲೆಯೆತ್ತಿ ಎಲ್ಲೆಲ್ಲೂ ಕಾಣುತ್ತಿವೆ. ಎಲೈ! ಪುರುಷಶ್ರೇಷ್ಠನಾದ ಭೀಮಸೇನನೇ, ಭೂಮಿಯಲ್ಲಿಯೂ, ದೇಹಗಳಲ್ಲಿಯೂ, ಆಕಾಶದಲ್ಲಿಯೂ ಆಗುತ್ತಿರುವ ಉತ್ಪಾತಗಳನ್ನು ನೋಡು.

ನಮಗೆ ಬುದ್ಧಿಮೋಹಕಗಳಾದ ಮಹಾವಿಪತ್ತುಗಳು ದೂರದಿಂದ ಬರುತ್ತಿರುವ ಹಾಗೆ ಕಾಣುತ್ತದೆ. ನನ್ನ ತೊಡೆಗಳೂ, ಕಣ್ಣುಗಳೂ, ಭುಜಗಳೂ ಬಾರಿ ಬಾರಿಗೆ ಅದುರುತ್ತಿವೆ. ನನ್ನ ಎದೆಯು ನಡುಗುತ್ತಾ ಏನೋ ಭಯಪ್ರಾಪ್ತಿಯಾಗುವುದೆಂದು ತಿಳಿಸುತ್ತಿದೆ. ಈಗ

ಉದಯಿಸುತ್ತಿರುವ ಸೂರ್ಯನ ಅರುಣಮಂಡಲವನ್ನು ಅಗ್ನಿಜ್ವಾಲೆಗಳಿಂದ ಅಗ್ನಿನೇತ್ರನಾದ ಶಿವನು ಮುಚ್ಚುತ್ತಿರುವಂತೆ ಕಾಣುತ್ತದೆ.

## ಧರ್ಮರಾಜರು ಕಂಡ ಅಪಶಕುನಗಳು

ಅರುಣಸೂರ್ಯನನ್ನು ನೋಡಿ ನರಿಗಳೂ, ನಾಯಿಗಳೂ ರೋಧನಧ್ವನಿಯನ್ನು ಮಾಡುತ್ತಿರುವುದರಿಂದ, ನಮಗೆ ಶೀಘ್ರದಲ್ಲಿ ಮರಣ ಪ್ರಾಪ್ತಿಯನ್ನು ಸೂಚಿಸುತ್ತಿವೆ. ಭಾರದ್ವಾಜಪಕ್ಷಿಯೂ, ಮೃಗಗಳೂ, ಪಶುಗಳೂ ನನ್ನನ್ನು ಪ್ರದಕ್ಷಿಣಾಕಾರವಾಗಿ ಸುತ್ತುತ್ತಿವೆ. ಅಶ್ವಾದಿಗಳು ಕಣ್ಣೀರು ಸುರಿಸುತ್ತಿದೆ. ಮರಣಸೂಚಕವಾದ, ಕಪೋತಪಕ್ಷಿಯು ಅಗ್ನಿಯಲ್ಲಿ ಕಾಲಿಡುವುದನ್ನು ನಾನು ಸ್ವಪ್ನದಲ್ಲಿ ಕಂಡೆನು. ಗೂಬೆಗಳೆರಡು ಧ್ವನಿ, ಪ್ರತಿಧ್ವನಿ ಮಾಡುತ್ತಾ ನನ್ನ ಮನಸ್ಸನ್ನು ಪರಿತಪಿಸುತ್ತಿವೆ. ದಿಕ್ಕುಗಳು ಕೆಂಧೂಳಿಯಿಂದ ತುಂಬಿ, ಭೂಮಿಯು ಪರ್ವತಸಹಿತ ನಡುಗುತ್ತಿರುವಂತೆ ತೋರುತ್ತಿದೆ. ಅಕಾಲದಲ್ಲಿ ಬಹು ಮೋಡಗಳುಂಟಾಗಿ ಆಕಾಶದಲ್ಲಿ ಘರ್ಜನೆಯುಂಟಾಗುತ್ತಿದೆ. ಪ್ರಚಂಡಗಾಳಿಯು ಭಯಸ್ಪರ್ಶವುಳ್ಳದ್ದಾಗಿ ಬೀಸುತ್ತಾ ಧೂಳಿನಿಂದ ದಿಕ್ಕುದಿಕ್ಕುಗಳನ್ನು ಕವಿಸಿ ಕತ್ತಲೆಯುಂಟುಮಾಡುತ್ತಿದೆ. ಮೇಘಗಳು ಭಯಂಕರವಾಗಿ ಎಲ್ಲೆಲ್ಲೂ ರಕ್ತದ ಮಳೆಯನ್ನು ಸುರಿಸುತ್ತಿವೆ.

ಸೂರ್ಯನು ಕಾಂತಿವಿಹೀನನಾಗಿ ಅರ್ಧಚಂದ್ರನಂತೆ ಕಾಣುತ್ತಿದ್ದಾನೆ. ಆಕಾಶದಲ್ಲಿ ನಕ್ಷತ್ರಗಳು ಹತ್ತಿಕೊಂಡು ಉರಿಯುವಂತೆ ಕಾಣುತ್ತವೆ. ನದನದಿಗಳು ಒಣಗಿ ಸರೋವರಗಳೂ, ನಮ್ಮ ಮನಸ್ಸುಗಳೂ ಸಹ ಶುಷ್ಕವಾಗುತ್ತಿವೆ. ಅಗ್ನಿಯಲ್ಲಿ ತುಪ್ಪ ದ ಧಾರೆಯಿಂದ ಹೋಮಿಸಿದರೆ ಅಗ್ನಿಯು ಪ್ರಜ್ವಲಿಸದೇ ತಣ್ಣಗಾಗುತ್ತಿದೆ. ಇದು ಏನು ವಿಪರೀತಕಾಲವಾಗಿದ್ದೀತು? ಕರುಗಳು ಹಾಲು ಕುಡಿಯುವುದಿಲ್ಲ. ಹಸುಗಳೂ ಹಾಲು ಕೊಡುವುದಿಲ್ಲ. ಗೋವುಗಳು ಕಣ್ಣೀರಿಡುತ್ತಿವೆ. ಎತ್ತುಗಳು ಉತ್ಸಾಹರಹಿತಗಳಾಗಿವೆ. ಆಕಾಶಗಾಮಿಗಳಾದ ದೇವತೆಗಳು ಏನೋ ವ್ಯಸನಪಡುತ್ತಿರುವಂತೆ ಕಾಣುತ್ತಾ ನಿಷ್ಕಾರಣವಾಗಿ ಅಲ್ಲಿಗಿಲ್ಲಿಗೆ ಸುತ್ತುತ್ತಿರುತ್ತಾರೆ? ಊರಿನಲ್ಲಿ ಜನಸಮೂಹವೂ, ಬೀದಿಗಳೂ, ಉದ್ಯಾನವಿಹಾರಸ್ಥಾನಗಳು ಸಂಪತ್ತುಗಳನ್ನು ಕಳೆದುಕೊಂಡು ಕಾಂತಿವಿಹೀನವಾಗಿ ಹಾಳುಹಾಳು ಸುರಿಯುತ್ತಿವೆ. ಇದರಿಂದ ಪರಮಪುರುಷನಾದ ಶ್ರೀಕೃಷ್ಣ, ಕೃಷ್ಣಪತ್ನಿಯರಿಂದ ಈ ಭೂಮಿಯು ಶೀಘ್ರದಲ್ಲಿಯೇ ವಿರಹ ವುಳ್ಳದ್ದಾಗುವುದೆಂದು ಭಾವಿಸುತ್ತೇನೆ. ಭೂಲೋಕವು ಅದರಿಂದಲೇ ಸಮಸ್ತ ಐಶ್ವರ್ಯಗಳಿಂದ ವಿಹೀನವಾಗುತ್ತಿದೆ ಎಂದು

ಹೇಳುತ್ತಿರುವಾಗ್ಯೆ, ದ್ವಾರಕಾ ಪಟ್ಟಣಕ್ಕೆ ಹೋಗಿದ್ದ ಕಪಿಧ್ವಜನಾದ ಅರ್ಜುನನು ಧರ್ಮರಾಯನ ಎದುರಿಗೆ ಬಂದು, ಮ್ಲಾನವದನನಾಗಿ ಕಣ್ಣೀರು ಸುರಿಸುತ್ತಾ, ಮೌನದಿಂದ ಧರ್ಮರಾಯನ ಪಾದಗಳಿಗೆ ನಮಸ್ಕರಿಸಿದನು.

## ದ್ವಾರಕೆಯಿಂದ ಹಿಂದಿರುಗಿದ ಅರ್ಜುನನಿಗೆ ಪ್ರಶ್ನೆಗಳ ಸುರಿಮಳೆ

ಈ ರೀತಿಯಾಗಿ ಅರ್ಜುನನ ನೆರಳೋ ಎಂಬಂತೆ ಕಾಂತಿವಿಹೀನನಾಗಿ ನಮಸ್ಕರಿಸುತ್ತಿರುವ ಅರ್ಜುನನನ್ನು ಈ ರೀತಿ ಪ್ರಶ್ನೆಗಳನ್ನು ಮಾಡಿದನು ಎಲೈ! ಅರ್ಜುನನೇ! ದ್ವಾರಕಾಪಟ್ಟಣದಲ್ಲಿ ನಮ್ಮ ಸ್ವಜನರು ಸುಖದಿಂದಿರುತ್ತಾರೆಯೇ? ಮಧು, ಭೋಜ, ದಶಾರ್ಹ, ಅರ್ಹ, ಸಾತ್ವತ, ಅಂಧಕ, ವೃಷ್ಣಿ ವಂಶದವರು ಕ್ಷೇಮವೇ? ನಮ್ಮ ತಾಯಿಯ ತಂದೆಯಾದ ಶೂರಸೇನ ರಾಜನೂ, ವಸುದೇವನೂ ಅವನ ಪತ್ನಿಯರೂ, ಏಳು ಜನ ಸೋದರಿಯರೂ, ಮಕ್ಕಳ ಸಹಿತರಾಗಿ ಕ್ಷೇಮದಿಂದಿರುವರೇ? ದೇವಕೀದೇವಿಯು ಸೊಸೆಯರೊಡನೆ ಕ್ಷೇಮದಿಂದಿರುವಳೇ? ಕಂಸನೆಂಬ ದುಷ್ಟಪುತ್ರನನ್ನು ಹೊಂದಿದ್ದ ಉಗ್ರಸೇನನೂ, ದೇವಕನೂ, ಅವನ ಪುತ್ರನಾದ ಕೃತವರ್ಮನೂ, ಅಕ್ರೂರನೂ, ಪತ್ನಿಪುತ್ರಾದಿಗಳಿಂದ ಸಹಿತರಾಗಿ ಕ್ಷೇಮವಾಗಿರುವರೇ?

ಶತೃಜಿತುವೂ ಬಲಶಾಲಿಯೂ ಸಜ್ಜನನೂ ಆದ ಬಲರಾಮನೂ ಕ್ಷೇಮವಾಗಿರುತ್ತಾರೆಯೆ? ಮಹಾರಥನಾದ ಪ್ರದ್ಯುಮ್ನನೂ, ಮಹಾವೇಗ ವುಳ್ಳ ರಥಿಕನೂ ಮಹಾಜ್ಞಾನಿಯೂ ಆದ ಅನಿರುದ್ಧನೂ ಕ್ಷೇಮವೇ? ಸುಷೇಣ, ಚಾರುದೇಷ್ಣ, ಜಾಂಬವತೀದೇವಿಯ ಮಗನಾದ ಸಾಂಬ, ಋಷಭ ಇವರುಗಳು ಪತ್ನೀಪುತ್ರ ಸಮೇತ ಚೆನ್ನಾಗಿರುವರೇ? ಶ್ರೀಕೃಷ್ಣನ ಅನುಚರರಾದ ಶೃತಸೇನ, ಉದ್ಧವ, ಸುನಂದ, ನಂದ, ಶೀರ್ಷಣ್ಯ ಮುಂತಾದವರು ಕ್ಷೇಮದಿಂದಿರುವರೇ? ಬಲರಾಮ ಶ್ರೀಕೃಷ್ಣರ ಭುಜಪರಾಕ್ರಮದ ಆಶ್ರಯದಿಂದ ಜೀವಿಸುತ್ತಿರುವ ಸರ್ವಪ್ರಜೆಗಳೂ ಕ್ಷೇಮವಾಗಿರುತ್ತಾರೆಯೇ? ಅವರೆಲ್ಲಾ ನಮ್ಮ ಕ್ಷೇಮವನ್ನು ಬಯಸುತ್ತಾ ನಮ್ಮನ್ನು ಜ್ಞಾಪಿಸಿಕೊಳ್ಳುತ್ತಿರುವರೇ? ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು, ಬ್ರಾಹ್ಮಣಪ್ರಿಯನು, ಬ್ರಹ್ಮಣ್ಯದೇವನು, ಕ್ಷೇಮದಿಂದಿರುವನೇ?

ಲೋಕಮಂಗಳಕ್ಕಾಗಿ ಯಾದವಕುಲವೆಂಬ ಸಮುದ್ರಕ್ಕೆ ಚಂದ್ರನೋಪದಿಯಲ್ಲಿರುವ ಶ್ರೀಕೃಷ್ಣನು, ಸಮಸ್ತರಿಗೂ ಶುಭವನ್ನೂ, ಸಂರಕ್ಷಣೆಯನ್ನೂ ಉಂಟುಮಾಡುತ್ತಾ, ಯಾದವರ ಮಧ್ಯದಲ್ಲಿ ಪ್ರಕಾಶಿಸುತ್ತಾ ಇರುವನೇ? ಅನಂತನೆಂಬ ಶೇಷಾಂಶ ಸಂಭೂತನಾದ ಬಲರಾಮನಿಗೆ

ಪ್ರಿಯಮಿತ್ರನಾದ ಶ್ರೀಕೃಷ್ಣನ ಬಾಹುಬಲದಿಂದ ಪೋಷಿತರಾದ ಯಾದವರು, ಪರಾಕ್ರಮಶಾಲಿಗಳಾಗಿ ಶೋಭಿಸುತ್ತಿರುವರೇ? ಯಾವಾಗಲೂ ಆದಿಪುರುಷನಾದ ಶ್ರೀಕೃಷ್ಣನ ಪಾದಸೇವೆಯಲ್ಲಿಯೇ ನಿರತಳೂ, ವಜ್ರಾಯುಧವನ್ನು ಇಂದ್ರನಿಂದ ಕಿತ್ತುಕೊಂಡು ಅವನನ್ನು ಪರಾಜಿತನನ್ನಾಗಿ ಮಾಡಿ, ಸ್ವರ್ಗಲೋಕದಿಂದ ಪಾರಿಜಾತವೃಕ್ಷವನ್ನು ಭೂಮಿಗೆ ತರಿಸಿದ ಸತ್ಯಭಾಮಾದೇವಿಯು ೧೬೧೦೭ ಜನ ಇತರ ಕೃಷ್ಣಪತ್ನಿಯರಿಂದ ಸಹಿತಳಾಗಿ ಕ್ಷೇಮದಿಂದಿರುವಳೇ? ಏನು ಪಾಪವಿಶೇಷದಿಂದ ನೀನು ಕಾಂತಿವಿಹೀನನಾಗಿ ನನಗೆ ಕಾಣಿಸುತ್ತೀಯೆ? ನಿನಗೆ ಅಪೇಕ್ಷಿತವಾದದ್ದು ಏನಾದರೂ ಪ್ರಾಪ್ತವಾಗದೇ ಹೋಯಿತೇ? ನಿನ್ನನ್ನು ಯಾರಾದರೂ ಉಪೇಕ್ಷೆ ಮಾಡಿದರೇ? ಯಾರಾದರೂ ಅಮಂಗಳಕರವಾದ ಮಾತುಗಳನ್ನು ನಿನಗೆ ಆಡಿರುತ್ತಾರೆಯೇ?

ಅತಿಥಿಗಳು ಬೇಡಿದ್ದನ್ನು ನೀನು ಕೊಡಲು ಸಾಧ್ಯವಾಗದೇ ನಿನ್ನ ಮುಖಕಾಂತಿಯು ಕುಗ್ಗಿದೆಯೇ? ನಿನ್ನನ್ನು ಮೊರೆಹೊಕ್ಕ ಬ್ರಾಹ್ಮಣ, ವಟು, ವೃದ್ಧ ಅಥವ ಅನಾಥ ಸ್ತ್ರೀಯನ್ನು ನೀನು ಸಂರಕ್ಷಣೆ ಮಾಡಲಾಗದೆ ಬಿಟ್ಟಿರುವಿಯೇನು? ಅಗಮ್ಯ ಗಮನವನ್ನಾಗಲೀ ಅಥವ ಅಸತ್ಸ್ತ್ರೀಯಲ್ಲೇನಾದರೂ ಗಮನ ಮಾಡಿರುತ್ತೀಯಾ? ದಾರಿಯಲ್ಲಿ ಯಾರಾದರೂ ನಿನ್ನನ್ನು ಯುದ್ಧಮಾಡಿ ಸೋಲಿಸಿದರೇ? ಅಥವಾ ಬಾಲಕರು, ವೃದ್ಧರೂ ನೋಡುತ್ತಿದ್ದ ಹಾಗೆ ಏನಾದರೂ ಪದಾರ್ಥಗಳನ್ನು ಅವರಿಗೆ ಕೊಡದೇ ತಿಂದಿರುವಿಯಾ? ಏನು ಕಾರಣ ನಿನ್ನ ತೇಜಸ್ಸೆಲ್ಲಾ ಹತವಾಗಿ ನೀನು ಕಾಂತಿವಿಹೀನನಾಗಿರುತ್ತೀಯೆ?

ಏನಾದರೂ ಕ್ಷಮಾರ್ಹವಲ್ಲದ ದುಷ್ಕಾರ್ಯವನ್ನು ಮಾಡಿರುತ್ತೀಯಾ ಅಥವ ನಿನ್ನಿಂದ ಅಗಲಲಸದಳರಾದ ಯಾರಾದರೂ ಬಂಧುಮಿತ್ರರು ಮೃತರಾಗಿ, ಆ ವ್ಯಸನದಿಂದ ಶೂನ್ಯಸದೃಶ ಹೃದಯನಾಗಿರುತ್ತೀಯಾ, ಅದರಿಂದ ಶೋಕಿಸುತ್ತಿರುವೆಯಾ? ಎಂದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿಮೂರನೆಯ ಅಧ್ಯಾಯ ಮುಗಿಯಿತು.**

## अथ चतुर्दशोऽध्यायः

**सूत उवाच**

एवं कृष्णसखः कृष्णो भ्रात्रा राज्ञा विकल्पितः ।
नानाशङ्कास्पदं रूपं कृष्णविश्लेषकर्शितः ॥ १ ॥

शोकाग्निशुष्यद्वदनहृत्सरोजं हतप्रभम् ।

## अथ चतुर्दशोऽध्यायः

(शोकेन शुष्यद्वदनहृत्सरोजो हतप्रभः )
विभुं तमेवानुध्यायन्नाशक्नोत्प्रतिभाषितुम् ॥ २ ॥

कृच्छ्रेण संस्तभ्य शुचः पाणिनाऽऽमृज्य नेत्रजम् ।
पारोक्ष्येण समुन्नद्धप्रणयौत्कण्ठ्यकातरः ॥ ३ ॥

सख्यं मैत्रीं सौहृदं च सारथ्यादिषु संस्मरन् ।
नृपमग्रजमित्याह बाष्पगद्गदया गिरा ॥ ४ ॥

### अर्जुन उवाच

वञ्चितोऽहं महाराज हरिणा बन्धुरूपिणा ।
येन मेऽपहृतं तेजो देवविस्मापनं महत् ॥ ५ ॥

यस्य क्षणवियोगेन लोको ह्यप्रियदर्शनः ।
उक्थेन रहितो ह्येष मृतकः प्रोच्यते यथा ॥ ६ ॥

यत्संश्रयाद्द्रुपदगेह उपागतानां राज्ञां स्वयंवरमुखे स्मरदुर्मदानाम् ।
तेजो हृतं खलु मया विहतश्च मत्स्यः सज्जीकृतेन धनुषाऽधिगता च कृष्णा ॥ ७ ॥

यत्सन्निधावहमु खाण्डवमग्नयेऽदामिन्द्रञ्च सामरगणं तरसा विजित्य ।
लब्धा सभा मयकृताऽद्भुतशिल्पमाया दिग्भ्योऽहरन्नृपतयो बलिमध्वरे ते ॥ ८ ॥

यत्सन्निधौ नृपशिरोङ्घ्रिमहन्मखार्थ आर्योऽनुजस्तव गदायुधसत्ववीर्यः ।
तेनाहृताः प्रमथनाथमखाय भूपा यन्मोचिताऽभ्युदनयन् बलिमध्वरे ते ॥ ९ ॥

पत्न्यास्तवापि मखक्लृप्तमहाभिषेकश्लाधिष्ठचारुकबरं कितवैः सभायाम् ।
स्पृष्टं विकीर्य पदयोः पतिताश्रुमुख्यो यैस्तत्स्त्रियो न्यकृत तत्स विमुक्तकेश्यः ॥ १० ॥

यत्तेजसाऽथ भगवान्युधि शूलपाणिर्विस्मापितः स गिरिशोऽस्त्रमदान्निजं मे ।
अन्येऽपि चाहममुनैव कलेवरेण प्राप्तो महेन्द्रभवने महदासनार्धम् ॥ ११ ॥

तत्रैव मे विहरतो भुजदण्डयुग्मं गाण्डीवलक्षणमरातिवधाय देवाः ।
सेन्द्राः श्रिता यदनुभावितमाजमीढ तेनाहमद्य मुषितः पुरुषेण भूम्ना ॥ १२ ॥

यद्बान्धवः कुरुबलाब्धिमनन्तपारमेको रथेन तरसाऽतरमार्यसत्वः ।

## अथ चतुर्दशोऽध्यायः

प्रत्याहृतं पुरधनञ्च (पुरुधनं च) मया परेषां तेजः परं मणिमयञ्च हृतं शिरोभ्यः ॥ १३ ॥

यो भीष्मकर्णगुरुशल्यचमूष्वदभ्रराजन्यवर्यरथमण्डलमण्डितासु ।
अग्रेचरो मम रथे रथयूथपानामायुर्मनांसि च दृशा सहसा य आच्छैत् ॥ १४ ॥

यद्दोष्षु मां प्रणिहितं गुरुभीष्मकर्णद्रौणित्रिगर्तशलसैन्धवबाह्लिकाद्यैः ।
अस्त्राण्यमेयमहिमानि निरूपितानि नोपस्पृशुर्नृहरिदासमिवासुराणि ॥ १५ ॥

यन्मे नृन्पेद्र तदतर्क्यविहार ईशो यो(ऽ)लब्धरूपमवदद्रणमूधिर्न दर्शी ।
यन्माययाऽऽवृतदृशो न विदुः परं तं सूत्रादयोऽहमहमस्मि ममेति भव्याः ॥ १६ ॥

सौत्ये वृतः कुमतिनाऽऽत्मद ईश्वरो मे यत्पादपद्ममभवाय भजन्ति भव्याः ।
संश्रान्तवाहमरयो रथिनो भुविष्ठं न प्राहरन्यदनुभावनिरस्तचित्ताः ॥ १७ ॥

नर्माण्युदाररुचिरस्मितशोभनानि हे पार्थ हेऽर्जुन सखे कुरुनन्दनेति ।
सञ्जल्पितानि नरदेव हृदिस्पृशानि स्मर्तुर्लुठन्ति हृदयं मम माधवस्य ॥ १८ ॥

शय्यासनाटनविकत्थनभोजनादिष्वैक्याद्वयस्य ऋभुमानिति विप्रलब्धः ।
सख्युः सखेव पितृवत्तनयस्य सर्वं सेहे महामहितया कुमतेरधं मे ॥ १९ ॥

सोऽहं नृपेन्द्ररहितः पुरुषोत्तमेन सख्या प्रियेण सुहृदा हृदयेन शून्यः ।
अध्वन्युरुक्रमपरिग्रहमङ्ग रक्षन् गोपैरसद्भिरबलेव विनिर्जितोऽस्मि ॥ २० ॥

तद्वै धनुस्त इषवः स रथो हयास्ते सोऽहं रथी नृपतयो यत आमनन्ति ।
सर्वं क्षणेन तदभूदसदीशरिक्तं भस्मान् हुतं कुहकराद्धमिवोप्तमूषे ॥ २१ ॥

राजंस्त्वयाभिपृष्टानां सुहृदां नः सुहृत्पुरे
विप्रशापविभूढानां निघ्नतां मुष्टिभिर्मिथः ॥ २२ ॥

वारुणीं मदिरां पीत्वा मदोन्मथितचेतसाम् ।
अजानतामिवात्मानं चतुः पञ्चावशेषिताः ॥ २३ ॥

प्रायेणैतद्भगवतः ईश्वरस्य विचेष्टितम् ।
मिथो निघ्नन्ति भूतानि भावयन्ति च यन्मिथः ॥ २४ ॥

जलौकसां जले यद्वन्महान्तोऽदन्त्यणीयसः ।

दुर्बलान् बलिनो राजन् महान्तो बलिनो मिथः ॥ २५ ॥

एवं बलिष्ठैर्यदुभिर्महद्भिरितरान् विभुः।
यदून्यदुभिरन्योन्यं भूभारं सञ्जहार ह।
कण्टकं कण्टकेनैव द्वयञ्चापीशितुः समम् ॥ २६ ॥

देशकालार्थयुक्तानि हृत्तापोपशमानि च।
हरन्ति स्मरतश्चित्तं गोविन्दाभिहितानि मे ॥ २७ ॥

**सूत उवाच**

एवं चिन्तयतो जिष्णोः कृष्णापादसरोरुहम्।
सौहार्देनातिगाढेन शान्ताऽऽसीद्विमला मतिः ॥ २८ ॥

**॥ इति श्रीमद्भागवते प्रथमस्कन्धे चतुर्दशोऽध्यायः ॥**

## ॥ ಹದಿನಾಲ್ಕನೆಯ ಅಧ್ಯಾಯ ॥

ಪರಮಾತ್ಮನಲ್ಲಿ ಭಕ್ತಿ ಮಾಡುವುದಕ್ಕಾಗಿ, ಶೋಕವಾರ್ತೆಗಳನ್ನು ತಿಳಿಸುವ ನೆವದಿಂದ ಪರಮಾತ್ಮನ ಮಹಾಮಹಿಮೆಗಳು ಈ ಅಧ್ಯಾಯದಲ್ಲಿ ಪ್ರತಿಪಾದಿಸಲ್ಪಡುತ್ತವೆ. ಹಿಂದಿನ ಅಧ್ಯಾಯದಲ್ಲಿ, ಅಣ್ಣನಾದ ಧರ್ಮರಾಯನಿಂದ, ನಾನಾವಿಧವಾಗಿ ಸಂಶಯಯುಕ್ತ ಪ್ರಶ್ನೆಗಳನ್ನು, ಶ್ರೀಕೃಷ್ಣನಿಗೆ ಮಿತ್ರನಾದ ಅರ್ಜುನನು ಮಾಡಲ್ಪಟ್ಟವನಾಗಿ, ಅಸಹಜವಾದ ಆ ಪ್ರಶ್ನೆಗಳಿಂದ ಕಲ್ಪಿತವಾದ ದೋಷಾರೋಪಣೆಗಳಿಂದ ಬಹುನೊಂದ ಮನಸ್ಸುಳ್ಳವನಾಗಿ ಅರ್ಜುನನು ಏನೂ ಉತ್ತರ ಕೊಡಲು ಶಕ್ತನಾಗಲಿಲ್ಲ. ಶೋಕವೆಂಬ ಅಗ್ನಿಯಿಂದ ಸುಡಲ್ಪಟ್ಟು ಬಾಡಿದ ಮುಖವುಳ್ಳವನೂ, ಕೃಷ್ಣನೆಂಬ ಪ್ರಭೆಯಿಂದ ರಹಿತವಾದುದರಿಂದ ಕತ್ತಲಿಟ್ಟ ಹೃದಯವುಳ್ಳವನೂ, ಆಗಿ ಅರ್ಜುನನು ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಸುಮ್ಮನೆ ಸ್ವಲ್ಪ ಹೊತ್ತು ಇದ್ದು, ನಂತರ ಉಕ್ಕಿಬರುತ್ತಿದ್ದ ಬಾಷ್ಪಗಳನ್ನು ಎರಡು ಕೈಗಳಿಂದಲೂ ಒರೆಸಿಕೊಂಡು, ದುಃಖದಿಂದ ತುಂಬಿಗದ್ಗದವಾದ ಕಂಠದಿಂದ, ಅಣ್ಣನಾದ ಧರ್ಮರಾಯನನ್ನು ಕುರಿತು ಈ ರೀತಿ ಹೇಳಿದನು

ಮನಸ್ಸಿನಲ್ಲಿ, ಶ್ರೀಕೃಷ್ಣನು ಸಾರಥಿಯಾಗಿ ತನ್ನಲ್ಲಿ ತೋರಿಸುತ್ತಿದ್ದ ಸ್ನೇಹ, ಪ್ರೀತಿ, ವಿಶ್ವಾಸಾದಿಗಳನ್ನೇ ಭಾವಿಸುತ್ತಾ, ಎಲೈ! ಅಣ್ಣನಾದ ಧರ್ಮರಾಯನೇ! ಬಂಧುರೂಪಿಯಾದ

## अथ चतुर्दशोऽध्यायः

ಶ್ರೀಕೃಷ್ಣನಿಂದ ನಾನು ವಂಚಿತನಾಗಿ ಬಿಡಲ್ಪಟವನಾಗಿರುತ್ತೇನೆ! ಆತನಿಂದಲೇ ದೇವತೆಗಳಿಗೂ ಆಶ್ಚರ್ಯವನ್ನುಂಟುಮಾಡುತ್ತಿದ್ದ ನನ್ನ ತೇಜಸ್ಸೂ, ಪರಾಕ್ರಮವೂ ಸಹ ನನ್ನಿಂದ ಅಪಹರಿಸಲ್ಪಟ್ಟಿತು. ಹೇಗೆ ಪ್ರಾಣದಿಂದ ಬಿಡಲ್ಪಟ್ಟ ಬಂಧುದೇಹವು ಅಥವ ಸ್ವದೇಹವು, ಬಂಧುಜನರಿಗೆ ಅಪ್ರಿಯವೂ, ಅಮಂಗಳವೂ ಆಗುತ್ತದೋ! ಅದೇ ರೀತಿಯಲ್ಲಿಯೇ, ಶ್ರೀಕೃಷ್ಣ ಪರಮಾತ್ಮನಿಂದ ಬಿಡಲ್ಪಟ್ಟ ಈ ಭೂಲೋಕವು ಕಾಂತಿವಿಹೀನವಾಗಿ, ಅಮಂಗಳವಾಗಿ ಕಾಣುತ್ತಾ ಅಪ್ರಿಯವಾಗಿರುತ್ತೆ. ನಾನೂ ಸಹ ಕೃಷ್ಣ ವಿಯೋಗದಿಂದ ನಿನಗೆ ಅಪ್ರಿಯನೂ, ಅಮಂಗಳದರ್ಶನವುಳ್ಳವನೂ, ತೇಜೋವಿಹೀನನೂ ಆಗಿ ಕಾಣುತ್ತೇನೆ.

ಯಾವ ಶ್ರೀಕೃಷ್ಣನ ಸನ್ನಿಧಾನ ವಿಶೇಷದಿಂದ ಸ್ವಯಂವರ ಕಾಲದಲ್ಲಿ ನಾನು ಸಕಲ ರಾಜರುಗಳಿಂದ ಭೇಧಿಸಲಶಕ್ಯವಾದ ಮತ್ಸ್ಯಯಂತ್ರವನ್ನು ಭೇದಿಸಿ, ದ್ರೌಪದಿಯನ್ನು ಹೊಂದಿದೆನೋ, ಯಾವ ಶ್ರೀಕೃಷ್ಣನ ಅನುಗ್ರಹದಿಂದ, ಆಮೇಲೆ ಸಕಲ ರಾಜರುಗಳನ್ನೂ ಯುದ್ಧದಲ್ಲಿ ಸೋಲಿಸಿ ಓಡಿಸಿದೆನೋ! ಯಾರ ಸನ್ನಿಧಾನ ವಿಶೇಷದಿಂದ ನಾನು ಇಂದ್ರಾದಿ ದೇವತೆಗಳನ್ನು ಗೆದ್ದು, ಅಗ್ನಿಗೆ ಖಾಂಡವ ವನವನ್ನು ಆಹಾರ ಮಾಡಿಕೊಟ್ಟು, ಮಯನಿಂದ ನಿರ್ಮಿತವಾದ ಲೋಕಾಶ್ಚರ್ಯಕರವಾದ, ಅದ್ಭುತ ಶಿಲ್ಪಕುಶಲತೆಯಿಂದ ರಚಿಸಿದ ಸಭೆಯನ್ನು ನಿನಗಾಗಿ ಹೊಂದಿ, ರಾಜಸೂಯ ಯಾಗ ಕಾಲದಲ್ಲಿ ಸಕಲ ರಾಜರ ಕಿರೀಟಗಳೂ ನಿನ್ನ ಪಾದಪೀಠದಲ್ಲಿ ಮಣಿಯುವಂತೆ ಮಾಡಿ, ಅವರಿಂದ ಕಪ್ಪ ಕಾಣಿಕೆ ದೊರೆಯುವಂತಾಯಿತೋ,

ಯಾವ ಗದಾಯುದ್ಧ ಪ್ರವೀಣರಾದ ನಿನ್ನ ತಮ್ಮಂದಿರಾದ ಭೀಮಸೇನ ದೇವರು, ಕೃಷ್ಣಪಾದಾಶ್ರಯದಿಂದ ರಾಜಸೂಯ ಯಾಗಕ್ಕಾಗಿ, ರುದ್ರದೇವರಿಂದ ರಕ್ಷಿತವಾದ ಅಪಾರ ಐಶ್ವರ್ಯವನ್ನು ತಂದರೋ! ಆ ಜರಾಸಂಧನನ್ನು ಸಂಹರಿಸಿ, ಅವನಿಂದ ಪರಾಜಿತರಾಗಿ ಸೆರೆಮನೆಯಲ್ಲಿ ಇಡಲ್ಪಟ್ಟಿದ್ದ ಸಹಸ್ರಶ: ರಾಜರುಗಳನ್ನು ಬಂಧನದಿಂದ ಬಿಡಿಸಿ, ಯಾವ ಶ್ರೀಕೃಷ್ಣನ ಸಾನ್ನಿಧ್ಯದಿಂದ ಭೀಮಸೇನದೇವರು ಆ ರಾಜರುಗಳಿಂದ ನಿನಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸಿದರೋ! ರಾಜಸೂಯ ಯಾಗದಲ್ಲಿ ಅಭಿಷಿಕ್ತಳಾದ, ನಿನ್ನ ಪಟ್ಟದ ರಾಣಿಯಾದ ದ್ರೌಪದಾದೇವಿಯ ಕೇಶಪಾಶವನ್ನು ಸಭೆಯಲ್ಲಿ ಮುಟ್ಟಿದ, ದುಷ್ಟ ದುರ್ಯೋಧನ ದುಶ್ಶಾಸನಾದಿ ಸಕಲ ಧೃತರಾಷ್ಟ್ರಪುತ್ರರೂ, ಯಾವ ಭೀಮಸೇನದೇವರ ಗದಾಪ್ರಹಾರದಿಂದ ಹತರಾಗಿ, ಅವರವರ ಸ್ತ್ರೀಯರ ಕೇಶಪಾಶಗಳು ರಣರಂಗದಲ್ಲಿ, ಯಾವ ಶ್ರೀಕೃಷ್ಣನ ಕೃಪೆಯಿಂದ ಬಿಚ್ಚಲ್ಪಟ್ಟವೋ? ಯಾವ ಶ್ರೀಕೃಷ್ಣನ ತೇಜಸ್ಸು ನನ್ನಲ್ಲಿ ಸನ್ನಿಹಿತವಾಗಿದ್ದುದರಿಂದ, ಶೂಲಪಾಣಿಯಾದ ಮಹದೇವರನ್ನು ನಾನು

ಯುದ್ಧದಲ್ಲಿ ಮೆಚ್ಚಿಸಿ, ಪಾಶುಪತಾದಿ ಅಸ್ತ್ರಗಳನ್ನು ಪಡೆದೆನೋ! ಸಶರೀರನಾಗಿ ದೇವೇಂದ್ರನಿಂದ ಸಂಭಾವಿತನಾಗಿ ಸ್ವರ್ಗಲೋಕಕ್ಕೆ ಹೋಗಿ, ಇಂದ್ರ ಸಿಂಹಾಸನದ ಅರ್ಧಭಾಗದಲ್ಲಿ ಕುಳ್ಳಿರಿಸಲ್ಪಟ್ಟು ಗೌರವಿಸಲ್ಪಟ್ಟೆನೋ!

ಯಾವ ನನ್ನ ಗಾಂಡೀವ ಧನುಸ್ಸಿನ ಸಹಾಯವನ್ನು ದೇವತೆಗಳು ಅಪೇಕ್ಷಿಸಿ, ತಮ್ಮ ಶತೃಗಳ ಮರ್ದನವನ್ನು ನನ್ನಿಂದ ಮಾಡಿಸಿದರೋ! ವಿರಾಟನ ನಗರದಲ್ಲಿದ್ದಾಗ ಅನಂತ ಸಮುದ್ರದಂತೆ ಇದ್ದ ಕೌರವಸೇನಾ ಸಮುದ್ರವನ್ನು, ನಿಸ್ಸಹಾಯಕನಾಗಿ ಒಬ್ಬನೇ ಒಂದೇ ರಥದಿಂದ ಆಕ್ರಮಿಸಿ ಗೆದ್ದು, ಭೀಷ್ಮ, ದ್ರೋಣ, ಕೃಪಾಚಾರ್ಯ, ದುರ್ಯೋಧನ, ಕರ್ಣಾದಿ ಮಹಾರಥರ ತಲೆಗಳಲ್ಲಿದ್ದ ಕಿರೀಟ, ರತ್ನಗಳನ್ನೂ, ಹಾರಗಳನ್ನೂ ಕಿತ್ತುತಂದು, ಉತ್ತರ ಗೋಗ್ರಹಣದಲ್ಲಿ ಗೋವುಗಳನ್ನು ಗೆದ್ದು ಪಟ್ಟಣಕ್ಕೆ, ಯಾವ ಶ್ರೀಕೃಷ್ಣನ ಕೃಪೆಯಿಂದ ಹಿಂತಿರುಗಿಸಿದೆನೋ! ಯುದ್ಧಾರಂಭದಲ್ಲಿ ಭೀಷ್ಮ, ದ್ರೋಣ, ಶಲ್ಯ, ಕರ್ಣ ಮುಂತಾದ ವೀರರಿಂದಲೂ ಅಗಾಧ ಸೈನ್ಯದಿಂದಲೂ ತುಂಬಿದ್ದ ಕೌರವ ಸೈನ್ಯಕ್ಕೂ, ನಮ್ಮ ಸೈನ್ಯಕ್ಕೂ ನಡುವೆ ನನ್ನಿಂದ ಪ್ರಾರ್ಥಿತನಾಗಿ ಯಾವ ಶ್ರೀಕೃಷ್ಣನು ನನ್ನ ರಥವನ್ನು ನಿಲ್ಲಿಸಿ, ತನ್ನ ನೋಟಮಾತ್ರದಿಂದ ಸರ್ವರ ಆಯುಸ್ಸನ್ನೂ ಅಪಹರಿಸಿ ಮೃತಪ್ರಾಯರನ್ನಾಗಿ ಮಾಡಿ, ನಿಮಿತ್ತಮಾತ್ರವಾಗಿ ನನ್ನಿಂದ ಅವರು ಪರಾಜಿತರಾದರೆಂಬ ಖ್ಯಾತಿಯನ್ನು ನನಗುಂಟು ಮಾಡಿದನೋ!

ಯಾರ ಕೃಪಾಬಲದಿಂದ ಭೀಷ್ಮ, ದ್ರೋಣ, ಕರ್ಣ ಮುಂತಾದವರು ಬಿಟ್ಟ ಅಮೋಘ ಮಂತ್ರಾಸ್ತ್ರಗಳು, ಹೇಗೆ ನೃಸಿಂಹ ಭಕ್ತನಾದ ಪ್ರಹ್ಲಾದನನ್ನು ದೈತ್ಯರು ಮುಟ್ಟಲೂ ಸಮರ್ಥರಾಗಲಿಲ್ಲವೋ, ಹಾಗೆ ನನ್ನನ್ನು ಮುಟ್ಟಲೂ ಇಲ್ಲವೋ! ಎಲೈ ನೃಪಶ್ರೇಷ್ಠನೆ! ಸರ್ವಜ್ಞನೂ, ಸರ್ವದೇವೋತ್ತಮನೂ ಆದ ಯಾವ ಶ್ರೀಕೃಷ್ಣನು ಯುದ್ಧಾರಂಭದಲ್ಲಿ ನನಗೆ ತನ್ನ ಅದ್ಭುತರೂಪವನ್ನು ತೋರಿಸಿ, ಆ ರೂಪದ ವ್ಯಾಪಾರಾದಿಗಳನ್ನು ಸೂತ್ರನಾಮಕ ಪ್ರಾಣದೇವರೂ, ಬ್ರಹ್ಮಾದಿ ದೇವತೆಗಳೂ ತಿಳಿಯರೆಂದು ಹೇಳಿದನೋ, ಅಂತಹ ದಿವ್ಯ ಮಂಗಳವಿಗ್ರಹನಾದ ಪರಮಪುರುಷನ ಕ್ರೀಡಾದಿ ವ್ಯಾಪಾರಗಳು ತಿಳಿಯಲಸಾಧ್ಯವೆಂದು ಏನು ಹೇಳತಕ್ಕದ್ದಿದೆ?

ಮೋಕ್ಷಾಪೇಕ್ಷಿಗಳು ಯಾರ ಪಾದಕಮಲಗಳನ್ನು ಸಂಸಾರಸಮುದ್ರದಿಂದ ಪಾರಗಾಣುವುದಕ್ಕಾಗಿ ಭಜಿಸುವರೋ! ನಾನು ರಣರಂಗದಲ್ಲಿ ಶ್ರಾಂತನಾಗಿ, ಬಳಲಿದ ಕುದುರೆಗಳಿಗೆ ನೀರನ್ನು ಕುಡಿಸುವುದಕ್ಕಾಗಿ ರಥದಿಂದಿಳಿದು ಭೂಮಿಯಲ್ಲಿ ಅಸ್ತ್ರರಹಿತನಾಗಿ ನಿಂತಿದ್ದಾಗ, ಸುತ್ತಮುತ್ತಲೂ ರಥಾರೂಢರಾಗಿ ದಿವ್ಯಾಸ್ತ್ರಗಳಿಂದ ಸನ್ನಿಹಿತರಾಗಿದ್ದ ಕರ್ಣಾದಿಗಳು, ಯಾವ ಶ್ರೀಕೃಷ್ಣನ

ಇಚ್ಛಾರೂಪವಾದ ಮಾಯಾಮೋಹಿತರಾಗಿ, ಶಸ್ತ್ರಾಸ್ತ್ರಗಳಿಂದ ನನ್ನನ್ನು ಹೊಡೆಯಲಿಲ್ಲವೋ! ಅಂತಹ ಶ್ರೀಕೃಷ್ಣನಿಂದ ಈಗ ನಾನು ಬಿಡಲ್ಪಟ್ಟವನಾಗಿರುತ್ತೇನೆ.

ಸರ್ವದೇವಸ್ತುತ್ಯನೂ ವಂದ್ಯನೂ ಆದ ಯಾವ ಶ್ರೀಕೃಷ್ಣನನ್ನು ದುರ್ಬುದ್ಧಿಯುಳ್ಳ ನಾನು ಸಾರಥಿ ಕೆಲಸದಲ್ಲಿ ನಿಯಮಿಸಿದೆನೋ, ಹಾಗಾದರೂ ಆ ಶ್ರೀಪರಮಾತ್ಮನು ಅದನ್ನು ಪರಿಗಣಿಸದೆ, ಅತ್ಯಂತ ಉದಾರಭಾವದಿಂದ ಸಾರಥಿಯ ಕೆಲಸವನ್ನು ಮಾಡುತ್ತಾ, ಶೋಭಾಯಮಾನವಾದ ಮಂದಸ್ಮಿತ ವದನಾರವಿಂದದಿಂದ, ನನ್ನ ಕೂಡೆ ವಿನೋದ ಮಾಡುತ್ತಾ, ಎಲೈ! ಸ್ನೇಹಿತನೇ! ಎಲೈ ಪಾರ್ಥನೇ! ಅರ್ಜುನನೇ! ಕುರುನಂದನನೇ! ಇತ್ಯಾದಿ ವಚನಗಳಿಂದ ನನ್ನನ್ನು ಸಂಬೋಧಿಸಿ ಕರೆಯುತ್ತಿದ್ದನೋ, ಅದನ್ನು ನೆನೆಪಿಗೆ ತೆಗೆದುಕೊಂಡರೆ ನನ್ನ ಹೃದಯವು ಪಟಪಟನೆ ಒಡೆದು ಚೂರಾಗುವಂತೆ ಆಗುತ್ತಿದೆ.

ನನ್ನ ಸಮಾನವಯಸ್ಕನಾದ ಆ ಮಾಧವನು, ಸ್ನೇಹಿತನಂತೆ ನನ್ನನ್ನು ಕಾಣುತ್ತಿದ್ದುದರಿಂದ ಆ ಪರಮಾತ್ಮನ ಮಹಾಮಹಿಮೆಗಳನ್ನು ನಾನು ತಿಳಿಯದೆ, ಏಕಾಸನದಲ್ಲಿ ಅವನೊಡನೆ ಕುಳಿತುಕೊಳ್ಳುತ್ತಲೂ, ಒಂದೇ ಹಾಸಿಗೆಯಲ್ಲಿ ಅವನೊಡನೆ ಮಲಗುತ್ತಲೂ, ಸಮಾನೀಕನಂತೆ ನಡೆ, ನುಡಿ, ನಡತೆಗಳಲ್ಲಿ ಪ್ರವರ್ತಿಸಿ ನಾನು ಅಜ್ಞಾನದಿಂದ ವಂಚಿತನಾದೆ. ಇಂತಹ ನನ್ನ ದುರ್ನಡತೆಗಳನ್ನು ಮಹಾನುಭಾವನಾದ ಶ್ರೀಕೃಷ್ಣನು ಸ್ನೇಹಿತನಂತೆಯೂ, ಮಕ್ಕಳ ತಪ್ಪುಗಳನ್ನು ತಂದೆಯು ಕ್ಷಮಿಸುವಂತೆಯೂ, ಕ್ಷಮಿಸಿ ನನ್ನನ್ನು ಸರ್ವದಾ ಸಂರಕ್ಷಿಸಿದನು.

ಈ ರೀತಿ ಜನ್ಮಪ್ರಭೃತಿಯಾಗಿ ನಮ್ಮೊಡನೆ ಸಕಲ ಸುಖದುಃಖಾದಿ ಕಾಲಗಳಲ್ಲಿಯೂ ಎಡೆಬಿಡದೆ ಇದ್ದು, ನಮಗೆ ಅತ್ಯಂತಪ್ರಿಯನೂ, ಸ್ನೇಹಿತನೂ, ಅನಿಮಿತ್ತಬಂಧುವೂ ಆಗಿದ್ದ ಶ್ರೀಕೃಷ್ಣನು ಈ ಭೂಲೋಕವನ್ನು ಬಿಡುವುದಕ್ಕೆ ಮುಂಚಿತವಾಗಿ ನನ್ನಲ್ಲಿದ್ದ ತನ್ನ ತೇಜಸ್ಸನ್ನೂ ಸೆಳೆದುಕೊಂಡು ಹೋದನು. ಈ ರೀತಿ ಶ್ರೀಕೃಷ್ಣನು ಪರಂಧಾಮಕ್ಕೆ ಹೋದನಂತರ ನಾನು ಅವನ ಪತ್ನಿಯರ ಅಂಗರಕ್ಷಕನಾಗಿ ನಿಯಮಿಸಲ್ಪಟ್ಟು, ಅವರನ್ನು ಸಮುದ್ರತೀರಕ್ಕೆ ಕರೆದುಕೊಂಡು ಹೋಗುತ್ತಿರುವಾಗ್ಯೆ, ಸಾಧಾರಣ ಗೋಪಬಾಲಕರು ನನ್ನ ಮೇಲೆ ಬಿದ್ದು ನನ್ನನ್ನು ಪರಾಜಿತನನ್ನಾಗಿ ಮಾಡಿ, ಕೃಷ್ಣಪತ್ನಿಯರನ್ನು ಅಪಹರಿಸಿದರು. ನಾನು ಅದೇ ಗಾಂಢೀವಧನುಸ್ಸು, ಅದೇ ಬಾಣಗಳು, ಅದೇ ರಥದಿಂದ ಸಹಿತನಾಗಿದ್ದಾಗ್ಯೂ, ತೇಜೋವಿಹೀನನಾಗಿ, ಶ್ರೀಕೃಷ್ಣಸಾನ್ನಿಧ್ಯದಿಂದ ಬಿಡಲ್ಪಟ್ಟವನಾಗಿ ಪರಾಜಿತನಾದೆ. ಇದಕ್ಕಿಂತಲೂ ಅಮಂಗಳವು ಬೇರೆ ನನಗೆ ಏನು ಇರುತ್ತದೆ? ಯಾವ ಮಹಾರಥ ಅತಿರಥರನ್ನು ಈ ಗಾಂಢೀವ ಧನುಸ್ಸಿನಿಂದ ಪರಾಜಿತರನ್ನಾಗಿ ಮಾಡಿದ್ದೆನೋ,

ಅಂತಹ ಧನುಸ್ಸು ಕೇವಲ ಕಾಷ್ಠ ಸದೃಶವಾಯ್ತು. ನನ್ನ ಬಲಪ್ರದರ್ಶನವು ಆ ಗೋಪಬಾಲಕರಲ್ಲಿ ಬೂದಿಯಲ್ಲಿ ಹೋಮಮಾಡಿದಂತಾಯಿತು.

ನೀನು ಕೇಳಿದ ಯಾದವಾದಿಗಳು, ಆ ದುರಂತಮಹಿಮನಾದ ಶ್ರೀಕೃಷ್ಣನ ಇಚ್ಛೆಯಂತೆ, ಬ್ರಾಹ್ಮಣರಿಂದ ಶಾಪವನ್ನು ಹೊಂದಿ, ಪರಸ್ಪರ ಮುಷ್ಟಿಯುದ್ಧದಿಂದಲೂ, ದ್ವಂದ್ವಯುದ್ಧದಿಂದಲೂ ತಮ್ಮೊಳಗೆ ಕಾದಿ ಸರ್ವರೂ ಹತರಾದರು. ಬ್ರಾಹ್ಮಣ ಶಾಪವೆಂಬ ಅಗ್ನಿಮುಖದಿಂದ ಶ್ರೀಕೃಷ್ಣನು ಯಾದವ, ವೃಷ್ಣಿ, ಮೊದಲಾದ ವಂಶಗಳೆಂಬ ಬಿದುರುಮೆಳೆಗಳನ್ನು ಸುಟ್ಟು, ಭೂಭಾರವನ್ನಿಳುಹಿ ತಾನೂ ಅಸ್ತಂಗತನಾದನು. ಈ ರೀತಿಯಾಗಿ ಶ್ರೀಕೃಷ್ಣವಿರಹದಿಂದ ಸಂತಪ್ತನಾಗಿದ್ದ ಅರ್ಜುನನು, ಪರಮಾತ್ಮನ ಮಹದ್ಗುಣಗಳನ್ನು ಸ್ಮರಿಸಿ ಸ್ಮರಿಸಿ ವಿಲಾಪಿಸುತ್ತಾ, ಹಾಗೆಯೇ ಆ ಭಗವದ್ಗುಣಾನುಸ್ಮರಣೆಯಿಂದ ಶುದ್ಧಾಂತಃಕರಣನಾಗಿ, ಪರಮಾತ್ಮನಲ್ಲಿ ಮೊದಲಿಗಿಂತಲೂ ಅತಿಶಯವಾಗಿ ಭಕ್ತಿಯನ್ನು ಹೊಂದಿ ಶಾಂತಚಿತ್ತನಾದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.**

## अथ पञ्चदशोऽध्यायः

**सूत उवाच**

वासुदेवाङ्घ्र्यभिध्यानपरिबृंहितरंहसा ।
भक्त्या निर्मथिताशेषकषायधिषणोऽर्जुनः ॥ १ ॥

गीतं भगवता ज्ञानं यत्तत्संग्राममूर्धनि ।
कालकर्मतमोरुद्धं पुनरध्यगमद्विभुः ॥ २ ॥

विशोको ब्रह्मसम्पत्या सञ्छिन्नद्वैतसंशयः ।
लीनप्रकृतिनैर्गुण्यादलिङ्गत्वादसंभवः ॥ ३ ॥

निशम्य भगवन्मार्गं संस्थां यदुकुलस्य च ।
स्वः पथाय मतिं चक्रे निवृत्तात्मा युधिष्ठिरः ॥ ४ ॥

यदा मुकुन्दो भगवानिमां महीं जहौ स्वतन्वा श्रवणीयसत्कथः ।
तदा हरावप्रतिबुद्धचेतसामभद्रहेतुः कलिरन्ववर्तत ॥ ५ ॥

युधिष्ठिरस्तत्परिसर्पणं बुधः पुरे च राष्ट्रे च गृहे तथात्मनि ।

विभाव्य लोभानृतजिह्महिंसनाद्यधर्मचक्रं गमनाय पर्यधात् ॥ ६ ॥

स्वराट् पौत्रं विनीतन्तमात्मनोऽनवमं गुणैः ।
तोयनीव्याः पतिं भूमेरभ्यषिञ्चद्गजाह्वये ॥ ७ ॥

मधुरायां ततो वज्रं शूरसेनपतिं ततः ।
प्राजापत्यां निरूप्येष्टिमग्नीनपिबदीश्वरः ॥ ८ ॥

विसृज्य तत्र तत्सर्वं दुकूलवलयादिकम् ।
निर्ममो निरहङ्कारः सञ्छिन्नाशेषबन्धनः ॥ ९ ॥

वाचं जुहाव मनसि तत्प्राण इतरे परम् ।
धृत्या ह्यपानं सोत्सर्गं तत्परत्वे ह्यजोहवीत् ॥ १० ॥

त्रित्वे हुत्वाऽथ पञ्चत्वं तच्चैकत्वेऽजुहोन्मुनिः ।
सर्वमात्मन्यजुहवीद्ब्रह्मण्यात्मानमव्यये ॥ ११ ॥

चीरवासा निराहारो बद्धवाङ्मुखमूर्धजः ।
दर्शयन्नात्मनो रूपं जडोन्मत्तपिशाचवत् ।
अनपेक्षमाणो निरगादशृण्वन् बधिरो यथा ॥ १२ ॥

उदीचीं प्रविवेशाशां गतपूर्वां महात्मभिः ।
हृदि ब्रह्म परं ध्यायन्नावर्तेत गतो यतः ॥ १३ ॥

सर्वे तमनु निर्जग्मुर्भ्रातरः कृतनिश्चयाः ।
कलिनाऽधर्ममित्रेण दृष्ट्वा स्पृष्टाः प्रजा भुवि ॥ १४ ॥

ते साधुकृतसर्वार्थाः ज्ञात्वाऽऽत्यन्तिकमात्मनः ।
मनसा धारयामासुर्वैकुण्ठचरणाम्बुजम् ॥ १५ ॥

तद्ध्यानोद्रिक्तया भक्त्या विशुद्धधिषणाः परे ।
तस्मिन्नारायणपद एकान्तमतयोऽपतन् ॥ १६ ॥

अवापुर्दुरवापं ते असद्भिर्विषयात्मभिः ।
विधूतकल्मषं स्थानं विरजेनात्मनैव हि ॥ १७ ॥

द्रौपदी च तदाज्ञाय पतीनामनपेक्षताम् ।
वासुदेवे भगवति एकान्तमतिरापतत् ॥ १८ ॥

यः श्रद्धयैतद्भगवत्प्रयाणं पाण्डोः सुतानामपि संप्रयाणम् ।
शृणोत्यलं स्वस्त्ययनं पवित्रं लब्ध्वा हरौ भक्तिमुपैति शान्तिम् ॥ १९ ॥

**॥ इति श्रीमद्भागवते प्रथमस्कन्धे पञ्चदशोऽध्यायः ॥**

## ॥ ಹದಿನೈದನೆಯ ಅಧ್ಯಾಯ ॥

### ಪಾಂಡವರ ಉತ್ತರ ಯಾತ್ರೆ

ಸೂತಪುರಾಣಿಕರು ಶೌನಕರನ್ನು ಕುರಿತು ಪಾಂಡವರ ಮುಂದಿನ ವೃತ್ತಾಂತಗಳನ್ನು ನಿರೂಪಿಸುತ್ತಾರೆ.

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಅರ್ಜುನನು ಶ್ರೀವಾಸುದೇವನಾಮಕ ಶ್ರೀಕೃಷ್ಣನ ನಿರ್ಮಲ ಶುಭಚರಿತ್ರೆಗಳ ಸ್ಮರಣೆಯಿಂದುಂಟಾದ ಭಕ್ತಿ ಉದ್ರೇಕದಿಂದ, ತಾತ್ಕಾಲಿಕವಾಗಿ ಅವನಿಗೆ ಉಂಟಾಗಿದ್ದ ಮನೋಕಲ್ಮಷಗಳ ನಿವಾರಣೆಯನ್ನು ಹೊಂದಿದವನಾಗಿ, ಪರಿಶುದ್ಧಾಂತಃಕರಣನಾದನು. ಪುನಃ ತನ್ನ ಮನಸ್ಸನ್ನು ಭಗದ್ವಿಷಯದಲ್ಲಿ ಸ್ಥಿರವನ್ನಾಗಿ ಮಾಡಿಕೊಳ್ಳುವುದಕ್ಕಾಗಿ, ಯುದ್ಧಾರಂಭದಲ್ಲಿ ಶ್ರೀಕೃಷ್ಣನಿಂದ ತನಗೆ ಉಪದೇಶಿಸಲ್ಪಟ್ಟಿದ್ದ ಗೀತಾಶಾಸ್ತ್ರವನ್ನು ಅಧ್ಯಯನ ಮಾಡಿದನು. ಅದರಿಂದ ಪರಮಾತ್ಮನ ವ್ಯಾಪಾರ ಮಹಿಮೆಗಳನ್ನು ತಿಳಿದವನಾಗಿ, ಅಹಮ್ಮಮತಾದಿಗಳಿಂದುಂಟಾಗುವ ಸುಖದುಃಖಾದಿಗಳ ಸಂಬಂಧವನ್ನು ತ್ಯಜಿಸಿದವನಾಗಿ, ಪ್ರಕೃತಿಮಯವಾದ ಲಿಂಗಶರೀರದ ಸತ್ವರಜಸ್ತಮೋಗುಣಗಳಿಂದ ನಿರ್ಲಿಪ್ತನಾಗಿ, ಲಿಂಗಶರೀರದ ಸಂಬಂಧದಿಂದ ರಹಿತನಾದನು. ಅಂದರೆ ಜೀವನ್ಮುಕ್ತ ಸದೃಶನಾದನು. ಯುಧಿಷ್ಠಿರನು ಅರ್ಜುನನಿಂದ ಶ್ರೀಕೃಷ್ಣನ ವಿಚಾರಗಳನ್ನು ಕೇಳಿದನಂತರ, ಮನಸ್ಸಿನಲ್ಲಿ ವೈರಾಗ್ಯವನ್ನು ವಹಿಸಿ ಮುಂದಿನ ಕರ್ತವ್ಯವನ್ನು ಯೋಚಿಸುವನಾದನು.

ಯಾವಾಗ ಪುಣ್ಯಶ್ರವಣಕೀರ್ತನನಾದ ಶ್ರೀಕೃಷ್ಣಪರಮಾತ್ಮನು ಭೂಲೋಕವನ್ನು ಬಿಟ್ಟನೋ ಆಗಲೇ ಕಲಿಯ ವ್ಯಾಪಾರಗಳಾದ ಅಧರ್ಮಾದಿಗಳು ಅಲ್ಲಲ್ಲಿ ತೋರಿಬರುತ್ತಿದ್ದವು. ಅದರಿಂದ

## अथ पञ्चदशोऽध्यायः

ಜನರಲ್ಲಿ ಅಲ್ಲಲ್ಲಿ ಅಮಂಗಳವು ಉಂಟಾಗಲು ಪ್ರಾರಂಭಿಸಿತ್ತು. ಪುರಜನರಲ್ಲಿಯೂ, ತಮ್ಮ ಅರಮನೆಯವರಲ್ಲಿಯೂ, ತಮ್ಮತಮ್ಮಲ್ಲಿಯೂ, ಹೊರಗಿನ ರಾಷ್ಟ್ರದಲ್ಲಿಯೂ ಸಹ ಸುಳ್ಳು, ವಂಚನೆ, ದ್ರೋಹ ಪರಹಿಂಸೆಗಳು ತಲೆದೋರುತ್ತಿದ್ದವು. ಇದನ್ನು ಧರ್ಮರಾಯನು ನೋಡಿ, ತಮಗೆ ಅಂತ್ಯಕಾಲವು ಪ್ರಾಪ್ತವಾಯಿತೆಂದು ಭಾವಿಸಿ, ತನ್ನ ಮೊಮ್ಮಗನಾದ, ಉತ್ತರಾದೇವಿಯ ಪುತ್ರನೂ, ಸಕಲಸದ್ಗುಣ, ಶೌರ್ಯ, ವಿನಯಾದಿ ಸಂಪನ್ನನೂ ಆದ ಪರೀಕ್ಷಿದ್ರಾಜನಿಗೆ ಹಸ್ತಿನಾ ಪಟ್ಟಣದಲ್ಲಿ ರಾಜ್ಯಾಭಿಷೇಕವನ್ನೂ, ಮಧುರಾ ಪಟ್ಟಣದಲ್ಲಿ ವಜ್ರನೆಂಬ ಯಾದವನಿಗೆ ರಾಜ್ಯಾಭಿಷೇಕಗಳನ್ನೂ ಮಾಡಿಸಿದನು.

ಅವನಿಂದ ಧರ್ಮರಾಜ್ಯ ಪರಿಪಾಲನೆಗೆ ಏರ್ಪಡಿಸಿ, ಅಂತ್ಯ ಯಜ್ಞವಾದ ಪ್ರಾಜಾಪತ್ಯೇಷ್ಟಿ ಎಂಬ ತನ್ನ ಸರ್ವಸ್ವದಾನರೂಪ ಯಾಗವನ್ನು ವಿಧಿಪೂರ್ವಕವಾಗಿ ಆಚರಿಸಿ, ತ್ರೇತಾಗ್ನಿ ಎಂಬ ಅಂತ್ಯಾಗ್ನಿಯನ್ನು ತನ್ನ ದೇಹದಲ್ಲಿ ಸಮಾರೋಪಿಸಿಕೊಂಡನು. ರಾಜ್ಯ, ಬಂಧು, ಮಿತ್ರ, ಐಶ್ವರ್ಯಾದಿ ಸಮಸ್ತವಸ್ತುಗಳಲ್ಲೂ ನಿರಪೇಕ್ಷಕನೂ, ನಿಸ್ಪೃಹನೂ ಆಗಿ ಸನ್ಯಾಸ ಮನೋವೃತ್ತಿಯನ್ನು ಹೊಂದಿದನು. ತಾನು ಧರಿಸಿದ್ದ ರಾಜಯೋಗ್ಯ ವಸ್ತ್ರಾಭರಣಾದಿಗಳನ್ನೆಲ್ಲಾ ತೆಗೆದಿರಿಸಿ ನಾರುಬಟ್ಟೆಯನ್ನುಟ್ಟು, ನಿರ್ಮಮತೆಯುಳ್ಳವನೂ, ನಿರಹಂಕಾರಿಯೂ ಆಗಿ ಸಮಸ್ತ ಮನೋಬಂಧನಗಳನ್ನೂ ಜ್ಞಾನಶಸ್ತ್ರದಿಂದ ಕತ್ತರಿಸಿ, ಆಶಾಪಾಶ ಬಂಧನಗಳಿಂದ ಮುಕ್ತನಾದನು. ನಂತರ ತನ್ನ ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಉಮಾದೇವಿಯನ್ನು, ಮನೋಭಿಮಾನಿಯಾದ ರುದ್ರದೇವರಲ್ಲಿ ಲಯಚಿಂತನೆಯನ್ನು ಮಾಡಿ, ಮನಸ್ಸನ್ನೂ ರುದ್ರನನ್ನೂ, ಪ್ರಾಣಾಖ್ಯ ಮುಖ್ಯಪ್ರಾಣನಲ್ಲೂ, ಪ್ರಾಣನನ್ನು ಉತ್ಸರ್ಗ ಸಹಿತನಾದ ಅಪಾನನಲ್ಲೂ, ಮನಸ್ಸಹಿತ ಪ್ರಾಣ ಉತ್ಸರ್ಗ ಸಹಿತನಾದ ಅಪಾನರನ್ನು ವ್ಯಾನಾಖ್ಯ ಮುಖ್ಯಪ್ರಾಣನಲ್ಲೂ ಲಯಚಿಂತನೆ ಮಾಡಿ, ಆ ಮುಖ್ಯಪ್ರಾಣನನ್ನು ಪರಬ್ರಹ್ಮನಲ್ಲಿ ಲಯನಾಗುವನೆಂದು ಚಿಂತಿಸಿದನು.

ಈ ಪರಬ್ರಹ್ಮನು ತನ್ನ ಹೃತ್ಸ್ಥಲದಲ್ಲಿರುವ ಬಿಂಬರೂಪಿ ಪರಮಾತ್ಮನಿಗೆ ಅಭಿನ್ನನೆಂದು ಅನುಸಂಧಾನಮಾಡಿ, ಸರ್ವಸಂಗ ಪರಿತ್ಯಾಗಮಾಡಿ, ಜಡಮೂಕಬಧಿರನಂತೆ, ಒಬ್ಬರಿಗೂ ಹೇಳದೆ, ನೋಡುವವರಿಗೆ ಹುಚ್ಚನಂತೆ ಕಾಣುವವನಾಗಿ, ಹೃತ್ಸ್ಥಲದಲ್ಲಿ ಭಕ್ತ್ಯುದ್ರೇಕದಿಂದ ಶ್ರೀಪರಮಾತ್ಮನನ್ನು ಧ್ಯಾನಿಸುತ್ತಾ, ಹಸ್ತಿನಾ ಪಟ್ಟಣವನ್ನು ಬಿಟ್ಟು, ಉತ್ತರಾಭಿಮುಖನಾಗಿ ಹೊರಟನು. ಇದನ್ನು ನೋಡಿದ ಭೀಮಸೇನ, ಅರ್ಜುನಾದಿಗಳೂ, ಸರ್ವಾಲಂಕಾರಗಳನ್ನೂ ತ್ಯಜಿಸಿ, ಚೀರವಸ್ತ್ರಧಾರಿಗಳಾಗಿ, ಅಣ್ಣನಾದ ಧರ್ಮರಾಯನನ್ನು ಹಿಂಬಾಲಿಸಿದರು.

ದ್ರೌಪದಾದೇವಿಯೂ, ಸರ್ವಸಂಗ ಪರಿತ್ಯಾಗಮಾಡಿ, ಚೀರವಸ್ತ್ರಧಾರಿಣಿಯಾಗಿ ಪತಿಗಳನ್ನು ಹಿಂಬಾಲಿಸಿದಳು. ಅವರು ಗಂಧಮಾದನ ಪರ್ವತವನ್ನು ದಾಟಿ ಕ್ರಮವಾಗಿ ಹಿಮವತ್ಪರ್ವತದಲ್ಲಿನ ನರನಾರಾಯಣಾಶ್ರಮಕ್ಕೆ ಬಂದರು. ಅಲ್ಲಿ ಶುದ್ಧ ತಪಶ್ಚರ್ಯೆಯಿಂದಲೂ, ಉಪವಾಸದಿಂದಲೂ ಕೂಡಿದವರಾಗಿ, ಏಕಾಗ್ರತೆಯಿಂದ ಶ್ರೀಪರಮಾತ್ಮನನ್ನು ಧ್ಯಾನಿಸುತ್ತಾ, ಕ್ಲುಪ್ತಕಾಲಗಳಲ್ಲಿ ಯೋಗದಿಂದ ತಮ್ಮ ದೇಹಗಳನ್ನು ಬಿಟ್ಟು, ಆ ದೇಹಗಳನ್ನು ಯೋಗಾಗ್ನಿಯಿಂದ ದಹಿಸಿ, ಪುನರಾವರ್ತಿ ಶೂನ್ಯವಾದ ಪರಮಯೋಗಗತಿಯಿಂದ ತಮ್ಮ ತಮ್ಮ ಮೂಲರೂಪಗಳನ್ನು ಪ್ರವೇಶಿಸಿದರು.

ದ್ರೌಪದಾದೇವಿಯರೂ ಸಹ, ವಾಸುದೇವನಲ್ಲೇ ಮನಸ್ಸನ್ನು ಲಯಮಾಡಿ, ತಮ್ಮ ಯೋಗಶಕ್ತಿಯಿಂದ ದೇಹತ್ಯಾಗಮಾಡಿ ತಮ್ಮ ಮೂಲರೂಪವನ್ನು ಪತಿಯೊಡನೆ ಸೇರಿದರು. ಭಗವದ್ಭಕ್ತರಲ್ಲದವರಿಗೆ ಅಪ್ರಾಪ್ಯವಾದ ಯೋಗಮಾರ್ಗಗಳಿಂದ ಪಾಂಡವಪುತ್ರರಾದ ಯುಧಿಷ್ಠಿರಾದಿಗಳು, ಈ ರೀತಿ ಅಂತ್ಯಕಾಲದಲ್ಲಿ ದೇಹತ್ಯಾಗಮಾಡಿದ ಮಹಾತ್ಮೆಯನ್ನು ಶ್ರದ್ಧೆಯಿಂದ ಶ್ರವಣ ಪಠನ ಮಾಡಿದ ಸಜ್ಜನರಿಗೆ ಮನಸ್ಸು ಪರಿಶುದ್ಧವಾಗಿ, ಪರಮಾತ್ಮನಲ್ಲಿ ಭಕ್ತಿಯುಂಟಾಗಿ, ಸುಖರೂಪವಾದ ಮೋಕ್ಷಕ್ಕೆ ಮಾರ್ಗವಾಗುವುದು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿನೈದನೆಯ ಅಧ್ಯಾಯವು ಮುಗಿಯಿತು.**

# अथ षोडशोऽध्यायः

**सूत उवाच**

ततः परीक्षद् द्विजवर्यशिक्षया महीं महाभागवतः शशास ह।
यथा हि सूत्यामभिजातकोविदाः समादिशन् विप्र महद्गुणांस्तथा॥ १ ॥

स उत्तरस्य तनयामुपयेम इरावतीम्।
जनमेजयादींश्चतुरस्तस्यामुत्पादयत्सुतान्॥ २ ॥

आजहाराश्वमेधांस्त्रीन् गङ्गायां भूरिदक्षिणान्।
शारद्वतं गुरुं कृत्वा देवा यत्राक्षिगोचराः ॥ ३ ॥

निजग्राहौजसा धीरः कलिं दिग्विजये क्वचित्।
नृपलिङ्गधरं शूद्रं घ्नन्तं गोमिथुनं पदा॥ ४ ॥

## अथ षोडशोऽध्यायः

### शौनक उवाच

कस्य हेतोर्निजग्राह कलिं दिग्विजये नृपः ।
नृदेवचिह्नधृक् शूद्रः कोऽसौ गां यः पदाऽहनत् ॥ ५ ॥

तत्कथ्यतां महाभाग यदि विष्णुकथाश्रयम् ।
अथ वाऽस्य पदाम्भोजमकरन्दलिहां सताम् ॥ ६ ॥

किमन्यैरसदालापैरायुषो यदसव्व्ययः ।
क्षुद्रायुषां नृणामङ्ग मर्त्यानां मृतिमिच्छताम् ॥ ७ ॥

इहोपहूतो भगवान्मृत्युः शामित्रकर्मणि ।
न कश्चिन्म्रियते तावद्यावदास्त इहान्तकः ॥ ८ ॥

एतदर्थं हि भगवानाहूतः परमर्षिभिः ।
अहो नृलोके पीयेत हरिलीलामृतं वचः ॥ ९ ॥

मन्दस्य मन्दप्रज्ञस्य प्रायो मन्दायुषश्च वै ।
निद्रया ह्रियते नक्तं दिवा चाप्यर्थकर्मभिः ॥ १० ॥

### सूत उवाच

यदा परीक्षित्कुरुजाङ्गले वसन् कलिं प्रविष्टं निजचक्रवर्तिते ।
निशम्य वार्तामनतिप्रियां ततः शरासनं संयुगरोचिरादद े॥ ११ ॥

स्वलङ्कृतं श्यामतुरङ्गयोजितं रथं मृगेन्द्रध्वजमास्थितः पुरात् ।
वृतो रथाश्वद्विपपत्तियुक्तया स्वसेनया दिग्विजयाय निर्गतः ॥ १२ ॥

भद्राश्वं केतुमालञ्च भारतञ्चोत्तरान् कुरून् ।
किम्पुरुषादीनि सर्वाणि विजित्य जगृहे बलिम् ॥ १३ ॥

तत्र तत्रोपशृण्वानः स्वपूर्वेषां महात्मनाम् ।
प्रगीयमानं पुरतः कृष्णमाहात्म्यसूच(कम्)नम् ॥ १४ ॥

आत्मानञ्च परित्रातमश्वत्थाम्नोऽस्त्रतेजसः ।
स्नेहञ्च वृष्णिपार्थानां तेषां भक्तिञ्च केशवे ॥ १५ ॥

## अथ षोडशोऽध्यायः

तेभ्यः परमसन्तुष्टः प्रीत्युज्जृम्भितलोचनः ।
महाधनानि वासांसि ददौ हारान्महामनाः ॥ १६ ॥

सारथ्यपारषदसेवनसख्यदौत्यवीरासनानुगमनस्तवनप्रणामैः ।
स्निग्धेषु पाण्डुषु जगत्प्रणतस्य विष्णोः भक्तिं करोति नृपतिश्चरणारविन्दे ॥ १७ ॥

तस्यैवं वर्तमानस्य पूर्वेषां वृत्तमन्वहम् ।
नातिदूरे किलाश्चर्यं यदासीत्तन्निबोध मे ॥ १८ ॥

धर्मः पदैकेन चरन् विच्छायामुपलभ्य गाम् ।
पृच्छति स्माश्रुवदनां विवत्सामिव मातरम् ॥ १९ ॥

**धर्म उवाच**

कच्चिद् भद्रेऽनामयमात्मनस्ते विच्छायाऽसि म्लायता यन्मुखेन ।
आलक्षये भवतीमन्तराधिं दूरे बन्धुं कञ्चन शोचसीव ॥ २० ॥

पादैर्न्यूनं शोचसि मैकपादमुतात्मानं वृषलैर्भोक्ष्यमाणम् ।
अथो सुरादीन् हृतयज्ञभागान् प्रजा उत स्विन्मघवत्यवर्षति ॥ २१ ॥

अरक्ष्यमाणा स्त्रिय उर्वि बालाञ्छोचस्यथो पुरुषादैरिवार्तान् ।
वाचं देवीं ब्रह्मकुले कुकर्मण्यब्रह्मण्ये राजकुले कुलाग्र्याम् ॥ २२ ॥

किं क्षत्रबबन्धून्कलिनोपसृष्टान् राष्ट्राणि वा तैरवरोपितानि ।
इतस्ततो वाऽशनपानवासस्नानव्यवायोत्सुकजीवलोकम् ॥ २३ ॥

यद्वाऽथ(यद्वाऽम्ब)ते भूरिभरावतारकृतावतारस्य हरेर्धरित्रि ।
अन्तर्हितस्य स्मरती विसृष्टा कर्माणि निर्वाणविलम्बितानि ॥ २४ ॥

इदं ममाचक्ष्व तवाधिमूलं वसुन्धरे येन विकर्शिताऽसि ।
कालेन वा ते बलिनाऽबलीढं सुरार्चितं किं प्रभुणाऽद्य सौभगम् ॥ २५ ॥

धरोवाचभवान् हि वेद तत्सर्वं यन्मां धर्मानुपृच्छसि ।
चतुर्भिः वर्तसे येन पादैर्लोकसुखावहैः ॥ २६ ॥

सत्यं शौचं दया दानं त्यागः सन्तोष आर्जवम् ।
शमो दमः तपः साम्यं तितिक्षोपरतिः श्रुतम् ॥ २७ ॥

## अथ षोडशोऽध्यायः

ज्ञानं विरक्तिरैश्वर्यं शौर्यं तेजो धृतिः स्मृतिः ।
स्वातन्त्र्यं कौशलं कान्तिः सौभगं मार्दवं क्षमा ॥ २८ ॥

प्रागल्भ्यं प्रश्रयः शीलं सह ओजो बलं भगः ।
गाम्भीर्यं स्थैर्यमास्तिक्यं कीर्तिर्मानोऽनहंकृतिः ॥ २९ ॥

इमे चान्ये च भगवन्नित्या यत्र महागुणाः ।
प्रार्थ्या महत्वमिच्छद्भिः न च यान्ति स्म कर्हिचित् ॥ ३० ॥

तेनाहं गुणपात्रेण श्रीनिवासेन साम्प्रतम् ।
शोचामि रहितं लोकं पाप्मना कलिनेक्षितम् ॥ ३१ ॥

आत्मानञ्चानुशोचामि भवन्तञ्चामरोत्तम् ।
देवान्नृषीन् पितृन् साधून् सर्वान् वर्णांस्तथाश्रमान् ॥ ३२ ॥

ब्रह्मादयो बहुतिथं यदपाङ्गमोक्षकामा यथोक्तविधिना भगवत्प्रपन्नाः ।
सा श्रीः स्ववासमरविन्दवनं विहाय यत्पादसौभगमलं भजतेऽनुरक्ता ॥ ३३ ॥

तस्याहमब्जकुलिशाङ्कुशकेतुकेतैः श्रीमत्पदैर्भगवतः समलङ्कृताङ्गी ।
त्रीनत्यरोचमुपलब्धतपोविभूतिर्लोकान् समां व्यसृजदुत्स्मयतीं तदन्ते ॥ ३४ ॥

यो वै ममातिभरमासुरवंशराज्ञामक्षौहिणीशतमपानुददात्मतन्त्रः ।
त्वां दुस्थमूनपदमात्मनि पौरुषेण सम्पादयन्यदुषु रम्यमबिभ्रदङ्गम् ॥ ३५ ॥
का वा सहेत विरहं पुरुषोत्तमस्य

प्रेमावलोकरुचिरस्मितवल्गुजल्पैः ।
स्थैर्यं समानमहरन्मधुमानिनीनां रोमोत्सवो मम यदङ्घ्रिविटङ्कितायाः ॥ ३६ ॥

**सूत उवाच**

तयोरेवं कथयतोः पृथिवीधर्मयोस्तदा ।
परीक्षिन्नाम राजर्षिः प्राप्तः प्राचीं सरस्वतीम् ॥ ३७ ॥

**॥ इति श्रीमद्भागवते प्रथमस्कन्धे षोडशोऽध्यायः ॥**

**॥ ಹದಿನಾರನೆಯ ಅಧ್ಯಾಯ ॥**

## अथ षोडशोऽध्यायः

## ಪರೀಕ್ಷಿತ ಮಹಾರಾಜರ ರಾಜ್ಯಭಾರ

ಸೂತಪೌರಾಣಿಕರು ಶೌನಕಾದಿಗಳಿಗೆ ಪರೀಕ್ಷಿದ್ರಾಜನ ರಾಜ್ಯಭಾರ, ಕಲಿ ನಿಗ್ರಹ ಮುಂತಾದುದನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ. ಎಲೈ! ಶೌನಕಾದಿಋಷಿಗಳೇ, ಪಟ್ಟಾಭಿಷಿಕ್ತನಾದ ಪರೀಕ್ಷಿದ್ರಾಜನು, ಕೃಪಾಚಾರ್ಯರೇ ಮುಂತಾದ ಬ್ರಾಹ್ಮಣಶ್ರೇಷ್ಠರ ಸದುಪದೇಶವನ್ನು ಪಡೆದು, ಆ ಉಪದೇಶದಂತೆ ನಡೆದುಕೊಂಡು ಮಹಾಸದ್ಗುಣಿ ಎಂದು ಪ್ರಖ್ಯಾತನಾಗಿ ರಾಜ್ಯಪರಿಪಾಲನೆ ಮಾಡುತ್ತಿದ್ದನು. ವಿರಾಟರಾಯನ ಮಗನಾದ ಉತ್ತರನ ಮಗಳು ಇರಾವತೀದೇವಿಯನ್ನು ಲಗ್ನವಾಗಿ ಜನಮೇಜಯನೇ ಮುಂತಾದ ನಾಲ್ವರು ಮಕ್ಕಳನ್ನು ಪಡೆದನು. ಕೃಪಾಚಾರ್ಯರನ್ನು ಗುರುಗಳನ್ನಾಗಿ ಮಾಡಿಕೊಂಡು ಮೂರಾವರ್ತಿ ಮಹಾದಕ್ಷಿಣೆಯನ್ನೂ ದಾನಗಳನ್ನೂ ಕೊಡುವವನಾಗಿ ಅಶ್ವಮೇಧ ಯಾಗಗಳನ್ನು ಮಾಡಿದನು. ಈ ಯಾಗಗಳಲ್ಲಿ ಇಂದ್ರಾದಿ ದೇವತೆಗಳು ಸಶರೀರರಾಗಿ ಬಂದು ಯಜ್ಞದ ಹವಿರ್ಭಾಗಗಳನ್ನು ಸ್ವೀಕರಿಸಿದರು. ಗಂಗಾತೀರದಲ್ಲಿ ಈ ರೀತಿ ಮೂರು ಅಶ್ವಮೇಧ ಯಾಗಗಳನ್ನು ಮಾಡಿದ ನಂತರ ಒಂದು ಸಲ ದಿಗ್ವಿಜಯಾರ್ಥವಾಗಿ ಹೊರಟು, ಮಾರ್ಗದಲ್ಲಿ ದೊರೆಯ ವೇಷವನ್ನು ಧರಿಸಿ, ಶೂದ್ರನಂತೆ ಕಾಣಿಸುತ್ತಾ, ಕಾಲಿನಿಂದ ಒಂದು ಗೋವನ್ನೂ, ಒಂದು ಎತ್ತನ್ನೂ ಒದೆಯುತ್ತಿದ್ದ ಅಧರ್ಮಸ್ವರೂಪನಾದ ಕಲಿಯನ್ನು ಕಂಡು ಅವನನ್ನು ತನ್ನ ಸಹಜ ಬಲ, ಪೌರುಷದಿಂದ ನಿಗ್ರಹಿಸಿದನು ಎಂದರು.

ಆದಕ್ಕೆ ಶೌನಕರು, ಎಲೈ ಸೂತರೇ! ಏನು ಕಾರಣದಿಂದ ಪರೀಕ್ಷಿದ್ರಾಜನು ದಿಗ್ವಿಜಯಕಾಲದಲ್ಲಿ ಕಲಿಯನ್ನು ನಿಗ್ರಹಿಸಿದನು? ದೊರೆ ವೇಷದಿಂದ ಗೋವುಗಳನ್ನು ಪಾದತಾಡನೆ ಮಾಡುತ್ತಿದ್ದ ಶೂದ್ರನು ಯಾರು? ಈ ವಿಚಾರಗಳು ಶ್ರೀಪರಮಾತ್ಮನ ಅಥವ ಅವನ ಪಾದಾಂಬುಜಗಳ ಮಕರಂದವನ್ನು ಆಸ್ವಾದನೆ ಮಾಡುವ ಅವನ ಭಕ್ತರ ಮಹಿಮೆಗಳಿಂದ ಕೂಡಿದ್ದರೆ ನಮಗೆ ತಾವು ಹೇಳಬೇಕು. ಬೇರೆಯಾದ ಅಸತ್ಕಥೆಗಳನ್ನು ಕೇಳಿ ಆಯಸ್ಸನ್ನು ವ್ಯರ್ಥಮಾಡಿಕೊಳ್ಳಬಾರದಷ್ಟೇ? ಅಕಾಲಗಳಲ್ಲಿ ನಾನಾವಿಧವಾಗಿ ಮರಣಗಳನ್ನು ಹೊಂದುತ್ತಿರುವ ಮನುಷ್ಯರ ಜೀವನವು ಅಲ್ಪಾ ಯಸ್ಸುಳ್ಳದ್ದಾಗಿರುತ್ತದೆ. ಆದುದರಿಂದ ಅಲ್ಪಾಯುವುಳ್ಳ ನಾವುಗಳು ಇಲ್ಲಿ ಸತ್ರಯಾಗವೆಂಬ ಜ್ಞಾನಯಜ್ಞದಲ್ಲಿ, ಯಾವ ಸರ್ವ ಮೃತ್ಯುಭಯ ಪರಿಹಾರಕನಾದ ಶ್ರೀನೃಸಿಂಹರೂಪಿಯಾದ ಶ್ರೀಕೃಷ್ಣನ ಚರಿತಾಮೃತ ಪಾನವು ನಮಗೆ ಲಭಿಸುತ್ತದೆಯೋ, ಅಲ್ಲಿಯವರಿಗೆ ಶ್ರೀಕೃಷ್ಣನ ಸನ್ನಿಧಾನವು ಇಲ್ಲಿರುವುದರಿಂದ, ನಮಗೆ ಯಮನ ಭಯವು ಇರುವುದಿಲ್ಲ. ಆದುದರಿಂದ ನಾವು ನಿಮ್ಮಿಂದ ಆ ಪರಮಾತ್ಮನ ಮತ್ತು ಅವನ ಭಕ್ತರ ಪರಮಮಂಗಳ ಚರಿತ್ರೆಗಳಿಂದ ಕೂಡಿದ

ಈ ಕಥಾವಿಚಾರವನ್ನೇ ಕೇಳಲಪೇಕ್ಷಿಸುತ್ತೇವೆ.

ಲೋಕದಲ್ಲಿ ಮೂಢರಾದ ಜನರು, ಅಜಾಗರೂಕರಾಗಿಯೂ, ದುರ್ಬಲರಾಗಿಯೂ, ಮಂದಬುದ್ಧಿಯುಳ್ಳವರೂ ಆಗಿದ್ದು, ರಾತ್ರಿಕಾಲವನ್ನು ನಿದ್ರೆಯಲ್ಲಿಯೂ, ಹಗಲನ್ನು ಜೀವನದ ಸಲುವಾಗಿ ದ್ರವ್ಯಾರ್ಜನೆಗಾಗಿಯೂ ನಿರರ್ಥಕವಾಗಿ ಕಳೆದು ತಮ್ಮ ಜೀವಮಾನವನ್ನು ಹಾಳುಮಾಡಿಕೊಳ್ಳುತ್ತಾರೆ. ಇಂತಹ ದುಷ್ಕಾಲದಲ್ಲಿಯೂ ಜನರಿಗೆ ಕೇಳಲರ್ಹವಾದ, ಸಕಲಸಂಪತ್ತನ್ನೂ ಸುಖಗಳನ್ನೂ ಕೊಡತಕ್ಕ ಭಗವತ್ಕಥಾಮೃತವು ಪಾನಮಾಡುವುದಕ್ಕೆ ನಿಮ್ಮಂತಹ ಜ್ಞಾನಿಶ್ರೇಷ್ಠರಿಂದ ಪ್ರಾಪ್ತವಾಗುತ್ತಿದೆಯಲ್ಲಾ, ಅಹೊ! ಪರಮಾಶ್ಚರ್ಯವು. ಇದು ಪರಮಾತ್ಮನ ಪರಮಾನುಗ್ರವೇ ಸರಿ, ಎಂದರು.

ನಂತರ ಸೂತರು, ಎಲೈ ಶೌನಕಾದಿಗಳಿರಾ! ಪರೀಕ್ಷಿದ್ರಾಜನು ಸಪ್ತಸಮುದ್ರ, ಸಪ್ತದ್ವೀಪಗಳುಳ್ಳ ಈ ಭೂಮಂಡಲಕ್ಕೇ ಚಕ್ರವರ್ತಿಯಾಗಿ ರಾಜ್ಯಾನುಶಾಸನೆ ಮಾಡುತ್ತಿದ್ದಾಗ, ಅಕಸ್ಮಾತ್ ತನ್ನ ರಾಜ್ಯದ ಒಂದು ಭಾಗದಲ್ಲಿ ಕಲಿಪ್ರವೇಶವಾಗಿದೆ ಎಂಬ ವರ್ತಮಾನವನ್ನು ಕೇಳಿದನು. ಆ ಪ್ರದೇಶವನ್ನು ಕಂಡುಹಿಡಿಯುವುದಕ್ಕಾಗಿ, ತಾನೇ ರಥಾರೂಢನಾಗಿ, ದಿವ್ಯಾಸ್ತ್ರಗಳನ್ನು ಧರಿಸಿ ಚತುರಂಗಬಲ ಸಮೇತನಾಗಿ ದಿಗ್ವಿಜಯಾರ್ಥವಾಗಿ ಹೊರಟನು.

ಭದ್ರಾಶ್ವಖಂಡ, ಕೇತುಮಾಲಾಖಂಡ, ಭರತಖಂಡ, ಉತ್ತರಕುರುಗಳ ರಾಜ್ಯ, ಕಿಂಪುರುಷಖಂಡ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ದಿಗ್ವಿಜಯ ಪಡೆದು ಅವರಿಂದ ಸನ್ಮಾನಿತನಾದನು. ಅಲ್ಲಲ್ಲಿ ಜನರು ಪಾಂಡವರ ಶ್ರೇಯಸ್ಸನ್ನು ಕೊಂಡಾಡಿ, ಶ್ರೀಕೃಷ್ಣನಲ್ಲಿ ಪಾಂಡವರಿಗಿದ್ದ ಭಕ್ತಿಯನ್ನೂ, ಶ್ರೀಕೃಷ್ಣನು ಪಾಂಡವರಿಗೊಲಿದು, ಸಾರಥಿ, ಸೇವಕ, ಸ್ನೇಹಿತ, ದೂತ, ಬಂಧು ಮೊದಲಾದ ಅನೇಕ ರೂಪಗಳಿಂದ ಅವರಿಗೆ ಶುಭವನ್ನುಂಟುಮಾಡುತ್ತಿದ್ದ, ಶ್ರೀಕೃಷ್ಣಚರಿತ್ರೆಗಳನ್ನೂ ಜನರು ಸ್ಮರಿಸಿಕೊಂಡು, ಅವುಗಳನ್ನು ಪರೀಕ್ಷಿದ್ರಾಜನಿಗೆ ಹೇಳುತ್ತಿದ್ದರು. ಶ್ರೀಕೃಷ್ಣನು ಗರ್ಭದಲ್ಲಿದ್ದ ಪರೀಕ್ಷಿದ್ರಾಜನನ್ನು ಸಂರಕ್ಷಿಸಿದ ವಿಚಾರವನ್ನೂ ಜನರು ಪರೀಕ್ಷಿದ್ರಾಜನಿಗೆ ಹೇಳಿದರು.

## ಗೋಮಾತೆ ಮತ್ತು ವೃಷಭನ ಸಂವಾದ

ಇವುಗಳನ್ನು ಪರೀಕ್ಷಿದ್ರಾಜನು ಕೇಳಿ ಆನಂದವು ತುಳುಕುತ್ತಿದ್ದ ಕಣ್ಣುಗಳುಳ್ಳವನಾಗಿ, ಪಾಂಡವರನ್ನೂ, ಶ್ರೀಕೃಷ್ಣನನ್ನೂ ಕೊಂಡಾಡತಕ್ಕ ಜನರಿಗೆ, ಬಹಳ ಧನ, ಕನಕ, ವಸ್ತ್ರ, ಆಭರಣ,

ಅನರ್ಘ್ಯ ಹಾರಗಳನ್ನು ಕೊಟ್ಟು ಸನ್ಮಾನಿಸಿದನು. ಹೀಗೆ ಪರೀಕ್ಷಿದ್ರಾಜನು ದಿಗ್ವಿಜಯಮಾಡಿಕೊಂಡು ಬರುತ್ತಿದ್ದಾಗ, ಅವನು ಇದ್ದ ಸ್ಥಳಕ್ಕೆ ಸಮೀಪದಲ್ಲಿಯೇ ಒಂದು ಆಶ್ಚರ್ಯಕರವಾದ ವ್ಯಾಪಾರವು ನಡೆಯುತ್ತಿತ್ತು. ಆದನ್ನು ನಿಮಗೆ ಹೇಳುತ್ತೇನೆ ಕೇಳಿರಿ! ಒಂದು ಸ್ಥಳದಲ್ಲಿ, ಸತ್ಯವೆಂಬ ಒಂದೇ ಪಾದವನ್ನೂರಿ ನಿಂತುಕೊಂಡಿರುವ, ಮೂರುಪಾದಗಳು ಕುಂಟಾಗಿರುವ ಎತ್ತಿನರೂಪದಲ್ಲಿ ಧರ್ಮದೇವತೆಯು, ಕರುವಿನ ಅಗಲಿಕೆಯಿಂದ ವ್ಯಸನಪಡುತ್ತಾ ಕಾಂತಿವಿಹೀನವಾಗಿ ಕಣ್ಣೀರಿಡುತ್ತಿರುವ ಗೋರೂಪಿಣಿಯಾದ ಭೂದೇವಿಯನ್ನು ಕುರಿತು ಈ ರೀತಿ ಪ್ರಶ್ನೆ ಮಾಡುತ್ತಿತ್ತು

ದೇವೀ, ಗೋಮಾತೆಯೆ! ನಿನಗೆ ಏನಾದರೂ ದೇಹಾಲಸ್ಯದಿಂದ ಮುಖವು ಬಾಡಿ ವ್ಯಸನ ಉಂಟಾಗಿದೆಯೇನು? ಅಥವದೂರದಲ್ಲಿರುವನಿನ್ನಬಂಧುವರ್ಗದವರಲ್ಲಿ ಒಬ್ಬರವಿಯೋಗದಿಂದ ನೀನು ದುಃಖಿಸುತ್ತಿರುವೆಯಾ? ನಿನ್ನ ದುಃಖಕ್ಕೆ ಕಾರಣವೇನು ಹೇಳಮ್ಮಾ! ಕರುಣಾಮಯಿಯಾದ ನೀನು ನನಗೆ ಮೂರುಪಾದಗಳು ಕುಂಟಾಗಿ, ಒಂದೇ ಪಾದವಿರುವುದನ್ನು ನೋಡಿ ದುಃಖಿಸುತ್ತಿರುವೆಯಾ? ನಿನ್ನಿಂದ ಉದ್ಭವಗಳಾದ ಆಹಾರ ಧಾನ್ಯಾದಿಗಳನ್ನು ಪಾಪಿಗಳಾದ ಧರ್ಮ ಕಂಟಕರಾದ ಶೂದ್ರರು ತಿನ್ನುತ್ತಿರುವರಲ್ಲಾ ಎಂದು ದುಃಖವಾಗಿದೆಯೇ? ದೇವತೆಗಳಿಗೆ ಸಲ್ಲತಕ್ಕ ಹವಿರ್ಭಾಗಗಳು ಯಜ್ಞಯಾಗಾದಿಗಳಿಂದ ಸಲ್ಲದೇ ಹೋದುದರಿಂದ, ದೇವೇಂದ್ರನಿಂದ ಮಳೆಯಾಗದೇ ಅನಾವೃಷ್ಟಿಯಿಂದ, ಭೂಲೋಕದಲ್ಲಿ ಸಜ್ಜನರೂ ಹೊಟ್ಟೆಗಿಲ್ಲದೇ ವ್ಯಥೆಪಡುತ್ತಿರುವರಲ್ಲಾ ಎಂದು ಸಹಿಸದೇ ಕಣ್ಣೀರಿಡುತ್ತಿರುವೆಯಾ? ಭೂಮಿಯಲ್ಲಿ ಸ್ತ್ರೀಯರೂ, ಬಾಲಕರೂ ಅನಾಥರಾಗಿ, ರಕ್ಷಕರೇ ಇಲ್ಲದ್ದನ್ನೂ, ಪಶುಪ್ರಾಯರಾದ ಮನುಷ್ಯರು ನಿರ್ದಯರಾಗಿ ಬಲಿಷ್ಠರು ದುರ್ಬಲರನ್ನು ವಂಚಿಸಿ, ಹಾಳುಮಾಡಿ ತಾವು ಹೊಟ್ಟೆತುಂಬಿಕೊಳ್ಳುತ್ತಿರುವುದನ್ನು ನೋಡಿ ಸಹಿಸಲಾರೆಯಾ? ಬ್ರಾಹ್ಮಣರು ಕರ್ಮವಿಹೀನರೂ, ದುಷ್ಕರ್ಮನಿರತರೂ ಆಗಿ ಬ್ರಾಹ್ಮಣಾಭಾಸರಾಗಿರುವುದರಿಂದ, ಪವಿತ್ರರಾದ ಬ್ರಾಹ್ಮಣವಿಹೀನವಾದ ದೇಶವನ್ನು ನೋಡಿ ದುಃಖಿಸುತ್ತೀಯಾ? ಕ್ಷತ್ರಿಯರು ಕಲಿಯಿಂದ ಮುಟ್ಟಲ್ಪಟ್ಟವರಾಗಿ, ಕೇವಲ ಶೂದ್ರಪ್ರಾಯರೂ, ದುರ್ಬಲರೂ ಆಗಿ, ದೇಶವನ್ನು ಆಳಲಾರದೆ, ದೇಶವು ಅವ್ಯವಸ್ಥೆಯಾಗಿದೆಯೆಂದು ದುಃಖಿಸುತ್ತೀಯಾ!

ಅಷ್ಟೇಕೆ ಸರ್ವಪ್ರಜೆಗಳೂ, ಎಲ್ಲಿ ಅಂದರೆ ಅಲ್ಲಿ ತಿಂದು, ಬೇಕಾದಲ್ಲಿ ವಾಸಿಸಿ, ಕಾಲನಿಯಮವಿಲ್ಲದೆ ಸ್ನಾನಪಾನಾದಿಗಳನ್ನು ಮಾಡುತ್ತಾ, ಸದಾ ಆಹಾರ, ವಿಹಾರಾಸಕ್ತರಾಗಿ, ದುಷ್ಟಭೋಗಗಳಿಂದ ವಿನಾಶೋನ್ಮುಖರಾಗಿರುವುದನ್ನು ನೋಡಿ ದುಃಖಿಸುವಿಯಾ?

## अथ षोडशोऽध्यायः

ಕೇವಲ ಅಧರ್ಮಧುರಂಧರರಾದ ದುಷ್ಟಜನರ ಸ್ಪರ್ಶವನ್ನು ಸಹಿಸದೆ ದುಃಖಿಸುತ್ತಿದ್ದೀಯಾ? ಭೂಭಾರಸದೃಶರಾದವರನ್ನು ಕೊಂದು ಭೂಭಾರವನ್ನಿಳುಹಲು ಅವತರಿಸಿದ್ದ ಶ್ರೀಕೃಷ್ಣನು ಈಗ ಭೂಲೋಕವನ್ನು ಬಿಟ್ಟದ್ದರಿಂದ, ನಾನು ಅನಾಥಳಾದೆನೆಂದು, ಆ ಶ್ರೀಕೃಷ್ಣನ ಅವತಾರ ಲೀಲೆಗಳನ್ನು ಸ್ಮರಿಸುತ್ತಾ ದುಃಖಿಸುತ್ತಿರುವೆಯಾ?

ಎಲೈ! ಗೋರೂಪಿಣಿಯಾದ ಭೂದೇವಿಯೆ! ಈ ಕಾರಣಗಳಲ್ಲಿ ಯಾವ ಕಾರಣದಿಂದ ನೀನು ದುಃಖಿಸುತ್ತಿರುವೆಯೋ ಹೇಳು ಅಥವ ಪುಷ್ಟಾಂಗರಾದ ದುಷ್ಟರಿಂದ ನಿನ್ನ ಸರ್ವಸೌಭಾಗ್ಯಗಳೂ ಭಂಗಪಡಿಸಲ್ಪಡುತ್ತಿವೆಯೆಂದು, ಇಂತಹ ಸ್ಥಿತಿಯನ್ನುಂಟುಮಾಡಿರುವ ಕಾಲಬಲವನ್ನು ನೋಡಿ ಭಯದಿಂದ ಶೋಕಿಸುತ್ತೀಯಾ, ಎಂದು ಧರ್ಮಪುರುಷನಾದ ಎತ್ತು, ಗೋರೂಪಳಾದ ಭೂದೇವಿಯನ್ನು ಪ್ರಶ್ನೆ ಮಾಡಿತು.

### ಮಹದ್ಗುಣಗಳ ಚಿಂತನಾ ಕ್ರಮ

ಅದಕ್ಕೆ, ಗೋರೂಪಿಯಾದ ಧರಣಿಯು ಈ ರೀತಿ ಉತ್ತರ ಹೇಳಿದಳು ಎಲೈ ಧರ್ಮಪುರುಷನೇ! ನೀನು ಸತ್ಯ, ಶೌಚ, ದಯಾ, ದಾನಗಳೆಂಬ ನಾಲ್ಕು ಪಾದಗಳಿಂದ ಸಂಚರಿಸುತ್ತಿದ್ದಾಗ, ಭೂಲೋಕದಲ್ಲಿ ಸರ್ವ ಜನರೂ ಧರ್ಮಿಷ್ಠರಾಗಿ, ಎಷ್ಟು ಸುಖದಿಂದ ಇದ್ದರೆಂಬುದನ್ನು ನೀನೇ ಬಲ್ಲಿ. ಈಗ ನೀನು ಒಂದೇ ಕಾಲಿನಿಂದ ಸಂಚರಿಸುತ್ತಿರುವುದರಿಂದ ನನಗೆ ದುಃಖಕ್ಕೆ ಕಾರಣಗಳೇನೆಂಬುದೂ ನಿನಗೆ ಗೊತ್ತಿವೆ. ಆದರೂ ಹೇಳುತ್ತೇನೆ ಕೇಳು ಯಾವ ಶ್ರೀಕೃಷ್ಣನ ದಯೆಯಿಂದ ನೀನು ಈ ಕಲಿಯುಗದಲ್ಲಿಯೂ ಕೂಡ, ಆಗಾಗ್ಯೆ ಪ್ರದೇಶ ವಿಶೇಷಗಳಲ್ಲಿ, ನಿನ್ನ ತಪಸ್ಸು, ಶುಚಿತ್ವ , ದಯಾ ಸತ್ಯಗಳೆಂಬ ನಾಲ್ಕು ಕಾಲುಗಳನ್ನೂ ಭೂಮಿಯಲ್ಲಿ ಊರಿ ಸುಖವಾದ ಸಂಚಾರವುಳ್ಳವಾಗಿ, ಲೋಕದಲ್ಲಿನ ಜನರಲ್ಲಿ, ಸಜ್ಜನತ್ವವನ್ನುಂಟುಮಾಡಿ, ಅವರಿಗೆ ಬಿಂಬರೂಪನಾದ ಶ್ರೀನಿವಾಸನ ಅನಂತಕಲ್ಯಾಣಗುಣಗಣಗಳಲ್ಲಿ ಕೆಲವಾದ ಮಹದ್ಗುಣಗಳನ್ನು ಪ್ರತಿಬಿಂಬ ಭಾವದಿಂದ ಉಪಾಸನೆ ಮಾಡಿಸಿ, ಅವರಿಗೆ ಸಕಲ ಸುಖಗಳನ್ನೂ ಉಂಟುಮಾಡುತ್ತಿದ್ದೀ. ಅಂತಹ ಕಲ್ಯಾಣಗುಣ ಸಂಪನ್ನನಾದ ಶ್ರೀಕೃಷ್ಣನಿಂದ ತ್ಯಜಿಸಲ್ಪಟ್ಟು, ಲೋಕವು ಧರ್ಮಿಷ್ಠರದ ಭಗವದ್ಭಕ್ತರಿಂದಲೂ ರಹಿತವಾಗಿರುತ್ತಾಗಿ, ನಾನೂ ನಿನ್ನಂತೆ ದುಃಖಾರ್ತಳಾಗಿರುತ್ತೇನೆ. ಆತ್ಮಹಿತಾರ್ಥವಾಗಿ ಈಗ ಅದೃಶ್ಯವಾಗಿರುವ ಸಜ್ಜನರ ಗುಣಗಳನ್ನು ಒಂದೊಂದಾಗಿ ಸ್ಮರಿಸಿ ಹೇಳುತ್ತೇನೆ ಕೇಳು.

## अथ षोडशोऽध्यायः

ಬಿಂಬರೂಪನಾದ ಪರಮಾತ್ಮನು ನಿರ್ದುಃಖಾನಂದಾನುಭವರೂಪನಾದ್ದರಿಂದ ಸತ್ಯಶಬ್ದ ವಾಚ್ಯನಾಗಿರುವನು. ಪ್ರತಿಬಿಂಬರಾದ ಜೀವರು ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟುಮಾಡುವ, ಸತ್ಯಂ ಬ್ರೂಹಿ ಹಿತಂ ನೃಣಾಂ, ಎಂಬ ಶ್ರೀಮದ್ವಾದಿರಾಜತೀರ್ಥರ ವಾಕ್ಯದಂತೆ, ಮಾತುಗಳಾಡುವರಾಗಿ, ಯಥಾರ್ಥ ಭಾಷೆಯುಳ್ಳವರಾಗಿ ಸತ್ಯಶಬ್ದ ವಾಚ್ಯರಾಗಿರುತ್ತಾರೆ. ಪ್ರಕೃತಿ ಸಂಬಂಧರಹಿತನಾದ ಪರಮಾತ್ಮನು ಸದಾ ಅಂತರ್ಬಾಹ್ಯ ಪರಿಶುದ್ಧನಾದ್ದರಿಂದ ಶುಚಿ ನಾಮಕನೆಂದು ಕರೆಸುತ್ತಾನೆ. ಜೀವರು ಮೃಜ್ಜಲಾದಿಗಳಿಂದ ಬಾಹ್ಯಶುದ್ಧಿಯನ್ನೂ, ರಾಗದ್ವೇಷಾದಿಗಳ ರಾಹಿತ್ಯದಿಂದ ಅಂತಹಶುದ್ಧಿಯನ್ನೂ ಹೊಂದಿ ಶುಚಿಗಳೆನಿಸುತ್ತಾರೆ. ಸಜ್ಜನರಲ್ಲಿಯೂ, ಪ್ರಾಣಿಸಾಮಾನ್ಯದಲ್ಲಿಯೂ ಉಂಟಾಗುವ ಮನಸ್ಸಿನ ಮೃದುಸ್ವಭಾವವು, ಚಿತ್ತದ್ರವತೆಯು, ದಯೆಯೆಂದೆನಿಸಿಕೊಂಡು, ಪರಮಾತ್ಮನಲ್ಲೂ, ಜೀವರಲ್ಲೂ, ಒಂದೇ ತರಹ ಭಾವನೆಯಿಂದ ಕೂಡಿದ್ದಾಗಿರುತ್ತದೆ. ಪರಮಾತ್ಮನಿಗೆ, ಭಕ್ತರು, ದ್ವೇಷಿಗಳು, ಮಧ್ಯಮರಿಗೆ, ಸುಖ, ದುಃಖ, ಮಿಶ್ರಫಲಗಳನ್ನು ಕೊಡುವುದೇ ದಾನವೆನ್ನಿಸುತ್ತದೆ.

ಜೀವರಿಗೆ, ದೇಶ, ಕಾಲ, ಪಾತ್ರತಾನುಸಾರ ದ್ರವ್ಯತ್ಯಾಗವು ದಾನವೆಂದೆನಿಸುವುದು. ಪರಮಾತ್ಮನಲ್ಲಿಸ್ವಪರಭೇದಭಾವವಿಲ್ಲದಿರುವುದೇ,ಸರ್ವತ್ರಸಮಭಾವನೆಯೇತ್ಯಾಗವೆನಿಸುವುದು. ಜೀವರಲ್ಲಿ ಸನ್ಯಾಸವು ತ್ಯಾಗವೆನಿಸುವುದು. ಪರಮಾತ್ಮನಿಗೆ ಸ್ವರೂಪಾನಂದಾನುಭವವೂ, ಇತರ ಪ್ರಾಕೃತ ಭೋಗಗಳ ಅನಪೇಕ್ಷೆಯೂ, ಸಂತೋಷವೆನಿಸುತ್ತದೆ. ಜೀವರಿಗೆ ಯದೃಚ್ಛಾಪ್ರಾಪ್ತವಾದ ಬಾಹ್ಯಸುಖಗಳಲ್ಲಿ ವಿರಕ್ತಿಯೇ ಸಂತೋಷವೆನಿಸುತ್ತದೆ. ಆರ್ಜವವೆಂಬುದು ಅವಕ್ರವಾದ ವ್ಯವಹಾರ ಅಥವ ಕಾಯಾ, ವಾಚಾ, ಮನಸಾ, ಏಕಪ್ರವರ್ತನೆಯೆಂಬ ಋಜು ಸ್ವಭಾವವು, ಪರಮಾತ್ಮ ಜೀವರುಗಳಲ್ಲಿ ಒಂದೇ ತರಹ ಭಾವವುಳ್ಳದ್ದು. ದೇವರು ಸ್ವತಃ ಸುಖಸ್ವರೂಪನೂ, "ಏಷ ಪ್ರಿಯಶಿರಃ ಮೋದೋ ದಕ್ಷಿಣಃ ಪಕ್ಷಃ ಪ್ರಮೋದೋ ಉತ್ತರಃ ಪಕ್ಷಃ ಆನಚಿದ ಆತ್ಮಾ "ಎಂಬಂತೆ, ತಾನೇ ಪ್ರಿಯನಾಮಕನಾದುದರಿಂದಲೂ, ಪ್ರಿಯ ಅಪ್ರಿಯವಸ್ತುಗಳೆಂಬ ಭಾವನೆ ಇಲ್ಲದವನೂ ಆದುದರಿಂದ ಶಮನಾಮಕನು ಆಗಿರುತ್ತಾನೆ - ಜೀವರುಗಳಿಗೆ ಭಗವನ್ನಿಷ್ಠೆಯೂ ಇತರ ವಿಷಯಗಳಲ್ಲಿ ಅನಾಸಕ್ತಿಯೂ, ಉಪೇಕ್ಷೆಯೂ, ಶಮವೆನಿಸುತ್ತದೆ.

ಸ್ವಾಧೀನಗಳಾದ ಇಂದ್ರಿಯಗಳನ್ನು ಹೊಂದುವಿಕೆಯು ದಮವೆಂದೆನಿಸುವುದು. ಇವು ಸ್ವರೂಪೇಂದ್ರಿಯಗಳಿಂದ ಇರುವ ಶುದ್ಧವೃತ್ತಿಯು, ಪರಮಾತ್ಮನಲ್ಲಿಯೂ, ಜೀವರಲ್ಲಿಯೂ ಸಮಾನರೂಪ ಭಾವವು. ಪರಮಾತ್ಮನಲ್ಲಿ ವೇದರೂಪವಾದ ಮುಕ್ತಿಪ್ರದ ಜ್ಞಾನವು ತಪವೆನಿಸುತ್ತದೆ.

ಜೀವರಲ್ಲಿ ಕೃಚ್ಛ್ರ, ಚಾಂದ್ರಾಯಣ, ವೇದಾಧ್ಯಯನ, ಶ್ರವಣ, ಮನನ, ಧ್ಯಾನಾದಿ ಉಪಾಸನೆಗಳು ತಪವೆನಿಸುತ್ತದೆ.

ಪರಮಾತ್ಮನಿಗೆ ಮೂಲ ರೂಪ, ಅನಂತಾವತಾರ ರೂಪ, ಸರ್ವ ಜೀವ ಜಡ ಪ್ರವಿಷ್ಟ ರೂಪಗಳಲ್ಲಿ, ನಿರ್ದೋಷ ಗುಣ ಪೂರ್ಣತೆಯಿಂದ ಕೂಡಿ, ಸಮಾನ ರೂಪಗಳಾಗಿಯೂ, ಪರಸ್ಪರ ಭೇದವಿಲ್ಲದವುಗಳಾಗಿಯೂ ಇರುವ ಸ್ವಾನುಭವವೇ ಸಾಮ್ಯವೆನಿಸುವುದು. ಜೀವರು, ಪರಮಾತ್ಮನಿಗೂ, ಅವತಾರಗಳಿಗೂ, ಸರ್ವಾಂತರ್ಯಾಮಿ ರೂಪಗಳಿಗೂ, ಗುಣ ರೂಪ ಕ್ರಿಯಾದಿಗಳಿಗೂ, ಪರಸ್ಪರ ಲೇಶ ಭೇದವೂ ಇಲ್ಲವೆಂದೂ, ಎಲ್ಲವೂ ಪೂರ್ಣಗಳೂ, ಪರಮಾತ್ಮ ಸ್ವರೂಪಗಳೇ ಎಂದು ಉಪಾಸನೆ ಮಾಡುವುದೇ ಸಾಮ್ಯವೆನಿಸುತ್ತದೆ. ಇದು ಪರಮಾತ್ಮನಲ್ಲಿ, ಜೀವರಲ್ಲಿ ಒಂದೇ ತರಹವಾದ ಭಾವನೆಯು.

ಪರಮಾತ್ಮನಲ್ಲಿ ಭೃಗು ಋಷಿಗಳ ಪಾದ ತಾಡನೆ ಎಂಬ ಮಹಾಪರಾಧದ, ಭೀಷ್ಮನ ಬಾಣ ಪ್ರಯೋಗದ, ಸಹನೆಯೇ ತಿತಿಕ್ಷುವೆಂದು ಕರೆಸುತ್ತದೆ. ಜೀವರಲ್ಲಿ ಸುಖ ದುಃಖ, ರಾಗ ದ್ವೇಷ, ಶೀತೋಷ್ಣ, ಇಂತಹ ದ್ವಂದ್ವಗಳ ಸಹನೆಯೇ ತಿತಿಕ್ಷುವೆನಿಸಿಕೊಳ್ಳುತ್ತದೆ. ಉ ಎಂಬ ರುದ್ರದೇವರ ಪ್-ಪಾಲಕರಾದ ಮುಖ್ಯಪ್ರಾಣದೇವರಲ್ಲಿ, ನಿಯಾಮಕನಾದ ಮುಖ್ಯಪ್ರಾಣವಾಚ್ಯ ಶ್ರೀಪರಮಾತ್ಮನಲ್ಲಿ ರತಿಯೇ, ದೇವತೆಗಳಿಗೆ ಉಪರತಿ ಎಂದೆನಿಸುತ್ತದೆ. ಮನುಷ್ಯರಿಗೆ ಕಾಮ್ಯಕರ್ಮ ನಿವೃತ್ತಿಯಾಗಲೀ, ಕೃತಕೃತ್ಯರಾಗಿ ವ್ಯರ್ಥ ವ್ಯವಹಾರಗಳನ್ನು ಬಿಡುವುದೇ ಉಪರತಿಯೆನಿಸುವುದು.

ಪರಮಾತ್ಮನಿಗೆ ಇರುವ ಸರ್ವಶಬ್ದಗ್ರಹಣ ಶಕ್ತಿಯೇ ಶೃತವೆನಿಸುತ್ತದೆ. ಜೀವರಿಗೆ ಶಾಸ್ತ್ರಾರ್ಥಗಳನ್ನು ಗುರುಮುಖದಿಂದ ಕೇಳುವುದೇ ಶೃತವೆನಿಸುತ್ತದೆ. ಪರಮಾತ್ಮನಲ್ಲಿ ಸಾರ್ವಜ್ಞತೆಯು ಜ್ಞಾನವೆನಿಸುತ್ತದೆ. ಜೀವರಲ್ಲಿ ಪರೋಕ್ಷ ಅಪರೋಕ್ಷಭೇದಗಳಿಂದ ಭಗವದ್ವಿಷಯಗಳನ್ನು ತಿಳಿಯುವುದೇ ಜ್ಞಾನವು. ಪರಮಾತ್ಮನಲ್ಲಿ ತನ್ನ ವಿನಹ ಇತರ ಸರ್ವವೂ ಅಸಾರವಾದದ್ದೆಂದು ಭಾವವು ವಿರಕ್ತಿಯು. ಜೀವರಲ್ಲಿ ಶಬ್ದಾದಿ ವಿಷಯಗಳಲ್ಲಿ ಹೇಯತಾ ಬುದ್ಧಿಯು ವೈರಾಗ್ಯವು.

ಸಮಸ್ತ ಜಗತ್ತಿಗೆ ಸ್ವಾಮಿತ್ವವು ಪರಮಾತ್ಮನ ಐಶ್ವರ್ಯವು. ಅಣಿಮಾದಿ ಯೋಗಸಿದ್ಧಿರೂಪ ಅಷ್ಟೈಶ್ವರ್ಯ ಪ್ರಾಪ್ತಿಯೂ, ಯುದ್ಧಾದಿಗಳಲ್ಲಿ ಅಪರಾಜಯವೂ ಜೀವರಿಗೆ ಐಶ್ವರ್ಯವು. ಪರಮಾತ್ಮನಲ್ಲಿ ಅಪ್ರತಿಹತ ಪರಮ ಕಾಂತಿಯು ತೇಜಸ್ಸೆನಿಸುವುದು. ಜೀವರಲ್ಲಿ ಬ್ರಹ್ಮವರ್ಚಸ್ಸೇ

ತೇಜಸ್ಸೆನಿಸುವುದು. ಸರ್ವ ಚರಾಚರ ಜಗತ್ತನ್ನು ಆಧಾರ ರೂಪನಾಗಿ ಧರಿಸಿರುವುದೇ ದೇವರಿಗೆ ಧೃತಿ ಎನಿಸುವುದು. ಜೀವರಿಗೆ ಸರ್ವತ್ರ ಜಿಹ್ವೆ, ಉಪಸ್ಥೇಂದ್ರಿಯಗಳನ್ನು ಜಯಿಸುವುದೇ ಧೃತಿ ಎನಿಸುತ್ತದೆ. ವಿಕಾರವಾದ ವಸ್ತುಗಳಲ್ಲಿದ್ದರೂ ವಿಕಾರರಹಿತನಾಗಿರುವುದೇ ದೇವರಿಗೆ ಧೃತಿ ಎಂದೂ ಕರೆಸುವುದು. ಪರಮಾತ್ಮನಿಗೆ ಸರ್ವ ಸ್ವಾತಂತ್ರ್ಯವೂ, ಕಳೆದುಹೋದ, ಈಗಿರುವ, ಮುಂದೆ ಉತ್ಪನ್ನವಾಗತಕ್ಕ ಸಕಲ ಬ್ರಹ್ಮಾಂಡಾದಿ, ಜೀವರುಗಳ ಅಶೇಷ ವಿಶೇಷ ಜ್ಞಾನವು, ಪರಾಧೀನತೆ ಇಲ್ಲದೇ ಇರುವುದೂ, ಸ್ಮೃತಿ ಎನಿಸುವುದು.

ಜೀವರಿಗೆ ಪರಮಾತ್ಮನ ಸ್ವತಂತ್ರತೆಯೂ, ಇತರ ಸರ್ವರಿಗೆ ಪರಮಾತ್ಮಾಧೀನತೆಯೂ ತಿಳಿಯುವುದೇ ಸ್ಮೃತಿ ಎನಿಸುವುದು. ದೇವರಿಗೆ ಜೀವರ ವಿಚಿತ್ರ ವಿಚಿತ್ರ ಜ್ಞಾನೇಚ್ಛಾ ಕ್ರಿಯಗಳನ್ನು ಉತ್ಪತ್ತಿಮಾಡಿ, ಅವರಿಂದ ಚಿತ್ರ ವಿಚಿತ್ರಕರ್ಮಗಳನ್ನು ಮಾಡಿಸಿ, ಅದಕ್ಕನುಸಾರವಾಗಿ ವಿಚಿತ್ರವಿಚಿತ್ರದೇಹಾದಿಗಳನ್ನು ಸೃಷ್ಟಿ ಮಾಡುವ ಗುಣವೇ ಕುಶಲತೆ ಎನಿಸುತ್ತದೆ. ಜೀವರಲ್ಲಿ 'ಯೋಗ: ಕರ್ಮಸು ಕೌಶಲಂ' ಎಂಬ ಗೀತಾವಾಕ್ಯದಂತೆ, ಭಗವದರ್ಪಣ ಬುದ್ಧಿಯಿಂದ ನಿವೃತ್ತಿ ಕರ್ಮಾಚರಣೆಯೂ, ಶಿಲ್ಪ, ಗಾನ, ವಿದ್ಯಾದಿ ಪ್ರೌಢತೆಯೂ ಕುಶಲತೆ ಎನಿಸುತ್ತದೆ.

ಪರಮಾತ್ಮನ ದೇಹವು ಅನಚಿತ ಕೋಟಿ ಸೂರ್ಯಪ್ರಕಾಶದಿಂದ ಸ್ವಾಭಾವಿಕವಾಗಿ ಬೆಳಗುವುದೇ ಕಾಂತಿ ಎನಿಸುವುದು. ಜೀವರಿಗೆ ಪರಮಾತನಲ್ಲಿ ಭಕ್ತಿಯ ಅಪೇಕ್ಷೆಯೇ ಕಾಂತಿ ಎನಿಸುವುದು. ಪರಮಾತ್ಮನಿಗೆ ಶುಭವನ್ನೇ ಭೋಗಿಸುವುದು ಸೌಭಾಗ್ಯವೆನಿಸುತ್ತದೆ. ಜೀವರಿಗೆ ಲೋಕದ ಜನರಿಗೆ ಮಂಗಳರೂಪರಾಗಿ, ಮನೋಹರರಾಗಿ ಕಾಣುವುದೇ ಸೌಭಾಗ್ಯವೆನಿಸುತ್ತದೆ. ಭಕ್ತರಲ್ಲಿ ಮೃದು ಸ್ವಭಾವವು, ಪರಮಾತ್ಮನಲ್ಲಿಯೂ, ಜೀವರಲ್ಲಿಯೂ, ಮಾರ್ದವವೆನಿಸುತ್ತದೆ. ಕ್ರೋಧವಿಲ್ಲದಿರುವುದೇ ಕ್ಷಮಾಗುಣವು. ಧಾರ್ಷ್ಟ್ಯತೆಯೇ ಪ್ರಾಗಲ್ಭ್ಯವು. ವಿನಯವೇ ಪ್ರಶ್ರಯವು. ಶೀಲವು ಲೋಕಮನೋಹರ ಸ್ವಭಾವವು. ಸಹನಾಶಕ್ತಿಯು ಸುಖದುಃಖಗಳಲ್ಲಿ ಸಮಭಾವನೆಯೂ ಇವುಗಳು ಪರಮಾತ್ಮ ಜೀವರಲ್ಲಿ, ಉಭಯತ್ರ ಒಂದೇ ತರಹ ಭಾವನೆಗಳು. ಓಜಸ್ಸು ಪರಮಾತ್ಮನಲ್ಲಿ ಇತರ ಸರ್ವವನ್ನೂ ಗೆಲ್ಲುವ ಶಕ್ತಿಯು.

ಜೀವರಲ್ಲಿ ಮಾನಸಿಕ ಶಕ್ತಿಯು, ಮನೋಧಾರಢ್ಯವು, ಓಜಸ್ಸೆನಿಸುವುದು. ಪರಮಾತ್ಮನಲ್ಲಿ ಸ್ವೇಚ್ಛಾಕರಣ ಶಕ್ತಿಯು, ಅಂದರೆ ಇಷ್ಟ ಬಂದಂತೆ ಮಾಡಲು ಸಾಧ್ಯವಾದ ಶಕ್ತಿಯು ಬಲವೆಂದೆನಿಸುತ್ತದೆ, ಜೀವರಲ್ಲಿ ಶರೀರ ಧಾರಣಾ ಶಕ್ತಿಯು ಬಲವೆಂದೆನಿಸುತ್ತದೆ. ಪರಮಾತ್ಮನಲ್ಲಿ ವೀರ್ಯ, ಔದಾರ್ಯ, ಜ್ಞಾನ, ಬಲ, ಐಶ್ವರ್ಯ, ಕಾಂತಿಗಳ ಪೂರ್ಣತೆಯು ಭಗಃ

ಅಥವಾ ಭಾಗ್ಯವೆಂದೆನಿಸುತ್ತದೆ. ದೇವರಿಗೆ ನಿತ್ಯಭಯವಿಲ್ಲದೇ, ತತ್ಕಾರ್ಯವಾದ ದೇಹ, ಅಂಗ ಕಂಪನಾದಿಗಳಿಲ್ಲದಿರುವುದೇ ಸ್ಥೈರ್ಯವೆನಿಸುತ್ತದೆ. ಜೀವರಿಗೆ ಧರ್ಮಮಾರ್ಗದಿಂದ ಚಲಿಸದಿರುವುದೇ ಸ್ಥೈರ್ಯವೆನಿಸುತ್ತದೆ. ದೇವರಲ್ಲಿ ವೇದವಾಕ್ಯಗಳ ಸತ್ಯತೆಯನ್ನು ತಿಳಿದಿರುವ ಬುದ್ಧಿಯು ಆಸ್ತಿಕ್ಯವೆಂದೆನಿಸುತ್ತದೆ. ಜೀವರಲ್ಲಿ ಗುರುವಾಕ್ಯಗಳಲ್ಲಿ ಶ್ರದ್ಧೆಯೂ, ನಂಬಿಕೆಯೂ ಆಸ್ತಿಕ್ಯವು.

ಪರಮಾತ್ಮನಿಗೆ ಇತರರಿಗೆ ಮಾನವನ್ನುಂಟು ಮಾಡುವುದೇ ಮಾನವೆಂದೆನಿಸುತ್ತದೆ. ಜೀವರಿಗೆ ದೇಹದಲ್ಲೂ, ಬಂಧು, ಸ್ವವಸ್ತುಗಳಲ್ಲಿನ ಅಭಿಮಾನವೇ ಮಾನವೆಂದೆನಿಸುತ್ತದೆ. ಪರಮಾತ್ಮನಿಗೆ, ಸರ್ವತ್ರದಲ್ಲಿರುವ ತನ್ನ ಅನಂತರೂಪಗಳಿಂದ ರೂಪತ್ವೇನ ಅಬೇಧವೆಂದು ತಿಳಿಯುವುದೇ ಅನಹಂಕಾರವು. ಜೀವರಿಗೆ ನಾನು ಸ್ವತಂತ್ರಕರ್ತನಲ್ಲಾ, ದೇವರೇ ನನ್ನಲ್ಲಿದ್ದು ಸರ್ವಕಾರ್ಯಗಳನ್ನೂ ಮಾಡಿಸುವನೆಂದು ತಿಳಿಯುವುದೇ ಅನಹಂಕಾರವು. ಇಂತಹ ಅನೇಕ ಮಹದ್ಗುಣಗಳು ಶ್ರೀಕೃಷ್ಣನಲ್ಲಿ ಪಾದುರ್ಭವಿಸಿ, ಶ್ರೀಕೃಷ್ಣನಿರುವವರಿಗೂ ಜೀವರಲ್ಲಿಯೂ ಪ್ರತಿಬಿಂಬಿಸಿ, ಲೋಕವು ಪಾವನ ಯಶಸ್ಸಿನಿಂದ ಕೂಡಿತ್ತು . ಇಂತಹ ಪರಮಾತ್ಮನಿಂದ ರಹಿತವಾದ ನನ್ನನ್ನೂ, ಪಾಪಿಷ್ಠನಾದ ಕಲಿಯಿಂದ ಆಕ್ರಮಿಸಲ್ಪಟ್ಟ ಜನರನ್ನೂ, ತಪೋ ದಾನ ದಯೆಗಳೆಂಬ ಮೂರು ಪಾದಗಳಿಲ್ಲದಿರುವ, ಸತ್ಯವೆಂಬ ಒಂಟಿ ಕಾಲಲ್ಲಿ ನಿಂತಿರುವ ನಿನ್ನನ್ನೂ, ಪಿತೃಯಜ್ಞ, ಋಷಿಯಜ್ಞ, ಅಗ್ನಿಹೋತ್ರ, ಹೋಮಾದಿ ಸತ್ಕ್ರಿಯೆಗಳಿಲ್ಲದೇ, ತಮಗೆ ಸಜ್ಜನರಿಂದ ಸಲ್ಲಬೇಕಾದ ಹವಿರ್ಭಾಗಗಳಿಂದ ರಹಿತರಾದ ದೇವತೆ, ಪಿತೃ, ಋಷಿ, ಸಾಧುಜನರನ್ನೂ, ವರ್ಣಾಶ್ರಮಧರ್ಮ ವಿಹೀನರಾದ ಚಾತುರ್ವರ್ಣದವರನ್ನೂ, ಕಂಡು ದುಃಖಿಸುತ್ತಿದ್ದೇನೆ. ಇವೆಲ್ಲಾ ನನ್ನ ದುಃಖಕ್ಕೆ ಇತರ ಕಾರಣಗಳು.

ಮೂಲಕಾರಣವು ಶ್ರೀಕೃಷ್ಣನು ಭೂಲೋಕವನ್ನು ಬಿಟ್ಟದ್ದರಿಂದ ಉಂಟಾದ ಸಹಿಸಲಸಾಧ್ಯವಾದ ದುಃಖವು ನನ್ನನ್ನು ಬಾಧಿಸುತ್ತಿದೆ. ಪರಮಾತ್ಮನಲ್ಲಿ ಏಕಾಂತ ಭಕ್ತರಾದ ಯಾವ ಬ್ರಹ್ಮಾದಿ ದೇವತೆಗಳು ಬಹುಕಾಲ ಶ್ರದ್ಧಾಭಕ್ತಿಯಿಂದ ಲಕ್ಷ್ಮೀದೇವಿಯನ್ನು ಆರಾಧಿಸಿ, ಆ ಲಕ್ಷ್ಮೀಕಟಾಕ್ಷ ಲವಲೇಶವನ್ನು ತಮ್ಮ ಮೋಕ್ಷಪ್ರಾಪ್ತಿಗಾಗಿ ಪ್ರಾರ್ಥಿಸುವರೋ, ಅಂತಹ ಸಕಲ ಸೌಭಾಗ್ಯನಿಧಿಯಾದ ಶ್ರೀದೇವಿಯು ತನಗೆ ಅತ್ಯಂತ ಪ್ರಿಯವಾದ ಕಮಲಪುಷ್ಪ ದ ವನವನ್ನು ತ್ಯಜಿಸಿ, ಶ್ರೀಪರಮಾತ್ಮನ ಕೃಪಾಕಟಾಕ್ಷವನ್ನು ಬಯಸಿ, ನಿರಂತರ ಅವನ ಪಾದಸೇವೆಯನ್ನು ಮಾಡುತ್ತಿರುವಳೋ,ಯಾವ ಆ ಶ್ರೀಕೃಷ್ಣನ ಪಾದತಳದಲ್ಲಿದ್ದ ವಜ್ರಾಂಕುಶ ಧ್ವಜ ಪದ್ಮಾದಿ ರೇಖೆಗಳು, ಶ್ರೀಕೃಷ್ಣನು ತನ್ನ ಪಾದಗಳಿಂದ ಮೆಟ್ಟಿ

ನಡೆಯುತ್ತಿದ್ದಾಗ, ದಿವ್ಯಾಭರಣಗಳಂತೆ ನನ್ನಲ್ಲಿ ಶೋಭಿಸುತ್ತಿತ್ತೋ, ಆ ಯಾವ ಪಾದದ್ವಂದ್ವಗಳ ಸ್ಪರ್ಶದಿಂದ ನನಗೆ ವಿಚಿತ್ರ ಸುಖ ಉಂಟಾಗುತ್ತಿತ್ತೋ, ಅದನ್ನೆಲ್ಲಾ ಕಳೆದುಕೊಂಡ ನನಗೆ ಈಗ ದುಃಖವಲ್ಲದೇ ಬೇರೆ ಏನು ತಾನೇ ಉಳಿದಿದೆ?

ಭೂಮಿಯಲ್ಲಿ ಅಸುರರು ಹುಟ್ಟಿ ಅವರ ವಂಶಗಳು ಬೆಳೆದು ಭೂಭಾರವು ಸಹಿಸಲಾಗದೇ ಇದ್ದಾಗ ಯಾವ ಶ್ರೀಕೃಷ್ಣನು ನೂರು ಅಕ್ಷೋಹಿಣಿ ಸೈನ್ಯಗಳೆಂಬ ಅಸುರ ಸಮೂಹಗಳನ್ನು ಕೌರವ ಪಾಂಡವ ಯುದ್ಧ ವ್ಯಾಜದಿಂದ ಸಂಹರಿಸಿ ಭೂಭಾರವನ್ನಿಳುಹಿದನೋ, ಯಾವ ಶ್ರೀಕೃಷ್ಣನ ಪರಮ ಮಂಗಳಮೂರ್ತಿಯ ದರ್ಶನವೂ, ಪ್ರೇಮಪೂರ್ಣವಾದ ನೋಟವೂ, ಮನೋಹರ ಮಂದಹಾಸವೂ, ಕರ್ಣಾನಂದಕರಗಳಾದ ಮೃದು ಮಧುರ ಮಾತುಗಳೂ, ದಿವ್ಯಾಂಗನೆಯರಿಂದ ಕೂಡಿ ಸರಸ ಸಲ್ಲಾಪಗಳಿಂದ ಶ್ರೀಕೃಷ್ಣನು ರಾಸಕ್ರೀಡೆಗಳಲ್ಲಿ ನರ್ತನಾದಿಗಳನ್ನು ಮಾಡುತ್ತಿದ್ದಾಗ, ಅವರೆಲ್ಲರ ಕಾಮಪೂರಿತವಾದ ಸುಖದಾಯಕ ನಡಗೆಯಿಂದ ಅವರುಗಳ ಪಾದಸ್ಪರ್ಶಗಳು ನನಗುಂಟಾಗಿ ಅಭಿವ್ಯಕ್ತವಾಗುತ್ತಿದ್ದ ಅಲೌಕಿಕ, ಅತ್ಯಂತ ವಿಲಕ್ಷಣಾನಂದವನ್ನೂ ಕಳೆದುಕೊಂಡ ನನಗೆ ದುಃಖವನ್ನು ಸಹಿಸಲು ಹೇಗೆ ತಾನೇ ಸಾಧ್ಯವಾದೀತು?

ಆ ಗೋಪಿಯರ, ಶ್ರೀಕೃಷ್ಣನ ನರ್ತನ ತಾಳಗತಿಗನುಸಾರವಾಗಿ ಕೇಳಿಬರುತ್ತಿದ್ದ ಕಾಲಿನ ಗೆಜ್ಜೆಗಳ ಇಂಪಾದ ಕಿಂಕಿಣೀ ಮಂಜುಳ ಧ್ವನಿಗಳನ್ನು ಕೇಳಿ ಆನಂದಿಸುವ ಸೌಭಾಗ್ಯವು ನನಗೆ ಇನ್ನೆಲ್ಲಿಂದ ಬಂದೀತು? ಎಂಬುದಾಗಿ ಆ ಗೋವೂ, ವೃಷಭವೂ ಮಾತನಾಡಿಕೊಳ್ಳುತ್ತಿದ್ದುದನ್ನು ಪರೀಕ್ಷಿದ್ರಾಜನು ಸರಸ್ವತೀನದಿಯು ಪೂರ್ವಾಭಿಮುಖವಾಗಿ ಹರಿಯುತ್ತಿದ್ದ ಸ್ಥಳಕ್ಕೆ ಬಂದು ಕೇಳಿದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿನಾರನೆಯ ಅಧ್ಯಾಯವು ಮುಗಿಯಿತು.**

## अथ सप्तदशोऽध्यायः

**सूत उवाच**

तत्र गोमिथुनं राजा हन्यमानमनाथवत्।
दण्डहस्तञ्च वृषलं ददृशे नृपलाञ्छनम्॥ १ ॥

वृषं मृणालधवलं मेहन्तमिव बिभ्यतम्।
वेपमानं पदैकेन सीदन्तं शूद्रपीडितम्॥ २ ॥

## अथ सप्तदशोऽध्यायः

गाञ्च धर्मदुघां दीनां भृशं शूद्रपदाहताम् ।
विवत्सामश्रुवदनां कृशां यवसमिच्छतीम् ॥ ३ ॥

पप्रच्छ रथमारूढः कार्तस्वरपरिच्छदम् ।
मेघगम्भीरया वाचा समारोपितकार्मुकः ॥ ४ ॥

कस्त्वं मच्छरणे लोके बलाद्धंस्यबलौ बली ।
नरदेवोऽपि वेषेण नटवत्कर्मणाऽद्विजः ॥ ५ ॥

स त्वं कृष्णे गते दूरं सह गाण्डीवधन्वना ।
शोच्योऽस्यशोच्यान् रहसि प्रहरन् वधमर्हसि ॥ ६ ॥

त्वं वा मृणालधवलः पादैर्न्यूनः पदा चरन् ।
वृषरूपेण किं कश्चिद्देवो नः परिखेदयन् ॥ ७ ॥

न जातु कौरवेन्द्राणां दोर्दण्डपरिरम्भिते ।
भूतले निपतन्त्यस्मिन् विना त्वां प्राणिनां शुचः ॥ ८ ॥

मा सौरभेयानुशुचो व्येतु ते वृषलाद्भयम् ।
मा रोदीरम्ब भद्रं ते खलानां मयि शास्तरि ॥ ९ ॥

यस्य राष्ट्रे प्रजा मातर्हिंस्यन्ते साध्वसाधुभिः ।
तस्य मत्तस्य नश्यन्ति कीर्तिरायुर्भगो गतिः ॥ १० ॥

एष राज्ञः परो धर्मो ह्यार्तानामार्तिनिग्रहः ।
अत एनं वधिष्यामि भूतद्रुहमसत्तमम् ॥ ११ ॥

कोऽवृश्चत्तव पादांस्त्रीन्सौरभेय चतुष्पदः ।
मा भूवंस्त्वादृशा राष्ट्रे राज्ञां कृष्णानुवर्तिनाम् ॥ १२ ॥

आख्याहि वृष भद्रं वः साधूनामकृतागसाम् ।
आत्मवैरूप्यकर्तारं पार्थानां कीर्तिदूषणम् ।
गलेऽनागस्यघं युञ्जन् सर्वतोऽस्य च तद्भयम् ॥ १३ ॥

अनागस्स्विह भूतेषु य आगस्कृन्निरंकुशः ।

## अथ सप्तदशोऽध्यायः

आहर्ताऽस्मि भुजं साक्षादमर्त्यस्यापि साङ्गदम् ॥ १४ ॥

राज्ञो हि परमो धर्मः स्वधर्मस्यानुपालनम् ।
शासतोऽन् यान्यथाशास्त्रं अनापद्युत्पथानिह ॥ १५ ॥

**धर्म उवाच**

एतद्वः पाण्डवेयानां युक्तमार्ताभयं वचः ।
येषां गुणगणैः कृष्णो दौत्यादौ भगवान्वृतः ॥ १६ ॥

न वयं क्लेशबीजानि यतः स्युः पुरुषर्षभ ।
पुरुषं तं विजानीमः वाक्यभेदविमोहिताः ॥ १७ ॥

केचिद्विकल्पवचस आहुरात्मानमात्मनः ।
दैवमन्ये परे कर्म स्वभावमपरे प्रभुम् ॥ १८ ॥

अप्रतर्क्यादनिर्वाच्यादिति केष्वपि निश्चयः ।
अत्रानुरूपं राजर्षे विमृश स्वमनीषया ॥ १९ ॥

एवं धर्मे प्रवदति स सम्रा ड्विजसत्तमाः ।
समाहितेन मनसा विदित्वा प्रत्यचष्ट तम् ॥ २० ॥

धर्मं ब्रवीषि धर्मज्ञ धर्मोऽसि वृषरूपधृक् ।
यदधर्मकृतः स्थानं सूचकस्यापि तद्भवेत् ॥ २१ ॥

अथवा देवमायाया नूनं गतिरगोचरा ।
चेतसो वचसश्चापि भूतानामिति निश्चयः ॥ २२ ॥

तपः शौचं दया सत्यं इति पादाः कृते कृताः ।
अधर्माङ्गैस्त्रयो भग्नाः स्मयसङ्गमदैस्तव ॥ २३ ॥

इदानीं धर्मपादस्ते सत्यं निर्वर्तसे यतः ।
तं चिघृक्षत्यधर्मोऽयमनृतेनैधितः कलिः ॥ २४ ॥

इयञ्च भूर्भगवता न्यासितोरुभरा सती ।
श्रीमद्भिस्तत्पदन्यासैः सर्वतः कृतकौतुका ॥ २५ ॥

## अथ सप्तदशोऽध्यायः

शोचन्त्यश्रुकला साध्वी दुर्भगेवोज्झिताऽधुना ।
अब्रह्मण्याः नृपव्याजाः शूद्रा भोक्ष्यन्ति मामिति ॥ २६ ॥

**सूत उवाच**

इति धर्मं महीञ्चैव सान्त्वयित्वा महारथः ।
निशातमाददे खड्गं कलयेऽधर्महेतवे ॥ २७ ॥

तज्जिघांसुमभिप्रे(त्य)क्ष्य विहाय नृपलाच्छनम् ।
तत्पादमूलं शिरसा समगाद्भयविह्वलः ॥ २८ ॥

पतितं पादयोर्वीरः कृपया दीनवत्सलः ।
शरण्यो नावधीच्छ्लोक्य आह चेदं हसन्निव ॥ २९ ॥

राजोवाचन ते गुडाकेशयशोधराणां बद्धाञ्जलेर्भो भयमस्ति किञ्चित् ।
न वर्तितव्यं भवता कथञ्चित् क्षेत्रे मदीये त्वमधर्मबन्धुः ॥ ३० ॥

त्वां वर्तमानं नरदेवदेहेष्वनुप्रवृत्तोऽयमधर्मयूथः ।
लोभोऽनृतं चौर्यमनार्यमंहो ज्येष्ठा च माया कलहश्च दम्भः ॥ ३१ ॥

न वर्तितव्यं तदधर्मबन्धो धर्मेण सत्येन च वर्तितव्ये ।
ब्रह्मावर्ते यत्र यजन्ति यज्ञैः यज्ञेश्वरं ब्रह्मवितानयज्ञाः ॥ ३२ ॥

यस्मिन्हरिर्भगवानिज्यमान इष्टात्ममूर्तिर्यजतां शं तनोति ।
कामानमोघान् स्थिरजङ्गमानामन्तर्बहिर्वायुरिवेश आत्मा ॥ ३३ ॥

परीक्षितैवमादिष्टः स कलिर्जातवेपथुः ।
तमुद्यतासिमाहेदं दण्डपाणिमिवोद्यतम् ॥ ३४ ॥

यत्र क्व वाऽथ वत्स्यामि सार्वभौम तवाज्ञया ।
लक्षये तत्र तत्रापि त्वामात्तेषुशरासनम् ॥ ३५ ॥

तन्मे धर्मभृतां श्रेष्ठ स्थानं निर्देष्टुमर्हसि ।
यत्रैव नियतो वत्स्य आतिष्ठंस्तेऽनुशासनम् ॥ ३६ ॥

**सूत उवाच**

अभ्यर्थितस्तदा तस्मै स्थानानि कलये ददौ ।

द्यूतं पानं स्त्रियः सूना यत्राधर्मश्चतुर्विधः ॥ ३७ ॥

पुनश्च याचमानाय जातरूपमदात्प्रभुः ।
ततोऽनृतं मदः कामो रजो वैरञ्च पञ्चमम् ॥ ३८ ॥

अमूनि पञ्चस्थानानि ह्यधर्मप्रभवः कलिः ।
औत्तरेयेण दत्तानि न्यवसत्तन्निदेशकृत् ॥ ३९ ॥

अथैतानि न सेवेत बुभूषुः पुरुषः क्वचित् ।
विशेषतो धर्मशीलो राजा लोकपतिर्गुरुः ॥ ४० ॥

वृषस्य नष्टांस्त्रीन् पादांस्तपः शौचं दयामिति ।
प्रतिसन्दध आश्वास्य महीञ्च समवर्धयत् ॥ ४१ ॥

स एष एतर्ह्यध्यास्त आसनं पार्थिवोचितम् ।
पितामहेनोपन्यस्तं राज्ञाऽरण्यं विविक्षता ॥ ४२ ॥

आस्तेऽधुना स राजर्षिः कौरवेन्द्रः श्रियोल्लसन् ।
गजाह्वये महाभागश्चक्रवर्ती बृहच्छ्रवाः ॥ ४३ ॥

इत्थं भूतानुभावोऽयमभिमन्युसुतो नृपः ।
यस्य पालयतः क्षोणीं यूयं सत्राय दीक्षिताः ॥ ४४ ॥

**॥ इति श्रीमद्भागवते प्रथमस्कन्धे सप्तदशोऽध्यायः ॥**

## ॥ ಹದಿನೇಳನೆಯ ಅಧ್ಯಾಯ ॥

### ಪರೀಕ್ಷಿತರಿಂದ ಕಲಿಯ ನಿಗ್ರಹ

ಈ ಅಧ್ಯಾಯದಲ್ಲಿ, ಪರಮ ಭಗವದ್ಭಕ್ತನಾದ ಪರೀಕ್ಷಿದ್ರಾಜನು ಕಲಿಯನ್ನು ನಿಗ್ರಹಿಸಿದ ಮಹಿಮಾ ವರ್ಣನವು ಮಾಡಲ್ಪಟ್ಟಿದೆ. ಭಕ್ತರ ಮಹಿಮೆಯೂ ಪರಮಾತ್ಮನ ಮಹಿಮೆಯನ್ನೇ ಸೂಚಿಸುತ್ತಾದ್ದರಿಂದ, ಸಜ್ಜನರು ಭಕ್ತರ ಮಹಿಮೆಗಳನ್ನೂ ಕೇಳಲಿಚ್ಛಿಸುತ್ತಾರೆ.

ಹಿಂದಿನ ಅಧ್ಯಾಯದಲ್ಲಿ ಅಂತ್ಯಭಾಗದಲ್ಲಿ ನಿರೂಪಿಸಿದ್ದಂತೆ, ಕುರುಕ್ಷೇತ್ರದಲ್ಲಿ

## अथ सप्तदशोऽध्यायः

ಸರಸ್ವತೀನದಿಯು ಪೂರ್ವಗಾಮಿನಿಯಾಗಿ ಹರಿಯತಕ್ಕ ಪ್ರದೇಶದಲ್ಲಿ, ಧರ್ಮಸ್ವರೂಪನಾದ ವೃಷಭವೂ, ಗೋರೂಪಳಾದ ಭೂದೇವಿಯೂ ಸಂಭಾಷಣೆಯನ್ನು ಮಾಡುತ್ತಿದ್ದಾಗ, ಅಲ್ಲಿಗೆ ಪರೀಕ್ಷಿದ್ರಾಜನು ಬಂದು ಆ ಸಂಭಾಷಣೆಯನ್ನು ಕೇಳಿ ಪರಮಾಶ್ಚರ್ಯಭರಿತನಾದನು. ನಂತರ ಆ ಎರಡು ಪಶುಗಳನ್ನೂ ನಿರ್ದಯನಾಗಿ ತನ್ನ ಕೈಯ್ಯಲ್ಲಿ ಹಿಡಿದಿದ್ದ ಕೋಲಿನಿಂದ, ಕೊಲ್ಲುವನಂತೆ ಹೊಡೆದು, ಕಾಲಿಂದ ಗೋವನ್ನು ಒದೆಯುತ್ತಾ ಇದ್ದ, ರಾಜವೇಷವನ್ನು ಧರಿಸಿ, ಶೂದ್ರನಂತೆ ಕಾಣಿಸುತ್ತಿದ್ದ ಒಬ್ಬನನ್ನು ನೋಡಿದನು. ವೃಷಭವು ಭಯದಿಂದ ನಡುಗುತ್ತಾ, ಮೂತ್ರ ಪುರೀಷಗಳನ್ನು ವಿಸರ್ಜಿಸುತ್ತಿತ್ತು. ಗೋವು ಮೇವಿಲ್ಲದೆ ಕೃಶವಾಗಿ ಕಣ್ಣೀರು ಸುರಿಸುತ್ತಾ ಭಯದಿಂದ ಆರ್ತವಾಗಿತ್ತು.

ರಥಾರೂಡನಾದ ಪರೀಕ್ಷಿದ್ರಾಜನು ಎಲೈ! ರಾಜವೇಷ ಮಾತ್ರ ಧರಿಸಿ ಶೂದ್ರನಂತೆ ಕ್ರೂರನಾಗಿ ದುರ್ಬಲವಾದ, ಅಸಹಾಯಕಗಳಾದ ಈ ಪಶುದ್ವಂದ್ವಗಳನ್ನು ಘಾತಿಸತಕ್ಕ ಪಾಪಿಯಾದ ನೀನು ಯಾರು? ನನ್ನ ರಕ್ಷಣೆಗೊಳಗಾದ ಈ ಸ್ಥಳದಲ್ಲಿ ಬಲಿಷ್ಠನಾದ ನೀನು, ದುರ್ಬಲವಾದ ಈ ಪಶುಗಳನ್ನು ಘಾತಿಸಿದ್ದರಿಂದ ನೀನು ಮರಣದಂಡನೆಗೆ ಯೋಗ್ಯನಾಗಿರುತ್ತೀಯೆ! ಶ್ರೀಕೃಷ್ಣನ ಶಾಸನಾನುವರ್ತಿಗಳಾದ, ಗಾಂಡೀವ ಧನುರ್ಧಾರಿಯಾದ ಅರ್ಜುನನ ವಂಶಸ್ಥನಾದ ನಾನು ರಾಜಶಾಸನವನ್ನು ಮಾಡುತ್ತಿರುವಾಗ, ಅನಾಥರನ್ನು ಪೀಡಿಸುವಷ್ಟು ಧೈರ್ಯವು ನಿನಗೆ ಬಂದಿದ್ದರಿಂದ, ಹಿಂಸಕನಾದ ನೀನು ಬದುಕಿರಲು ಯೋಗ್ಯನಲ್ಲವೆಂದು ಹೇಳಿ ಹರಿತವಾದ ಕತ್ತಿಯನ್ನು ಹಿರಿದು ಕೈಯ್ಯಲ್ಲಿ ಧರಿಸಿದನು. ನಂತರ, ಎಲೈ! ಗೋವುಗಳೇ ನೀವು ಹೆದರಬೇಡಿರಿ. ನಿಮಗೆ ಈ ದುಷ್ಟನಿಂದ ತೊಂದರೆಯಾಗದಂತೆ ನಾನು ನಿಮ್ಮನ್ನು ಸಂರಕ್ಷಿಸುವೆನು.

ಎಲೈ! ಕಮಲದದಂಟಿನಂತೆ ಸ್ವಚ್ಛ ಬಿಳೀ ಸುವರ್ಣವುಳ್ಳ ವೃಷಭನೇ! ಕೌರವರ ವಂಶದ ರಾಜನು ರಾಜ್ಯಭಾರ ಮಾಡುವಾಗ ಯಾವ ಪಶುವೂ ಕೂಡ ದುಃಖದಿಂದ ಪೀಡಿತವಾಗಲಾರದು! ಆದರೂ ಈಗ ನೀನು ಮೂರು ಕಾಲುಗಳಿಲ್ಲದೇ ಒಂದೇ ಕಾಲಿನಿಂದ ಕಷ್ಟಪಡುತ್ತಾ ನಡೆದು, ಕಣ್ಣೀರಿಡುತ್ತಾ ಇರುವುದನ್ನು ನೋಡಿದರೆ, ಇಂತಹ ನಿನ್ನ ದುಸ್ಥಿತಿಯನ್ನು ನೋಡಿ ನಾನು ಖೇದವನ್ನು ಹೊಂದಲೆಂದು ಈ ವೃಷಭ ರೂಪದಿಂದಿರುವ ಯಾವದಾದರೂ ದೇವತೆಯೇನು ನೀನು? ಏಕೆಂದರೆ ನಿನ್ನ ವಿನಃ ಬೇರೆಲ್ಲೂ ಯಾವ ಪ್ರಾಣಿಯೂ ದುಃಖಿಸುವುದನ್ನು ನಾನು ನೋಡಿಲ್ಲ. ಆದುದರಿಂದ ನೀನು ಯಾರು? ಎಲೈ! ಸುರಭಿಸಮಾನಳಾದ ಗೋಮಾತೆಯೇ ಸ್ವಲ್ಪವೂ ನೀನು ಈ ಶೂದ್ರನಿಂದ ಇನ್ನು ಭಯವಾಗುವುದೆಂದು ದುಃಖಿಸಬೇಡ. ಕರುವನ್ನು ಕಳೆದುಕೊಂಡು

ಇರುವಂತೆಯೂ, ಆಹಾರವಿಲ್ಲದಂತೆಯೂ, ಕೃಶವಾಗಿ ದುಃಖಿಸುವ ನೀನು ಯಾರು?

ಯಾವ ರಾಜನ ರಾಜ್ಯದಲ್ಲಿ ನಿಮ್ಮಂತಹ ಸಾಧುಗಳು ದುಃಖಿಸುವರೋ, ಅಂಥ ರಾಜನ ರಾಜ್ಯವೂ, ಐಶ್ವರ್ಯವೂ ಉಳಿಯುವುದಿಲ್ಲ. ಆದ್ದರಿಂದ ನಿಮ್ಮನ್ನು ಹಿಂಸಿಸುವವರನ್ನು ಕೊಲ್ಲುವುದು ಧರ್ಮಿಷ್ಠರಾದ ರಾಜರಿಗೆ ಸ್ವಧರ್ಮವಾಗಿರುತ್ತೆ. ದುಷ್ಟನಿಗ್ರಹ ಮಾಡಲು ನಾನು ಬದ್ಧಕಂಕಣನಾಗಿರುತ್ತೇನೆ - ಆದುದರಿಂದ ನೀವು ಭಯರಹಿತರಾಗಿರಿ! ನಾನು, ನಿಮ್ಮನ್ನು ಹಿಂಸಿಸಿದ ಭೂತದ್ರೋಹಿಯಾದ ಈ ಶೂದ್ರ ರಾಜವೇಷದವನನ್ನು ಸಂಹರಿಸುತ್ತೇನೆ. ಎಲೈ! ವೃಷಭನೇ! ಎಲೈ ಗೋವೇ! ನಿಮಗೆ ಈ ರೀತಿಯಿಂದ ದುಸ್ಥಿತಿಯನ್ನುಂಟುಮಾಡಿದವರು ಯಾರು? ಅದನ್ನು ಹೇಳಿರಿ! ಅಂತಹ ಪಾಪಿಯು ಭುಜಪರಾಕ್ರಮಿಯಾದ ದೇವತೆಯಾಗಿದ್ದರೂ ನಾನು ಹಿಡಿದು ತಂದು ಶಿಕ್ಷಿಸುತ್ತೇನೆ! ಎಂದನು.

ಅದಕ್ಕೆ ವೃಷಭವು! ಎಲೈ! ಪಾಂಡವರ ವಂಶಜನಾದ ಮಹಾರಾಜನೇ! ಯಾವ ನಿಮ್ಮ ಹಿರಿಯರ ಭಕ್ತ್ಯಾದಿ ಗುಣಗಳಿಗೊಲಿದ ಶ್ರೀಕೃಷ್ಣನು ಅವರ ದೂತನಾಗಿಯೂ ಕೂಡ ಕಾರ್ಯಮಾಡಿದನೋ, ಅಂಥ: ವಂಶಜನಾದ ನೀನು ಪ್ರಾಣಿಗಳಿಗೆ ಮೊದಲು ಅಭಯಪ್ರದಾನ ಮಾಡುವುದು ನಿನಗೆ ಸಹಜ ಗುಣವಾಗಿರುತ್ತದೆ. ನಮಗೆ ಯಾರಿಂದ ಈ ದುಃಖ ಉಂಟಾಯಿತೆಂದು ಹೇಳಲು ತಿಳಿಯದು. ಏತಕ್ಕೆಂದರೆ ಕೆಲವು ಜ್ಞಾನಿಗಳು, ಸುಖ ದುಃಖಗಳಿಗೆ ಜೀವನು ತಾನೇ ಕಾರಣವೆಂದೂ, ಕೆಲವರೂ ಸರ್ವಕ್ಕೂ ಪರಮಾತ್ಮನೇ ಕಾರಣವೆಂದೂ, ಕೆಲವರು ದೇಹವೇ ಕಾರಣವೆಂದೂ, ಕೆಲವರೂ ಸರ್ವಕ್ಕೂ ಪರಮಾತ್ಮನೇ ಕಾರಣನೆಂದು ಹೇಳುವರು. ಆದುದರಿಂದ ಜ್ಞಾನಿಗಳೇ ಸುಖದುಃಖಗಳಿಗೆ ಯಾರು ಕಾರಣರೆಂದು ನಿರ್ಧರಿಸಿಲ್ಲವಾಗಿ ನಮಗೂ ಯಾರಿಂದ ಈ ದುಃಖಪ್ರಾಪ್ತಿಯಾಗಿದೆ ಎಂದು ಹೇಳಲು ತಿಳಿಯದು.

ಪರಮಾತ್ಮನೇ ಸರ್ವಕ್ಕೂ ಕಾರಣವೆಂದು ಭಾವಿಸಿದರೆ, ಆ ಪರಮಾತ್ಮನು ಜೀವರಾಶಿಗಳಲ್ಲಿ ಅನಂತ ರೂಪಗಳಿಂದ, ಅವ್ಯಕ್ತನಾಗಿ, ಅತರ್ಕ್ಯನಾಗಿ, ಇರುತ್ತಾನಾದ್ದರಿಂದ, ಯಾವ ಒಂದು ಜೀವನಲ್ಲಿದ್ದು ಏನು ಕಾರ್ಯಮಾಡಿಸುತ್ತಾನೆಂದು ತಿಳಿಯಲೂ ಸಾಧ್ಯವಿಲ್ಲ. ನೀನು ಸ್ವಯಂ ಜ್ಞಾನಿಯಾದ್ದರಿಂದಲೂ, ರಾಜನಾದುದರಿಂದಲೂ, ನಾವು ಯಾವ ಸನ್ನಿವೇಶದಲ್ಲಿ ಸಿಕ್ಕಿ ಈ ರೀತಿಯಾಗಿರುವೆವೆಂಬುದನ್ನು ಸ್ವಬುದ್ಧಿಯಿಂದಲೇ ತಿಳಿದುಕೊಳ್ಳಬೇಕೆಂದು ಹೇಳಿತು.

ಈ ಮಾತನ್ನು ಕೇಳಿ ಪರೀಕ್ಷಿದ್ರಾಜನು, ಎಲೈ ವೃಷಭವೇ! ನೀನು ಧರ್ಮಪ್ರಶಂಸೆಯನ್ನು

**अथ सप्तदशोऽध्यायः**

ಮಾಡಿದ್ದಿಯಾದುದರಿಂದ, ತಪಸ್ಸು, ಶೌಚ, ದಯಾ ಎಂಬ ಮೂರು ಪಾದಗಳನ್ನು ಕಳೆದುಕೊಂಡು, ಸತ್ಯವೆಂಬ ಒಂದು ಪಾದದಿಂದ ಈ ವೃಷಭರೂಪಿನಿಂದ ಸಂಚರಿಸುವ ಮಹಾನುಭಾವನಾದ ಧರ್ಮಪುರುಷನೇ ನೀನಾಗಿರುತ್ತಿ. ರಾಜವೇಷಧಾರಿಯಾದ ಈ ಶೂದ್ರನು ಕಾಲಿನಿಂದ ನಿನ್ನನ್ನು ಒದೆಯುತ್ತಿದ್ದುದರಿಂದ, ಅಧರ್ಮದಲ್ಲಿ ಶ್ರೇಷ್ಠವಾದ ಅನೃತದಿಂದ ನಿನ್ನ ಸತ್ಯವೆಂಬ ಒಂದು ಕಾಲನ್ನೂ ಮುರಿಯಲು ಯತ್ನಿಸುತ್ತಿದ್ದ ಕಲಿ ಪುರುಷನೇ ಇವನಾಗಿರಬೆಕು. ಇಂತಹ ಪಾಪಕರ್ಮನಿರತರೂ, ಸುಳ್ಳಿಂದ ಜೀವಿಸುವರು, ಅಶುಚಿಗಳೂ ಆದುದರಿಂದ ಶೂದ್ರರೆನಿಸಿದ ರಾಜರೂಪ ಕಳ್ಳರಿಂದ ನಿನ್ನಲ್ಲಿರುವ ಸಾರವಸ್ತುಗಳು ಭೋಗಿಸಲ್ಪಡುತ್ತಿವೆಯಲ್ಲಾ ಎಂದು ಶೋಕಿಸುತ್ತಿರುವ ಗೋರೂಪಿಯಾದ ನೀನು ಭೂದೇವಿಯಾಗಿರಬೇಕು.

ಸತ್ಯಸ್ವರೂಪರೂ, ಪರಮಸಜ್ಜನರೂ ಆದ ನೀವು ನಿಮ್ಮನ್ನು ಹಿಂಸಿಸಿದವರು ಎದುರಿಗೇ ಇದ್ದರೂ, ತೋರಿಸದೇ ರಾಜನಾದ ನನ್ನನ್ನೇ ಕಂಡುಹಿಡಿಯಲು ಪ್ರೇರಿಸಿದಿರಿ. ಆದುದರಿಂದ ನಾನು ಈ ಪಾಪಿ ಕಲಿಯನ್ನು ಸಂಹರಿಸುತ್ತೇನೆ, ಎಂದು ಹೇಳಿ ಖಡ್ಗವನ್ನು ಝಳಪಿಸಲು, ಶೂದ್ರವೇಷದ ಕಲಿಯು ಥರಥರನೆ ನಡುಗುತ್ತಾ, ಪರೀಕ್ಷಿದ್ರಾಜನ ಪಾದಗಳಿಗೆ ಬಿದ್ದು, ಸಂರಕ್ಷಿಸಬೇಕೆಂದು ಬೇಡಿಕೊಂಡನು.

## ವಾಸಸ್ಥಾನ ಬೇಡಿದ ಕಲಿ

ಆಗ ಪರೀಕ್ಷಿದ್ರಾಜನು ನಗುತ್ತಾ, ಎಲೈ! ಕಲಿಪುರುಷನೇ, ಶರಣುಹೊಕ್ಕವನು ನೀನಾದ್ದರಿಂದ, ಅರ್ಜುನನ ವಂಶಸ್ಥನಾದ ನಾನು ನಿನ್ನನ್ನು ಕೊಲ್ಲುವುದಿಲ್ಲ. ಆದರೆ, ನೀನು ಅಧರ್ಮಸ್ವರೂಪನು. ಆದುದರಿಂದ ಈ ನನ್ನ ರಾಜ್ಯದಲ್ಲಿ ಇರಕೂಡದು. ಯಾವ ಪ್ರಜೆಗಳನ್ನಾಗಲೀ, ಪ್ರಾಣಿಗಳನ್ನಾಗಲೀ ಹಿಂಸಿಸಕೂಡದು. ಹೊರಡು! ಎನ್ನಲು, ಆಗ ಕಲಿಯು ಎಲೈ! ಪರೀಕ್ಷಿದ್ರಾಜನೆ, ಸಪ್ತಸಮುದ್ರಗಳ ಪರ್ಯಂತರ ನಿಖಿಳ ಭೂಮಂಡಲದಲ್ಲಿ ನಾನು ಎಲ್ಲಿ ಇರುವೆನೆಂದು ಯೋಚಿಸಿದರೂ, ಅಲ್ಲಿ ನೀನು ಶಸ್ತ್ರಧಾರಿಯಾಗಿ ನನಗೆ ಕಾಣಿಸುತ್ತಿ. ಇನ್ನು ನನಗೆ ಇರಲು ಸ್ಥಳವೆಲ್ಲೂ ಕಾಣೆ. ಆದ್ದರಿಂದ ನೀನೇ ಕೆಲವು ಸ್ಥಳಗಳನ್ನು ಗೊತ್ತುಮಾಡಿಕೊಟ್ಟರೆ ಆ ಸ್ಥಳಗಳಲ್ಲಿ ನಿನ್ನ ಶಾಸನವನ್ನು ಮೀರದೆ ನಾನು ವಾಸಿಸುವೆನೆಂದನು. ಆದಕ್ಕೆ ಪರೀಕ್ಷಿದ್ರಾಜನು, ಎಲೈ!ಕಲಿಯೇ ನನ್ನ ಶಾಸನವನ್ನು ಕೇಳು.

ನನ್ನ ರಾಜ್ಯದಲ್ಲಿ ಯಾವ ಇತರರಾದ ಮನುಷ್ಯರು ರಾಜರುಗಳಾಗಿರುವರೋ ಅವರಲ್ಲೂ, ಸತ್ಯಧರ್ಮಗಳನ್ನು ಆಶ್ರಯಿಸಿರುವ ಸಜ್ಜನರಲ್ಲೂ, ಅಧರ್ಮಸ್ವರೂಪಿಯಾದ ನೀನು,

ನಿನ್ನ ಅಧರ್ಮಗಳ ಗುಂಪಿನಲ್ಲಿ ಮುಖ್ಯಗಳಾದ ಲೋಭ, ಸುಳ್ಳು, ಕಳ್ಳತನ, ದುಷ್ಟತನ, ಅಹಂಕಾರ, ದಾರಿದ್ರ್ಯ, ಕಪಟತನ, ಕಲಹ, ದಂಭ, ಮೊದಲದ ದುರ್ಗುಣಸಹಿತನಾಗಿ ಪ್ರವೇಶಿಸಕೂಡದು. ಬ್ರಹ್ಮಾವರ್ತವೆಂಬ ಬ್ರಹ್ಮಯಜ್ಞ, ಚರು, ಪುರೋಡಾಶ ಮುಂತಾದ ಹವಿಸ್ಸುಗಳಿಂದ ಹೋಮಮಾಡಿ ಭಗವತ್ಪ್ರೀತಿಗಾಗಿ ಯಜ್ಞಗಳನ್ನು ಮಾಡುವ ಸ್ಥಳಗಳು, ಯಜ್ಞದಲ್ಲಿ ದೀಕ್ಷಿತರಾದವರು, ಇವರುಗಳನ್ನು ಮುಟ್ಟಕೂಡದು. ಏಕೆಂದರೆ, ಭಗವದುದ್ದೇಶ್ಯದಿಂದ ಮಾಡತಕ್ಕ ಈ ಕರ್ಮದಲ್ಲಿ ಸ್ವತಂತ್ರಪುರುಷನಾದ ಶ್ರೀಪರಮಾತ್ಮನು ಸ್ವಯಂ ಅವರಲ್ಲಿ ವಾಸನಾಗಿದ್ದು ಅವರಿಗೆ ಸುಖಪ್ರದನಾಗಿರುವುದರಿಂದ, ಅವರಿರುವ ಸ್ಥಳವು ನಿನಗೆ ಆವಾಸಯೋಗ್ಯವಲ್ಲ. ನೀನು ದ್ಯೂತದಲ್ಲಿಯೂ, ಪಾನ, ಸ್ತ್ರೀಯರು, ಸುಳ್ಳು ಅಥವ ಪ್ರಾಣಿಹಿಂಸೆ ಆಗತಕ್ಕ ಸ್ಥಳಗಳಲ್ಲಿ ವಾಸವಾಗಿರು ಎಂದನು. ಅದಕ್ಕೆ ಕಲಿಯು ಆ ಸ್ಥಾನಗಳು ಸಾಲದು, ಇನ್ನೂ ಕೆಲವು ಸ್ಥಳಗಳನ್ನು ಕೊಡಬೇಕೆಂದು ಪ್ರಾರ್ಥಿಸಲು ಬಂಗಾರ, ಮದ, ಕಾಮ, ರಜೋಗುಣ, ವೈರಗಳೆಂಬ ಐದು ಸ್ಥಾನಗಳನ್ನೂ ಕೊಟ್ಟನು.

ಈ ರೀತಿ ಸ್ಥಾನಗಳನ್ನು ಪಡೆದು ಕಲಿಯು ಹೊರಟುಹೋದ ನಂತರ, ಧರ್ಮಸ್ವರೂಪನಾದ ವೃಷಭನಿಗೆ ಪುನಃ ತಪಸ್ಸು, ಶೌಚ, ದಯೆ ಎಂಬ ಮೂರು ಪಾದಗಳನ್ನೂ ಉಂಟುಮಾಡಿ, ನಾಲ್ಕು ಪಾದಗಳಿಂದಲೂ ಅಭಿವೃದ್ಧವಾದ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಪರೀಕ್ಷಿದ್ರಾಜನು ಮಾಡುತ್ತಿರುವನು. ಈ ಮಹಾಭಾಗವತ ಶಿರೋಮಣಿಯಾದ ಪರೀಕ್ಷಿದ್ರಾಜನು ಆಳಿದ ಭೂಮಿಯಲ್ಲೇ ನೀವು ಈಗ ಈ ಸತ್ರಯಾಗ ಮಾಡುವುದಕ್ಕೆ ಆರಂಭಿಸಿರುವಿರಿ. ಈ ಕಲಿಯನ್ನು ನಿಗ್ರಹಿಸಿದ ಪರೀಕ್ಷಿದ್ರಾಜನು ಧರ್ಮರಾಯನಿಂದ ವನಪ್ರವೇಶಕಾಲಕ್ಕೆ ಮುಂಚೆ, ರಾಜ್ಯಾಭಿಷಿಕ್ತನಾಗಿ, ಸಿಂಹಾಸನವನ್ನೇರಿ, ದಿಗಂತ ಕೀರ್ತಿಯುತನಾಗಿ ಚಕ್ರವರ್ತಿ ಪದವಿಯನ್ನಾಳಿದವನಾಗಿರುತ್ತಾನೆ, ಎಂದು ಸೂತರು ಶೌನಕಾದಿಗಳಿಗೆ ಹೇಳಿದರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿನೇಳನೆಯ ಅಧ್ಯಾಯವು ಮುಗಿಯಿತು.**

## अथ अष्टादशोऽध्यायः

**सूत उवाच**

यौ वै द्रौण्यस्त्रविप्लुष्टो न मातुरुदरे मृतः ।
अनुग्रहाद्भगवतः कृष्णस्याद्भुतकर्मणः ॥ १ ॥

## अथ अष्टादशोऽध्यायः

ब्रह्मशापोत्थितायस्तु तक्षकात्प्राणविप्लवे ।
न सम्मुमोहोरुभयाद्भगवत्यर्पिताशयः ॥ २ ॥

उत्सृज्य सर्वतः सङ्गं विज्ञानार्जितसंस्थितिः ।
वैयासकेर्जहौ शिष्यः गङ्गायां स्वकलेवरम् ॥ ३ ॥

नोत्तमश्लोकवार्तानां जुषतां तत्कथामृतम् ।
स्यात्सम्भ्रमोऽन्तकालेऽपि स्मरतां तत्पदाम्बुजम् ॥ ४ ॥

तावत्कलिर्नप्रभवेत्प्रविष्टोऽपीह सर्वतः ।
यावदीशो महानुर्व्यामाभिमन्यव एकरा ॥ ५ ॥

यस्मिन्नहनि यर्ह्येव भगवानुत्ससर्ज गाम् ।
तदैवेहानुवृत्तोसावधर्मप्रभवः कलिः ॥ ६ ॥

नानुद्वेष्टि कलिं सम्रा सारङ्ग इव सारभुक् ।
कुशलान्याशु सिद्ध्यन्ति नेतराणि कृतानि यत् ॥ ७ ॥

किन्तु बालेषु शूरेण कलिना शूरभीरुणा ।
अप्रमत्तः प्रमत्तेषु यो वृको नृषु वर्तते ॥ ८ ॥

उपवर्णितमेतद्वः पुण्यं पारीक्षितं मया ।
वासुदेवकथोपेतमाख्यानं यदपृच्छथ ॥ ९ ॥

या याः कथाः भगवतः कथनीयोरुकर्मणः ।
गुणकर्माश्रया पुम्भिः सेव्यास्तास्ताः बुभूषुभिः ॥ १० ॥

**ऋषय ऊचुः**

सूत जीव समाः सौम्य शाश्वतीर्विशदं यशः ।
यस्त्वं शंसति कृष्णस्य मर्त्यानाममृतं हि नः ॥ ११ ॥

कर्मण्यस्मिन्ननाश्वास्ये धूमधूम्रात्मनां भवान् ।
आपाययति गोविन्दपादपद्मासवं मधु ॥ १२ ॥

तुलयाम लवेनाऽपि न स्वर्गं नापुनर्भवम् ।
भगवत्सङ्गिसङ्गस्य मर्त्यानां किमुताशिषः ॥ १३ ॥

## अथ अष्टादशोऽध्यायः

को नाम तृप्येद्रसवित्कथायां महत्तमैकान्तपरायणस्य ।
नान्तं गुणानामगुणस्य जग्मुर्योगेश्वरा ये भवपाद्ममुख्याः ॥ १४ ॥

ततो भवान् वै भगवत्प्रधानो महत्तमैकान्तपरायणस्य ।
हरेरुदारं चरितं विशुद्धं शुश्रूषतां नो वितनोतु विद्वान् ॥ १५ ॥

तन्नः परं पुण्यमसंवृतार्थमाख्यानमत्यद्भुतयोगनिष्ठम् ।
आख्याह्यनन्ता चरितोपपन्नं पारीक्षितं भागवताभिरामम् ॥ १६ ॥

स वै महाभागवतः परीक्षिद्येनापवर्गाख्यमदभ्रबुद्धिः ।
ज्ञानेन वैयासकिशब्दितेन भेजे खगेन्द्रध्वजपादमूलम् ॥ १७ ॥

**सूत उवाच**

अहो वयं जन्मभृतो महात्मन् वृद्धानुवृत्यापि विलोमजाताः ।
दौष्कुल्यमाधिं विधुनोति शीघ्रं महत्तमानामभिधानयोगः ॥ १८ ॥

कुतः पुनर्गृणतो नाम तस्य महत्तमैकान्तपरायणस्य ।
योऽनन्तशक्तिर्भगवाननन्तो महद्गुणत्वाद्यमनन्तमाहुः ॥ १९ ॥

एतावताऽलं ननु सूचितेन गुणैरसाम्येऽनतिशायनेऽस्य ।
हित्वेतरान् प्रार्थयतो विभूतिर्यस्याङ्घ्रिरेणुं जुषतेऽनभीप्सोः ॥ २० ॥

अथापि यत्पादनखावसृष्टं जगद्विरिञ्चोपहृतार्हणाम्भः ।
सेशं पुनात्यन्यतमो मुकुन्दात्को नाम लोके भगवत्पदार्थः ॥ २१ ॥

यत्रानुरक्ताः सहसैव धीरा व्यपोह्य देहादिषु सङ्गमूढम् ।
व्रजन्ति तत्पारमहंस्यसत्यं यस्मिन्नहिंसोपरमश्च धर्मः ॥ २२ ॥

अहं हि पृष्टोऽस्य गुणान् भवद्भिराचक्ष आत्मावगमोऽत्र यावान् ।
नभः पतन्त्यात्मसमं पतत्रिणस्तथा समं विष्णुगतिं विपश्चितः ॥ २३ ॥

एकदा धनुरुद्यम्य विचरन्मृगयां वने ।
मृगाननुगतः श्रान्तः क्षुधितस्तृषितो भृशम् ॥ २४ ॥

जलाशयमचक्षाणः प्रविवेश स आश्रमम् ।
ददर्श मुनिमासीनं शान्तं मीलितलोचनम् ॥ २५ ॥

## अथ अष्टादशोऽध्यायः

प्रतिरुद्धेन्द्रियप्राणमनोबुद्धिमुपारतम् ।
स्थानत्रयात्परं प्राप्तं ब्रह्मभूतमविक्रियम् ॥ २६ ॥

विप्रकीर्णजटाच्छन्नं रौरवेणाजिनेन च ।
विशुष्यत्तालुरुदकं तथाभूतमयाचत ॥ २७ ॥

अलब्धतृणभूम्यादिरसंप्राप्तार्घ्यसूनृतः ।
अवज्ञातमिवाऽत्मानं मन्यमानश्चुकोप ह ॥ २८ ॥

अभूतपूर्वः सहसा क्षुत्तृभ्यामर्दितात्मनः ।
ब्राह्मणं प्रत्यभूद्ब्रह्मन्मत्सरो मन्युरेव च ॥ २९ ॥

स तु ब्रह्मऋषेरंसे गतासुमुरगं रुषा ।
विनिर्गच्छन् धनुष्कोट्या निधाय पुरमागमत् ॥ ३० ॥

एष किं निभृताशेषकरणो मीलितेक्षणः ।
मुधासमाधिराहोस्वित् किन्नः स्यात्क्षत्रबन्धुभिः ॥ ३१ ॥

तस्य पुत्रोऽतितेजस्वी विहरन् बालकोऽर्भकैः ।
राज्ञाऽघं प्रापितं तातं श्रुत्वा तत्रेदमब्रवीत् ॥ ३२ ॥

अहो अधर्मः पालानां पृथ्व्या बलिभुजामिव ।
स्वामिन्यघं यद्दासानां द्वारपानां शुनामिव ॥ ३३ ॥

ब्राह्मणैः क्षत्रबन्धुर्हि द्वारपालो निरूपितः ।
स कथं तद्गृहे द्वाः स्थः सभाण्डं भोक्तुमर्हति ॥ ३४ ॥

कृष्णे गते भगवति शास्तर्युत्पथगामिनाम् ।
तान् भिन्नसेतूनद्याहं शास्मि पश्यत मे बलम् ॥ ३५ ॥

इत्युक्त्वा रोषताम्राक्षः वयस्यानृषिबालकान् ।
कौशिक्यप उपस्पृश्य वाग्वज्रं विससर्ज ह ॥ ३६ ॥

इतो लङ्घितमर्यादं तक्षकः सप्तमेऽहनि ।
धक्ष्यति स्म कुलाङ्गारं चोदितो मे पितृद्रुहम् ॥ ३७ ॥

## अथ अष्टादशोऽध्यायः

ततोऽभ्येत्याश्रमं बालो गले सर्पकलेवरम् ।
पितरं वीक्ष्य दुः खार्तो मुक्तकण्ठो रुरोद ह॥ ३८ ॥

स वा आङ्गिरसो ब्रह्मन् श्रुत्वा सुतविलापितम् ।
उन्मील्य शनकैर्नेत्रे दृष्ट्वा चांसे मृतोरगम्॥ ३९ ॥

विसृज्य पुत्रं पप्रच्छ वत्स यस्माद्धिरोदिषि ।
केन वा ते विप्रकृतमित्युक्तः स न्यवेदयत्॥ ४० ॥

निशम्य शप्तमतदर्हं नरेन्द्रं स ब्राह्मणो नात्मजमभ्यनन्दत् ।
अहो बतांहो महदज्ञ ते कृतमल्पीयसि द्रोह उरुश्रमो धृतः ॥ ४१ ॥

न वै नृभिर्नरदेवोऽपारध्यः तं शप्तुमर्हस्यविपक्वबुद्धे ।
यत्तेजसा दुर्विषहेण गुप्ता विन्दन्ति भद्राण्यकुतोभयाः प्रजाः ॥ ४२ ॥

अरक्षमाणे नरदेवनाम्नि रथाङ्गपाणावयमङ्ग लोकः ।
तदा हि चोरप्रचुरो विन्त्यरक्ष्यमाणो विवरूथवत्क्षणात्॥ ४३ ॥

तदद्य नः पापमुपैत्यनन्वयं यन्नष्टनाथस्य पशोर्विलुम्पकाः ।
परस्परं घ्नन्ति शपन्ति वृञ्जते पशून् स्त्रियोऽर्थान् पुरदस्यवो जनाः ॥ ४४ ॥

तदार्यधर्मश्च विलीयते नृणां वर्णाश्रमाचारयुतस्त्रयीमयः ।
ततोऽर्थकामाभिनिवेशितात्मनां शुनां कपीनामिव वर्णसङ्करः ॥ ४५ ॥

धर्मपालो नरपतिः स तु सम्रा बृहच्छ्रवाः ।
साक्षान्महाभागवतो राजर्षिर्हयमेधया ।
क्षुत्तुट्च्छ्रमान्वितो दीनो नैवास्मच्छापमर्हति॥ ४६ ॥

अपापेषु स्वभृत्येषु बालेनापक्वबुद्धिना ।
पापं कृतं तद्भगवान्सर्वात्मा क्षन्तुमर्हति॥ ४७ ॥

तिरस्कृता विप्रलब्धाः शप्ताः क्षिप्ताः हता अपि ।
नास्य तत्प्रतिकुर्वन्ति तद्भक्ताः प्रभवोऽपि हि॥ ४८ ॥

इति पुत्रकृताघेन सोऽनुतप्तो महामुनिः ।

स्वयं विप्रकृतो राज्ञा नैवाऽघं तदचिन्तयत् ॥ ४९ ॥

साधवः प्रायशो लोके परैर्द्वन्द्वेषु योजिताः ।
न व्यथन्ति न हृष्यन्ति यत आत्माऽगुणाश्रयः ॥ ५० ॥

**॥ इति श्रीमद्भागवते प्रथमस्कन्धे अष्टादशोऽध्यायः ॥**

## ॥ ಹದಿನೆಂಟನೆಯ ಅಧ್ಯಾಯ ॥

### ಪರೀಕ್ಷಿದ್ರಾಜನ ಮುಂದಿನ ವೃತ್ತಾಂತ

ಸೂತರು ಶೌನಕಾದಿಗಳಿಗೆ ಪರೀಕ್ಷಿದ್ರಾಜನ ವೃತ್ತಾಂತವನ್ನು ಹೇಳುತ್ತಾರೆ

ಆಶ್ಚರ್ಯಗಳಾದ ವ್ಯಾಪಾರಗಳುಳ್ಳ ಶ್ರೀಕೃಷ್ಣನ ಆ ಪರಮಾನುಗ್ರಹದಿಂದ ಯಾವ ಪರೀಕ್ಷಿದ್ರಾಜನು ಉತ್ತರಾದೇವಿಯ ಗರ್ಭದಲ್ಲಿದ್ದಾಗ, ದ್ರೋಣಪುತ್ರರಾದ ಅಶ್ವತ್ಥಾಮಾಚಾರ್ಯರ ಬ್ರಹ್ಮಾಸ್ತ್ರದಿಂದ ಮರಣಹೊಂದದೇ ಬದುಕಿದನೋ, ಅಂತಹ ಪರೀಕ್ಷಿದ್ರಾಜನೇ ಬ್ರಾಹ್ಮಣ ಶಾಪದಿಂದ ತಕ್ಷಕನಿಂದ ಕಚ್ಚಲ್ಪಟ್ಟು ದೇಹತ್ಯಾಗ ಮಾಡಿದನು. ತಕ್ಷಕನಿಂದ ಕಚ್ಚಲ್ಪಟ್ಟು ಮರಣ ಹೊಂದುವ ವಿಚಾರವನ್ನು ಪೂರ್ವದಲ್ಲೇ ಪರೀಕ್ಷಿದ್ರಾಜನು ತಿಳಿದರೂ, ಪರಮಾತ್ಮನಲ್ಲಿ ಸಂತತ ಭಕ್ತಿಯೋಗದಿಂದ ಕೂಡಿದ ಮನಸ್ಸುಳ್ಳವನಾದುದರಿಂದ ಜೀವಿತಕ್ಕೂ, ಮರಣಕ್ಕೂ ಸಮತ್ವವನ್ನು ಚಿಂತಿಸುವವನಾಗಿ, ಸಕಲಸಂಗ ಪರಿತ್ಯಾಗಮಾಡಿ, ಗಂಗಾಮಧ್ಯದಲ್ಲಿದ್ದ ತನ್ನ ವಾಸಸ್ಥಳ ವಿಶೇಷದಲ್ಲಿ ಪ್ರಾಯೋಪವೇಶ ಮಾಡಿ ಕುಳಿತನು.

ಅಲ್ಲಿ ದೈವವಶಾತ್ ತಾವಾಗಿಯೇ ಬಂದ ವೇದವ್ಯಾಸರ ಮಕ್ಕಳಾದ ಶುಕ ಮಹರ್ಷಿಗಳಿಂದ, ಭಾಗವತ ಕ್ ಥಾ ಶ್ರವಣಮಾಡಿ, ಅದರಿಂದುಂಟಾದ ವಿಜ್ಞಾನ ಯೋಗದಿಂದ, ತಕ್ಷಕ ದಂಶನ ವ್ಯಾಜದಿಂದ ಪರಮ ಯೋಗಿಗಳಂತೆಯೇ ದೇಹತ್ಯಾಗ ಮಾಡಿದನು. ಪುಣ್ಯಚರಿತ್ರನಾದ ಪರಮಾತ್ಮನ ಸತ್ಕಥೆಗಳಲ್ಲೇ ಆಸಕ್ತವಾದ ಮನಸ್ಸುಳ್ಳ ಭಗವದ್ಭಕ್ತರು ಪರಮಾತ್ಮನ ಪ್ರಸಾದದಿಂದ ದಿನ ಪ್ರಳಯದ ಭಯಗಳುಳ್ಳ ಸ್ವರ್ಗ, ಮಹರ್ಲೋಕಾದಿಗಳನ್ನು ದಾಟಿ ಜನೋ, ತಪೋ, ಸತ್ಯಲೋಕಗಳಲ್ಲಿ ಬ್ರಹ್ಮಕಲ್ಪಾ ಯುಷ್ಯವುಳ್ಳವರಾಗಿ ಜ್ಞಾನಸಾಧನ ಮಾಡಿಕೊಳ್ಳುವರೆಂದ ಮೇಲೆ, ಪರಮಭಕ್ತನಾದ ಪರೀಕ್ಷಿದ್ರಾಜನಿಗೆ ಸಾಕ್ಷಾತ್ ಶ್ರೀಪರಮಾತ್ಮನ ಸನ್ನಿಧಾನೋಪೇತವಾದ

## ಅಥ ಅಷ್ಟಾದಶೋऽಧ್ಯಾಯಃ

ವೈಕುಂಠಾಖ್ಯ ಪರಮಪದವೇ ಲಭ್ಯವಾಯಿತೆಂದರೆ ಆಶ್ಚರ್ಯವೇನು?

ಅಭಿಮನ್ಯುವಿನ ಪುತ್ರನಾದ ಪರೀಕ್ಷಿದ್ರಾಜನು ಜೀವಿಸಿರುವತನಕ ಜನರಿಗೆ ಕಲಿ ಬಾಧೆಯು ಇರಲಿಲ್ಲ. ಪರೀಕ್ಷಿದ್ರಾಜನು ದೇಹ ತ್ಯಾಗ ಮಾಡಿದ ದಿನವೇ ಕಲಿಯೂ ರಾಜ್ಯದಲ್ಲಿ ಕಾಲಿಟ್ಟನು. ಅಧರ್ಮಗಳು ತಲೆದೋರಿದವು. ಗುಣಗ್ರಾಹಿಯಾದ ಮಹಾಪರಾಕ್ರಮಿ ಪರೀಕ್ಷಿದ್ರಾಜನು, ಏಕಚಕ್ರಾಧಿಪತ್ಯವನ್ನು ಮಾಡುವನಾಗಿ, ದುಷ್ಟನಾದ ಕಲಿಯನ್ನೂ ದ್ವೇಷಿಸುವನಾಗಲಿಲ್ಲ. ಆದುದರಿಂದಲೇ ಅವನಿಗೂ ಆವಾಸಸ್ಥಾನಗಳನ್ನು ಕಲ್ಪಿಸಿಕೊಟ್ಟನು. ಭಕ್ತರಾದ ಸಜ್ಜನರು ಯಾರನ್ನೂ ದ್ವೇಷಿಸುವುದಿಲ್ಲ.

ಕಲಿಯಿಂದ ಜನರಿಗೆ ಬಾಧೆಯಾಗುವುದರಿಂದ ಏಕೆ ನಿಗ್ರಹಿಸದೇ ಪರೀಕ್ಷಿದ್ರಾಜನು ಬಿಟ್ಟನು? ಎಂದರೆ, ಲೋಕದಲ್ಲಿ ಧರ್ಮಜ್ಞಾನ ಪ್ರವರ್ತಕರಾದವರು ಪರಮಾತ್ಮನ ಅನುಗ್ರಹವೆಂಬ ಮಹಾಪರಾಕ್ರವುಳ್ಳವರಾದ್ದರಿಂದ ಅವರನ್ನು ದುರ್ಬಲನಾದ ಕಲಿಯು ಮುಟ್ಟಲೂ, ಅಧರ್ಮಾದಿಗಳಿಂದ ಹಿಂಸಿಸಲೂ ಸಮರ್ಥನಲ್ಲ. ಧರ್ಮ ಜ್ಞಾನಗಳಲ್ಲಿ ಆಸಕ್ತಿ ಇಲ್ಲದವರು ಪರಮಾತ್ಮನ ಅನುಗ್ರಹವಿಲ್ಲದೆ ಶಿಶುಗಳಂತೆ ಮಹಾ ದುರ್ಬಲರಾದ್ದರಿಂದ, ಅಧರ್ಮದಲ್ಲಿ ಮಹಾಶೂರನಾದ ಕಲಿಗೆ ಕೇವಲ ಬಲಹೀನರಾದ ಅಸಜ್ಜನರಲ್ಲಿ ಪ್ರವೇಶಿಸುವುದರಿಂದ ಏನೂ ಪ್ರಯೋಜನವಿಲ್ಲವೆಂಬ ಭಾವದಿಂದ, ಕಲಿಯನ್ನು ನಿಗ್ರಹಿಸಲಿಲ್ಲ. ಆದ್ದರಿಂದ ಕಲಿಯು ಧರ್ಮ ಜ್ಞಾನಾದಿಗಳನ್ನು ಕಾಮ್ಯಾರ್ಥಕ್ಕಾಗಿ ಅಪ್ರಮತ್ತರಂತೆ ಸ್ವಲ್ಪ ಕಾಲ ಆಶ್ರಯಿಸಿ, ನಂತರ ಪ್ರಮತ್ತರಾಗಿ ಬಿಡುವಂತಹ ಬಲಾಬಲಗಳಿಂದ ಕೂಡಿದ ಜನರಲ್ಲೇ ತನ್ನ ವ್ಯಾಪಾರಗಳನ್ನು ಮಾಡುತ್ತಾನೆ, ಆದುದರಿಂದ ವೃಕನೆಂದು ಕರೆಯಲ್ಪಡುತ್ತಾನೆ. ಈ ರೀತಿಯಾಗಿ ಸೂಕ್ಷ್ಮರೂಪದಿಂದ ಭಗವನ್ಮಹಿಮೋಪೇತವಾದ ಪರೀಕ್ಷಿದ್ರಾಜನ ವೃತ್ತಾಂತವನ್ನು ನಿಮಗೆ ಹೇಳಿದೆನು. ಇಂತಹ ಕಥೆಗಳು ಅನೇಕ ವಿಧಗಳಾಗಿರುತ್ತವೆ. ಭಗವತ್ಕಥಾನಿಷ್ಠರಾದ ನೀವುಗಳು ಅವುಗಳ ಶ್ರವಣವಿಚಾರದಲ್ಲಿ ಬಹಳ ಆಸಕ್ತರಾಗಿರುತ್ತೀರಿ, ಎಂದರು.

ಆಗ ಋಷಿಗಳು, ಎಲೈ!ಸೂತರೇ! ನೀವು ಮರಣೋನ್ಮುಖರಾದ ನಮಗೆ ಶ್ರೀಕೃಷ್ಣ ಚರಿತಾಮೃತವನ್ನು ಉಣಿಸಿ, ನಮಗೆ ಜೀವನವನ್ನುಂಟುಮಾಡುತ್ತಿರುವಿರಿ! ಆದುದರಿಂದ ನೀವು ಶ್ರೀಕೃಷ್ಣನ ಯಶಸ್ಸನ್ನು ಕೊಂಡಾಡುವವರಾಗಿ, ನೂರು ವರ್ಷ ಮನುಷ್ಯ ಕ್ಲುಪ್ತ ಆಯಸ್ಸಿಗಿಂತಲೂ ಹೆಚ್ಚಾಗಿ ಬಹು ಕಾಲ ಸುಖದಿಂದ ಬಾಳಿರಿ! ಅಂತಃ ಕರಣಶುದ್ಧಿಯಿಂದ ಪರಮಾತ್ಮನ ಜ್ಞಾನಾಪೇಕ್ಷಿಗಳಾಗಿ ನಾವು, ಶ್ವಾಸ ನಿರ್ಬಂಧರೂಪ ಪ್ರಾಣಾಯಾಮ ಪ್ರತ್ಯಾಹಾರಗಳಿಂದ,

## अथ अष्टादशोऽध्यायः

ವಿಷಯಸಂಗಗಳನ್ನು ತ್ಯಜಿಸಿ ಈ ಸತ್ರಯಾಗದಲ್ಲಿ ನಿಷ್ಠರಾಗಿರುವ ಕಾಲದಲ್ಲಿ ನೀವು ಹರಿಕಥಾರೂಪವಾದ ಪರಮಮಂಗಳವೂ, ಅಮೃತಸ್ವರೂಪವೂ, ಆದ ಆಜ್ಯಧಾರೆಯನ್ನು ನಮ್ಮ ಕಿವಿಗಳ ದ್ವಾರಾ, ನಮ್ಮ ಹೃದಯವೆಂಬ ಅಗ್ನಿಯಲ್ಲಿ ಹೋಮಮಾಡಿ, ಆ ಹೋಮದಿಂದ ಉತ್ಪನ್ನವಾದ ಪರಮಾತ್ಮ ಜ್ಞಾನಾಖ್ಯ ಹೊಗೆಯಿಂದ ನಮ್ಮೆಲ್ಲರ ಶರೀರಾದ್ಯಂತವನ್ನು ಆನಂದ ಪುಳಕಿತವನ್ನಾಗಿ ಮಾಡಿರುವಿರಿ.

ರಾಜ್ಯ, ಐಶ್ವರ್ಯಸುಖಗಳನ್ನು ಇಹಲೋಕ, ಸ್ವರ್ಗಲೋಕಗಳಲ್ಲಿ ಕೊಡತಕ್ಕ ಸ್ವಲ್ಪಕಾಲಗಳಲ್ಲಿ ಮಾಡಲು ಸಾಧ್ಯವಾದ ಕಾಮ್ಯಯಜ್ಞಗಳನ್ನು ಅಲ್ಪಗಳೆಂದು ನಾವು ನಿರ್ಧರಿಸಿ, ಬಹುಕಾಲ ಆಚರಿಸಲ್ಪಡಬೇಕಾದ ಈ ಸತ್ರಯಾಗವೆಂಬ ಜ್ಞಾನಯಜ್ಞದಲ್ಲಿ ದೀಕ್ಷಿತರಾಗಿರುವಾಗ, ನಮಗೆ ನಿಮ್ಮ ಸಮಾಗಮದಿಂದ ಸಕಲಶ್ರೇಯಸ್ಸುಗಳಿಗೂ, ಮೋಕ್ಷಕ್ಕೂ, ಸುಲಭ ಮಾರ್ಗವಾದ ಸತ್ಸಂಗವು ಪ್ರಾಪ್ತವಾಯಿತು. ಆದುದರಿಂದ ನಮ್ಮ ಸತ್ರಯಾಗವು ಸಫಲವಾಯಿತು.

ಪರಮಾತ್ಮನ ಗುಣಗಳು ಅನಂತಗಳಾಗಿವೆ. ರಮಾ ಬ್ರಹ್ಮ ರುದ್ರಾದಿ ಮಹಾ ಜ್ಞಾನಿಗಳಾದ ಏಕಾಂತ ಭಕ್ತರು ಪರಮಾತ್ಮನ ಗುಣಾನ್ವೇಷಣ, ಶ್ರವಣವೆಂಬ ಅಮೃತ ಪಾನದಲ್ಲಿ ತೃಪ್ತರಾಗುವುದಿಲ್ಲ. ನೀವು ಸಂಕ್ಷೇಪದಿಂದ ಹೇಳಿದ ಪರೀಕ್ಷಿದ್ರಾಜನ ಪುಣ್ಯಕಥೆಯನ್ನು ಕೇಳಲು ಪರಮ ಕುತೂಹಲ ವುಳ್ಳ ನಮಗೆ, ವಿಸ್ತಾರವಾಗಿ, ಅವುಗಳಲ್ಲಿ ಶ್ರೀಕೃಷ್ಣನ ಪರಮ ಉದಾರಮಹಿಮೆಗಳು ಏನೇನಿರುವವೋ ಎಲ್ಲವನ್ನೂ ವಿಸ್ತರಿಸಿ ಕೃಪೆಯಿಂದ ಹೇಳಿರಿ! ಈ ವ್ಯಾಜದಿಂದ ಮಹಾ ಭಾಗವತಪ್ರಧಾನನಾದ ಪರೀಕ್ಷಿದ್ರಾಜನು ವ್ಯಾಸಪುತ್ರರಾದ ಶುಕಮಹರ್ಷಿಗಳಿಂದ ಯಾವ ವಿಜ್ಞಾನರೂಪವಾದ ಭಾಗವತ ಕಥೆಯನ್ನು ಕೇಳಿ, ಅಂತ್ಯದಲ್ಲಿ ಮೋಕ್ಷವೆಂಬ ಶಾಶ್ವತ ಸದ್ಗತಿಯನ್ನು ಪಡೆದನೋ, ಆ ಭಾಗವತ ಕಥಾನುವಾದವನ್ನು ನಮಗೋಸ್ಕರವಾಗಿ ಮಾಡಿರಿ! ಎಂದರು.

ಅದಕ್ಕೆ ಸೂತರು, ಎಲೈ ಮಹಾತ್ಮರೂ, ಪಾವನರೂ ಆದ ಶೌನಕಾದಿ ಋಷಿಗಳಿರಾ! ನಾನು ಹೀನ ಕುಲದಲ್ಲಿ ಹುಟ್ಟಿದವನಾದರೂ, ನಿಮ್ಮಂತಹ ತಪೋಧನರ, ಮಹಾತ್ಮರ, ಸಹವಾಸವು ನನಗೆ ಪ್ರಾಪ್ತವಾಗಿ, ಭಗವತ್ಕಥೆಗಳಿಂದ ನಿಮ್ಮ ಸೇವೆಯನ್ನು ಮಾಡುತ್ತಾ ಬಹುಕಾಲ ನಿಮ್ಮ ಸಹವಾಸ ಸುಖವನ್ನು ನಾನು ಹೊಂದುವಂತೆ ಆದ್ದರಿಂದ, ನನ್ನ ಜನ್ಮವು ಹೀನವಾದದ್ದೆಂಬ ನನ್ನ ಮನೋದುಃಖವು ನಿರ್ಮೂಲವಾಯಿತು. ನಿಮ್ಮ ಸತ್ಸಹವಾಸವು ನನ್ನ ಪರಮ ಭಾಗ್ಯೋದಯವು ಆಗಿರುತ್ತದೆ. ಮಹತ್ತಮರಾದ ಬ್ರಹ್ಮಾದಿಗಳಿಂದ ಏಕಾಂತ ಭಾವದಿಂದ ಉಪಾಸ್ಯನಿಂದ ಶ್ರೀ ಅನಂತನ ನಾಮೋಚ್ಚಾರಣೇ ಮಾಡಿದವರೇ ಭವಸಮುದ್ರವೆಂಬ ವ್ಯಾಧಿಯಿಂದ ಉತ್ತೀರ್ಣರಾಗುತ್ತಾರೆಂದ

ಮೇಲೆ, ಅವನ ಗುಣಾನುವರ್ಣನೆ, ಶ್ರವಣಾದಿಗಳನ್ನು ಮಾಡುವವರ ಪುಣ್ಯಕ್ಕೆ ಎಣೆಯುಂಟೇ? ದೇಶತಃ ಕಾಲತಃ ಗುಣತಃ ಅಪರಿಚ್ಛಿನ್ನನಾದ ಪರಮಾತ್ಮನನ್ನು, ಸತ್ಯನೆಂದೂ, ಜ್ಞಾನನೆಂದೂ, ಅನಂತನೆಂದೂ, ಬ್ರಹ್ಮನೆಂದೂ ವೇದಗಳು ಕರೆಯುತ್ತಿವೆ.

ಬ್ರಹ್ಮವಾಯುಗಳಿಗಿಂತ ಅಧಿಕವಾಗಿ ಪರಮಾತ್ಮನ ಕಾರುಣ್ಯನೋಟಕ್ಕೆ ಪಾತ್ರಳಾದ ಲಕ್ಷ್ಮೀದೇವಿಯು, 'ಯಂ ಕಾಮಯೇ ತಮುಗ್ರಂ ಕೃಣೋಮಿ, ತಂ ಬ್ರಹ್ಮಾಣಂ, ತಂ ಋಷಿಂ ತಂ ಸುಮೇಧಾಂ ' ಎಂಬ ಅಂಭ್ರಣೀ ಸೂಕ್ತದಂತೆ, ಪರಮಾತ್ಮನ ಕಟಾಕ್ಷ ಪ್ರೇಮ ವೀಕ್ಷಣದಿಂದ, ತನ್ನ ವಿಭೂತಿ ಎಂಬ ಐಶ್ವರ್ಯದ ಅಂಶದಿಂದಲೇ, ಬ್ರಹ್ಮರುದ್ರಾದಿ ಸಕಲ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ಬಂಧ, ಮೋಕ್ಷಾದಿಗಳನ್ನೂ ನನ್ನ ಇಚ್ಛೆ ಬಂದಂತೆ ಮಾಡುತ್ತೇನೆಂದು ಲಕ್ಷ್ಮೀದೇವಿಯರು ತಮ್ಮ ಮಹಾತ್ಮೆಯನ್ನು ಸೂಚಿಸಿರುವಂತೆ, ತಾವೇ ಅಪರಿಮಿತ ಸನ್ಮಹಿಮರಾದರೂ, ಯಾವ ನಿರಪೇಕ್ಷನೂ, ನಿತ್ಯತೃಪ್ತನೂ ಆದ ಶ್ರೀಪರಮಾತ್ಮನು ರಮಾದೇವಿಯರ ಸೇವೆಯನ್ನು ಅಪೇಕ್ಷಿಸದೇ ಇದ್ದರೂ, ತಾವಾಗಿಯೇ ನಿರಂತರ ಆತನ ಪಾದಸೇವೆಯಲ್ಲಿ ನಿರತರಾಗಿರುವರೋ, ಅಂತಹ ಶ್ರೀಮನ್ನಾರಾಯಣ, ಶ್ರೀವಿಷ್ಣುನಾಮಕ ಪರಮಾತ್ಮನು ಸರ್ವೋತ್ತಮನೆಂದು ಏನು ಹೇಳಬೇಕಾದ್ದಿದೆ? ಆ ಶ್ರೀಮನ್ನಾರಾಯಣನಲ್ಲದೆ ಬೇರೆ ಭಗವಚ್ಛಬ್ದವಾಚ್ಯವಾದ ವಸ್ತುವು ಬೇರೆ ಎಲ್ಲಿದೆ?

ಯಾವ ಶ್ರೀಮನ್ನಾರಾಯಣನು, ವಾಮನಾವತಾರದಲ್ಲಿ ತ್ರಿವಿಕ್ರಮರೂಪವನ್ನು ತಾಳಿ, ತನ್ನ ಪಾದಾಂಗುಷ್ಠ ಉಗುರಿನಿಂದ ಬ್ರಹ್ಮಾಂಡ ಕಟಾಹವನ್ನು ಒಡೆದು, ದೇವಗಂಗೆಯನ್ನು ಬ್ರಹ್ಮಾಂಡದೊಳಗೆ ಬರುವಂತೆ ಮಾಡಿದಾಗ, ಸತ್ಯಲೋಕದಲ್ಲಿದ್ದ ಬ್ರಹ್ಮದೇವರು ಸತ್ಯಲೋಕದಲ್ಲಿ ಆವಿರ್ಭೂತವಾಗಿದ್ದ ಆ ತ್ರಿವಿಕ್ರಮದೇವರ ಪಾದವನ್ನು ಆ ದೇವಗಂಗೆಯ ಉದಕದಿಂದ ಪ್ರಕ್ಷಾಳನೆಮಾಡಿ, ಪಾದೋದಕವನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿದರೋ, ಆ ಸತ್ಯಲೋಕದಿಂದ ತಪೋಲೋಕಕ್ಕೆ ಇಳಿಯುತ್ತಿದ್ದ ಪಾದೋದಕವನ್ನು ಯಾವ ರುದ್ರದೇವರು ಶಿರಸ್ಸಿನಲ್ಲಿ ಧರಿಸಿದರೋ, ಅದರಿಂದ ಪುನೀತನಾದೆನೆಂದು ಭಾವಿಸಿದರೋ, ಅಂತಹ ಸರ್ವೋತ್ತಮ ದೇವತೆಯಾದ ಶ್ರೀಮನ್ನಾರಾಯಣನಿಗಿಂತ ಬೇರೆ ದೇವರೆಲ್ಲುಂಟು?

ಮೋಕ್ಷಪ್ರದನಾದ ಕಾರಣ, ಮುಕುಂದನೆಂದು ಪ್ರಖ್ಯಾತನಾದ ಶ್ರೀಪರಮಾತ್ಮನೇ ಬ್ರಹ್ಮ, ರುದ್ರಾದಿಗಳಿಗೂ ಮೋಕ್ಷಪ್ರದನಾದ್ದರಿಂದಲೂ ಸರ್ವೋತ್ತಮನು. ಇಂತಹ ವಿಷ್ಣು ಸರ್ವೋತ್ತಮ ಜ್ಞಾನವನ್ನು ಪಡೆದು, ಪರಮಾತ್ಮನನ್ನು ಅತಿಶಯವಾಗಿ ಜ್ಞಾನದಿಂದ ಉಪಾಸನೆ ಮಾಡುವುದಕ್ಕಾಗಿ,

ಜ್ಞಾನಿಗಳು ಅಹಿಂಸೆಯೇ ಪರಮಧರ್ಮವೂ, ಅಭಯವೇ ವೃತ್ತಿಯೂ, ಆಗಿರುವ ಪರಮಹಂಸ ಪದವೆಂಬ ಸನ್ಯಾಸ ಧರ್ಮವನ್ನವಲಂಭಿಸಿ, ಭಗವತ್ಕಟಾಕ್ಷಕ್ಕೆ ಪಾತ್ರರಾಗಿ ಮುಕ್ತರಾಗುತ್ತಾರೆ. ಇಂತಹ ಜ್ಞಾನಿಗಳು ಸರ್ವಸಂಗ ಪರಿತ್ಯಾಗ ಮಾಡಿ, ಇಂದ್ರಿಯ ನಿಗ್ರಹ ವುಳ್ಳವರಾಗಿ ಪವಿತ್ರರಾಗಿರುತ್ತಾರೆ. ಎಲೈ! ಶೌನಕರೆ! ನೀವು ಭಗವದ್ಗುಣಗಳನ್ನು ನಮಗೆ ಹೇಳಿರೆಂದು ಕೇಳಿರುವಿರಿ. ಆದರೆ ನಾನು ಗುಣಾನಂತ, ರೂಪಾನಂತ, ಕ್ರಿಯಾನಂತನಾದ ಭಗವಂತನ ಅಪರಿಮಿತ ಮಹಿಮೆಗಳಲ್ಲಿ, ನನ್ನ ಅಲ್ಪಜ್ಞಾನದಿಂದ, ಭಗವತ್ಪ್ರಸಾದ ಲಭ್ಯ ಗುರುಪ್ರಸಾದದಿಂದ ಎಷ್ಟು ತಿಳಿದು ಹೇಳಲು ಸಾಧ್ಯವೋ ಅಷ್ಟನ್ನು ನಿಮಗೆ ತಿಳಿಸುವೆನು.

ಅಗಾಧವಾದ ಆಕಾಶದಲ್ಲಿ ಗರುಡ ಮೊದಲು, ನೊರಜಿ ಪರಿಯಂತ ಹಾರಾಡುವ ಪಕ್ಷಿಗಳು ತಮ್ಮ ತಮ್ಮ ಶಕ್ತಿ ಇದ್ದಷ್ಟೂ ಹಾರಾಡಿದರೂ, ಹೇಗೆ ಆಕಾಶದ ಪರಿಮಿತಿ ಇಷ್ಟೆಂದು ತಿಳಿಯಲಾರರೋ, ಅದರಂತೆ ಮಹಾವಿಜ್ಞಾನಿಗಳಲ್ಲಿ ಉತ್ತಮೋತ್ತಮರಾದ ಬ್ರಹ್ಮ, ರಮಾದಿಗಳು, ಯಾವ ಪರಮಾತ್ಮನ ಮಹಿಮೆಗಳನ್ನು, ತಮ್ಮ ತಮ್ಮ ಉತ್ಕೃಷ್ಟ ಜ್ಞಾನ ಬಲದಿಂದ, ಹೆಚ್ಚು ಹೆಚ್ಚಾಗಿ ತಿಳಿದರೂ, ಅವರು ಪರಮಾತ್ಮನ ಮಹಿಮೆಗಳಲ್ಲಿ ಸ್ವಲ್ಪವನ್ನೂ ತಿಳಿದಿಲ್ಲವೆಂದು ಭಾವಿಸುವರೋ, ಅಂತಹ ಅಗಮ್ಯ, ಅದ್ಭುತ, ಪರಮಾತ್ಮ ಮಹಿಮೆಗಳನ್ನು ನಾನು ಕೇವಲ ಸ್ವಲ್ಪವಾಗಿಯೇ ವರ್ಣಿಸಲು ಯೋಗ್ಯನಾಗಿರುತ್ತೇನೆ.

## ಕಲಿನಿಗ್ರಹ ಮಾಡಿದವನಿಗೂ ಕಲಿಬಾಧೆ ತಪ್ಪಿದ್ದಲ್ಲ

ಇನ್ನು ಪರೀಕ್ಷಿದ್ರಾಜನು ಒಂದು ಸಲ ಬೇಟೆಗಾಗಿ ಅರಣ್ಯ ಪ್ರವೇಶ ಮಾಡಿದನು. ಧನುರ್ಧಾರಿಯಾಗಿ ಕ್ರೂರ ಮೃಗಗಳನ್ನು ಹಿಂಬಾಲಿಸಿ ಬೇಟೆಯಾಡುತ್ತಾ, ಬಿಸಿಲಿನ ತಾಪದಿಂದ ಪರೀಕ್ಷಿದ್ರಾಜನಿಗೆ, ಬಹಳ ಹಸಿವೂ, ಬಾಯಾರಿಕೆಯೂ, ಆಲಸ್ಯವೂ ಆಯಿತು, ಗಂಟಲು ಒಣಗುತ್ತಿತ್ತು. ಸಮೀಪದಲ್ಲೆಲ್ಲೂ ನೀರನ್ನು ಕಾಣದೆ, ಸ್ವಲ್ಪದೂರದಲ್ಲಿ ಕಾಣುತ್ತಿದ್ದ ಒಂದು ತಪಸ್ವಿಗಳ ಆಶ್ರಮಕ್ಕೆ ಬಂದು, ಅಲ್ಲಿ ಬಹಿರ್ವ್ಯಾಪಾರಗಳನ್ನೂ, ಇಂದ್ರಿಯಗಳನ್ನೂ ಉಪರಮಿಸಿ, ಕೇವಲ ಅಂತಃಪ್ರಜ್ಞೆಯಿಂದ ಸಮಾಧಿಯೋಗದಲ್ಲಿ ಅರೆಗಣ್ಣುಮುಚ್ಚಿ, ನಿಶ್ಚೇಷ್ಟರಾಗಿ ಕುಳಿತಿರುವ ಶಮೀಕರೆಂಬ ಒಬ್ಬ ಬ್ರಾಹ್ಮಣ ಋಷಿಗಳನ್ನು ಕಂಡು, ಕುಡಿಯುವುದಕ್ಕೆ ನೀರು ಬೇಕೆಂದು ಕೇಳಿದನು. ಋಷಿಗಳಿಗೆ ಬಾಹ್ಯಪ್ರಜ್ಞೆ ಇರಲಿಲ್ಲವಾಗಿ ಚಲಿಸದೇ ಹಾಗೆಯೇ ಕುಳಿತಿದ್ದರು. ಚಕ್ರವರ್ತಿಯಾದ ತನಗೆ, ಪ್ರಾರ್ಥಿಸಿದರೂ ಆದರವಾಗಲೀ, ಆತಿಥ್ಯವಾಗಲೀ ನೀಡದೆ ಸಮಾಧಿ ಯೋಗದಲ್ಲಿರುವಂತೆ

ನಟಿಸುತ್ತಾ ಆ ಬ್ರಾಹ್ಮಣ ಋಷಿಗಳು ತನ್ನನ್ನು, ಇವನಿಂದ ನಮಗೇನಾಗಬೇಕಾಗಿರುತ್ತೆ! ಎಂಬ ಉದಾಸೀನ ಭಾವದಿಂದ ಅವಮಾನಿಸಿದರೆಂದು ಭಾವಿಸಿ ಪರೀಕ್ಷಿದ್ರಾಜನು ಕೋಪಗೊಂಡು, ಸಮೀಪದಲ್ಲೇ ಸತ್ತು ಬಿದ್ದಿದ್ದ ಒಂದು ದೊಡ್ಡ ಸರ್ಪ ಶರೀರವನ್ನು ತನ್ನ ಧನುಸ್ಸಿನ ಕೊನೆಯಿಂದ ಎತ್ತಿ, ಆ ಋಷಿಗಳ ಕೊರಳಿಗೆ ಹಾಕಿ, ತನ್ನ ರಾಜ್ಯಾಭಿಮುಖವಾಗಿ ಹೊರಟುಹೋದನು.

ಇದನ್ನು ನೋಡುತ್ತಿದ್ದ ಕೆಲವು ಋಷಿಪುತ್ರರು ದೂರದಲ್ಲಿ ಬಾಲಕರೊಡನೆ ಆಡುತ್ತಿದ್ದ, ಶಮೀಕರೆಂಬ ಈ ಋಷಿಗಳ ಪುತ್ರನಾದ ಶೃಂಗಿ ಎಂಬ ಬಾಲಕನಿಗೆ ಪರೀಕ್ಷಿದ್ರಾಜನು ಮೃತಸರ್ಪವನ್ನು ನಿಮ್ಮ ತಂದೆಯ ಕೊರಳಿಗೆ ಹಾಕಿದನೆಂದು ತಿಳಿಸಿದರು. ಅದನ್ನು ಶೃಂಗಿಯು ಕೇಳಿ, ಆಹಾ ಏನಾಶ್ಚರ್ಯ! ಸರ್ವಧರ್ಮರಕ್ಷಕನಾಗಿದ್ದ ಆ ಶ್ರೀಕೃಷ್ಣ ಪರಮಾತ್ಮನು ಭೂಲೋಕವನ್ನು ತ್ಯಜಿಸಿದ ಮೇಲೆ, ಕೇವಲ ಮಹಾತ್ಮರಾದ ಪಾಂಡವ ವಂಶದವರೂ ಕೂಡ ಯಾವ ಬ್ರಾಹ್ಮಣರ ಪಾದಸೇವೆಯನ್ನು ಮಾಡಿ, ಅವರ ಆಶೀರ್ವಾದ ಬಲದಿಂದ ಐಶ್ವರ್ಯ, ಯಶಸ್ಸುಗಳಿಂದ ಕೂಡಿ ಧರ್ಮರಾಜ್ಯ ಪರಿಪಾಲನೆಯನ್ನು ಮಾಡಿದರೋ, ಅಂತಹ ಬ್ರಾಹ್ಮಣರಿಗೂ ನಿಷ್ಕಾರಣವಾಗಿ ಅಪಮಾನ ಮಾಡುವಷ್ಟು ದುಷ್ಟರಾದರೆ, ಬಾಗಿಲು ಕಾಯುವುದಕ್ಕೆ ನೇಮಿಸಿದ್ದ ನಾಯಿಯು ಅಡುಗೇ ಮನೆಗೆ ನುಗ್ಗಿ ಪಾತ್ರೆಗಳಿಂದ ಭೋಜನ ಪದಾರ್ಥಗಳನ್ನು ತಿನ್ನುವಂತಾಯಿತು. ಎಲೈ! ಬಾಲಕರಿರಾ! ಇಂತಹ ಕ್ಷತ್ರಿಯರು ಶಿಕ್ಷಾರ್ಹರು. ನನ್ನ ತಪಶ್ಯಕ್ತಿಯನ್ನಾದರೂ ನೋಡಿ! ಎಂದು ಹೇಳಿ ಶುದ್ಧಾಚಮನವನ್ನು ಮಾಡಿ ಕೈಲಿ ನೀರನ್ನು ಹಿಡಿದು, ಯಾವ ಕ್ಷತ್ರಿಯ ರಾಜನು ಅನ್ಯಾಯವಾಗಿ ಬ್ರಾಹ್ಮಣರನ್ನು ಪೂಜಿಸುವ ಮರ್ಯಾದೆಯನ್ನು ಅತಿಕ್ರಮಿಸಿ, ಮೃತಸರ್ಪ ದೇಹವನ್ನು ಕೊರಳಿಗೆ ಹಾಕಿ ಅಪಮಾನಿಸಿದನೋ, ಆ ರಾಜನು ಇಂದಿಗೆ ಏಳನೆಯ ದಿನದಲ್ಲಿ ತಕ್ಷಕನಿಂದ ಕಚ್ಚಲ್ಪಟ್ಟು ಮೃತನಾಗಲಿ! ಎಂದು ಶಾಪವನ್ನು ಕೊಟ್ಟನು. ನಂತರ ತಮ್ಮ ತಂದೆಯನ್ನು ನೋಡುವುದಕ್ಕಾಗಿ ಬಾಲಕರೊಡನೆ ಆಶ್ರಮಕ್ಕೆ ಬಂದು, ತಂದೆಯಾದ ಶಮೀಕ ಋಷಿಗಳ ಕೊರಳಿನಲ್ಲಿರುವ ಭಾರಿ ಸರ್ಪವನ್ನು ಕಂಡು, ಹೆದರಿಕೆಯಿಂದಲೂ, ದುಃಖದಿಂದಲೂ ಘಟ್ಟಿಯಾಗಿ ರೋದಿಸಿದನು.

## ಪರೀಕ್ಷಿತರಿಗೆ ಶೃಂಗಿಯಿಂದ ಶಾಪಪ್ರದಾನ

ಈ ರೋದನ ಧ್ವನಿಯು ಶಮೀಕ ಋಷಿಗಳಿಗೆ ಬಹಿಃಪ್ರಜ್ಞೆಯನ್ನುಂಟುಮಾಡಿತು. ಶಮೀಕರು ಮೆಲ್ಲನೆ ಕಣ್ಣುಗಳನ್ನು ತೆರೆದು ಎದುರಿಗೆ ನಿಂತು ರೋದಿಸುತ್ತಿರುವ ಮಗನಾದ ಶೃಂಗಿಯನ್ನು ನೋಡಿ, ಎಲೈ! ಬಾಲಕನೇ! ನಿನಗೆ ಯಾರು ಏನಪರಾಧ ಮಾಡಿದರು? ಏತಕ್ಕಾಗಿ ಅಳುತ್ತೀ!

ಎಂದು ಕೇಳಿದರು. ನಂತರ ತಮ್ಮ ಕೊರಳಲ್ಲಿದ್ದ ಮೃತಸರ್ಪವನ್ನು ದೂರಕ್ಕೆ ಎಸೆದರು. ನಂತರ ಶೃಂಗಿಯು, ಋಷಿಪುತ್ರರಿಂದ ಪರೀಕ್ಷಿದ್ರಾಜನು ಮೃತಸರ್ಪವನ್ನು ತನ್ನ ತಂದೆ ಶಮೀಕರ ಕೊರಳಿಗೆ ಹಾಕಿದ ವಿಚಾರವನ್ನು ಕೇಳಿ, ತಾನು ಪರೀಕ್ಷಿದ್ರಾಜನಿಗೆ ಕೊಟ್ಟ ಶಾಪ ವಿಚಾರವನ್ನೂ ಶಮೀಕರಿಗೆ ತಿಳಿಸಿದನು.

ಅದನ್ನು ಕೇಳಿ ಶಮೀಕರು, ಎಲೈ! ಅಲ್ಪಬುದ್ಧಿಯುಳ್ಳ ಬಾಲಕನೇ! ಎಂತಹ ದುಷ್ಕಾರ್ಯವನ್ನು ಮಾಡಿದಿ! ಪರಮಭಗವದ್ಭಕ್ತನಾದ, ಪಾಂಡವಕುಲ ಶಿರೋಮಣಿಯಾದ ಪರೀಕ್ಷಿದ್ರಾಜನು, ಹಸಿವು, ಬಯಾರಿಕೆ, ಆಯಾಸದಿಂದ ಆರ್ತನಾಗಿ, ನೀರನ್ನು ಬೇಡಲು ನಮ್ಮ ಆಶ್ರಮಕ್ಕೆ ಬಂದರೆ, ನಾವು ಅವನಿಗೆ ಆದರ ಉಪಚಾರ ಮಾಡಬೇಕೋ? ಮರಣಶಾಪ ಕೊಡತಕ್ಕದ್ದೋ? ಭೂಮಂಡಲವನ್ನು ಶಾಸನಮಾಡುವಂತಹ, ಧರ್ಮಶೀಲರಾದ ಕ್ಷತ್ರಿಯರಾಜರು ಇಲ್ಲದಿದ್ದರೆ ಪ್ರಜೆಗಳು ಅನಾಥರಾಗಿ, ಪರಸ್ಪರ ಹೊಡೆದಾಡಿ, ಕಳ್ಳ ಸದೃಶರಾಗಿ ಪರಸ್ಪರ ಧನ, ಸ್ತ್ರೀ, ಕನಕಾದಿಗಳ ಅಪಹಾರವನ್ನು ಮಾಡುವರು. ಕೊನೆಗೆ ವರ್ಣಾಶ್ರಮಧರ್ಮಗಳೆಲ್ಲವೂ ನಷ್ಟವಾಗಿ ಕೋತಿ, ನಾಯಿಗಳಂತೆ ಸ್ತ್ರೀಸಂಗಪರರಾಗಿ ವರ್ಣಸಂಕರ ಉಂಟಾಗುವುದು. ಅಂತಹ ಪಾಪಕ್ಕೆ ಶಾಪ ಕೊಟ್ಟ ನಾವು ಭಾಗಿಗಳಾಗಬೇಕಾಗುತ್ತೆ. ಮೂಢನಾದ ನೀನು ವಿವೇಚನೆ ಇಲ್ಲದೆ, ಅಲ್ಪಾ ಪರಾಧವೆಂದು ತಿಳಿದೂ, ನಮಗೆ ಏನೂ ಅಪರಾಧ ಮಾಡದ ಧರ್ಮಪ್ರಭುವಾದ ಪರೀಕ್ಷಿದ್ರಾಜನಿಗೆ ನಿನ್ನಿಂದ ಅರಿಯದೇ ಮಾಡಲ್ಪಟ್ಟ ಅಪರಾಧವನ್ನು ಕ್ಷಮಿಸಿ, ನಮ್ಮನ್ನೂ ಪರೀಕ್ಷಿದ್ರಾಜನನ್ನೂ ಉದ್ಧಾರಮಾಡಲಿ! ಎಂದರು.

ಈ ರೀತಿಯಾಗಿ ಶಮೀಕ ಋಷಿಗಳಂತಹ ಸಜ್ಜನರು, ಇತರರಿಂದ ತಿರಸ್ಕೃತರಾಗಿ ಅಪಮಾನಿತರಾದರೂ, ತಾಡನಾದಿಗಳಿಂದ ಶಿಕ್ಷಿಸಲ್ಪಟ್ಟರೂ, ಅಥವಾ ಕೊನೆಗೆ ಸಂಹರಿಸಲ್ಪಟ್ಟರೂ, ತಾವು ಪ್ರತಿ ಅಪಕಾರವನ್ನು ಮಾಡುವುದಿಲ್ಲ ಮತ್ತು ತಮಗೆ ಇತರರಿಂದ ಕೆಟ್ಟದ್ದಾಯಿತೆಂಬ ಭಾವನೆಯನ್ನೂ ಹೊಂದುವುದಿಲ್ಲ. ಇದು ಸಜ್ಜನ ಸ್ವಭಾವವು ಎಂದು ಸೂತರು ಶೌನಕಾದಿಗಳಿಗೆ ಹೇಳಿದರು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹದಿನೆಂಟನೆಯ ಅಧ್ಯಾಯವು ಮುಗಿಯಿತು.**

## अथ एकोनविंशोऽध्यायः

**सूत उवाच**

## अथ एकोनविंशोऽध्यायः

महीपतिस्त्वथ तत्कर्म गर्ह्यं विचिन्तयन्नात्मकृतं सुदुर्मनाः ।
अहो मया नीचमनार्यवत्कृतं निरागसि ब्रह्मणि गूढतेजसि ॥ १ ॥

ध्रुवं ततो मे कृतदेवहेलनाद् दुरत्ययं व्यसनं नातिदीर्घात् ।
तदस्तु काममघनिष्कृताय मे यथा न कुर्यां पुनरेवमद्धा ॥ २ ॥

अद्यैव राज्यं बलमृद्धकोशं प्रकोपितब्रह्मकुलानलो मे ।
दहत्वभद्रस्य पुनर्न मेऽभूत्पापीयसी धीर्द्विजदेवतासु ॥ ३ ॥

स चिन्तयन्नित्थमथाशृणोद्यथा मुनेः सुतोक्तान्निकृतिं तक्षकाख्यात् ।
स साधु मेने न चिरेण तक्षकादलंप्रसक्तस्य विरक्तिकारणम् ॥ ४ ॥

अथो विहायेममसुञ्च लोकं विमृश्य तौ हेयतया पुरस्तात् ।
कृष्णाङ्घ्रिसेवामभिमन्यमान उपाविशत्प्रायममर्त्यनद्याम् ॥ ५ ॥

या वै लसच्छ्रीतुलसीविमिश्रकृष्णाङ्घ्रिरेण्वभ्यधिकाम्बुनेत्री ।
पुनात्यशेषानुभयत्र लोकान् कस्तां न सेवेत मरिष्यमाणः ॥ ६ ॥

इति व्यवस्थाय च पाण्डवेयः प्रायोपवेशं प्रति विष्णुपद्याम् ।
दध्यौ मुकुन्दाङ्घ्रिमनन्यभावो मुनिव्रतो मुक्तसमस्तसङ्गः ॥ ७ ॥

तत्रोपजग्मुर्भुवनं पुनाना महानुभावा मुनयः सशिष्याः ।
प्रायेण तीर्थाधिगमापदेशैः स्वयं हि तीर्थानि पुनन्ति सन्तः ॥ ८ ॥

अत्रिर्वसिष्ठश्च्यवनः शरद्वानरिष्टनेमिर्भृगुरङ्गिराश्च ।
पराशरो गाधिसुतोऽथ राम उचथ्य इन्द्रप्रमतीध्मवाहौ ॥ ९ ॥

मेधातिथिर्देवल आर्ष्टिषेणो भरद्वाजो गौतमः पिप्पलादः ।
मैत्रेय और्वः कवषः कुम्भयोनिर्द्वैपायनो भगवान्नारदश्च ॥ १० ॥

अन्ये च देवर्षिब्रह्मर्षिवर्याः राजर्षिवर्या अरुणादयश्च ।
नानार्षेयप्रवरान् समेतानभ्यर्च्य राजा शिरसा ववन्दे ॥ ११ ॥

सुखोपविष्टेष्वथ तेषु भूयः कृतप्रणामः स्वचिकीर्षितं यत् ।
विज्ञापयामास विविक्तचेता उपस्थितोऽग्रेऽञ्जलिगृहीतपाणिः ॥ १२ ॥

## अथ एकोनविंशोऽध्यायः

राजोवाचअहो वयं धन्यतमा नृपाणां महत्तमानुग्रहणीयशीलाः ।
राज्ञां कुलं ब्राह्मणपादशौचमाराद्विसृष्टं बत गर्ह्यकर्म ॥ १३ ॥

तस्यैव मेऽस्त्वद्य परावरेशे व्यासक्तचित्तस्य गृहेष्वभीक्ष्णम् ।
निर्वेदमूलो द्विजशापरूपो यत्र प्रसक्तो(ऽ)भयमेव धत्ते ॥ १४ ॥

तं मोपविष्टं प्रतियान्तु विप्रा गङ्गा च देवी धृतचित्तमीशे ।
द्विजोपसृष्टः कुहकस्तक्षको वा दशत्वलं गायत विष्णुगाथाः ॥ १५ ॥

पुनश्च भूयाद्भगवत्यनन्ते रतिः प्रसङ्गश्च तदाश्रयेषु ।
महत्सु यां यां उपयामि सृष्टिं मैत्र्यस्तु सर्वत्र नमो द्विजेभ्यः ॥ १६ ॥

इति स्म राजा व्यवसाययुक्तः प्राचीनकाग्रेषु कुशेषु धीरः ।
उदमुखो दक्षिणकूल आस्ते समुद्रपत्न्यास्स्वसुतन्यस्तभारः ॥ १७ ॥

विहाय सर्वं नरदेवचिह्नं केयूरहाराङ्गदमौलिरत्नान् ।
रत्नांगुलीयान् विमलाम्बिरस्य पवित्रपाणिर्मुनिवेष आस्ते ॥ १८ ॥

एवं च तस्मिन्नरदेवदेवे प्रायोपविष्टो दिवि देवसङ्घाः ।
प्रशस्य भूमौ व्यकिरन् प्रसूनैर्मुदा मुहुर्दुन्दुभयश्च नेदुः ॥ १९ ॥

महर्षयो वै समुपागता ये प्रशस्य साध्वित्यनुमोदमानाः ।
ऊचुः प्रजानुग्रहशीलसारा यदुत्तमश्लोकगुणानुरूपम् ॥ २० ॥

न वा इदं राजर्षिवर्यं चित्रं भवत्सु कृष्णं समनुव्रतेषु ।
येऽध्यासनं राजकिरीटजुष्टं सद्यो जहुर्भगवत्पार्श्वकामाः ॥ २१ ॥

सर्वे वयं तावदिहास्महेऽथ कलेवरं यावदसौ विहाय ।
अजं परं विरजस्कं विशोकं यास्यत्ययं भागवतप्रधानः ॥ २२ ॥

आश्रुत्य तदृषिगणवचः परीक्षित् समं मधुश्रुत् गुरुशापव्यलीकम् ।
आभाषतैनानभिवन्द्य युक्तः शुश्रूषमाणश्चरितानि विष्णोः ॥ २३ ॥

राजोवाचसमागताः सर्वत एव सर्वे वेदा यथा मूर्तिधरास्त्रिपृष्ठे ।
नेहाथवाऽमुत्र च कश्चनार्थ ऋते परानुग्रहमात्मशीलाः ॥ २४ ॥

## अथ एकोनविंशोऽध्यायः

ततश्च वः प्रश्नमिमं विपृच्छे विश्रभ्य विप्रा इतिकृत्यतायाम्।
सर्वात्मना म्रियमाणैस्तु कृत्यं शुद्धञ्च तत्रामृशताभियुक्तः ॥ २५ ॥

## ॥ इति श्रीमद्भागवते प्रथमस्कन्धे एकोनविंशोऽध्यायः ॥

## ॥ ಹತ್ತೊಂಭತ್ತನೆಯ ಅಧ್ಯಾಯ ॥

### ಪರೀಕ್ಷಿತರ ಪಶ್ಚಾತ್ತಾಪ

ಈ ಅಧ್ಯಾಯದಲ್ಲಿ ಮೋಕ್ಷಕ್ಕಾಗಿ ಮಾಡಬೇಕಾದ ಸಾಧನೆಗಳಲ್ಲಿ ವೈರಾಗ್ಯ ಸಂಪಾದನೆಯೇ ಮೊದಲನೆಯ ಸಾಧನಾ ಸಂಪತ್ತೆಂದು, ಪರೀಕ್ಷಿದ್ರಾಜನು ಪ್ರಾಯೋಪವೇಶ ಮಾಡಿ ತನ್ನ ಮನೋಬಿಪ್ರಾಯವನ್ನು ನೆರೆದಿದ್ದ ಋಷಿಗಳಲ್ಲಿ ವಿಜ್ಞಾಪಿಸಿಕೊಳ್ಳುವ ವಿಧಾನದಿಂದ ನಿರೂಪಿಸಲ್ಪಡುತ್ತೆ. ಸೂತರು ಶೌನಕಾದಿಗಳಿಗೆ, ಎಲೈ ಶೌನಕಾದಿಗಳಿರಾ, ಪರೀಕ್ಷಿದ್ರಾಜನು ಶಮೀಕರ ಆಶ್ರಮವನ್ನು ಬಿಟ್ಟು ತನ್ನ ರಾಜ್ಯಾಭಿಮುಖವಾಗಿ ಬರುತ್ತಾ, ದಾರಿಯಲ್ಲಿ ಅಯ್ಯೋ! ನಾನು ಎಂತಹ ದುಷ್ಕೃತ್ಯವನ್ನು ಮಾಡಿದೆನು! ನಿರಪರಾಧಿಗಳಾದ ಬ್ರಾಹ್ಮಣ ಋಷಿವರ್ಯರು ಬ್ರಹ್ಮನಿಷ್ಠರಾಗಿ ಯೋಗದಲ್ಲಿದ್ದಾಗ ಮೂಢನಾದ ನಾನು ಅವರಿಗೆ ಅಪಮಾನಕರವಾದ ಮೃತಸರ್ಪ ಹಾರವನ್ನು ಹಾಕಿ, ಲೋಕದಲ್ಲಿ ಸಜ್ಜನರಿಗೆ ಸಮ್ಮತವಲ್ಲದ, ಬಹು ನಿಂದ್ಯವಾದ ಎಂತಹ ನೀಚಕರ್ಮವನ್ನು, ರಾಜಾಧಿರಾಜನಾದ ನಾನು ಮಾಡಿದೆ! ಗೂಢವಾದ ತೇಜಸ್ಸುಳ್ಳ ಬ್ರಾಹ್ಮಣರಿಗೆ ನಾನು ಮಾಡಿದ ತಿರಸ್ಕಾರದಿಂದ ನನಗೆ ಶೀಘ್ರದಲ್ಲಿಯೆ ಮಹದ್ವಿಪತ್ತುಗಳು ತಪ್ಪಿದ್ದಲ್ಲ.

ಈ ಮಹದ್ವಿಪತ್ತುಗಳು ನಾನು ಮಾಡಿದ ಪಾಪವನ್ನು ನಾಶಮಾಡುವುದರಿಂದ, ಆ ಎಲ್ಲಾ ವಿಪತ್ತುಗಳೂ ಪಾಪಿಯದ ನನಗೆ ಬೇಗನೇ ಉಂಟಾಗಲಿ. ಆದರೆ ಆ ವಿಪತ್ತುಗಳಿಂದ ಶುದ್ಧನಾಗುವ ನನಗೆ ಪುನಃ ಬ್ರಾಹ್ಮಣರನ್ನು ಈ ರೀತಿ ಅಪಮಾನ ಮಾಡುವ ದುರ್ಬುದ್ಧಿಯು ಎಂದೆಂದಿಗೂ ಬಾರದಿರಲಿ! ಬ್ರಾಹ್ಮಣ ಕೋಪವೆಂಬ ಅಗ್ನಿಜ್ವಾಲೆಯಿಂದ ನನ್ನ ರಾಜ್ಯಸಂಪತ್ತು, ಬಲ, ಸುಖಗಳೆಲ್ಲವೂ ಸುಟ್ಟುನಾಶವಾಗಲಿ! ಎಂದು ಚಿಂತಿಸುತ್ತಾ ಬರುತ್ತಿದ್ದ ಪರೀಕ್ಷಿದ್ರಾಜನಿಗೆ, ಶಮೀಕ ಋಷಿಗಳು ಕಳುಹಿಸಿಕೊಟ್ಟ ಅವರ ಶಿಷ್ಯರುಗಳು ಬಂದು, ಶೃಂಗಿಯು ಕೊಟ್ಟ ಶಾಪವಿಚಾರವನ್ನು ತಿಳಿಸಿದರು.

## अथ एकोनविंशोऽध्यायः

ತಕ್ಷಕನಿಂದ ಕಚ್ಚಲ್ಪಟ್ಟು ಏಳು ದಿನಗಳಲ್ಲಿ ತನಗೆ ಶೃಂಗಿಯ ಶಾಪದಿಂದ ಮರಣ ಉಂಟಾಗುವುದೆಂದು ಪರೀಕ್ಷಿದ್ರಾಜನು ಕೇಳಿ, ಅದು ತನಗೆ ತಕ್ಷಣವೇ ವೈರಾಗ್ಯವನ್ನು ಮನಸ್ಸಿನಲ್ಲಿ ಉಂಟುಮಾಡಿದ್ದರಿಂದ, ಆ ಬ್ರಾಹ್ಮಣ ಶಾಪವು ಸಾಧುವಾದದ್ದೆಂದೂ, ಶಾಪಮೂಲಕ ತನಗೆ ಶ್ರೇಯಸ್ಸನ್ನು ಉಂಟುಮಾಡಿತೆಂದೂ ಭಾವಿಸಿದನು. ಶಾಸ್ತ್ರಜ್ಞಾನದಿಂದ ಸಕಲ ಸಂಸಾರಕಲಾಪಗಳ ಹೇಯತೆಯನ್ನು ತಿಳಿದಿದ್ದ ಪರೀಕ್ಷಿದ್ರಾಜನು, ಶಮೀಕರ ಶಿಷ್ಯರನ್ನು ಸಂಭಾವಿಸಿ ಕಳುಹಿಸಿ, ತಕ್ಷಣ ಮನಸ್ಸಿನಿಂದ, ಸಕಲ ಪ್ರಪಂಚ ವ್ಯಾಪಾರಗಳೂ ತ್ಯಜಿಸಲ್ಪಟ್ಟು, ಸಮಸ್ತ ಸುಖದಾಯಕವಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಚಿತ್ತೈಕಾಗ್ರತೆಯಿಂದ ಭಕ್ತಿಮಾಡುವುದಕ್ಕಾಗಿ, ಗಂಗಾ ಪ್ರದೇಶದಲ್ಲಿ ಪ್ರಾಯೋಪವೇಶ ಮಾಡತಕ್ಕದೆಂದು ನಿರ್ಧರಿಸಿದನು.

### ಪ್ರಾಯೋಪವೇಶಕ್ಕೆ ಸಿದ್ಧತೆ

ಪಟ್ಟಣಕ್ಕೆ ಬಂದು, ರಾಜ್ಯ, ಕೋಶ, ಪತ್ನೀ ಮುಂತಾದವರನ್ನು ತನ್ನ ಮಗನಾದ ಜನಮೇಜಯರಾಯನಿಗೆ ಪರಿಪಾಲನೆಗಾಗಿ ಕೊಟ್ಟು, ಸಮಸ್ತ ರಾಜಯೋಗ್ಯ ಕಿರೀಟ, ಆಭರಣಾದಿಗಳನ್ನೆಲ್ಲಾ ತೆಗೆದಿಟ್ಟು, ಮುನಿವೇಷವನ್ನು ಧರಿಸಿ, ಯಾವ ಶ್ರೀಕೃಷ್ಣನ ಪಾದಸ್ಪರ್ಶದಿಂದ ಶ್ರೀಕೃಷ್ಣ ಪಾದದೂಳಿಯಿಂದ ಮಿಶ್ರಿತವಾದ ಶ್ರೀತುಳಸೀದಳಗಳಿಂದ ಕೂಡಿ, ಸಮೃದ್ಧಿಯಾದ ಪವಿತ್ರೋದಕವನ್ನು ಗಂಗಾದೇವಿಯು ಪ್ರವಹಿಸಿತ್ತಿರುವಳೋ, ಅಂತಹ ಸರ್ವ ಸಜ್ಜನರಿಂದ ಸೇವ್ಯವಾದ ಗಂಗಾ ನದಿಯ ಮಧ್ಯಭಾಗದಲ್ಲಿ, ದಕ್ಷಿಣತೀರಕ್ಕೆ ಸ್ವಲ್ಪ ಸಮೀಪದಲ್ಲಿರುವ ಪರಮಪಾವನ, ಮುನಿಸೇವ್ಯ ಸ್ಥಳದಲ್ಲಿ ಪ್ರಾಯೋಪವೇಶಕ್ಕಾಗಿ ಕುಳಿತನು. ಮನಸ್ಸಿನಿಂದ ಸರ್ವಸಂಗ ಪರಿತ್ಯಾಗ ಮಾಡಿ ಮೋಕ್ಷಪ್ರದನಾದ ಮುಕುಂದನ ಪಾದಾರವಿಂದ ಧ್ಯಾನದಲ್ಲೂ ಮನೋಯೋಗವುಳ್ಳವನಾದನು. ಆವಾಗ ಅಲ್ಲಿಗೆ ಈ ಭೂಮಂಡಲವನ್ನೇ ಪವಿತ್ರಮಾಡತಕ್ಕಂಥಾ ಪರಮಪಾವನರಾದ ಮಹರ್ಷಿಗಳು ಶಿಷ್ಯಸಮೇತರಾಗಿ ಬರುವವರಾದರು. ಬಹುಶಃ ಇಂತಹ ಪವಿತ್ರರಾದ ಜ್ಞಾನಿಗಳು ಗಂಗಾದಿ ನದಿಗಳಲ್ಲಿ ಸ್ನಾನಾದಿಗಳನ್ನು ಮಾಡಿ, ನದ್ಯಭಿಮಾನಿ ದೇವತೆಗಳ ಆರಾಧನೆಯನ್ನು ಮಾಡುವ ನೆವದಿಂದ ಬಂದು, ತಮ್ಮ ಪಾದಸ್ಪರ್ಶದಿಂದ ನದ್ಯಾದಿ ತೀರ್ಥಗಳನ್ನೇ ಇನ್ನೂ ಪವಿತ್ರವನ್ನಾಗಿ ಮಾಡುತ್ತಾರೆ! ಅತ್ರಿ, ವಸಿಷ್ಠ, ಚ್ಯವನ, ಶರದ್ವಾನ, ಅರಿಷ್ಟನೇಮಿ, ಭೃಗು, ಅಂಗೀರಸಋಷಿಗಳೂ; ಪರಾಶರರೂ, ಗಾಧಿಪುತ್ರರಾದ ವಿಶ್ವಾಮಿತ್ರರೂ, ಪರಶುರಾಮ, ಉಚಥ್ಯ, ಇಂದ್ರಪ್ರಮತಿ, ಇದ್ಮಬಾಹುಗಳೂ; ಮೇಧಾತಿಥಿ, ದೇವಲ, ಆರ್ಷ್ಟಿಷೇಣ, ಭರದ್ವಾಜ, ಗೌತಮ, ಪಿಪ್ಪ ಲಾದರೂ; ಮೈತ್ರೇಯ, ಔರ್ವ, ಕವಷ, ಅಗಸ್ತ್ಯ, ದ್ವೈಪಾಯನ, ನಾರದಋಷಿಗಳು;

## अथ एकोनविंशोऽध्यायः

ಮತ್ತು ಇತರ ಅನೇಕ ದೇವರ್ಷಿ, ಬ್ರಹ್ಮರ್ಷಿ, ರಾಜರ್ಷಿಗಳೂ, ಸಮಸ್ತ ಇತರ ಋಷಿಗಳೂ, ಶಿಷ್ಯಪರಿವಾರ ಸಮೇತರಾಗಿ ಬಂದರು.

ಪರೀಕ್ಷಿದ್ರಾಜನು ಎಲ್ಲರಿಗೂ, ಆಸನ, ಅರ್ಘ್ಯ, ಪಾದ್ಯಾಚಮನಾದಿ ಸತ್ಕಾರಗಳನ್ನು ಮಾಡಿ, ಎಲ್ಲರೂ ಕುಳಿತಮೇಲೆ, ಸರ್ವರಿಗೂ ನಮಸ್ಕರಿಸಿ ಅವರಿಂದ ಆಶೀರ್ವಾದಗಳನ್ನು ಪಡೆದನು. ನಂತರ ಸುಖಾಸೀನರಾದ ಋಷಿಗಳ ಮುಂದೆ, ಅರ್ಘ್ಯನೀರಿನ ಪಾತ್ರೆಯನ್ನು ಕೈಯಲ್ಲಿ ಹಿಡಿದವನಾಗಿ ತನ್ನ ದರ್ಭಾಸನದಲ್ಲಿ ಕುಳಿತು, ತನ್ನ ಮನೋಭಿಪ್ರಾಯವನ್ನು ವಿನಯದಿಂದ ಆ ಋಷಿಗಳಲ್ಲಿ ಈ ರೀತಿ ವಿಜ್ಞಾಪಿಸಿಕೊಂಡನು. ಮಹಾತ್ಮರಲ್ಲಿ ಅತ್ಯಂತ ಶ್ರೇಷ್ಠರಾದ ಬ್ರಹ್ಮತೇಜಸ್ವಿಗಳಾದ ನೀವು ನಮಗೆ ಪರಮಾನುಗ್ರಹ ಮಾಡುವುದಕ್ಕಾಗಿ ಈ ರೀತಿ ನೀವಾಗಿಯೇ ಇಲ್ಲಿಗೆ ಬಂದಿರುವುದನ್ನು ನೋಡಿದರೆ, ರಾಜಕುಲದವರಲ್ಲಿ ನಾವೇ ಧನ್ಯರೆಂದು ಭಾವಿಸುತ್ತೇನೆ. ತಮ್ಮಂತಹ ಬ್ರಾಹ್ಮಣ ಶ್ರೇಷ್ಠರ ಪಾದ ಪ್ರಕ್ಷಾಲಿತ ಜಲದಿಂದ ಅಭಿಷಿಕ್ತವಾದ ರಾಜಕುಲದವರ ಶಿರಸ್ಸೇ ಸರ್ವ ಮಂಗಲಾರ್ಹವಾದದ್ದು. ಈಗ ನಾನು ಪಾವನರಾದ ಶಮೀಕರ ಪಾದ ರಜಸ್ಸನ್ನು ಉಪೇಕ್ಷಿಸಿದ್ದರಿಂದ, ಸಮಸ್ತ ಮಂಗಳಗಳಿಂದಲೂ ದೂರನಾಗಿ ಗರ್ಹ್ಯನಾಗಿರುತ್ತೇನೆ. ನನಗೆ ಋಷಿಪುತ್ರರಾದ ಶೃಂಗಿಗಳು ಕೊಟ್ಟ ಶಾಪದಿಂದ ವೈರಾಗ್ಯವೂ ಉಂಟಾಗುವುದಲ್ಲದೆ, ತಮ್ಮಂತಹ ಸತ್ಸಂಗಮವೂ ಪ್ರಾಪ್ತವಾದ್ದರಿಂದ, ಅವರು ನನಗೆ ಶ್ರೇಯಸ್ಸನ್ನೇ ಉಂಟುಮಾಡಿರುವರೆಂದು ಭಾವಿಸುತ್ತೇನೆ. ಕಾಮರೂಪಿಯಾದ ಆ ತಕ್ಷಕನು, ನನ್ನನ್ನು ಯಾವ ರೂಪದಿಂದಲಾಗಲೀ, ಯಾವ ಕಾಲದಲ್ಲಿ ಬೇಕಾದರೂ ಕಚ್ಚಿ ಮೃತಿಹೊಂದಿಸಲಿ ನಾನು ಯೋಚಿಸುವುದಿಲ್ಲ. ಆದರೆ ತಾವುಗಳೆಲ್ಲರೂ, ಮರಣೋನ್ಮುಖನಾದ ನನಗೆ, ಮರಣಪ್ರಾಪ್ತಿಯಾಗುವವರಿಗೆ, ಉಚ್ಚ ಮಂಜುಳಸ್ವರಪೂರ್ವಕವಾದ ಏಕಕಂಠಧ್ವನಿಯಿಂದ, ಸಕಲವೇದ ಮಹಿಮೋಕ್ತ ಶ್ರೀ ಕೃಷ್ಣಪಾದಾಂಬುಜಸ್ತೋತ್ರಗಳನ್ನು ಗಾನಮಾಡಿ ನಿರಂತರ ನನ್ನ ಕಿವಿಗೆ ಬೀಳುವಂತೆ ಮಾಡಿ, ಆ ಗಾನಾಮೃತಪಾನಸುಖವನ್ನು ನನಗೆ ಉಂಟುಮಾಡಿರಿ.

ನಿಮ್ಮಂತೆಯೇ ಇನ್ನೂ ಹೆಚ್ಚು ಹೆಚ್ಚಾಗಿ ಭಗವದ್ಭಕ್ತರಾದ ಬ್ರಾಹ್ಮಣರು ಬಂದು, ನೂತನನೂತನವಾಗಿ ನನಗೆ ಭಗವತ್ಕಥಾಶ್ರವಣವನ್ನು ಮಾಡಿಸಲಿ. ಬ್ರಾಹ್ಮಣರಿಗೆ ನಮಸ್ಕಾರವಿರಲಿ! ಬ್ರಾಹ್ಮಣೋತ್ತಮರಿಗೆ ನಮಸ್ಕಾರ! ಬ್ರಾಹ್ಮಣಕುಲಕ್ಕೆ ನಿರಂತರ ನಮಸ್ಕಾರ ಮಾಡುವಂತೆ ನಿಮ್ಮ ಅನುಗ್ರಹವಾಗಲಿ ಎಂದನು. ಹೀಗೆ ಪ್ರಾಯೋಪವಿಷ್ಟನಾಗಿ, ಋಷಿಗಳ ಮಧ್ಯದಲ್ಲಿ ಕುಳಿತುರುವ ಪರೀಕ್ಷಿದ್ರಾಜನನ್ನು ನೋಡಲು, ಆಕಾಶದಲ್ಲಿ ದೇವತೆಗಳು ನೆರೆದು, ಪುಷ್ಪ ವೃಷ್ಟಿ ಮಾಡಿ, ದೇವತಾ

ವಾದ್ಯಗಳನ್ನು ಮಾಡಿದರು.

ಅದನ್ನು ಆ ಋಷಿಶ್ರೇಷ್ಠರುಗಳು ನೋಡಿ ಪರಮ ಸಂತೋಷಪಟ್ಟು, ಸಾಧು! ಸಾಧು!ವೆಂದು ದೇವತೆಗಳು ಕಾರ್ಯವನ್ನು ಶ್ಲಾಘಿಸಿ ಅನುಮೋದಿಸಿದರು. ನಂತರ ನೆರೆದಿದ್ದ ಋಷಿಗಳು ಪರೀಕ್ಷಿದ್ರಾಜನನ್ನು ಉದ್ದೇಶಿಸಿ, ಎಲೈ! ಪರೀಕ್ಷಿದ್ರಾಜನೇ! ಶ್ರೀಕೃಷ್ಣನ ಪಾದಾಶ್ರಯರಾದ, ಶ್ರೀಕೃಷ್ಣನ ಆಜ್ಞಾಪರಿಪಾಲಕರಾದ ಪಾಂಡವ ವಂಶಜನಾದ, ನಿನ್ನನ್ನು ದೇವತೆಗಳು ಈ ರೀತಿ ಗೌರವಿಸಿದ್ದು ಏನೂ ಹೆಚ್ಚಲ್ಲ, ಆಶ್ಚರ್ಯವಲ್ಲ. ಪರಮಾತ್ಮನ ಸಾಮೀಪ್ಯವನ್ನು ಬಯಸುವರಾದ ಯಾವ ರಾಜಾಧಿರಾಜರು, ತಮ್ಮ ಕಿರೀಟ ಸಹಿತವಾದ ಶಿರಸ್ಸುಗಳನ್ನು ನಿಮ್ಮ ಸಿಂಹಾಸನದ ಪಾದಪೀಠದ ಮೇಲಿಟ್ಟು, ಅದರಿಂದ ಭಗವದನುಗ್ರಹಕ್ಕೆ ಪಾತ್ರರಾಗಿ, ಭಗವತ್ಸಮೀಪವನ್ನು ಅಂತ್ಯದಲ್ಲಿ ಸೇರಿದರೋ, ಅಂತಹ ಪರಮ ಭಾಗವತ ಶಿರೋಮಣಿಯಾದ ನೀನು, ಈಗ ಪ್ರಾಯೋಪವಿಷ್ಟನಾಗಿ ಕುಳಿತಿರುವುದರಿಂದ, ನಿನ್ನ ಇಷ್ಟದಂತೆ ಭಗವದ್ಗುಣ ಗಾನ ಮಾಡುತ್ತಾ, ನೀನು ಈ ಮಾನವ ಶರೀರವನ್ನು ತ್ಯಜಿಸಿ, ಸ್ವರ್ಗಾದಿ ಲೋಕಗಳಿಗೆ ಪ್ರಯಾಣ ಮಾಡುವವರೆಗೂ ನಾವು ಇಲ್ಲಿಯೇ ಇರುವೆವು. ನಿನ್ನ ವೈರಾಗ್ಯ ಭಕ್ತಿ ಮನೋಭಾವನೆಯಿಂದ ನೀನು ಆ ಬ್ರಾಹ್ಮಣಪುತ್ರ ಶಾಪವನ್ನು ಪರಾಜಯಮಾಡಿರುತ್ತೀಯೆ. ಏಕೆಂದರೆ ಆ ತಕ್ಷಕದಂಶನದಿಂದ ಉಂಟಾಗತಕ್ಕ ಮರಣವು, ನಿನಗೆ ಭಗವದ್ಭಕ್ತಿಯೋಗದಿಂದ ದುರ್ಮರಣವಾಗುವುದಿಲ್ಲವೆಂದರು.

ಅದನ್ನು ಕೇಳಿ ಪರೀಕ್ಷಿದ್ರಾಜನು, ಎಲ್ಲರಿಗೂ ಪುನಃ ನಮಸ್ಕರಿಸಿ, ಎಲೈ ಪರಮ ಋಷಿಗಳಿರಾ! ಸ್ವರ್ಗಲೋಕದಲ್ಲಿ ಇಂದ್ರದೇವರ ಸಭೆಗೆ ದೇವತೆಗಳು ಬರುವಂತೆ, ಮೂರ್ತಿಮತ್ತಾದ ದೇವತೆಗಳಂತೆ ತಾವುಗಳು ಇಲ್ಲಿಗೆ ಬಂದಿರುವಿರಿ. ನಿಮ್ಮ ದಿವ್ಯಸಂದರ್ಶನ, ಸಹವಾಸ ಸುಖಗಳನ್ನು ಪಡೆದವರಿಗೆ ಚತುರ್ವಿಧ ಪುರುಷಾರ್ಥಗಳಲ್ಲಿ ಅಲಭ್ಯವಾದದ್ದು ಏನೂ ಇರುವುದಿಲ್ಲ. ನಾನು ತಮ್ಮ ಅನುಗ್ರಹದಿಂದ ಪರಮ ಧನ್ಯನಾಗಿರುತ್ತೇನೆ. ಆದರೆ, ಮರಣ ಕಾಲವು ಸಮೀಪವಾಗಿರುವುದರಿಂದ, ನನಗೆ ಈಗ ಏನು ಮಾಡಿದರೆ ಶ್ರೇಯಸ್ಸುಂಟಾಗುವುದೋ, ಅದನ್ನು ಪರಮಾನುಗ್ರಹ ಮಾಡಿ ನೀವು ನನಗೆ ತಿಳಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನೀವು ಪರಮ ಶುದ್ಧ ಮನಸ್ಸುಳ್ಳವರೂ, ಯಥಾರ್ಥವನ್ನು ಹೇಳತಕ್ಕವರೂ, ಪ್ರಜಾ ವಾತ್ಸಲ್ಯಶೀಲರೂ ಆದುದರಿಂದ ನನಗೆ ಉಪದೇಶಮಾಡಿರಿ, ಎಂದು ಪ್ರಾರ್ಥಿಸಿದನು.

**ಇತಿ ಶ್ರೀಮದ್ಭಾಗವತ ಪ್ರಥಮಸ್ಕಂಧದ ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು.**

# अथ विंशोऽध्यायः

**सूत उवाच**

तत्राभवद्भगवान् व्यासपुत्रो यदृच्छया गामटमानोऽनपेक्षः।
अलक्ष्यलिङ्गो निजलाभतुष्टो वृतश्च बालैरवधूतवेषः ॥ १ ॥

तं व्यष्टवर्षं सुकुमारपादकरोरुबाह्वंसकपोलगात्रम्।
चार्वारुणाक्षोन्नसतुल्यकर्णं सुभ्र्वाननं कंबुसुजातकण्ठम्॥ २ ॥

निगूढजत्रुं पृथुतुङ्गवक्षसमावर्तनाभिं वलिवल्गूदरञ्च।
दिगम्बरं वक्र(वक्त्र)विकीर्णकेशं प्रलम्बबाहुं स्वमरोत्तमाभम्॥ ३ ॥

श्यामं सदाऽऽपीच्यवयोङ्गलक्ष्म्या स्त्रीणां मनोज्ञं रुचिरस्मितेन।
प्रत्युत्थिता मुनयश्चासनेभ्यः तल्लक्षणज्ञा अपि गूढवर्चसम्॥ ४ ॥

स विष्णुरातोऽतिथय आगताय तस्मै सपर्यां शिरसाऽऽजहार।
ततो निवृत्ता ह्यबुधाः स्त्रियोऽर्भकाः महासने चोपविवेश पूजितः ॥ ५ ॥

स संवृतस्तत्र महान् महीयसां ब्रह्मर्षिराजर्षिदेवर्षिसङ्घैः।
व्यरोचतालं भगवान्यथेन्दुर्ग्रहर्क्षतारानिकरैः परीतः ॥ ६ ॥

प्रशान्तमासीनमकुण्ठमेधसं मुनिं नृपो भागवतोऽभ्युपेत्य।
प्रणम्य मूधर्नाऽवहितः कृताञ्जलिर्नत्वा गिरा सूनृतयाऽन्वपृच्छत्॥ ७ ॥

राजोवाचअहो अद्य वयं ब्रह्मन् सत्सेव्याः क्षत्रबन्धवः।
कृपयाऽतिथिरूपेण भवद्भिस्तीर्थकाः कृताः ॥ ८ ॥

येषां संस्मरणात्पुंसः सद्यः शुद्ध्यन्ति वै गृहाः।
किम्पुनर्दर्शनस्पर्शपादशौचासनादिभिः ॥ ९ ॥

सान्निध्यात्ते महायोगिन् पातकानि महान्त्यपि।
सद्यो नश्यन्ति वै पुंसां विष्णोरिव सुरेतराः ॥ १० ॥

अपि मे भगवान् प्रीतः कृष्णः पाण्डुसुतप्रियः।

**अथ विंशोऽध्यायः**

पैतृष्वसेयप्रीत्यर्थं तद्गोत्रस्याप्तबान्धवः ॥ ११ ॥

अन्यथा तेऽव्यक्तगतेर्दर्शनं नः कथं नृणाम् ।
नितरां म्रियमाणानां संसिद्धस्य वरीयसः ॥ १२ ॥

अतः पृच्छामि संसिद्धं योगिनां परमं गुरुम् ।
पुरुषस्येह यत्कार्यं म्रियमाणस्य सर्वदा ॥ १३ ॥

यच्छ्रोतव्यमथो जाप्यं यत्कर्तव्यं नृभिः सदा ।
स्मर्तव्यं भजनीयं वा ब्रूहि यद्वा विपर्ययम् ॥ १४ ॥

नूनं भगवतो ब्रह्मन् गृहेषु गृहमेधिनाम् ।
न लक्ष्यते ह्यवस्थानमपि गोदोहनं क्वचित् ॥ १५ ॥

**सूत उवाच**

एवमाभाषितः पृष्टः स राज्ञा श्लक्ष्णया गिरा ।
प्रत्यभाषत धर्मज्ञो भगवान् बादरायणिः ॥ १६ ॥

**॥ इति श्रीमद्भागवते प्रथमस्कन्धे विंशोऽध्यायः ॥**

**॥ इति श्रीमद्भागवते महापुराणे वैयासक्यामष्टादशसाहस्र्यां पारमहंस्यां संहितायां प्रथमस्कन्धः ॥**

## ॥ ಇಪ್ಪತ್ತನೆಯ ಅಧ್ಯಾಯ ॥

### ಶುಕಮಹರ್ಷಿಗಳ ಆಗಮನ ಮತ್ತು ರಾಜರ ಪ್ರಶ್ನೆ

ಸೂತಪುರಾಣಿಕರು, ಸತ್ಸಂಗತಿಯಿಂದ ಉಂಟಾದ ಜ್ಞಾನಲಾಭದಿಂದ ಸಮಸ್ತಪಾಪಗಳ ನಾಶವು ಆಗುತ್ತೆಂದು ತಿಳಿಸುವುದಕ್ಕಾಗಿ ಈ ಅಧ್ಯಾಯದಲ್ಲಿ ಶುಕ ಮಹರ್ಷಿಗಳ ಆಗಮನವನ್ನು ವರ್ಣಿಸುತ್ತಾರೆ.

ಹಿಂದಿನ ಅಧ್ಯಾಯದಲ್ಲಿ ಪರೀಕ್ಷಿದ್ರಾಜನು ಸಕಲ ಋಷಿಗಳನ್ನು ಪ್ರಶ್ನೆಮಾಡಿ, ಅವರ ಉತ್ತರವನ್ನು ನಿರೀಕ್ಷಿಸುತ್ತಾ ಇದ್ದಾಗ, ಅಲ್ಲಿಗೆ ಭಗವಾನ್ ವ್ಯಾಸಪುತ್ರರಾದ, ಶುಕ ಮಹರ್ಷಿಗಳು

## अथ विंशोऽध्यायः

ಅಕಸ್ಮಾತ್ ಅಲ್ಲಲ್ಲಿ ಸಂಚರಿಸುತ್ತಾ, ದೈವ ಪ್ರೇರಣೆಯಿಂದ ಪ್ರೇರಿತವಾದ ಸ್ವೇಚ್ಛೆಯುಳ್ಳವರಾಗಿ, ಕೇವಲ ಹದಿನಾರು ವರ್ಷ ವಯಸ್ಸುಳ್ಳವರಾಗಿಯೂ, ಅವಧೂತ ಚರ್ಯೆಯಿಂದ, ಆಶ್ರಮ ಚಿಹ್ನೆಗಳಿಲ್ಲದವರಾಗಿಯೂ, ದಿಗಂಬರರಾಗಿಯೂ, ಆದುದರಿಂದ ಇತರ ಬಾಲಕರ ಗುಂಪಿನಿಂದ ಸಹಿತರಾಗಿ ಅಲ್ಲಿಗೆ ಬಂದರು. ಅವರ ಶರೀರವೂ, ಪಾದಾದಿ ಶಿರ ಪರ್ಯಂತ ಬಹು ಕೋಮಲವಾಗಿತ್ತೂ. ಕೆಂದಾವರೆಯಂತೆ ಕಣ್ಣುಗಳೂ, ವಿಶಾಲವಾಗಿದ್ದವು. ಸುಂದರವಾದ ಮೂಗು ಕಿವಿಗಳೂ, ಶಂಖದಂತೆ ಸ್ವಚ್ಛವರ್ಣವೂ ಕೋಮಲವೂ ಆದ ಕಂಠವೂ, ಉಬ್ಬಿದ ಎದೆಯೂ, ತೆಳುವಾದ ಹೊಟ್ಟೆಯೂ, ಸುಳಿನಾಭಿಯೂ, ಮೂರು ಗೀರುಗಳಿಂದ ಕೂಡಿದ ಉದರ ಪ್ರದೇಶವೂ, ದೀರ್ಘವಾದ ಬಾಹುಗಳೂ, ದೇವದೇವೋತ್ತಮರ ಶರೀರದಂತೆ ಮಹೋನ್ನತ ಸ್ವಭಾವವನ್ನು ಸೂಚಿಸುತ್ತಿದ್ದವು. ಲಕ್ಷ್ಮೀ ಕಟಾಕ್ಷವು ತಾಂಡವಾಡುತ್ತಿದ್ದ ಇವರ ಮಂದಸ್ಮಿತ ಮನೋಹರ ಮುಖ ಕಮಲವು, ಸರ್ವ ಸ್ತ್ರೀಯರಿಗೆ ಪ್ರಿಯದರ್ಶನನಾದ ಮನ್ಮಥನಂತೆ ಪ್ರಸನ್ನವಾಗಿತ್ತು. ಇಂತಹ ಶುಕರು ಅಕಸ್ಮಾತ್ ಅಲ್ಲಿಗೆ ಬರಲು, ಇವರ ಲಕ್ಷಣಗಳನ್ನು ತಿಳಿದ ಅಲ್ಲಿ ನೆರೆದಿದ್ದ ವೇದವ್ಯಾಸೇತರ ಋಷಿಗಳು ಆಸನಗಳಿಂದ ಬೇಗ ಮೇಲಕ್ಕೆದ್ದು ನಿಂತರು. ಪರೀಕ್ಷಿದ್ರಾಜನು ಶುಕರನ್ನು ಸ್ವಾಗತಿಸಿ, ಉತ್ತಮವಾದ ಆಸನದಲ್ಲಿ ಕುಳ್ಳಿರಿಸಿ, ಅರ್ಘ್ಯ ಪಾದ್ಯಾದಿಗಳನ್ನು ಸಮರ್ಪಿಸಿದನು.

ನಂತರ ಬಾಲಕರನ್ನೂ ಸ್ತ್ರೀಯರನ್ನೂ, ಮೂಢರನ್ನೂ ಸಭೆಯಿಂದಾಚೆಗೆ ಕಳುಹಿಸಿ, ಸುಖಾಸೀನರಾದ ಶುಕಮಹರ್ಷಿಗಳಲ್ಲಿ, ಪರೀಕ್ಷಿದ್ರಾಜನು ಈ ರೀತಿ ವಿಜ್ಞಾಪಿಸಿಕೊಂಡನು. ಎಲೈ ಶುಕಮಹರ್ಷಿಗಳೆ! ನಿಮ್ಮ ದರ್ಶನವು ಜನರಿಗೆ ದುರ್ಲಭವಾದದ್ದು. ಗೂಢಚರ್ಯರಾದ ನೀವು ಯಾವ ಪ್ರದೇಶದಲ್ಲೂ, ಗೋವಿನಹಾಲನ್ನು ಒಂದುಸಲ ಕರೆಯುವ ಕಾಲದಷ್ಟು ಮಾತ್ರ ಇದ್ದು, ನಂತರ ಬೇರೆ ಕಡೆಗೆ ಹೋಗತಕ್ಕವರಾಗಿರುತ್ತೀರಿ. ನೀವು ನಿರಪೇಕ್ಷರು. ಸದಾ ಭಗವದ್ಭಕ್ತಿಯೋಗದಿಂದ ಕೂಡಿದವರಾಗಿ ಸರ್ವತ್ರ ಪರಮಾತ್ಮನನ್ನು ಪ್ರತ್ಯಕ್ಷವಾಗಿ ನೋಡಿ, ಆನಂದದಿಂದ ನಲಿಯುವ ಸ್ವಭಾವದವರು. ನೀವಾಗಿಯೇ ಇಲ್ಲಿಗೆ ಬಂದು ನಮ್ಮನ್ನೆಲ್ಲಾ ಪವಿತ್ರರನ್ನಾಗಿ ಮಾಡಿದ್ದರಿಂದ ಪಾಂಡವರೂ, ನಾನೂ, ಹಿಂದೆ ಸಜ್ಜನರಸೇವೆಯನ್ನು ಮಾಡಿದವರು ಆಗಿರಬೇಕು. ಇಲ್ಲದಿದ್ದರೆ ನಿಮ್ಮ ದರ್ಶನವು ನನಗೆ ಆಗುತ್ತಿರಲಿಲ್ಲ.

ನಿಮ್ಮನ್ನು ಸ್ಮರಣೆ ಮಾಡಿದರೆ ಗೃಹಸ್ಥಾಶ್ರಮಿಗಳು, ಗೃಹ, ಕುಲಸಹಿತ ಪವಿತ್ರರಾಗುವರು. ಅಂತದರಲ್ಲಿ ಸಾಕ್ಷಾತ್ತಾಗಿ ನಿಮ್ಮ ದರ್ಶನವೂ, ಪಾದಸೇವೆಯೂ ಲಭಿಸಿದರೆ ನಾವು ಉದ್ಧೃತವಾದೆವೆಂದು ಏನು ಹೇಳತಕ್ಕದ್ದಿದೆ. ಮರಣಕಾಲವು ಪ್ರಾಪ್ತವಾಗಿರುವ ನನಗೆ, ತಮ್ಮ

## अथ विंशोऽध्यायः

ಆಗಮನವು ಬಹು ಲಾಭಕರವಾದದ್ದು. ನಿಮ್ಮ ಸಾನ್ನಿಧ್ಯದಿಂದ ಮಹಾ ಪಾತಕಗಳೂ ನಾಶವಾಗಿ, ವಿಷ್ಣು ಸಾನ್ನಿಧ್ಯದಿಂದ ದೇವತೆಗಳಿಗುಂಟಾಗುವಂತೆ ಸಕಲ ಶ್ರೇಯಸ್ಸುಗಳೂ ಲಭಿಸುವವು. ನಿಮ್ಮ ಆಗಮನದಿಂದ, ಯಾವ ಅತ್ತೆಯ ಕುಲದವರೆಂದು ಪಾಂಡವರಲ್ಲಿ ಶ್ರೀಕೃಷ್ಣನು ಸದಾ ಪ್ರೀತಿ, ದಯೆಗಳನ್ನು ಮಾಡುತ್ತಿದ್ದನೋ, ಆ ಶ್ರೀಕೃಷ್ಣ ಪ್ರೀತಿಗೆ ನಾನೂ ಪಾತ್ರನಾಗಿರುವೆನೆಂದು ಭಾವಿಸುತ್ತೇನೆ.

ಬ್ರಾಹ್ಮಣ ಶಾಪದಿಂದ ಮರಣವನ್ನು ನಿರೀಕ್ಷಿಸುತ್ತಿರುವ ನಾನು, ಯಾರ ಧ್ಯಾನದಿಂದ, ಯಾವ ಜಪದಿಂದ ಅಥವ ಯಾವ ಕಾರ್ಯ ಮಾಡೋಣದರಿಂದ ಸದ್ಗತಿಯನ್ನು ಹೊಂದುವೆನೋ ಅದನ್ನು ತಾವು ನನಗೆ ಉಪದೇಶಮಾಡಬೇಕೆಂದು ಪ್ರಾರ್ಥಿಸಿದನು. ಈ ರೀತಿ ಭಕ್ತಿಯಿಂದ ಗಾಂಭಿರ್ಯ ವುಳ್ಳ ಪರೀಕ್ಷಿದ್ರಾಜನ ಪ್ರಶ್ನೆಗಳನ್ನು ಕೇಳಿ ಶುಕ ಮಹರ್ಷಿಗಳು ಪ್ರತ್ಯುತ್ತರ ಕೊಡಲು ಸನ್ನದ್ಧರಾದರು.

**ಇತಿ ಶ್ರೀಮದ್ಭಾಗವತ ಮಹಾಪುರಾಣದ ಪ್ರಥಮಸ್ಕಂಧದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿಯಿತು.**

**॥ ಶ್ರೀಕೃಷ್ಣಾರ್ಪಣಮಸ್ತು ॥**